ಹುಬ್ಬಳ್ಳಿ
ಬುಧವಾರ, 22 ಏಪ್ರಿಲ್ 2026
ಸಂಪುಟ 16, ಸಂಚಿಕೆ 28, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಸತ್ಯ ಸಾಬೀತುಪಡಿಸುವ ತಾಕತ್ತು ಮುಖ್ಯ | ೦೭
ಮೋದಿ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ | ೦೭
ಎಥೆನಾಲ್ ಮಿಶ್ರಣಕ್ಕೆ ಮುನ್ನುಡಿ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಆರ್ದ್ರ

ದಿನದ ಮಾತು

ಕಾಲವು ನಮ್ಮನ್ನು ದಾಟಿ ಸಾಗುತ್ತದೆ. ಆದರೆ ನೆರಳನ್ನು ಹಿಂದಕ್ಕೆ ಬಿಟ್ಟಿರುತ್ತದೆ.
▲ಸುಭಾಷಿತ

ಹಿಂದಿ ದ್ವೇಷಕ್ಕೆ ವಿದ್ಯಾರ್ಥಿಗಳು ಬಲಿಯಾದರೇ?

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಏ.25ರಂದು ರಾಜ್ಯಾದ್ಯಂತ ಬಿಜೆಪಿ ಆಕ್ರೋಶ ಯಾತ್ರೆ

• **ಬೆಂಗಳೂರು:** ಮಹಿಳಾ ವಿರೋಧಿ ಕಾಂಗ್ರೆಸ್ ಮತ್ತು ಇಂಡಿ ಕೂಟದ ವಿರುದ್ಧ ರಾಜ್ಯಾದ್ಯಂತ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಏ.25ರಂದು ಆಕ್ರೋಶ ಯಾತ್ರೆ ಮತ್ತು ಸಭೆಗಳನ್ನು ಏರ್ಪಡಿಸಲಾಗುವುದು ಎಂದು ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ತಿಳಿಸಿದ್ದಾರೆ. ಮಂಗಳವಾರ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಇದೇ 27ರಿಂದ ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು ಬಿಜೆಪಿಯ 300 ಸಂಘಟನಾತ್ಮಕ ಮಂಡಲಗಳಲ್ಲಿ ಹೋರಾಟ ನಡೆಯಲಿದೆ ಎಂದರು. ➡ಪುಟ ೪

ಪಟಾಕಿ ತಯಾರಿಕಾ ಘಟಕ ಸ್ಫೋಟ: 13 ಜನರ ಸಾವು

• **ತ್ರಿಶೂರ್:** ಮುಂಡತ್ತಿಕೋಡ್‌ನಲ್ಲಿರುವ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಮಂಗಳವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 13 ಜನರು ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

• ಪುಟ ೭

ಗ್ರೆನೇಡ್ ದಾಳಿ ಸಂಚು: ಭಟ್ಟಿ ಸಹಚರರಿಬ್ಬರ ಸೆರೆ

• ಪುಟ ೭

ಮೇಕೆದಾಟಿಗೆ ಡಿಪಿಆರ್ ಸಿದ್ಧ: ಡಿಸಿಎಂ ಡಿಕೆಶಿ

• ಪುಟ ೫

ದೇಶದ ಜನರಿಗೆ ಖರ್ಗೆ ಅಪಮಾನ: ವಿಜಯೇಂದ್ರ

• ಪುಟ ೫

ಇಂದಿನಿಂದ ಸಿಇಟಿ: ವ್ಯಾಪಕ ಭದ್ರತೆ

• ಪುಟ ೫

ಬೈಕ್ ಟ್ಯಾಕ್ಸಿ ಸೇವೆಗೆ ನಿರ್ದೇಶನ: ಸಿಎಂ

• ಪುಟ ೫

ಬೆಳಗಾವಿಯಲ್ಲಿ ತಿರುಪತಿ ಮಾದರಿ ದೇಗುಲ

• ಪುಟ ೫

ದ.ಕ.ದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮ: ಡಿಜಿಪಿ

• ಪುಟ ೫

ತೃತೀಯ ಭಾಷೆಗೆ ಅಂಕ ಪದ್ಧತಿಯೇ ಇರಲಿ: ಹೈ ಸೂಚನೆ

ಗ್ರೇಡ್ ಬಿಡಿ, ಅಂಕ ಕೊಡಿ


• **ಬೆಂಗಳೂರು:** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳ ಬದಲು ಗ್ರೇಡ್ ನೀಡಲು ಮುಂದಾಗಿದ್ದ ರಾಜ್ಯ ಸರ್ಕಾರದ ಕ್ರಮಕ್ಕೆ ಹೈಕೋರ್ಟ್‌ನಲ್ಲಿ ಹಿನ್ನಡೆಯಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅಂಕಗಳನ್ನು ನೀಡುವ ಪದ್ಧತಿ ಮುಂದುವರಿಸಬೇಕು ಎಂದು ಸ್ಪಷ್ಟ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಗೆ ಸಿಲುಕಿದ್ದಾರೆ.

ಇತ್ತೀಚೆಗೆ ಅಂಕಗಳನ್ನೇ ನೀಡಬೇಕೆಂದು ನಿರ್ದೇಶನ ನೀಡಿದ್ದ ಹೈಕೋರ್ಟ್ ಆದೇಶದ ಕ್ರಮವನ್ನು ಮರುಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಇ.ಎಸ್.ಇಂದಿರೇಶ್ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿ ದಾಗಲೇ ಅಂಕಗಳ ಬದಲಿಗೆ ಗ್ರೇಡ್ ನೀಡುವುದಾಗಿ ಸ್ಪಷ್ಟಪಡಿಸಬೇಕಿತ್ತು. ಆದರೆ, ಅಧಿಸೂಚನೆಯಲ್ಲಿ ತಿಳಿಸದ ಅಂಶವನ್ನು ಪರಿಚಯಿಸಿ ಗ್ರೇಡ್ ಪದ್ಧತಿಯನ್ನು ಅನುಷ್ಠಾನಕ್ಕೆ ಮುಂದಾಗಿದ್ದೀರಿ. ನಿಯಮ ರೂಪಿಸಿದ ಬಳಿಕ ಸರ್ಕಾರ ಸೂಕ್ತವೆನಿಸಿದ ಕ್ರಮ ಕೈಗೊಳ್ಳಬಹುದು. ನಿಯಮ ರೂಪಿಸುವ ಮುಂಚಿನ ಪರೀಕ್ಷೆಯ ಅಂಕ ಪದ್ಧತಿ ಬದಲಾವಣೆ ಸೂಕ್ತವಲ್ಲ ಎಂದು ತಿಳಿಸಿದ ಪೀಠ, 2025-26ನೇ ಸಾಲಿಗೆ ಹಿಂದಿ ಭಾಷೆ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳನ್ನೇ ನೀಡುವುದನ್ನು ಮುಂದುವರಿಸಬೇಕು ಎಂದು ಸೂಚಿಸಿ ಅರ್ಜಿ ಇತ್ಯರ್ಥಪಡಿಸಿದೆ. ಇದಕ್ಕೂ ಮುನ್ನ ಸರ್ಕಾರದ ಪರವಾಗಿ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಇದೇ ಅಂಶವನ್ನು ಪ್ರಶ್ನಿಸಿ ವಿಭಾಗೀಯ ಪೀಠದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಜಾಗೊಂಡಿದ್ದು, ಅರ್ಜಿದಾರರಿಗೆ ದಂಡ ವಿಧಿಸಲಾಗಿದೆ. ಅಲ್ಲದೆ, ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳ ಮೇಲೆ ಒತ್ತಡ ಕಡಿಮೆ ಮಾಡುವ ಸಲುವಾಗಿ ಈ ಕ್ರಮಕ್ಕೆ ಮುಂದಾಗಿದ್ದೇವೆ. ಅಗತ್ಯ ಸೂಕ್ತ ತಿದ್ದುಪಡಿಯೊಂದಿಗೆ ನಿಯಮ ರಚಿಸಲು ಸರ್ಕಾರ ಕರಡು ರೂಪಿಸುತ್ತಿದೆ ಎಂದು ಪೀಠಕ್ಕೆ ವಿವರಿಸಿದರು.

ಅತಂತ್ರ ಸ್ಥಿತಿಯಲ್ಲಿ ಮಕ್ಕಳು

ಸರ್ಕಾರ ತೃತೀಯ ಭಾಷೆಗೆ ಗ್ರೇಡ್ ನೀಡುವುದಾಗಿ ಘೋಷಣೆ ಮಾಡಿದ ಮೇಲೆ ಬಹುತೇಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೂ ಹಿಂದಿ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ, ಕೆಲವು ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಉತ್ತರಿಸದೆ ಹಾಗೇ ಬಿಟ್ಟಿದ್ದರು. ಆದರೆ, ಈಗ ಹೈಕೋರ್ಟ್ ತೀರ್ಪಿನಿಂದ ವಿದ್ಯಾರ್ಥಿಗಳು ಕಂಗಾಲಾಗಿದ್ದಾರೆ. ಪ್ರತಿಶತ ಅಂಕದಲ್ಲಿ ತಾವು ಹಿನ್ನಡೆ ಅನುಭವಿಸಬಹುದು ಎನ್ನುವ ಆತಂಕವೂ ಕೆಲವು ವಿದ್ಯಾರ್ಥಿಗಳನ್ನು ಕಾಡುತ್ತಿದೆ.



ಸಿಎಂ ಜತೆ ಚರ್ಚಿಸಿ ಅಂತಿಮ ನಿರ್ಧಾರ: ಮಧು

• **ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷಾ ವಿಷಯಗಳಿಗೆ ಗ್ರೇಡ್ ಬದಲು ಅಂಕಗಳನ್ನು ನೀಡಬೇಕು ಎಂಬ ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ. ಆದರೆ ಅಂತಿಮ ನಿರ್ಧಾರವನ್ನು ಮುಖ್ಯಮಂತ್ರಿ ಜತೆ ಚರ್ಚಿಸಿ ತೆಗೆದುಕೊಳ್ಳಲಾಗುತ್ತದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಹೈಕೋರ್ಟ್ ಆದೇಶದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಹೈಕೋರ್ಟ್ ಆದೇಶದ ಕುರಿತು ನಾನು ಅಡ್ವೊಕೇಟ್ ಜನರಲ್ ಜತೆ ಮಾತನಾಡಿದ್ದೇನೆ. ಮುಖ್ಯಮಂತ್ರಿಗಳಿಗೂ ಮಾಹಿತಿ ನೀಡಿದ್ದೇವೆ. ಬುಧವಾರ ಸಿಎಂ ಅವರನ್ನು ಭೇಟಿ ಮಾಡಿ ಮುಂದಿನ ಕ್ರಮಗಳ ಬಗ್ಗೆ ಚರ್ಚೆ ಮಾಡುತ್ತೇನೆ ಎಂದರು. ➡ಪುಟ ೪



ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲಾಗುವುದು. ತೃತೀಯ ಭಾಷೆಗೆ ಹಿಂದಿನ ವರ್ಷಗಳಂತೆಯೇ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಬೇಕೆಂದು ಉಚ್ಚ ನ್ಯಾಯಾಲಯ ಹೇಳಿದ್ದು, ಮುಂದಿನ ತೀರ್ಮಾನ ಮಾಡಲು ಸೂಚಿಸಿದೆ. ನ್ಯಾಯಾಲಯದ ನಿರ್ದೇಶನವನ್ನು ಪಾಲಿಸಲಾಗುವುದು.
■ **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಣೆಯಲ್ಲಿ ಹೆಚ್ಚಿನ ವಿಳಂಬ ಆಗುವುದಿಲ್ಲ, ಗರಿಷ್ಠ ಒಂದು ದಿನ ಹಿಂದೆ ಮುಂದೆ ಆಗಬಹುದು. ಎಲ್ಲವೂ ಸರಿಯಾಗುತ್ತದೆ. ವಿದ್ಯಾರ್ಥಿಗಳು ಆತಂಕಗೊಳ್ಳಬಾರದು. ಸಿಎಂ ಜತೆ ಚರ್ಚೆಯ ಬಳಿಕ ಸ್ಪಷ್ಟ ನಿರ್ಧಾರ ಪ್ರಕಟಿಸುತ್ತೇವೆ.
■ **ಮಧು ಬಂಗಾರಪ್ಪ**, ಶಿಕ್ಷಣ ಸಚಿವ

ನಾನು ಹಾಗೆ ಹೇಳಿಲ್ಲ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮಜಾಯಿಷಿ

ಮೋದಿ ಟೆರರಿಸ್ಟ್ ಖರ್ಗೆ ವ್ಯಗ್ರೋಕ್ತಿ

• **ಹೊಸದಿಲ್ಲಿ:** ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಟೀಕಿಸಿದ್ದು, ಇದು ಭಾರೀ ವಿವಾದಕ್ಕೆ ಕಾರಣವಾಗಿದೆ.

ತಕ್ಷಣವೇ ಸಮಜಾಯಿಷಿ ನೀಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾನು ಹಾಗೆ ಹೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ತೆಲಂಗಾಣ ಕಾಂಗ್ರೆಸ್ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮೋದಿಯವರನ್ನು ರಾಕ್ಷಸ ಮಾರೀಚನಿಗೆ ಹೋಲಿಸಿ ನಿಂದಿಸಿದ್ದಾರೆ. ಇದನ್ನು ಖಂಡಿಸಿರುವ ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಅವರು, ವಿಪಕ್ಷ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿಯವರನ್ನು ಗುರಿಯಾಗಿಸಿ ಅವಹೇಳನಕಾರಿ ಪದಗಳನ್ನು ಬಳಸುವಂತೆ ಪಕ್ಷದ ಅಧ್ಯಕ್ಷರಿಗಿಂತಲೂ ಮೇಲಿರುವ 'ಹೈಕಮಾಂಡ್'ನಿಂದ ಸೂಚನೆ ಹೋಗಿದೆ ಎಂದಿದ್ದಾರೆ. ಕಾಂಗ್ರೆಸ್ ನಾಯಕರ ಹತಾಶೆ, ಪ್ರಧಾನಿ ಮೋದಿವಿರುದ್ಧದಅಸಹನೆಅತಿರೇಕಕ್ಕೆಹೋಗುತ್ತಿರುವುದಕ್ಕೆ ಇದು ಸಾಕ್ಷಿ ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

ಪ್ರಧಾನಿ ಮೋದಿ ವಿರುದ್ಧದ ತಾನು ಬಳಸಿದ 'ಭಯೋತ್ಪಾದಕ' ಪದ ಭಾರೀ ವಿವಾದವಾಗುತ್ತಲೇ, ಖರ್ಗೆ ಈ ಬಗ್ಗೆ ಸಮಜಾಯಿಷಿ ನೀಡಿ ನಾನು ಆ ಅರ್ಥದಲ್ಲಿ ಹೇಳಿಲ್ಲ, ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಚೆನ್ನೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಎಐಡಿಎಂಕೆಯು ಪ್ರಧಾನಿ ಮೋದಿಯವರ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದನ್ನು ಟೀಕಿಸುವ ವೇಳೆ ಖರ್ಗೆ ಈ ರೀತಿ ದೂಷಿಸಿದ್ದರು. ➡ಪುಟ ೪

ಖರ್ಗೆ ಸಾರ್ವಜನಿಕ ಚರ್ಚೆಯನ್ನು ಇಷ್ಟೊಂದು ಕೀಳು ಮಟ್ಟಕ್ಕೆ ಎಳೆದಿರುವುದು ಇದೇ ಮೊದಲಲ್ಲ. ಈ ಹೇಳಿಕೆಯೊಂದಿಗೆ ಅವರು ತಮ್ಮನ್ನು ತಾವು ಕುಗ್ಗಿಸಿಕೊಂಡಿಲ್ಲ, ಬದಲಿಗೆ ಕಾಂಗ್ರೆಸ್‌ನ ಒಂದು ನಿರ್ದಿಷ್ಟ ವಿಧಾನವನ್ನು ಬಹಿರಂಗಪಡಿಸಿದ್ದಾರೆ.
■ **ಅಮಿತ್ ಮಾಳವೀಯ**, ಬಿಜೆಪಿ ಐಟಿ ಸೆಲ್ ಮುಖ್ಯಸ್ಥ

» ಮೋದಿಯವರನ್ನು ಮಾರೀಚನಿಗೆ ಹೋಲಿಸಿದ ರೇವಂತ್ ರೆಡ್ಡಿ
» ಕಾಂಗ್ರೆಸ್‌ನ ಹತಾಶೆ, ಅಸಹನೆ ಅತಿರೇಕಕ್ಕೆ: ಬಿಜೆಪಿ



ಮೋದಿ ವಿರುದ್ಧ 150ಕ್ಕೂ ಅಧಿಕ ಅವಹೇಳನ ಹೇಳಿಕೆ

ಕಾಂಗ್ರೆಸ್ ಪಕ್ಷವು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಬಗ್ಗೆ 150 ಕ್ಕೂ ಹೆಚ್ಚು ಅವಹೇಳನಕಾರಿ ಹೇಳಿಕೆಗಳನ್ನು ನೀಡಿದೆ. 'ನಾರಿ ಶಕ್ತಿ'ಗೆ ಉತ್ತೇಜನ ನೀಡಿದ ಕಾರಣಕ್ಕೂ ಅವರು ಮತ್ತೆ ಅವರನ್ನು ನಿಂದಿಸುತ್ತಿದ್ದಾರೆ. ಇದು ಅಪರೂಪದ ಘಟನೆ ಅಲ್ಲ, ಪೂರ್ವನಿಯೋಜಿತ ರಾಜಕೀಯ ಪ್ರಯೋಗ ಎಂದು ಪೂನಾವಾಲಾ ತಿಳಿಸಿದರು.

110 ಕೆರೆಗೆ ನೀರು ತುಂಬಿಸುವ ಕಾರ್ಯಕ್ಕೆ ಸಿಎಂ ಚಾಲನೆ

ಗುಂಡ್ಲುಪೇಟೆ ಅಭಿವೃದ್ಧಿಗೆ ಆದ್ಯತೆ

• **ಚಾಮರಾಜನಗರ:** ನಂಜುಂಡಪ್ಪ ವರದಿ ಶಿಫಾರಸಿನಂತೆ ಅತ್ಯಂತ ಹಿಂದುಳಿದ ಗುಂಡ್ಲುಪೇಟೆ ತಾಲೂಕಿನ ಅಭಿವೃದ್ಧಿಗೆ 475 ಕೋಟಿ ರೂ. ವೆಚ್ಚದಲ್ಲಿ 110 ಕೆರೆಕಟ್ಟೆ ತುಂಬಿಸುವ ಮೂಲಕ ತಾಲೂಕಿನ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಿಲ್ಲೆಯ ಗುಂಡ್ಲುಪೇಟೆಯಲ್ಲಿ 110 ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ 800 ಕೋಟಿಗೂ ಹೆಚ್ಚು ಅಭಿವೃದ್ಧಿ ಕಾರ್ಯಗಳಾಗಿವೆ ಎಂದರು. ನಮ್ಮ ಸರ್ಕಾರದ 3 ವರ್ಷಗಳ ಅಧಿಕಾರದ ಅವಧಿಯಲ್ಲಿ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದೆ. ಆದರೂ, ವಿಪಕ್ಷಗಳು ರಾಜಕೀಯ ದುರುದ್ದೇಶದಿಂದ ಅಪಪ್ರಚಾರ ಮಾಡುತ್ತಿವೆ. ➡ಪುಟ ೪



ಸಂತ್ರಸ್ತರ ಕುಟುಂಬದವರಿಗೆ ನೇಮಕ ಪತ್ರ ವಿತರಣೆ

• **ಗುಂಡ್ಲುಪೇಟೆ:** ಕೊರೋನಾ ವೇಳೆ ಚಾಮರಾಜ ನಗರ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟ 36ಮೃತರ ಪೈಕಿ ಹಲವು ಕುಟುಂಬಸ್ಥರಿಗೆ ಚಾ.ನಗರ ಸಿಮ್ಸ್ ಆಸ್ಪತ್ರೆಯಲ್ಲಿ ವಿವಿಧ ಹುದ್ದೆ ನೀಡಿ ನೇಮಕಾತಿ ಪತ್ರವನ್ನು ಸಿಎಂ ಸಿದ್ದರಾಮಯ್ಯ ವಿತರಣೆ ಮಾಡಿದರು. ➡ಪುಟ ೪

ನಿರ್ಲಕ್ಷಿಸಿದರೆ ತಕ್ಕ ಪಾಠ: ಸಿಎಂ, ಡಿಸಿಎಂ, ಖರ್ಗೆಗೆ ಪತ್ರ

ಕೈ ಪಾಳೆಯಕ್ಕೆ ಮುಸ್ಲಿಮರ ಎಚ್ಚರಿಕೆ

• **ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಮುಸ್ಲಿಂ ಸಮುದಾಯ ಹಾಗೂ ಮುಸ್ಲಿಂ ನಾಯಕರನ್ನು ಕಡೆಗಣಿಸಲಾಗುತ್ತಿದೆ. ಇದು ಹೀಗೆ ಮುಂದುವರಿದರೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಮುಸ್ಲಿಂ ಸಮುದಾಯ ಕೈ ಪಾಳೆಯಕ್ಕೆ ಎಚ್ಚರಿಕೆ ನೀಡಿದೆ. ಇದರ ಬೆನ್ನಲ್ಲೇ ಕಾಂಗ್ರೆಸ್‌ನಲ್ಲಿ ಹಲವು ಬೆಳವಣಿಗೆಗಳು ನಡೆದಿವೆ.

ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರ ವಿಚಾರದಲ್ಲಿ ಅದರಲ್ಲೂ ಪ್ರಮುಖವಾಗಿ ಮುಸ್ಲಿಂ ಸಮುದಾಯದವರ ವಿಚಾರದಲ್ಲಿ ಅಸಡ್ಡೆಯಾಗಿ ನಡೆದುಕೊಳ್ಳುತ್ತಿದೆ. ನಮ್ಮನ್ನು ಕೇವಲ ಮತಕ್ಕಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ ಎಂದು ಕೆಲವು ಮೌಲ್ವಿಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಕೆಲವು ಸಂಘ ಸಂಸ್ಥೆಗಳ ಮುಖಂಡರು ಹಾಗೂ ಮುಸ್ಲಿಂ ಗುರುಗಳು ಪತ್ರ ಬರೆದಿದ್ದಾರೆ. ಇದರ ಪರಿಣಾಮವನ್ನು ಮುಂಬರುವ ಚುನಾವಣೆಯಲ್ಲಿ ಎದುರಿಸಬೇಕಾಗುತ್ತದೆ ಎಂದು ಪತ್ರದಲ್ಲಿ ಎಚ್ಚರಿಸಿದ್ದಾರೆ. ➡ಪುಟ ೪



ಸಿದ್ದರಾಮಯ್ಯ ಟಗರು ಮುಂಚೆ ಹೇಗಿದ್ದ್ರು, ಈಗಲೂ ಹಾಗೇ ಇದ್ದಾರೆ. ಟಗರು ಟಗರೇ...ಸಿಎಂ ಈಗ ಸೈಲೆಂಟ್ ಆಗಿರಬಹುದು. ಅವರು ಮಾತನಾಡಿದರೆ ಬೇರೆ ತರಹ ಸೌಂಡ್ ಆಗುತ್ತೆ. ಈಗ ಮಾತನಾಡುವ ಅಗತ್ಯ ಇಲ್ಲ, ಸಂದರ್ಭ ಬಂದಾಗ ಮಾತನಾಡುತ್ತಾರೆ.
■ **ಜಮೀರ್ ಅಹ್ಮದ್ ಖಾನ್**, ಸಚಿವ

ಮುಸ್ಲಿಂ ಮುಖಂಡರ ಸಸ್ಪೆಂಡ್ ರದ್ದು ಸಾಧ್ಯತೆ: ಸಚಿವ ಸತೀಶ್

• ಪುಟ ೩

ಹ್ಯಾರಿಸ್ ಮನೆಯಲ್ಲಿದ್ದ ₹37 ಲಕ್ಷ ನಗದು ವಶ

ಮುಂದುವರಿದ ಇಡಿ ದಾಳಿ, ಮಹತ್ವದ ದಾಖಲೆ ಜಪ್ತಿ


• **ಬೆಂಗಳೂರು:** ಬಿಟ್‌ಕಾಯಿನ್ ಹಗರಣ ಸಂಬಂಧ ಶಾಸಕ ಎನ್.ಎ. ಹ್ಯಾರಿಸ್ ಹಾಗೂ ಮೊಹಮ್ಮದ್ ನಲಪಾಡ್, ಹ್ಯಾಕರ್ ಶ್ರೀಕಿ ಮನೆ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ಮಂಗಳವಾರವೂ ಮುಂದುವರಿದಿತ್ತು. ಈ ವೇಳೆ ಹ್ಯಾರಿಸ್ ನಿವಾಸದಲ್ಲಿ ಸುಮಾರು 37 ಲಕ್ಷ ರೂ. ನಗದನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಇಡಿ ಅಧಿಕಾರಿಗಳು 24 ಗಂಟೆಗೂ ಹೆಚ್ಚು ಕಾಲ ಶಾಸಕ ಹ್ಯಾರಿಸ್, ಪುತ್ರರಾದ ಮೊಹಮ್ಮದ್ ನಲಪಾಡ್ ಮತ್ತು ಉಮರ್ ಹ್ಯಾರಿಸ್ ಮನೆ ಮತ್ತು ಕೇಂದ್ರ ಮಾಜಿ ಸಚಿವ ಕೆ.ರೆಹಮಾನ್ ಖಾನ್ ಮೊಮ್ಮಗ ಹಾಕೀಬ್ ಖಾನ್ ಮನೆ ಮೇಲೆ ಶೋಧ ನಡೆಸಿದ್ದಾರೆ. ಹ್ಯಾಕರ್ ಶ್ರೀಕಿ ಮನೆಯಲ್ಲಿ 38 ಗಂಟೆಗಳ ಕಾಲ ಶೋಧ ನಡೆಸಲಾಗಿದೆ. ಆದರೆ, ಇ.ಡಿ. ಅಧಿಕಾರಿಗಳಿಗೆ ಶ್ರೀಕಿ ಸಹಕಾರ ನೀಡಿಲ್ಲ ಎಂದು ತಿಳಿದುಬಂದಿದೆ. ➡ಪುಟ ೪



4 ವಿವಾಹಗಳಿಗೆ ಅಂತ್ಯ ಖಚಿತ: ಅಮಿತ್ ಶಾ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ವಿವಾಹ, ವಿಚ್ಛೇದನ, ವಾರಸುತನ ಇತ್ಯಾದಿಗೆ ಸಂಬಂಧಿಸಿ ಮತಧರ್ಮಗಳ ಭೇದವಿಲ್ಲದೆ ಎಲ್ಲಾ ನಾಗರಿಕರಿಗೂ ಸಮಾನವಾಗಿ ಅನ್ವಯವಾಗುವ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೊಳಿಸಲಿದೆ. ನಿರ್ದಿಷ್ಟ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ನಾಲ್ಕು ಮದುವೆಗಳ ಪದ್ಧತಿಗೆ ಅಂತ್ಯ ಹಾಡಲಿದೆ ಎಂದು ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.



ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಏನಾಸಂ ಜಾರಿಗೊಳಿಸಲಿದ್ದೇವೆ

ಸಮಾನತೆಗಾಗಿ ಏನಾಸಂ ಅಗತ್ಯವೆಂದು ಪ್ರತಿಪಾದಿಸಿದ ಸಚಿವ ಶಾ, ಪ್ರಸಕ್ತ ಊರ್ಜಿತದಲ್ಲಿರೋ ಧರ್ಮಾಧಾರಿತ ವೈಯಕ್ತಿಕ ಕಾನೂನುಗಳ ಔಚಿತ್ಯವನ್ನು ಪ್ರಶ್ನಿಸಿದರು. ಪ್ರಸಕ್ತ ಸಮಾಜದಲ್ಲಿ ಕೆಲವರಿಗೆ ಹಲವು ಬಾರಿ ಮದುವೆಯಾಗಲು ಅವಕಾಶವಿದೆ ಮತ್ತು ಇತರರಿಗೆ ಒಂದೇ ವಿವಾಹವಾಗುವಂತೆ ಕಾನೂನು ನಿರ್ಬಂಧಿಸುತ್ತದೆ. ಇದ್ಯಾವ ನ್ಯಾಯ ಎಂದು ಪ್ರಶ್ನಿಸಿದ ಸಚಿವ ಶಾ, ಪ.ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಯುಸಿಸಿ ಜಾರಿ ಮುಖೇನ 4 ಬಾರಿ ವಿವಾಹವಾಗುವುದನ್ನು ನಿಷೇಧಿಸಲಿದೆ ಎಂದರು. ಈ ವೇಳೆ ಅಲ್ಲಿದ್ದ ಜನಸ್ತೋಮ ಚಪ್ಪಾಳೆ ಮುಖೇನ ಸಚಿವರ ಭರವಸೆಯನ್ನು ಸ್ವಾಗತಿಸಿತು. ಗುಜರಾತ್ ಸರಕಾರ ಏನಾಸಂ ಮಸೂದೆ ಮಂಜೂರು ಮಾಡಿರುವುದು ಮೈಲಿಗಲ್ಲಿನ ಹೆಜ್ಜೆ ಎಂದು ಸಚಿವರು ಹೇಳಿದರು. ➡ಪುಟ ೪

ಪರಿಹಾರ ತಾರತಮ್ಯಕ್ಕೆ ಜೆಡಿಎಸ್ ಶಾಸಕ ಅತೃಪ್ತಿ

• **ಬೆಂಗಳೂರು:** ಸಂತ್ರಸ್ತ ಕುಟುಂಬಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ನೀಡುವ ಹಣದ ವಿಚಾರದಲ್ಲಿ ಈಗ ಜೆಡಿಎಸ್ ಶಾಸಕ ಹಾಗೂ ಸಿಎಂ ನಡುವಿನ ಮುಸುಕಿನ ಗುದ್ದಾಟ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ.



ಮುಖ್ಯಮಂತ್ರಿಗೆ ಪತ್ರ ಬರೆದ ಶರಣಗೌಡ ಕಂದಕೂರ್। ಎಲ್ಲರಿಗೂ ಪರಿಹಾರ ನೀಡುತ್ತೇವೆ: ಸಿಎಂ

ಪರಿಹಾರ ಧನ ಘೋಷಣೆ ಮಾಡುವ ಕುರಿತಂತೆ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಈ ಪತ್ರ ಬರೆದ ವಿಚಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಎಲ್ಲರಿಗೂ ಪರಿಹಾರ ನೀಡಲಾಗುತ್ತಿದೆ, ನಮ್ಮ ಗಮನಕ್ಕೆ ಬಂದರೆ ಪರಿಹಾರ ನೀಡುತ್ತೇವೆ. ಶಾಸಕರು ಕೇಳಿದರೂ ಖಂಡಿತ ಕೊಡುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನಲ್ಲಿ ಸಂಭವಿಸಿದ್ದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಮೃತರಾದವರ ಕುಟುಂಬಗಳಿಗೆ ಮುಖ್ಯಮಂತ್ರಿಗಳು ಪರಿಹಾರ ಘೋಷಣೆ ಮಾಡಿಲ್ಲ, ಆದರೆ ಏ.19 ರಂದು ಮೈಸೂರಿನ ಕೆ.ಆರ್. ನಗರದಲ್ಲಿ ಈಜಾಡಲು ಹೋಗಿ ಮೃತಪಟ್ಟ 6 ಜನರ ಕುಟುಂಬಗಳಿಗೆ ಸಾಂತ್ವನ ಹೇಳಿ, ಕೂಡಲೇ 5 ಲಕ್ಷ ಪರಿಹಾರಧನ ಘೋಷಣೆ ಮಾಡಿದ್ದೀರಿ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,65,000 (2,75,000) ಅಪರಂಜಿ ಚಿನ್ನ: 1,55,290 (1,55,990) ಆಭರಣ ಚಿನ್ನ: 1,42,350 (1,42,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 79,273 (753↑) ಎನ್‌ಎಸ್‌ಇ 24,576 (211↑)
$1 = ₹92.93	

ಕಿರುಸುದ್ದಿ

ಏ.25ಕ್ಕೆ ಮೌನ ಮೆರವಣಿಗೆ

ಹುಬ್ಬಳ್ಳಿ: ಕಾಂಗ್ರೆಸ್ ಮುಖಂಡ ವಿನಯ ಕುಲಕರ್ಣಿ ಅವರ ಬೆಂಬಲಾರ್ಥ ಏ.25ರಂದು ಬೆಳಿಗ್ಗೆ 10.30ಕ್ಕೆ ಧಾರವಾಡದ ಕಲಾಭವನ ಮೈದಾನದಿಂದ ಗಾಂಧಿ ಚೌಕದವರೆಗೆ ಮೌನ ಮೆರವಣಿಗೆ ನಡೆಸಲು ಹು-ಧಾ ಮಹಾನಗರ ಹಾಗೂ ಗ್ರಾಮೀಣ ಕಾಂಗ್ರೆಸ್ ಘಟಕ ತೀರ್ಮಾನಿಸಿದೆ.

ನಗರದ ಕಾರವಾರ ರಸ್ತೆಯ ಪಕ್ಷದ ಕಚೇರಿಯಲ್ಲಿ ಸೋಮವಾರ ಸಭೆ ನಡೆಸಿ ಚರ್ಚಿಸಿದ ಮುಖಂಡರು, ಕಾರ್ಯಕರ್ತರು ಮೌನ ಮೆರವಣಿಗೆಗೆ ಒಮ್ಮತದ ನಿರ್ಧಾರ ಕೈಗೊಂಡರು. ಮುಖಂಡರಾದ ಅನಿಲಕುಮಾರ ಪಾಟೀಲ್, ಅಲ್ತಾಫ್ ಹಳ್ಳೂರ, ಮೋಹನ ಲಿಂಬಿಕಾಯಿ, ಎಸ್.ಆರ್. ಪಾಟೀಲ, ಚಂದ್ರು ಜುಟ್ಟಲ್, ಅರ್ಜುನ ಪಾಟೀಲ, ಅರವಿಂದ ಏಗನಗೌಡರ, ಸುರೇಶಗೌಡ ಇದ್ದರು.

ಕವನ ಸ್ಪರ್ಧೆ

ಧಾರವಾಡ: ಬುದ್ಧಪೂರ್ಣಿ ಪ್ರಯುಕ್ತ ಧಾರವಾಡ ಗಣಕರಂಗದಿಂದ ಬುದ್ಧ-ಯುದ್ಧ ಕವನ ಸ್ಪರ್ಧೆ ಏರ್ಪಡಿಸಲಾಗಿದೆ. ಕವನ ಕನಿಷ್ಠ 15 ಮತ್ತು ಗರಿಷ್ಠ 20 ಸಾಲುಗಳನ್ನು ಹೊಂದಿದರು. ಕವನ ಕಳಿಸಲು ಏ.28 ಕೊನೆಯ ದಿನ. ವಿಜೇತರಿಗೆ ಪ್ರಥಮ ರೂ.1500, ದ್ವಿತೀಯ ರೂ.1,000, ತೃತೀಯ ರೂ.500 ನೀಡಲಾಗುತ್ತದೆ. ಮಾಹಿತಿಗಾಗಿ 9845109480, 9902674005, 8660111052ಕ್ಕೆ ಸಂಪರ್ಕಿಸಲು ಪ್ರಕಟಣೆ ಕೋರಿದೆ.

ಸಹಿ ಸಂಗ್ರಹ ಅಭಿಯಾನ

ಹುಬ್ಬಳ್ಳಿ: ಅಕ್ಕಾ ಫೌಂಡೇಶನ್ ಟ್ರಸ್ಟ್ ವತಿಯಿಂದ ಇಲ್ಲಿನ ಸಹಸ್ರಾರ್ಜುನ ಸರ್ಕಲ್ ನಾಲಾ ಹತ್ತಿರ ಪವಿತ್ರ ಮತ್ತು ಪುರಾತನ ತುಳಜಾಭವಾನಿ ದೇವಸ್ಥಾನ ಕೊಳಚೆ ನೀರು ಮುಕ್ತ ಪ್ರತಿಜ್ಞಾ ಸ್ವೀಕಾರ ಪಡೆದು ಸಹಿ ಸಂಗ್ರಹ ಅಭಿಯಾನವನ್ನು ಏಪ್ರಿಲ್ 22 ರಿಂದ ಜೂನ್ 5 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಈರಪ್ಪ ಆರಕೇರಿ ಹೇಳಿದರು. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನಿಂದ ಪರಿಸರ ದಿನದವರೆಗೆ ಮೌನ ಪ್ರತಿಭಟನೆ ನಡೆಸಲಾಗುವುದು. ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗುವುದು. ಈ ಅಭಿಯಾನದ ಮೂಲಕ ಹವಾಮಾನ ತುರ್ತುಪರಿಸ್ಥಿತಿ ಘೋಷಿಸಲು, ಸ್ವಸ್ಥ ನಾರಿಯಾಗಿರಲು ಹುಬ್ಬಳ್ಳಿ-ಧಾರವಾಡದಲ್ಲಿ ಮಹಿಳೆಯರಿಗಾಗಿ ಶೌಚಾಲಯ ನಿರ್ಮಿಸಿ ಉಚಿತ ಒದಗಿಸಲು ಒತ್ತಾಯಿಸಲಾಗುವುದು ಎಂದರು. ಮೃತ್ಯುಂಜಯ ಸಾಲಿಮಠ, ರಾಜೇಶ್ವರಿ ಗಟ್ಟದ ಇದ್ದರು.

ನಾಟಕ ಪ್ರದರ್ಶನ ನಾಳೆ

ಕಲಘಟಗಿ: ತಾಲೂಕಿನ ಗಳಗಿಹುಲಕೊಪ್ಪ ಗ್ರಾಮದ ಗ್ರಾಮದೇವಿಯರ 5ನೇ ಬೃಹತ್ ಜಾತ್ರಾ ಮಹೋತ್ಸವದ ಅಂಗವಾಗಿ ಏ.23 ರಂದು ರಾತ್ರಿ 10.30ಕ್ಕೆ ಡಿ.ಆರ್. ಪೂಜಾರ ಇವರ ವಿರಚಿತ ಅರವತ್ತು ಹಳ್ಳಿಯ ಅರಸ ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಗ್ರಾಮದ ಡಿಪಿಇಪಿ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ಪ್ರದರ್ಶನಗೊಳ್ಳುತ್ತಿರುವ ಈ ನಾಟಕವು ಶ್ರೀ ಘಟಗಿ ಬಸವೇಶ್ವರ ನವತರುಣ ನಾಟ್ಯಸಂಘದವರ 4ನೇ ಕಲಾಕುಸುಮವಾಗಿದೆ. ಬಸವಾನಂದ ಸ್ವಾಮೀಜಿ, ಸಿದ್ದರಾಮಯ್ಯ ನಿ. ಹಿರೇಮಠ, ವಿಶ್ವನಾಥ ಹಿರೇಮಠ, ಪತ್ರಯ್ಯ ಮುಷ್ಟಿನಮಠ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಚಿವ ಸಂತೋಷ ಎಸ್. ಲಾಡ್, ಉದ್ಘಾಟಿಸಲಿದ್ದಾರೆ. ಅಂದಾನಯ್ಯ ಹಿರೇಮಠ, ಆರ್.ವಿ.ಪತ್ತಾರ ಅಧ್ಯಕ್ಷತೆ ವಹಿಸಲಿದ್ದು, ಪರಿಷತ್ ಮಾಜಿ ಸದಸ್ಯ ನಾಗರಾಜ ಛಬ್ಬಿ, ಧಾರವಾಡ ಎಪಿಎಂಸಿ ಮಾಜಿ ಅಧ್ಯಕ್ಷ ಕೃಷ್ಣಾ ಕೊಳ್ಳಾನಟ್ಟಿ, ಕೆಸಿಸಿ ಬ್ಯಾಂಕ್ ನಿರ್ದೇಶಕ ಮಂಜುನಾಥಗೌಡ ಮುರಳ್ಳಿ, ಬಿಜೆಪಿ ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ, ಸಹದೇವ ಅಂಗಡಿ, ಜಿಪಂ ಮಾಜಿ ಸದಸ್ಯ ಅಣ್ಣಪ್ಪ ದೇಸಾಯಿ, ವಿಜಯಕುಮಾರ ಹರ್ತಿ, ಹಿರಿಯ ಪತ್ರಕರ್ತ ವಿಠ್ಠಲ ಕ್ಯಾರವಾಡ, ನಾಗರಾಜಕುಮಾರ ಬಿದರಳ್ಳಿ, ಮಹಾಂತೇಶ ವಿ. ತಡಸಮಠ, ಶಟವಪ್ಪ ಧಾರವಾಡ, ನಾಗರಾಜಕುಮಾರ ರೇವಣಕರ, ಆನಂದ ಚಿಕ್ಕಣ್ಣನವರ, ಪುಂಡಲೀಕ ಯಲ್ಲಾರಿ, ಅಜಯ ಹೊಸಮನಿ, ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಆನಂದ ಘಂಟಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಗ್ರಾಮದ ಹಿರಿಯರಾದ ಗುರಯ್ಯ ಕಲ್ಮಠ, ಚನ್ನಪ್ಪ ನಂದೆಪ್ಪನವರ, ಶಿವಪ್ಪೂಜಿ ತಡಸನವರ, ಈರಯ್ಯ ಸಿದ್ದಾಪ್ರರಮಠ, ದೇವೇಂದ್ರ ಗುಡಿಯವರ, ರಾಜು ಜಾಧವ, ಬಸವರಾಜ ಗುಮ್ಮಗೋಳ, ಶಶಿಕುಮಾರ ಜಾಧವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಗ್ರಾಮದ ಬಸವಣ್ಣೆಪ್ಪ ಹೂಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಉಪನ್ಯಾಸ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ಮಹಿಳಾ ಮತ್ತು ಮಕ್ಕಳ ಮಂಟಪದಿಂದ ವಿವಿಧ ರಂಗಗಳಲ್ಲಿ ಮಹಿಳೆ: ಅಂದು-ಇಂದು ಉಪನ್ಯಾಸ ಕಾರ್ಯಕ್ರಮ ಏ.22ರ ಸಂಜೆ 6ಕ್ಕೆ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಉದ್ಘಾಟಿಸಲಿದ್ದು, ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕವಿಸಂ ಕಾರ್ಯದರ್ಶಿ ಶಂಕರ ಹಲಗತ್ತಿ, ಡಾ. ಶೈಲಜಾ ಅಮರಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

4 ಹಸು ಕಳುವು

ಹುಬ್ಬಳ್ಳಿ: ಮೂವರು ಕಳ್ಳರು ಪಾರ್ಚೂನ್ ಕಾರ್ ಮೂಲಕ ಆಗಮಿಸಿ 4 ಲಕ್ಷ ರೂ. ಮೌಲ್ಯದ 4 ಹಸುಗಳನ್ನು ಕಳುವು ಮಾಡಿಕೊಂಡು ಹೋಗಿರುವ ಇಲ್ಲಿಯ ಸೆಂಟ್ಲಮೆಂಟ್‌ನ ಕೆಡಿಒ ಶಾಲೆಯ ಹತ್ತಿರ ನಡೆದಿದೆ. ಗಂಗಾಧರ ನಗರದ ನಿವಾಸಿ ಮಣಿಕಂಠ ಜಡಿ ಎಂಬುವರಿಗೆ ಸೇರಿದ ಹಸುಗಳು ಕಳುವು ಮಾಡಿದ್ದಾರೆ. 1.50 ಲಕ್ಷ ರೂ. ಮೌಲ್ಯದ ಒಂದು ಹಸು, 60 ಸಾವಿರ ಮೌಲ್ಯದ ಒಂದು, 1.20 ಲಕ್ಷ ರೂ. ಮೌಲ್ಯದ ಒಂದು ಹಾಗೂ 70 ಸಾವಿರ ಮೌಲ್ಯದ ಹಸು ಕಳುವು ಮಾಡಿ ಪರಾರಿಯಾಗಿದ್ದಾರೆ. ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಉಪ್ಪಿನಬೆಟಗೇರಿ: ಗ್ರಾಮದ ಪುರಾತನ ಕಾಲದ ಆಂಜನೇಯ ಹಳೆಯ ದೇವಸ್ಥಾನವನ್ನು ನೆಲಸಮ ಗೊಳಿಸಿ ನೂತನ ಹನುಮ ಮಂದಿರ ನಿರ್ಮಾಣಕ್ಕೆ ಸೋಮವಾರ ಜ್ಯೋತಿಷ ಮಹಾದೇವಪ್ಪ ಅಷ್ಟಗಿ ಭೂಮಿಪೂಜೆ ನೆರವೇರಿಸಿದರು. ವೀರಣ್ಣಾ ಪರಾಂಡೆ, ಕೆ.ಸಿ.ಪುಡಕಲಕಟ್ಟಿ, ದೇವಂದ್ರಪ್ಪ ಅಂಗಡಿ, ಮಡಿವಾಳಯ್ಯ ಶಹಾಪೂರಮಠ, ಚಂದ್ರನಾಥ ಅಷ್ಟಗಿ, ಗದಿಗಯ್ಯ ಹಿರೇಮಠ, ಮಹಾವೀರ ಅಷ್ಟಗಿ, ದೀನಬಂಧು ತಳವಾರ. ಮಹಾದೇವಪ್ಪ ಪಟ್ಟಣಶೆಟ್ಟಿ, ಗಿರೀಶ ಪೂಜಾರ, ಈರಯ್ಯ ಕೆಂಬಾಗಿಮಠ ಇದ್ದರು.

ಫಲಾನುಭವಿಗಳ ಸಮಸ್ಯೆ ಆಲಿಸಿದ ಅಧಿಕಾರಿಗಳು

ಅಳ್ನಾವರ: ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಯಡಿ ಪಡೆಯಲಾಗುತ್ತಿರುವ ವಿವಿಧ ಮಾಸಾಶನಾದಾರರು ಪಿಂಚಣಿ ಹಣ ಬರುತ್ತಿಲ್ಲ ಎನ್ನುವ ದೂರಿನ ಹಿನ್ನೆಲೆಯಲ್ಲಿ ಮಂಗಳವಾರ ಕಂದಾಯ ಇಲಾಖೆಯ ಅಧಿಕಾರಿಗಳು ಸಮೀಪದ ಕಡಬಗಟ್ಟಿ ಗ್ರಾಮಕ್ಕೆ ತೆರಳಿ ಫಲಾನುಭವಿಗಳ ಸಮಸ್ಯೆಗಳನ್ನು ಆಲಿಸಿದರು. ಗ್ರಾಮದಲ್ಲಿ ಸುಮಾರು 300ಕ್ಕೂ ಅಧಿಕ ಮಾಸಾಶನದಾರರ ಪಿಂಚಣಿ ಹಣ ಬಾರದೆ ಪರದಾಡುತ್ತಿದ್ದಾರೆ. ಮಾಸಾಶನ ಮರು ಪ್ರಾರಂಭಕ್ಕೆ ದಾಖಲೆಗಳನ್ನು ಹೊಂದಿಸಿಕೊಂಡು ಕಂದಾಯ ಕಚೇರಿಗಳಿಗೆ ಅಲೆಯುವಂತಾಗಿದೆ ಎನ್ನುವ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಜನರ ಬಳಿಗೆಯೇ ತೆರಳಿದ ಕಂದಾಯ ಅಧಿಕಾರಿಗಳು ಪರಿಶೀಲನೆ ಮಾಡಿ ಅಗತ್ಯ ದಾಖಲೆಗಳ ಮಾಹಿತಿ ನೀಡಿ ಅವಶ್ಯ ದಾಖಲೆಗಳನ್ನು ಹಾಜರು ಪಡಿಸುವ ನೈಜ ಫಲಾನುಭವಿಗಳಿಗೆ ತೊಂದರೆಯಾಗದಂತೆ ಮಾಸಾಶನವನ್ನು ಮರು ಪ್ರಾರಂಭ ಮಾಡಲಾಗುವುದೆಂದು ತಿಳಿಸಿದರು. ಶಿವಾನಂದ ಗೋವಿನಕೊಪ್ಪ ನೇತೃತ್ವದಲ್ಲಿ ಕಡಬಗಟ್ಟಿ ಗ್ರಾಪಂ ವ್ಯಾಪ್ತಿಯ ಹುಲಿಕೇರಿ, ಕಡಬಗಟ್ಟಿ, ಕಾಶೆನಟ್ಟಿ ಗ್ರಾಮಗಳ ನೂರಾರು ಫಲಾನುಭವಿಗಳು ಆಗಮಿಸಿ ದಾಖಲೆಗಳನ್ನು ಸಲ್ಲಿಸಿದರು. ಉಪತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ, ಕಂದಾಯ ನಿರೀಕ್ಷಕ ಸಂಪತಕುಮಾರ ಗುರುಒಡೆಯರ, ಗ್ರಾಮ ಆಡಳಿತ ಅಧಿಕಾರಿ ತಯ್ಯಬಾ ಚೌದರಿ, ಪಿಡಿಒ ಆನಂದ ಪಾಟೀಲ ಇತರರಿದ್ದರು. ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ವಿನಾಯಕ ಕುರುಬರ ಮಾತನಾಡಿ, ಅರ್ಹ ಪಿಂಚಣಿದಾರರಿಗೆ ಸಕಾಲದಲ್ಲಿ ಮಾಸಾಶನ ಬಟವಡೆ ಮಾಡಲು ಕ್ರಮ ಕೈಕೊಳ್ಳಬೇಕು ಎಂದರು.



ಅಳ್ನಾವರ: ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಯಡಿ ಪಡೆಯಲಾಗುತ್ತಿರುವ ವಿವಿಧ ಮಾಸಾಶನಾದಾರರು ಪಿಂಚಣಿ ಹಣ ಬರುತ್ತಿಲ್ಲ ಎನ್ನುವ ದೂರಿನ ಹಿನ್ನೆಲೆಯಲ್ಲಿ ಮಂಗಳವಾರ ಕಂದಾಯ ಇಲಾಖೆಯ ಅಧಿಕಾರಿಗಳು ಸಮೀಪದ ಕಡಬಗಟ್ಟಿ ಗ್ರಾಮಕ್ಕೆ ತೆರಳಿ ಫಲಾನುಭವಿಗಳ ಸಮಸ್ಯೆಗಳನ್ನು ಆಲಿಸಿದರು.

ಅಭಿವೃದ್ಧಿಗೆ ಕಟ್ಟಡ ನೆರವಾಗಲಿ: ಕೋನರಡ್ಡಿ



ನವಲಗುಂದ: ಕೃಷಿಕರ ಶ್ರಮ, ಪರಿಶ್ರಮ ಮತ್ತು ತ್ಯಾಗಗಳ ಪ್ರತಿಬಿಂಬವಾಗಿರುವ ಈ ಕಟ್ಟಡವು ಭವಿಷ್ಯದಲ್ಲಿ ರೈತರ ಅಭಿವೃದ್ಧಿಗೆ, ಅವರ ಹಕ್ಕುಗಳ ಬಲವರ್ಧನೆಗೆ ಹಾಗೂ ಸಂಘಟಿತ ಶಕ್ತಿಗೆ ದೃಢವಾದ ನೆಲೆಗಟ್ಟಾಗಲಿ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ಅವರು ಮಂಗಳವಾರ ನಗರದ ಎಪಿಎಂಸಿ ಆವರಣದಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ತಾಲೂಕು ಘಟಕದ ವತಿಯಿಂದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಸಾನ್ನಿಧ್ಯವನ್ನು ಪಂಚಗ್ರಹ ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯರು, ಗವಿಮಠದ ಬಸವಲಿಂಗ ಶ್ರೀಗಳು, ಅಜಾತ ನಾಗಲಿಂಗ ಸ್ವಾಮಿಮಠ ವಿರೇಂದ್ರ ಶ್ರೀಗಳು ವಹಿಸಿದ್ದರು. ತಹಶೀಲ್ದಾರ್ ಸುಧೀರ ಸಾವುಕಾರ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಬೆಂಗಳೂರು ಅಧ್ಯಕ್ಷ ಮಹದೇವಪ್ಪ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ ನಿರ್ದೇಶಕ ಅರವಿಂದ ಕಟಗಿ, ಜಿಲ್ಲಾ ಕೃಷಿಕ ಸಮಾಜ ಧಾರವಾಡ ಅಧ್ಯಕ್ಷ ಮಲ್ಲನಗೌಡ ಪಾಟೀಲ, ಕೃಷಿಕ ಸಮಾಜ ನವಲಗುಂದ ಅಧ್ಯಕ್ಷ ಎಸ್.ವಿ.ಬಳಿಗೇರ, ಉಪಾಧ್ಯಕ್ಷ ದಾವಲಸಾಬ್ ಕುದ್ದಣ್ಣವರ, ಪ್ರಧಾನ ಕಾರ್ಯದರ್ಶಿ ನಾಗನಗೌಡ ಪಾಟೀಲ, ಖಜಾಂಚಿ ಪ್ರಕಾಶ ಶಿಗ್ಲಿ, ರವೀಂದ್ರಗೌಡ ಎಸ್.ಪಾಟೀಲ, ಯೋಗೇಶ್ ಕಿಲಾರೆ, ಶ್ರೀಮತಿ ನದಾಪ್, ಬಾಪುಗೌಡ ಪಾಟೀಲ, ನವಲಗುಂದ ತಾಲೂಕು ಗ್ಯಾರಂಟಿ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡರ, ಮಲಪ್ರಭಾ ಕುಡಿಯುವ ನೀರು ಬಳಕೆದಾರರ ಮಹಾಮಂಡಳ ಅಧ್ಯಕ್ಷ ಸದುಗೌಡ ಪಾಟೀಲ, ಹುಬ್ಬಳ್ಳಿ ತಾಲೂಕು ಗ್ಯಾರಂಟಿ ಅಧ್ಯಕ್ಷ ಶಿವಾನಂದ ಬೂಮಣ್ಣವರ, ರೈತ ಮುಖಂಡ ಬಸವರಾಜ ಗುಡೆನ್ನವರ, ಕೃಷಿಕ ಸಮಾಜದ ನಿರ್ದೇಶಕರುಗಳಾದ ಆರ್.ಹೆಚ್. ಕೋನರಡ್ಡಿ, ಶಂಕರ ಅಂಬ್ಲಿ, ವಿರೂಪಾಕ್ಷಪ್ಪ ಲಟ್ಟಿ, ಸಿದ್ದಪ್ಪ ಮರಿಸಿದ್ದಣ್ಣವರ, ನಿಂಗಪ್ಪ ತಳವಾರ, ಶಿವಯ್ಯ ಪೂಜಾರ, ಉಮೇಶ್ ಸೋಮಾಪುರ, ಮಲ್ಲಪ್ಪ ಮನಗೂಳಿ, ಕರಿಯಪ್ಪ ನರಗುಂದ ಸೇರಿದಂತೆ ಇತರರಿದ್ದರು.

ಸ್ವಚ್ಛತೆ ನಮ್ಮ ಕರ್ತವ್ಯವಾಗಲಿ

ನವಲಗುಂದ: ನಾವು ನಮ್ಮ ಮನೆಯ ಮುಂದೆ ಹೇಗೆ ಶ್ರದ್ಧೆಯಿಂದ ಸ್ವಚ್ಛತೆ ಕಾಪಾಡುತ್ತೇವೋ ಅದೇ ಮನೋಭಾವದಿಂದ ನಮ್ಮ ಓಣಿ, ಪಟ್ಟಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ಅವರು ಮಂಗಳವಾರ ನಗರದ ಸಂಸ್ಥಾನ ಪಂಚಗ್ರಹ ಹಿರೇಮಠದ ನೂತನ ಮಠಾಧಿಪತಿ ವೀರಬಸವ ದೇವರ ಗುರುಪಟ್ಟಾಭಿಷೇಕದ ಅಂಗವಾಗಿ ನವಲಗುಂದ ಪುರಸಭೆಯ ಸಹಭಾಗಿತ್ವದಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ವಾರದಲ್ಲಿ ಕನಿಷ್ಠ ಒಂದು ದಿನ, ಪ್ರತಿಯೊಂದು ಓಣಿಯನ್ನು ಸ್ವಚ್ಛಗೊಳಿಸುವಂತೆ ಪುರಸಭೆ ಕ್ರಮ ಕೈಗೊಳ್ಳಬೇಕಿದೆ. ಸಾರ್ವಜನಿಕರೂ ಸಕ್ರಿಯವಾಗಿ ಕೈಜೋಡಿಸಬೇಕು ಎಂದರು.ಈ ಕಾರ್ಯಕ್ರಮದ ಅಂಗವಾಗಿ ಸ್ಥಳೀಯ ಗಾಂಧಿ ಮುಖ್ಯ ಮಾರ್ಕೆಟ್ ಮಾರ್ಗವಾಗಿ ಗಣಪತಿ ಗುಡಿ, ನಾಗಲಿಂಗ ಸ್ವಾಮಿ ಮಠದ ಮೂಲಕ ''ನಮ್ಮ ನಡೆ ಸ್ವಚ್ಛತೆ ಕಡೆ'' ಜಾಥಾ ಸಾಗಿತು. ಪುರಸಭೆ ಮುಖ್ಯಾಧಿಕಾರಿ ಎಸ್.ಪಿ. ಪೂಜಾರ, ವಕೀಲ ವಿ.ಪಿ.ಪಾಟೀಲ, ಪುರಸಭೆ ಮಾಜಿ ಸದಸ್ಯರಾದ ಜೀವನ ಪವಾರ, ಮೋದಿನ ಶಿರೂರ, ಪ್ರಕಾಶ ಶಿಗ್ಲಿ, ಸುರೇಶ ಮೇಟಿ, ಹನುಮಂತ ವಾಲಿಕಾರ, ಮುಖಂಡರಾದ ಗಂಗಪ್ಪ ಹಳ್ಳದ, ಎಸ್.ಕೆ. ದೋಟಿಕಲ್, ಶರ್ಮಾ ಹಿರೇಮಠ್, ವೀರೇಶ್ ಜಾವುರಮಠ, ಶಿದ್ದಲಿಂಗಯ್ಯ ಹಿರೇಮಠ್, ಅಡಿವೆಪ್ಪ ಶಿರಸಂಗಿ, ರವಿ ಬೆಂಡಿಗೇರಿ, ಆನಂದ ಹವಳಕೋಡ, ಮದರಸಾಬ ಉಗರಗೋಳ, ಪೌರಕಾರ್ಮಿಕರು ಇದ್ದರು.



ಶೀಘ್ರ ಮಿನಿ ಸೇತುವೆ ನಿರ್ಮಾಣ: ಪಾಟೀಲ



ಕುಂದಗೋಳ: ಮರಾಠ ಸಮಾಜದವರು ಮುಖಂಡರ ಜೊತೆಗೆ ಸೇರಿ ಚಿತಾಗಾರ (ಶವ ಸುಡುವ ಕಟ್ಟಡ) ನಿರ್ಮಾಣ ಮಾಡಿರುವ ಕ್ರಮ ಶ್ಲಾಘನೀಯವಾಗಿದೆ ಎಂದು ಶಾಸಕ ಎಂ.ಆರ್.ಪಾಟೀಲ ಹೇಳಿದರು.

ಅವರು ಬಸವ ಜಯಂತಿಯಂದು ತಾಲೂಕಿನ ಶಿರೂರ ಗ್ರಾಮದ ಬೆಣ್ಣೆ ಹಳ್ಳದ ದಂಡೆಯ ಪಕ್ಕದಲ್ಲಿ ಸಮಾಜದ ಮುಖಂಡರು ನಿರ್ಮಿಸಿದ ಚಿತಾಗಾರ ಕಟ್ಟಡಕ್ಕೆ ಚಾಲನೆ ನೀಡಿ ಮಾತನಾಡಿ ಬಹಳಷ್ಟು ಶ್ರಮಪಟ್ಟು ಈ ಶವ ಸುಡುವ ರುದ್ರಭೂಮಿ ನಿರ್ಮಾಣ ಮಾಡಿದ್ದಾರೆ. ಮಳೆಗಾಲದಲ್ಲಿ ಶವ ತೆಗೆದುಕೊಂಡು ಹೋಗಲು ದಾರಿ ಸಮಸ್ಯೆ ಎದ್ದು ಕಾಣುತ್ತಿದೆ. ನನ್ನ ಅನುದಾನದಡಿಯಲ್ಲಿ ಇಲ್ಲೊಂದು ಶೀಘ್ರ ಮಿನಿ ಸೇತುವೆ ನಿರ್ಮಿಸಿ ಶವ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡುವ ಭರವಸೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ವೇದಮೂರ್ತಿ ಮೃತ್ಯುಂಜಯ ಸ್ವಾಮೀಜಿ ಹಿರೇಮಠ ಆಶೀರ್ವಚನದಲ್ಲಿ ಇದು ಸ್ಮಶಾನಗಟ್ಟಿ ಅಲ್ಲ, ಇದು ಒಂದು ಶಿವಶಕ್ತಿ ಕೇಂದ್ರ ಇಲ್ಲಿ ಅಗ್ನಿದೇವ ಇರುತ್ತಾನೆ. ಇದನ್ನು ನಾವೆಲ್ಲ ಗೌರವಯುತವಾಗಿ ಕಾಣಬೇಕು ಎಂದರು.

ಇದೇ ಸಂದರ್ಭದಲ್ಲಿ ಚಿತಾಗಾರ ನಿರ್ಮಾಣಕ್ಕೆ ಭೂಮಿ ದಾನ ಮಾಡಿದ ಪರಮೇಶಗೌಡ ಫಕೀರಗೌಡ್ರ ಹಾಗೂ ನಿರ್ಮಾಣ ಮಾಡಿದ ಕಾರ್ಮಿಕ ಇಮಾಮಹುಸೇನಿ ಅವರನ್ನು ಶಾಸಕ ಎಂ.ಆರ್.ಪಾಟೀಲ ಸನ್ಮಾನಿಸಿದರು. ಕೆ.ಸಿ.ಸಿ.ಬ್ಯಾಂಕ್ ನಿರ್ದೇಶಕ ಉಮೇಶ ಹೆಬಸೂರ, ಕೃಷಿ ವಿಶ್ವವಿದ್ಯಾಲಯದ ಸದಸ್ಯ ಮಾಲತೇಶ ಶಾಗೋಟಿ, ಗ್ರಾಮದ ಮುಖಂಡರಾದ ರುದ್ರಣ್ಣ ಗಾಣಿಗೇರ, ಅಶೋಕ ಘೋರ್ಪಡೆ, ಶಿವನಗೌಡ ಗೌಡಪ್ಪಗೌಡ್ರ, ಷಣ್ಮುಖ ನಂದೆಣ್ಣವರ,ಪೀರಪ್ಪಘೋರ್ಪಡೆ, ಲಕ್ಷ್ಮಣ ತೇಜಪ್ಪನವರ, ಪಾಂಡಪ್ಪ ಘೋರ್ಪಡೆ, ಬಾಬುಸಾಬ್ ಕೋಲಕಾರ, ಬಸವಂತ ಘೋರ್ಪಡೆ, ರವಿ ತೇಜಪ್ಪನವರ, ಕೃಷ್ಣಪ್ಪ ಘೋರ್ಪಡೆ ಇದ್ದರು.

ಹೋರಾಟದ ಮನೋಭಾವದಿಂದ ಅಭಿವೃದ್ಧಿ ಸಾಧ್ಯ

ಕುಂದಗೋಳ: ಹೋರಾಟದ ಮನೋಭಾವದಿಂದ ಮಾತ್ರ ವಿಶ್ವಕರ್ಮ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ. ನಂಜುಂಡಿ ಹೇಳಿದರು.

ಅವರು ಪಟ್ಟಣದ ಜೆಪಿಎಸ್ಎಸ್ ವಿದ್ಯಾಪೀಠ ಸಭಾಭವನದಲ್ಲಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೆಂಗಳೂರು, ಧಾರವಾಡ ಜಿಲ್ಲಾ ಕುಂದಗೋಳ ತಾಲೂಕು ಘಟಕದಿಂದ ಆಯೋಜಿಸಿದ್ದ ವಿಶ್ವಕರ್ಮ ಜನಜಾಗೃತಿ ಸಮಾವೇಶ, ತಾಲೂಕು ಘಟಕದ ಪುರುಷ ಹಾಗೂ ಮಹಿಳಾ ಪದಾಧಿಕಾರಿಗಳ ಪದಗ್ರಹಣ ಮತ್ತು ವಿಶ್ವಕರ್ಮ ಸಮಾಜ ಸಂಘದ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದ ಒಗ್ಗಟ್ಟನ್ನು ಬಲಪಡಿಸಿದಾಗ ಮಾತ್ರ ಸರ್ಕಾರದ ಯೋಜನೆಗಳು ಮತ್ತು ಸೌಲಭ್ಯಗಳನ್ನು ಸಮರ್ಪಕವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂದರು.

ವಿಶ್ವಕರ್ಮ ಸಮುದಾಯದವರು ಇನ್ನೂ ಹಲವು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಇತರರಿಗೆ ಮೀಸಲಾತಿಯಲ್ಲಿ ವಿಶೇಷ ಸ್ಥಾನಮಾನ ದೊರೆಯುತ್ತಿದ್ದರೂ ತಮ್ಮ ಸಮುದಾಯಕ್ಕೆ ಅದು ಸಿಗುತ್ತಿಲ್ಲ. ಎಸ್‌ಟಿ ಮೀಸಲಾತಿ ದೊರೆತಲ್ಲಿ ಸಂವಿಧಾನಾತ್ಮಕ ಹಕ್ಕಿನಡಿ ಸಮಾಜದ ಯುವಕರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಿ, ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು.

ಇದಕ್ಕೂ ಮುನ್ನ ಅವರು ಕುಂದಗೋಳದ ಮೌನೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಭೂಮಿಪೂಜೆ ನೆರವೇರಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಶಿರೋಳ ಗವಿಮಠದ ಯಚ್ಚರಪ್ಪ ಸ್ವಾಮೀಜಿ ಮಾತನಾಡಿ, ವಿಶ್ವಕರ್ಮ ಸಮಾಜವು ಜಗತ್ತಿಗೆ ರೂಪ ನೀಡಿದ ಮಹತ್ವದ ಸಮುದಾಯವಾಗಿದೆ. ಸಮಾಜದ ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ ಉಳಿಸಿಕೊಳ್ಳುವುದು ಅಗತ್ಯ ಎಂದರು. ಶಿವಾನಂದ ಮಠದ ಪ.ಪೂ. ಶಿವಾನಂದ ಸ್ವಾಮೀಜಿ ಮಾತನಾಡಿ, ವಿಶ್ವಕರ್ಮರ ಸೇವೆ ಸಮಾಜಕ್ಕೆ ಅಪಾರವಾಗಿದೆ ಎಂದರು. ಹುಲಗೂರಿನ ಜೀವನ್ಮುಕ್ತಾಲಯ ಮಠದ ಪ.ಪೂ. ಮೌನೇಶ್ವರ ಸ್ವಾಮೀಜಿ ವಿಶ್ವಕರ್ಮರ ಕಲೆ ಮತ್ತು ವಾಸ್ತುಶಿಲ್ಪ ಸೇವೆಯನ್ನು ಶ್ಲಾಘಿಸಿದರು. ಮಾಜಿ ಮೇಯರ್ ರಾಮಣ್ಣ ಬಡಿಗೇರ, ಜಿಲ್ಲಾಧ್ಯಕ್ಷ ಕಾಳಪ್ಪ ಬಡಿಗೇರ, ಶ್ರೀಶೈಲ ಸುತಾರ, ಮಾಲತೇಶ ಶ್ಯಾಗೋಟಿ, ಆರ್. ಪ್ರಸನ್ನಕುಮಾರ, ತಾಲೂಕು ಘಟಕದ ಅಧ್ಯಕ್ಷ ಸಕ್ರಪ್ಪ ಕಮ್ಮಾರ ಮಾತನಾಡಿದರು. ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು. ಗೌರವಾಧ್ಯಕ್ಷ ಮಾನಪ್ಪ ಪತ್ತಾರ, ಉಪಾಧ್ಯಕ್ಷ ಮಹಾರುದ್ರಪ್ಪ ಅರ್ಕಸಾಲಿ ಸೇರಿದಂತೆ ಒಬರುಷ ಹಾಗೂ ಮಹಿಳಾ ಘಟಕದ ಪದಾಧಿಕಾರಿಗಳು, ಧಾರವಾಡ ಜಿಲ್ಲೆಯ ವಿವಿಧ ತಾಲೂಕುಗಳ ವಿಶ್ವಕರ್ಮ ಸಮಾಜದ ಸದಸ್ಯರು ಉಪಸ್ಥಿತರಿದ್ದರು.



ರಥೋತ್ಸವಕ್ಕೆ ಚಾಲನೆ: ವಿಶೇಷ ಪೂಜೆ

ಕುಂದಗೋಳ: ಪಟ್ಟಣದ ಅಜ್ಜನಬಾವಿ ಓಣಿಯ ತ್ರಿಕಾಣಿ ನಂದಿಕೇಶ್ವರ ದೇವಸ್ಥಾನದಲ್ಲಿ ನಡೆದ ರಥೋತ್ಸವವು ಭಕ್ತಿಭಾವದಿಂದ ನೆರವೇರಿತು.

ಪಟ್ಟಣದ ಹಿರೇಮಠದ ಶಿತಿಕಂಠೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಿವಾನಂದ ಮಠದ ಶಿವಾನಂದ ಸ್ವಾಮೀಜಿಯಿಂದ ವಿಶೇಷ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ವಿವಿಧ ವಾದ್ಯ ಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಎಳೆದು ಭಕ್ತಿಭಾವ ಮೆರೆದರು. ರಥೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಹಾಗೂ ಅನ್ನಸಂತರ್ಪಣೆ ನಡೆದವು. ಶ್ರೀ ತ್ರಿಕಾಣಿ ನಂದಿಕೇಶ್ವರ ರಥೋತ್ಸವ ಚೇರ್ಮನ್ ಶಂಕರ ಪಟ್ಟಣಶೆಟ್ಟಿ, ಮುಖಂಡ ರಾಜು ಶಿವಳ್ಳಿ, ಮಾಜಿ ಪಪಂ ಮಾಜಿ ಉಪಾಧ್ಯಕ್ಷ ಮಂಜುನಾಥ ಹಿರೇಮಠ, ಶಿವಾಜಿ ಸಾಳಂಕಿ, ಗಂಗಾಧರ ಇಂಗಳಹಳ್ಳಿ, ಬಸವರಾಜ ಹೊಳಗಣ್ಣವರ, ಬಸಪ್ಪ ಗಂಗಾಯಿ, ಮಲ್ಲಿಕಾರ್ಜುನ ಅವ್ವಾರಿ, ಉಮೇಶ ಗದಗಿನ, ಮಂಜುನಾಥ ಹೊಳಗಣ್ಣವರ, ಅಶೋಕ ಬಂಡಿವಾಡ, ಹನುಮಂತಪ್ಪ ಪಾಯಕ್ನವರ್, ಸಂಬಾಜಿ ತಡಸದ ಸೇರಿದಂತೆ ಇತರರಿದ್ದರು.



ಕಾರ್ಪೊರೇಟ್ ಜಗತ್ತಿಗೆ ಸನ್ನದ್ಧರಾಗಿ




ಹುಬ್ಬಳ್ಳಿ: 18 ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಲ್ಲಿ ಕಾರ್ಪೊರೇಟ್ ಜಗತ್ತಿಗೆ ಸನ್ನದ್ಧರಾಗಬೇಕೆಂದು ಬೆಂಗಳೂರಿನ ಟಿಸಿಎಸ್ ಮಾಹಿತಿ ತಂತ್ರಜ್ಞಾನ ಸಂಪನ್ಮೂಲ ವಲಯದ ಮುಖ್ಯಸ್ಥ ಡಾ.ನಾಗಪ್ಪ ವ್ಹಿ ಬಕ್ಕಣ್ಣವರ ಹೇಳಿದರು.

ಕೆ.ಎಲ್.ಇ ಸಂಸ್ಥೆಯ ಪಿ.ಸಿ ಜಾಬಿನ ವಿಜ್ಞಾನ ಮಹಾವಿದ್ಯಾಲಯದ ಬಿಸಿಎ ವಿಭಾಗದಲ್ಲಿ ನಡೆದ ಕ್ಯಾಂಪಸ್ ಟು ಕಾರ್ಪೊರೇಟ್ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ತಂತ್ರಜ್ಞಾನವು ಪ್ರತಿದಿನ ಬದಲಾಗುತ್ತಿದ್ದು, ಅದಕ್ಕೆ ಆಳವಾದ ಜ್ಞಾನದೊಂದಿಗೆ ವಿಶೇಷ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು. ಪ್ರೊ.ಸಿದ್ದಲಿಂಗಪ್ಪಾ ಕಡಕೊಳ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ವ್ಯಕ್ತಿತ್ವ ವಿಕಸನ ಜ್ಞಾನವನ್ನು ಅಳವಡಿಸಿಕೊಂಡು ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದರು. ಡಾ.ನಾಗಪ್ಪ ವ್ಹಿ ಬಕ್ಕಣ್ಣವರ ಅವರನ್ನು ಮಹಾವಿದ್ಯಾಲಯದ ಪರವಾಗಿ ಸನ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಸಂಧ್ಯಾ ಎಸ್. ಕುಲಕರ್ಣಿ ವಹಿಸಿದ್ದರು. ಸಂಚಾಲಕ ನಿವೃತ್ತ ಗ್ರಂಥಪಾಲಕ ಡಾ.ಬಿ.ಎಸ್.ಮಾಳವಾಡ ಉಪಸ್ಥಿತರಿದ್ದರು.

ಶಂಕರಾಚಾರ್ಯರ ಸಂದೇಶ ಅಳವಡಿಸಿಕೊಳ್ಳಿ

ಅಳ್ನಾವರ: ನಮ್ಮ ನಾಡಿನ ಸಂಸ್ಕೃತಿ, ಸಂಸ್ಕಾರ, ಧಾರ್ಮಿಕ ಪರಂಪರೆ ಆಚಾರಗಳು ಉಳಿಬೇಕಾದರೆ ಶಂಕರಾಚಾರ್ಯರ ಸಂದೇಶಗಳನ್ನು ಅಳವಡಿಸಿಕೊಳ್ಳುವುದು ಅವಶ್ಯವಿದೆ ಎಂದು ಅಳ್ನಾವರದ ಸಾಮಾಜಿಕ ಚಿಂತಕ ಮಹಾದೇವ ಸಾಗರೇಕರ ಹೇಳಿದರು.

ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬಾಲ್ಯಾವಸ್ಥೆಯಲ್ಲಿಯೇ ದೇಶ ಸುತ್ತಿದ ಶಂಕರರು ಹಿಂದೂ ಮಠಗಳನ್ನು ಸ್ಥಾಪನೆ ಮಾಡುವ ಮೂಲಕ ಧರ್ಮ ಪ್ರಚಾರ ನಡೆಸಿದರು. ಇದೊಂದು ಧರ್ಮದ ಉಳಿವಿಗಾಗಿ ಶ್ರಮಿಸಿದ ಶಂಕರರ ತತ್ವಗಳು,ಉಪದೇಶಗಳು ಎಲ್ಲರ ಬದುಕಿನಲ್ಲಿ ಮರು ಜೀವ ಪಡೆಯಬೇಕಾಗಿದೆ ಎಂದರು. ಬ್ರಾಹ್ಮಣ ಸಮಾಜದ ಮುಖಂಡ ಉದಯ ಶಿಬ್ರಿಕೇರಿ ಶಂಕರಾಚಾರ್ಯರ ಸಂದೇಶಗಳನ್ನು ಮುದ್ರಿಸಿ ಪತ್ರಗಳನ್ನು ಹಂಚಿದರು. ಶಿರಸ್ತೆದಾರ ಅಜ್ಜಪ್ಪ ಮಂಗಳಗಟ್ಟಿ,ಉಪ ತಹಶೀಲ್ದಾರ್ ಎಂ.ಎಸ್.ಬಿರಾದಾರ, ರಾಜು ಕರ್ಲೇಕರ, ಸುರೇಂದ್ರ ಕಡಕೋಳ, ಪ್ರವೀಣ ಪವಾರ, ನಾಗರಾಜ ಶಿಬ್ರಿಕೇರಿ, ವಿಜಯಕುಮಾರ ಕೌಜಲಗಿ, ಕಂ.ನಿ ಸಂಪತಕುಮಾರ ಗುರುಒಡೆಯರ, ರವಿರಾಜ ಕಂಬಳಿ, ಬಸವರಾಜ ಏನಾಪೂರ, ವಿನಾಯಕ ಮಾಯಮ್ಮನವರ ಇತರರಿದ್ದರು.



ಧಾರ್ಮಿಕ ಜಾಗೃತಿ ಮೂಡಿಸಿದ ಶಂಕರಾಚಾರ್ಯರು

ಕುಂದಗೋಳ: ಶಂಕರಾಚಾರ್ಯರು 7ನೇ ಶತಮಾನದಲ್ಲೇ ಮೂಢನಂಬಿಕೆಗಳು ಹಾಗೂ ನರಬಲಿ ಮೌಢ್ಯಗಳನ್ನು ನಿರ್ಮೂಲನೆ ಮಾಡಿ, ಸನಾತನ ಹಿಂದೂ ಧರ್ಮಕ್ಕೆ ನವ ಜಾಗೃತಿ ತಂದ ಮಹಾನ್ ತತ್ವಜ್ಞಾನಿಯಾಗಿದ್ದಾರೆ ಎಂದು ವೇದಮೂರ್ತಿ ಹನುಮಂತಭಟ್ ಜೋಶಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ತಾಲೂಕು ಆಡಳಿತ ಆಯೋಜಿಸಿದ್ದ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿ, ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪೀಠಗಳನ್ನು ಸ್ಥಾಪಿಸಿ ಧಾರ್ಮಿಕ ಜಾಗೃತಿ ಮೂಡಿಸಿದ ಶಂಕರಾಚಾರ್ಯರು, ದಕ್ಷಿಣ ಭಾರತದಲ್ಲಿ ಶಾರದಾ ಪೀಠವನ್ನು ಸ್ಥಾಪಿಸಿದ್ದು ಕರ್ನಾಟಕದ ಶೃಂಗೇರಿಯಲ್ಲಿ ಇರುವುದೇ ನಮ್ಮ ಭಾಗ್ಯದ ಸಂಗತಿ ಎಂದರು.

ತಹಶೀಲ್ದಾರ್ ರಾಜು ಮಾವರಕರ ಮಾತನಾಡಿ, ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವಗಳು ಇಂದಿಗೂ ಪ್ರಸ್ತುತವಾಗಿದ್ದು, ಸಮಾಜಕ್ಕೆ ಮಾರ್ಗದರ್ಶಕವಾಗಿವೆ ಎಂದರು. ತಾಲೂಕು ಆಡಳಿತದಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ತಿರುಮಲರಾವ ದೇಸಾಯಿ, ಚಿದಂಬರ ಯಜ್ಞೇಶ್ವರ, ಗುರುರಾಜ ಗುಡಿ, ಅಶೋಕ ನಾಡಿಗೇರ, ಶ್ರೀದೇವಿ ಶ್ರೀಕಾಂತ ಕುಲಕರ್ಣಿ, ಸುನೀಲದತ್ತ ಕರೋಗಲ್ ಹಾಗೂ ಹನುಮಂತಭಟ್ ಜೋಶಿ ಅವರನ್ನು ಸನ್ಮಾನಿಸಲಾಯಿತು. ಸಮಾಜದ ವತಿಯಿಂದ ತಹಶೀಲ್ದಾರ್ ರಾಜು ಮಾವರಕರ ಅವರಿಗೆ ಗೌರವ ಸಲ್ಲಿಸಲಾಯಿತು. ವರದಿಗಾರ ಮಂಜುನಾಥ ಶಿವಕ್ಕನವರನ್ನು ವಿದ್ಯಾಶಂಕರ ಸಂಸ್ಕೃತ ಪಾಠಶಾಲೆ ಸನ್ಮಾನಿಸಿತು. ಇದಕ್ಕೂ ಮೊದಲು ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಸಮಾಜದ ಹಿರಿಯರಾದ ರಮೇಶ ಕುಲಕರ್ಣಿ, ಮೋಹನ ನಾಡಿಗೇರ, ಪ್ರಕಾಶ ನಾಡಿಗೇರ, ಬಿ.ಎನ್. ಹಂಪಿಹೊಳಿ, ರಾಘವೇಂದ್ರ ಸಪ್ರೆ, ವಲ್ಲಭ ಸಹಸ್ರಬುದ್ಧೆ, ಸಮೀರ ಯಜ್ಞೇಶ್ವರ, ಪ್ರಸಾದ ಪಾಳಂದೆ, ಗೋಪಾಲ ಯಜ್ಞೇಶ್ವರ, ರಮೇಶ ಪಡೋಶಿ, ಪ್ರಜ್ವಲ್, ಅನಿಲ್, ಮನೋಜ್, ಶ್ರೀಕೃಷ್ಣ, ಶ್ರೀಕಾಂತ ಕುಲಕರ್ಣಿ, ವಿಶ್ವನಾಥ ಪಾಟೀಲ, ಚಂದ್ರಕಾಂತ ಪಾಟೀಲ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಅನೇಕರು ಭಾಗವಹಿಸಿದ್ದರು. ಶೃಂಗೇರಿ ಶಂಕರ ತತ್ವ ಅಭಿಯಾನದ ಕುಂದಗೋಳ ತಾಲೂಕು ಪ್ರಧಾನ ಸಂಚಾಲಕ ಸುನೀಲದತ್ತ ಕರೋಗಲ್ ಸ್ವಾಗತಿಸಿದರು. ಕಿರಣ ಹೊರ್ತಿ ನಿರೂಪಿಸಿ, ವಂದಿಸಿದರು.



ಬ್ಯಾಗ್, ಪಠ್ಯ ಸಲಕರಣೆ ವಿತರಣೆ

ಕಲಘಟಗಿ: ಜಿಲ್ಲೆಯಾದ್ಯಂತ ಬಡ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಹಾಗೂ ಪಠ್ಯ ಸಲಕರಣೆಗಳನ್ನು ನೀಡುತ್ತಿರುವ ವಿಎಕೆ ಫೌಂಡೇಷನ್ ಕಾರ್ಯ ಶ್ಲಾಘನೀಯವಾಗಿದೆ ಎಂದು ಅನುಭವ ಮಂಟಪದ ಅಧ್ಯಕ್ಷ ಗುರುಲಿಂಗ ಉಣಕಲ್ ಹೇಳಿದರು.

ಅವರು ಹಿರೇಹೊನಿಹಳ್ಳಿ ಗ್ರಾಮದ ಬಸವತತ್ವ ಲಿಂಗಾನುಭಾವಿ ಶರಣರ ಬಳಗ ಅನುಭವ ಮಂಟಪದಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಜಯಂತಿ ಪ್ರಯುಕ್ತ ಆಯೋಜಿಸಿದ್ದ ವಚನ ಸ್ಪರ್ಧೆ ವಿಜೇತರಿಗೆ ಹಾಗೂ ಭಾಗವಹಿಸಿದ ಮಕ್ಕಳಿಗೆ ಶಾಲಾ ಬ್ಯಾಗ್ ನೀಡಲು ವಿಎಕೆ ಫೌಂಡೇಷನ್ ಅಧ್ಯಕ್ಷ ವೆಂಕಟೇಶ್ ಕಾಟವೆ ಅವರಿಗೆ ವಿನಂತಿಸಿದಾಗ ಒಂದೇ ಕರೆಗೆ ಸಮ್ಮತಿ ಸೂಚಿಸಿದರು ಎಂದರು.

ಸಂಚಾಲಕ ವಿ.ಎಸ್. ಬೆಣ್ಣಿ ಮಾತನಾಡಿ, ಈಗಾಗಲೇ ವಿಎಕೆ ಫೌಂಡೇಷನ್ ತಾಲೂಕು ಹಾಗೂ ಜಿಲ್ಲೆಯಾದ್ಯಂತ ನೂರಾರು ಸರ್ಕಾರಿ ಶಾಲೆಗಳ ಸಾವಿರಾರು ಮಕ್ಕಳಿಗೆ ಬ್ಯಾಗ್ ಹಾಗೂ ಸಲಕರಣೆ ನೀಡಿದ್ದೇವೆ. ಮುಂದಿನ ದಿನಗಳಲ್ಲಿ ವಿವಿಧ ಕ್ಷೇತ್ರದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತೇವೆ ಎಂದರು.

ನಂತರ ವಚನ ಕಂಠಪಾಠ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಮಕ್ಕಳಿಗೆ ಬ್ಯಾಗ್ ಹಾಗೂ ಪಠ್ಯ ಸಲಕರಣೆಗಳನ್ನು ವಿತರಿಸಲಾಯಿತು. ಅನುಭವ ಮಂಟಪದ ಪದಾಧಿಕಾರಿಗಳು, ಶರಣರು, ಹಿರೇಹೊನಿಹಳ್ಳಿ ಗ್ರಾಮದ ಗುರುಹಿರಿಯರು, ಬೇಗೂರು, ಬಿಸರಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಮಕ್ಕಳು ಇದ್ದರು.



ಮೇಳಮ್ಮ ದೇವಿಯರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ

ಉಪ್ಪಿನಬೆಟಗೇರಿ: ಸಮೀಪದ ಹನುಮನಹಾಳ ಗ್ರಾಮದ ಮೇಳಮ್ಮ ದೇವಿಯರ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಇನಾಂಹೊಂಗಲ ವಿರಕ್ತಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಂಗಳವಾರ ಜರುಗಿತು.

ಅಂದು ಗೋಕಾಕ ವೇ. ಮೂ. ವಿಜಯ ಶಾಸ್ತ್ರೀ ಹಾಗೂ ದೇವಸ್ಥಾನದ ಅರ್ಚಕ ಚೆನ್ನಪ್ಪ ಮಡಿವಾಳರ ಇವರಿಂದ ಧಾರ್ಮಿಕ ಪೂಜೆ, ಅಮ್ಮನವರಿಗೆ ಅಲಂಕಾರ ಪೂಜೆ, ಕುಮಕುಮಾರ್ಚನೆ, ಪ್ರಧಾನ ಹೋಮ ಹಾಗೂ ದೇವಿಗೆ ಮಹಾ ರುದ್ರಾಭಿಷೇಕದೊಂದಿಗೆ ಮಹಾಮಂಗಳಾರತಿ ನಡೆಯಿತು. ಗ್ರಾಮದ ಮುತ್ತೈದೆಯರು ದೇವಿಗೆ ಉಡಿ ತುಂಬುವ ಕಾರ್ಯಕ್ರಮದ ಮೂಲಕ ಮೇಳಮ್ಮ ದೇವಿಯ ಜಾತ್ರೆ ಸಂಪನಗೊಂಡಿತು.

ಸಾನ್ನಿಧ್ಯ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅಮ್ಮಿನಬಾವಿ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯರರು, ನರೇಂದ್ರ, ಮೇಳಪ್ಪಜ್ಜನ ಮಠದ ಸಂಗಮೇಶ್ವರ ಸ್ವಾಮೀಜಿ. ದೊಡವಾಡ ಹಿರೇಮಠದ ಜಡಿ ಸಿದ್ದೇಶ್ವರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ನಿಕಟಪೂರ್ವ ಅಧ್ಯಕ್ಷ ಬಸೀರ ಅಹ್ಮದ್ ಮಾಳಗಿಮನಿ, ದೇವಂದ್ರಪ್ಪ ಅಂಗಡಿ, ಸೋಮಯ್ಯ ಹಿರೇಮಠ, ರಾಮಪ್ಪ ಅಂಗಡಿ, ಕಲ್ಲಪ್ಪ ಪುಡಕಲಕಟ್ಟಿ, ಅಶೋಕ ಮಸೂತಿ, ಮಂಜುನಾಥ ಸಂಕಣ್ಣವರ, ಮಂಜು ಹಿರೇಮಠ, ಅಜೀತ ಛಬ್ಬಿ, ಧರಣೇಂದ್ರ ಅಷ್ಟಗಿ, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ ಮಸೂತಿ, ಸದಸ್ಯ ಮಡಿವಾಳಪ್ಪ ಶಿಂದೋಗಿ, ಸರೋಜಿನಿ ಮಡಿವಾಳರ, ಸೋಮಲಿಂಗಪ್ಪ ಅಂಗಡಿ, ಗ್ರಾಮದ ದೊಡ್ಡಯ್ಯ ಹಿರೇಮಠ, ಸವಿತಾ ಮೂಗಯ್ಯನವರ ,ಉಮೇಶ ಅಂಗಡಿ, ಭೀಮಶಿ ಸವದತ್ತಿ ಸೇರಿದಂತೆ ಇತರರಿದ್ದರು.



ಅಕ್ಕಮಹಾದೇವಿ ಮಹಿಳಾ ವಿವಿಯ 17ನೇ ಘಟಿಕೋತ್ಸವ

ಮಹಿಳಾ ಸಬಲೀಕರಣಕ್ಕೆ ವಿವಿಗಳಿಗೆ ತ್ರಿಸೂತ್ರ ಅತ್ಯವಶ್ಯ: ಪ್ರೊ.ಉಜ್ವಲಾ

ವಿಜಯಪುರ: ಮಹಿಳಾ ಶ್ರೇಯೋಭಿವೃದ್ಧಿಗೆ ಭಾಷ್ಯ ಬರೆಯುವ ನಿಟ್ಟಿನಲ್ಲಿ ಮಹಿಳಾ ವಿಶ್ವವಿದ್ಯಾಲಯಗಳು ಅಂತರ್ ಶಾಸ್ತ್ರೀಯ ಅಧ್ಯಯನ ವಾತಾವರಣ ನಿರ್ಮಾಣ. ಮಹಿಳೆಯರಲ್ಲಿ ನಾವೀನ್ಯತೆ ಹಾಗೂ ಉದ್ಯಮಶೀಲತೆಯ ಉತ್ತೇಜನ, ಲಿಂಗ ಸಂಬಂಧಿತ ಸವಾಲುಗಳನ್ನು ಸಂಶೋಧನೆಯ ಸಾಧನದೊಂದಿಗೆ ನಿವಾರಣೆ ಮಾಡಬೇಕು ಎಂಬ ತ್ರಿಸೂತ್ರವನ್ನು ಅನುಸರಿಸಲೇಬೇಕು ಎಂದು ಮುಂಬಯಿನ ಎಸ್ಎನ್‌ಡಿಟಿ ಮಹಿಳಾ ವಿ.ವಿ.ಕುಲಪತಿ ಪ್ರೊ.ಉಜ್ವಲಾ ಚಕ್ರದೇವ ಹೇಳಿದರು.

ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 17ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿ-2020 ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಈ ನೀತಿಯಿಂದಾಗಿ ಉನ್ನತ ಶಿಕ್ಷಣಕ್ಕೆ ಹೊಸ ಸ್ವರೂಪವೇ ದೊರಕಿದೆ ಎಂದರು.

ತಂತ್ರಜ್ಞಾನ ದಕ್ಷತೆಯನ್ನು ಮಾನವೀಯ ಸಂವೇದನೆಯೊಂದಿಗೆ ಸಂಯೋಜಿಸಬಲ್ಲವರಿಗೆ ಭವಿಷ್ಯವಿದೆ. ಕೌಶಲ್ಯಗಳು, ಉದ್ಯೋಗಾರ್ಹತೆ ಮತ್ತು ಜೀವನಪೂರ್ತಿ ಕಲಿಕೆ ಇಂದಿನ ಯಶಸ್ಸಿನ ಮೂಲ ಅಂಶಗಳಾಗಿವೆ. ಇಂದಿನ ಯಶಸ್ಸು ಪದವಿಗಳ ಮೂಲಕ ಮಾತ್ರ ನಿರ್ಧಾರವಾಗುವುದಿಲ್ಲ. ಅದು ಕೌಶಲ್ಯ ಮತ್ತು ಹೊಂದಾಣಿಕೆಯ ಮೇಲೆ ಅವಲಂಬಿತವಾಗಿದೆ ಎಂದರು.

ಕೃತಕ ಬುದ್ಧಿಮತ್ತೆಯಿಂದ ರೂಪುಗೊಳ್ಳುತ್ತಿರುವ ಯುಗದಲ್ಲಿ ನಾವು ಬದುಕುತ್ತಿದ್ದೇವೆ. ಎಐ ಉದ್ಯೋಗಗಳನ್ನು ಮರು ಪರಿಭಾಷಿಸುತ್ತಿದೆ. ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ. ತಂತ್ರಜ್ಞಾನವು ಮುಂದುವರಿದರೂ ಮಾನವೀಯ ಮೌಲ್ಯಗಳು, ನೈತಿಕ ಚಿಂತನೆ, ಸೃಜನಶೀಲತೆ ಮತ್ತು ಸಹಾನುಭೂತಿ ಮುಂತಾದ ಈ ಮೌಲ್ಯಗಳು ಸದಾ ಸ್ಥಿರವಾಗಿರುತ್ತವೆ ಎಂದರು.

ವಿಕಸಿತ ಭಾರತ ಎಂಬ ದೃಷ್ಟಿಕೋನದೊಂದಿಗೆ ಮುಂದುವರಿಯುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣ ಪಡೆದ ಮತ್ತು ಸಬಲಗೊಂಡ ಮಹಿಳೆಯರ ಪಾತ್ರ ರಾಷ್ಟ್ರ ನಿರ್ಮಾಣದಲ್ಲಿ ಬಹುಮುಖ್ಯವಾಗುತ್ತದೆ. ಶಿಕ್ಷಣ ಪಡೆದ ಮಹಿಳೆಯರು, ಆರ್ಥಿಕವಾಗಿ ಸ್ವಾವಲಂಬಿ ಮಹಿಳೆಯರಾಗುತ್ತಾರೆ. ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ನಾಯಕತ್ವ, ಮಹಿಳೆಯರು ಅಭಿವೃದ್ಧಿಯಾದರೆ ರಾಷ್ಟ್ರವೂ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ ಎಂದರು.

ಮಹಿಳಾ ಸಬಲೀಕರಣವೆಂದರೆ ಶಿಕ್ಷಣ ಅಥವಾ ಉದ್ಯೋಗ ಮಾತ್ರವಲ್ಲ, ಅದು ಆತ್ಮವಿಶ್ವಾಸ, ಸ್ವಾತಂತ್ರ್ಯ ಮತ್ತು ನಿರ್ಧಾರಗಳನ್ನು ತೆಗೆದುಕೊಂಡು ಅವುಗಳೊಂದಿಗೆ ನಿಂತುಕೊಳ್ಳುವ ಸಾಮರ್ಥ್ಯ. ವಿದ್ಯಾವಂತ ಮಹಿಳೆಯರಾಗಿ, ನೀವು ಕುಟುಂಬ, ಸಮುದಾಯ ಮತ್ತು ಸಮಾಜದ ಮೇಲೆ ಮಹತ್ವದ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿದ್ದೀರಿ. ನೀವು ವಿಶ್ವದತ್ತ ಹೆಜ್ಜೆ ಇಡುವಾಗ, ಕಲಿಕೆಯನ್ನು ಎಂದಿಗೂ ನಿಲ್ಲಿಸಬೇಡಿ, ದೊಡ್ಡ ಕನಸು ಕಾಣಿರಿ, ಆದರೆ ವಾಸ್ತವಿಕವಾಗಿರಿ. ನೀವು ಮಾಡುವ ಪ್ರತಿಯೊಂದರಲ್ಲಿ ಪ್ರಾಮಾಣಿಕತೆಯನ್ನು ಕಾಪಾಡಿ. ಇತರ ಮಹಿಳೆಯರನ್ನು ಬೆಂಬಲಿಸಿ ಮತ್ತು ಉತ್ತೇಜಿಸಿ. ನಿಮ್ಮ ಬೇರುಗಳು ಮತ್ತು ಮೌಲ್ಯಗಳೊಂದಿಗೆ ನಿರಂತರ ಸಂಪರ್ಕದಲ್ಲಿರಿ. ನಿಮ್ಮ ಕುಟುಂಬಕ್ಕೆ ಗೌರವ ನೀಡಿ ಎಂದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಇತರರು ಇದ್ದರು.



58 ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ: 89 ಪಿಎಚ್‌ಡಿ ಪ್ರದಾನ

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಹಮ್ಮಿಕೊಂಡ 17ನೇ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಸಾಧನೆ ತೋರಿದ 70 ವಿದ್ಯಾರ್ಥಿನಿಯರಿಗೆ 58 ಚಿನ್ನದ ಪದಕ ಮತ್ತು 12 ನಗದು ಪಾರಿತೋಷಕ ಪದಕಗಳನ್ನು ಹಾಗೂ 89 ಜನ ಸಂಶೋಧಕರಿಗೆ ಪಿಎಚ್‌ಡಿ ಪದವಿಗಳನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರದಾನ ಮಾಡಿದರು.

ಸಮಾಜಶಾಸ್ತ್ರ ವಿಭಾಗದ ಸಬಾ ಮಹ್ಮದ್ ರಫೀಕ್ ಕುಡಚಿ 5 ಚಿನ್ನದ ಪದಕ ಪಡೆದು ವಿಶೇಷ ಸಾಧನೆ ಮೆರೆದಿದ್ದಾರೆ. ಕನ್ನಡ ವಿಭಾಗದ ರೇಖಾ ದೊಡವಾಡ 3 ಚಿನ್ನದ ಪದಕಗಳು ಹಾಗೂ 2 ನಗದು ಪಾರಿತೋಷಕಗಳನ್ನು ಪಡೆದಿದ್ದಾರೆ. ಅರ್ಥಶಾಸ್ತ್ರ ವಿಭಾಗದ ಗೀತಾ ಸಿ.ಕಾಟಿ ಮತ್ತು ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗದ ಶಹಿಸ್ತಾ ತಜೀನ್ ಮಳ್ಳಿ ತಲಾ 3 ಚಿನ್ನದ ಪದಕಗಳನ್ನು ಪಡೆದು ಸಾಧನೆಗೈದಿದ್ದಾರೆ.

ಘಟಿಕೋತ್ಸವದಲ್ಲಿ ಒಟ್ಟು 13,441 ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಪದವಿ ಪಡೆಯಲು ಅರ್ಹರಾಗಿರುತ್ತಾರೆ. ಒಟ್ಟು 89 ವಿದ್ಯಾರ್ಥಿನಿಯರಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು. ಒಟ್ಟು 1,116 ವಿದ್ಯಾರ್ಥಿನಿಯರಿಗೆ ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ನೀಡಲಾಯಿತು. ಈ ಘಟಿಕೋತ್ಸವದಲ್ಲಿ ಒಟ್ಟು 12,325 ವಿದ್ಯಾರ್ಥಿನಿಯರಿಗೆ ಸ್ನಾತಕ ಪದವಿ ಪ್ರದಾನ ಮಾಡಲಾಯಿತು.

ಮೂವರು ಮಹಿಳಾ ಸಾಧಕರಿಗೆ ಗೌರವ ಡಾಕ್ಟರೇಟ್

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 17ನೇ ಘಟಿಕೋತ್ಸವದಲ್ಲಿ ಮೂವರು ಮಹಿಳಾ ಸಾಧಕರಾದ ಆಶಾದೇವಿ ಗುಡಗುಂಟಿ, ಸಂಗೀತಾ ಕಟ್ಟಿಮನಿ, ಪಾರ್ವತೆವ್ವ ಹೊಂಗಲ್ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಆಶಾದೇವಿ ಗುಡಗುಂಟಿ, ಕಾರ್ಪೊರೇಟ್ ನಾಯಕತ್ವ ಮತ್ತು ಸಹಕಾರಿ ವ್ಯವಸ್ಥಾಪನೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದು, ಮಹಿಳೆಯರಿಗೆ ಆದರ್ಶ ವ್ಯಕ್ತಿಯಾಗಿ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಸಂಗೀತಾ ಕಟ್ಟಿಮನಿ, ಕಲ್ಯಾಣ ಕರ್ನಾಟಕ ಪ್ರದೇಶದ ಹಕ್ಕುಗಳು ಮತ್ತು ಅಭಿವೃದ್ಧಿಗಾಗಿ ಹೋರಾಡಿದ ಪ್ರಮುಖರಾಗಿದ್ದಾರೆ. ಹಿಂದುಳಿದ ಸಮುದಾಯಗಳ ಸಬಲೀಕರಣ, ಶಿಕ್ಷಣದ ಉತ್ತೇಜನ ಮತ್ತು ಸಾರ್ವಜನಿಕ ನೀತಿ ಕ್ಷೇತ್ರಗಳಲ್ಲಿ ಅವರ ನಿರಂತರ ಸಮರ್ಪಣೆ ಅವರನ್ನು ಪ್ರೇರಣಾದಾಯಕ ನಾಯಕಿಯನ್ನಾಗಿಸಿರುವ ಹಿನ್ನೆಲೆಯಲ್ಲಿ ಅವರಿಗೂ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಪಾರ್ವತೆವ್ವ ಹೊಂಗಲ್, ಜಾನಪದ ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ನೀಡುತ್ತಿರುವ ಕೊಡುಗೆ ಅನನ್ಯ, 40 ಜನ ಪಿಎಚ್‌ಡಿ ಮಾಡುವವರಿಗೆ ಇವರ ಹಾಡುಗಳು ಅಮೂಲ್ಯ ಜಾನಪದ ಸಾಹಿತ್ಯವನ್ನು ಒದಗಿಸಿವೆ. ಬರಗಾಲದ ದಿನಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಗುಡ್ಡಗಾಡುಗಳಲ್ಲಿ ಗಿಡನೆಟ್ಟು ತನ್ನ ಮಕ್ಕಳಿಗೆ ಶಾಲೆ ಕಲಿಸಿದ ಗಟ್ಟಿಗಿತ್ತಿ ಪಾರ್ವತೆವ್ವ, ಈ ಕೊಡುಗೆಯನ್ನು ಪರಿಗಣಿಸಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಲಾಯಿತು.

28 ಸಾವಿರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಕವಿವಿ 75ನೇ ಘಟಿಕೋತ್ಸವ ನಾಳೆ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವ ಏ.23ರಂದು ಬೆಳಗ್ಗೆ 11 ಗಂಟೆಗೆ ನಗರದ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದೆ ಎಂದು ಕವಿವಿ ಕುಲಪತಿಗಳಾದ ಪ್ರೊ.ಎ.ಎಂ.ಖಾನ್ ಮಾಹಿತಿ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಘಟಿಕೋತ್ಸವ ಉದ್ಘಾಟಿಸಲಿದ್ದು, ಇಸ್ರೋದ ನಿಕಟಪೂರ್ವ ಅಧ್ಯಕ್ಷ ಪ್ರೊ.ಎ.ಎಸ್. ಕಿರಣಕುಮಾರ ಅರು ಘಟಿಕೋತ್ಸವದ ಭಾಷಣ ಮಾಡುವುದಾಗಿ ತಿಳಿಸಿದರು. ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ ಅತಿಥಿಗಳಾಗಿ ಆಗಮಿಸಲಿದ್ದು, ಘಟಿಕೋತ್ಸವದಲ್ಲಿ 113 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 270 ಸುವರ್ಣ ಪದಕ ಪಡೆಯಲಿದ್ದು, 52 ವಿದ್ಯಾರ್ಥಿಗಳು ಪಾರಿತೋಷಕಗಳು ಪಡೆಯಲಿದ್ದಾರೆ ಎಂದರು.

78 ವಿದ್ಯಾರ್ಥಿಗಳು ಶಿಷ್ಯವೇತನ, 69 ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲಿದ್ದು, 176 ಪುರುಷ ಮತ್ತು 80 ಮಹಿಳಾ ಅಭ್ಯರ್ಥಿಗಳು ಸೇರಿದಂತೆ ಒಟ್ಟಾರೆ 252 ಅಭ್ಯರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್‌ಡಿ ಪದವಿ ಪಡೆಯಲಿದ್ದಾರೆ ಎಂದು ಹೇಳಿದರು. ವಿವಿಧ ಸ್ನಾತಕೋತ್ತರ ವಿಷಯಗಳಲ್ಲಿ ಒಟ್ಟು 4,129 ವಿದ್ಯಾರ್ಥಿಗಳು ಉಪಸ್ಥಿತಿ ಮತ್ತು ಅನುಪಸ್ಥಿತಿಯಲ್ಲಿ ಪದವಿ ಪಡೆಯಲಿದ್ದಾರೆ. ಹಾಗೆಯೇ ಪದವಿಯ ವಿವಿಧ ವಿಷಯಗಳಲ್ಲಿ ಒಟ್ಟು 24,030 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ ಎಂದು ತಿಳಿಸಿದರು. ಈವರೆಗೆ ಕರ್ನಾಟಕ ವಿಶ್ವವಿದ್ಯಾಲಯ 117 ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನಿಸಿದ್ದು, ಈ ಬಾರಿಯೂ ಒಟ್ಟು 15 ಅರ್ಜಿಗಳು ಬಂದಿದ್ದವು. ಈ ಪೈಕಿ 9 ಜನರನ್ನು ಆಯ್ದು ಆಯ್ಕೆ ಸಮಿತಿಗೆ ಕಳಿಸಿದ್ದು, ಈ ಪೈಕಿ ಮೂವರ ಹೆಸರನ್ನು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿದ್ದು, ಅನುಮೋದನೆ ಬಳಿಕ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಲಿದೆ ಎಂದರು. ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕವಿವಿ ಅಧೀನದ ಎಲ್ಲ ಪದವಿ ಕಾಲೇಜುಗಳ 2-4-6ನೇ ಸೆಮಿಸ್ಟರ್‌ಗಳಲ್ಲಿ ಎಐ ಬಗೆಗಿನ ಪಠ್ಯವನ್ನು ಅಳವಡಿಸಲು ಸಮಿತಿ ನಿರ್ಧರಿಸಿದೆ. ಸ್ನಾತಕೋತ್ತರ ಪದವಿಯಲ್ಲಿಯೂ ಅಳವಡಿಕೆ ಮಾಡಲಾಗುವುದಾಗಿ ತಿಳಿಸಿದರು.

ಅನುದಾನಕ್ಕೆ ನಿಯೋಗ

ಈಗಾಗಲೇ ಸರ್ಕಾರಕ್ಕೆ ರೂ.136 ಕೋಟಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈ ಪೈಕಿ ರೂ.67.5 ಕೋಟಿ ಮಂಜೂರಾಗಿದೆ. ಮೈಸೂರು ವಿವಿಗೆ ಸರ್ಕಾರವು ರೂ.100 ಕೋಟಿ ನೀಡಿದೆ. ಕವಿವಿಗೂ ಹೆಚ್ಚು ಅನುದಾನ ನೀಡಲು ನಿಯೋಗ ತೆರಳಲಿದೆ ಎಂದ ಡಾ.ಖಾನ್, ಕವಿವಿಯಲ್ಲಿ 165 ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದು, ಇವುಗಳ ಭರ್ತಿಗೆ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಒಪ್ಪಿಗೆ ದೊರೆತಾಕ್ಷಣ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಿದೆ.



ಈ ಹಿಂದೆಯೇ ತಿಳಿಸಿದಂತೆ ವಿವಿಯ ಆಸ್ತಿ ಸರ್ವೇ ಕಾರ್ಯ ಚಾಲ್ತಿಯಲ್ಲಿದ್ದು, ತಿಂಗಳ ಒಳಗಾಗಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಕುಲಪತಿ ಖಾನ್ ವಿಶ್ವಾಸ ವ್ಯಕ್ತಪಡಿಸಿದರು.

ಬಸವಶ್ರೀ ಪ್ರಶಸ್ತಿ ಆರಂಭ

ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠದಿಂದ ಮೊದಲ ಬಾರಿಗೆ 'ಬಸವಶ್ರೀ ಪ್ರಶಸ್ತಿ' ಪ್ರದಾನಿಸಲು ತೀರ್ಮಾನಿಸಿದ್ದು, ಮೇ.8-9ಕ್ಕೆ ಪ್ರಶಸ್ತಿ ಪ್ರದಾನ ನಡೆಸಲು ನಿರ್ಧರಿಸಿದೆ. ಗದಗಿನ ತೋಂಟದಾರ್ಯ ಶ್ರೀಗಳು ಪ್ರಶಸ್ತಿಗೆ ರೂ.5ಲಕ್ಷ ದತ್ತಿ ನೀಡಿದ್ದು, ಪ್ರತಿವರ್ಷ ರೂ.25 ಸಾವಿರ ನಗದು ಒಳಗೊಂಡ ಪ್ರಶಸ್ತಿ ಪ್ರದಾನ ಮಾಡುವುದಾಗಿಯೂ ಕುಲಪತಿ ಪ್ರೊ.ಎ.ಎಂ.ಖಾನ್ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕವಿವಿ ಕುಲಸಚಿವ ಡಾ.ಶಂಕರ ವಣಿಕ್ಯಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎನ್.ವೈ.ಮಟ್ಟಿಹಾಳ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ. ಸಂಜಯಕುಮಾರ ಮಾಲಗತ್ತಿ, ಡಾ.ಜೆ.ಎಂ.ಚಂದುನವರ, ಡಾ.ಪ್ರಭಾಕರ ಕಾಂಬಳೆ, ಡಾ. ವಿಶ್ವನಾಥ ಚಿಂತಾಮಣಿ, ಡಾ.ಮಂಜುನಾಥ ಅಡಿಗಲ್ ಇದ್ದರು.

ಕಿರುಸುದ್ದಿ

ಅಪಘಾತ: ಇಬ್ಬರ ಸಾವು

ಬೆಳಗಾವಿ: ಬೆಳಗಿನ ಜಾವ ನಿದ್ರೆಯ ಮಂಪರಿನಲ್ಲಿ ನಿಯಂತ್ರಣ ತಪ್ಪಿ ನಿಂತಿದ್ದ ಲಾರಿಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದಿರುವ ಪರಿಣಾಮ ಶಿವಮೊಗ್ಗ ಮೂಲದ ಇಬ್ಬರು ದುರ್ಮರಣ ಹೊಂದಿದ್ದಾರೆ. ವಾಸಿಂಮ್ (28) ಮುಬಾರಕ್ (22) ಮೃತರು. ವಾಹನ ಚಾಲಕ ಬಸವರಾಜ ಈರಪ್ಪ ಹಂಚಿನಮನಿ (37) ಸ್ಥಿತಿ ಗಂಭೀರವಾಗಿದೆ. ಮಂಗಳವಾರ ನಸುಕಿನ ಜಾವ ಬೆಳಗಾವಿ ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿ.ಎಸ್.ಯಡಿಯೂರಪ್ಪ ಗ್ರಾಮದ ಸಮೀಪ ಘಟನೆ ನಡೆದಿದೆ. ಕೊಲ್ಲಾಪುರದಿಂದ ಶಿವಮೊಗ್ಗದ ಸೊರಬಕ್ಕೆ ಕೋಳಿ ತುಂಬಿದ್ದ ಗೂಡ್ಸ್ ವಾಹನ ಹೊರಟ್ಟಿತ್ತು. ಅಪಘಾತದ ರಭಸಕ್ಕೆ ನೂರಾರು ಕೋಳಿಗಳು ಸಹ ಮೃತಪಟ್ಟಿವೆ. ಘಟನಾ ಸ್ಥಳಕ್ಕೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಪಿಎಸ್ಐ ಅವಿನಾಶ್ ಸೇರಿ ಪೊಲೀಸ್ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹಗಳು, ಗಾಯಾಳುಗಳು ಬೀಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಬಳಿಕ ಘಟನೆಯ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತಪ್ಪಿಸಿಕೊಂಡಿದ್ದ ಆರೋಪಿ ಬಂಧನ

ಹುಬ್ಬಳ್ಳಿ: ಪೊಲೀಸರಿಂದ ತಪ್ಪಿಸಿಕೊಂಡು ತಲೆಮರಿಸಿಕೊಂಡಿದ್ದ ಪ್ರಜ್ವಲ್ ನೆಟ್ಟೂರ ಎಂಬ ಆರೋಪಿಯನ್ನು ಬೆಂಡಿಗೇರಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ವಿಜಯಪುರ ಜೈಲಿನಲ್ಲಿದ್ದ ಪ್ರಜ್ವಲ್‌ನನ್ನು ಕೊಲೆ ಕೇಸ್‌ಗೆ ಸಂಬಂಧಿಸಿ ವಿಚಾರಣೆಗೆ ಹುಬ್ಬಳ್ಳಿಗೆ ಕರೆ ತರಲಾಗಿತ್ತು. ಆಗ ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ಪರಾರಿಯಾಗಿದ್ದ. ಹಣದ ವಿಚಾರಕ್ಕೆ ಸಂಬಂಧಿಸಿದಂತೆ ಮಂಟೂರ ರಸ್ತೆಯ ರಿಂಗ್ ರೋಡ್ ಬಳಿ ವ್ಯಕ್ತಿಯೊಬ್ಬರನ್ನು ಬರಲು ಹೇಳಿದ್ದ. ಚಲನವಲನ ಗಮನಿಸಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಎಸ್.ಆರ್.ನಾಯಕ, ತಮ್ಮ ತಂಡದೊಂದಿಗೆ ತೆರಳಿ ಪ್ರಜ್ವಲ್‌ನನ್ನು ಬಂಧಿಸಿದ್ದಾರೆ. ಹುಬ್ಬಳ್ಳಿ ಸಬ್ ಜೈಲಿನಲ್ಲಿ ಹೈಡ್ರಾಮ ಮಾಡಿದ್ದಲ್ಲದೆ, ಜೈಲಿನಲ್ಲಿ ಮಾದಕ ವಸ್ತುಗಳನ್ನು ತರಿಸಿಕೊಂಡಿದ್ದ ಆರೋಪವೂ ಪ್ರಜ್ವಲ್ ಮೇಲಿತ್ತು. ಆಗ ಹುಬ್ಬಳ್ಳಿ ಸಬ್‌ಜೈಲಿನಿಂದ ವಿಜಯಪುರ ಜೈಲಿಗೆ ಶಿಫ್ಟ್ ಮಾಡಲಾಗಿತ್ತು. ಮೆಂಡಾ ಮಲ್ಲಿಕ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಕರೆ ತಂದಾಗ ತಪ್ಪಿಸಿಕೊಂಡಿದ್ದ. ಪ್ರಜ್ವಲ್‌ನನ್ನು ಬಂಧಿಸಿದ್ದು, ನ್ಯಾಯಾಲಯದ ವಶಕ್ಕೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇನ್‌ಕಾಮೆಕ್ಸ್ 2026 ಪ್ರದರ್ಶನ: ಸಚಿವರ ಜೊತೆ ಚರ್ಚೆ



ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ವತಿಯಿಂದ ಏ.25ರಿಂದ 29ರ ವರೆಗೆ ನಡೆಯಲಿರುವ ಇನ್‌ಕಾಮೆಕ್ಸ್ 2026 ಪ್ರದರ್ಶನ ಕುರಿತು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರೊಂದಿಗೆ ಪದಾಧಿಕಾರಿಗಳು ಚರ್ಚೆ ನಡೆಸಿದರು.

ಸಭೆಯಲ್ಲಿ ಇನ್‌ಕಾಮೆಕ್ಸ್ 2026 ಪ್ರದರ್ಶನದ ಆಯೋಜನೆ, ಅದರ ವ್ಯಾಪ್ತಿ, ಕೈಗಾರಿಕಾ ಕ್ಷೇತ್ರಕ್ಕೆ ಅದರ ಮಹತ್ವ ಹಾಗೂ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೂಡಿಕೆ ಆಕರ್ಷಣೆ ಕುರಿತು ಸವಿಸ್ತಾರ ಚರ್ಚೆ ನಡೆಯಿತು. ಕಾರ್ಯಕ್ರಮದ ಯಶಸ್ಸಿಗಾಗಿ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಸಹಕಾರವನ್ನು ಪಡೆಯುವ ಅಗತ್ಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಲಾಯಿತು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಈ ವೇಳೆ ಮಾತನಾಡಿ, ಇನ್‌ಕಾಮೆಕ್ಸ್- 2026 ಉತ್ತರ ಕರ್ನಾಟಕದ ಕೈಗಾರಿಕಾ ಅಭಿವೃದ್ಧಿಗೆ ಮಹತ್ವದ ವೇದಿಕೆಯಾಗಿದ್ದು, ಈ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಲು ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಕೈಗಾರಿಕಾ ವಲಯದ ವಿಸ್ತರಣೆ, ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳು ಮಹತ್ವದ್ದಾಗಿವೆ ಎಂದು ಅಭಿಪ್ರಾಯಪಟ್ಟರು.

ಪ್ರದರ್ಶನ ವೀಕ್ಷಣೆಗೆ ಆಗಮಿಸುವ ಸಾರ್ವಜನಿಕರಿಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಬಸ್ ಸಂಪರ್ಕವನ್ನು ಸಮರ್ಪಕವಾಗಿ ಒದಗಿಸುವುದು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವುದು ಹಾಗೂ ನಿರಂತರ ವಿದ್ಯುತ್ ಸರಬರಾಜು ಖಚಿತಪಡಿಸುವುದು ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಉಪಾಧ್ಯಕ್ಷರಾದ ಪ್ರವೀಣ ಅಗಡಿ, ಸಿದ್ದೇಶ್ವರ ಜಿ.ಕಮ್ಮಾರ, ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಜೊತೆ ಗೌರವ ಕಾರ್ಯದರ್ಶಿ ಪ್ರಕಾಶಶೃಂಗೇರಿ, ಇನ್‌ಕಾಮೆಕ್ಸ್ 2026 ಸಮಿತಿ ಚೇರಮನ್ ಮಹಾದೇವಿ ಎಂ.ವಿ.ಕರಮರಿ, ಮಾಜಿ ಅಧ್ಯಕ್ಷ ರಮೇಶ ಪಾಟೀಲ, ವಿನಯ ಜವಳಿ, ಸದಸ್ಯ ಸತೀಶ ಮುನವಳ್ಳಿ ಹಾಗೂ ಸಿದ್ದಲಿಂಗೇಶ್ವರ ಕೊಟ್ಟೂರಶೆಟ್ಟರ ಅವರು ಉಪಸ್ಥಿತರಿದ್ದರು.

ಇಬ್ಬರು ಕಾರ್ಮಿಕರ ಸಾವು

ಸವದತ್ತಿ: ತಾಲೂಕಿನ ನವಿಲುತೀರ್ಥ ಜಲಾಶಯದ ಸಮೀಪ ಕಲ್ಲು ಗಣಿಗಾರಿಕೆ ವೇಳೆ ಸಂಭವಿಸಿದ ಭೀಕರ ಅವಘಡದಲ್ಲಿ ಇಬ್ಬರು ಯುವ ಕಾರ್ಮಿಕರು ಮೃತಪಟ್ಟ ಘಟನೆ ಮಂಗಳವಾರ ನಡೆದಿದೆ. ರವಿಕುಮಾರ ಸಿಂಗ್ (18) ಹಾಗೂ ಸುಭಾಷ ಸಿಂಗ್ (18) ಎಂದು ಗುರುತಿಸಲಾಗಿದೆ. ಕಲ್ಯಾಣ ಶೆಟ್ಟಿ ಅಸೋಸಿಯೇಷನ್‌ಗೆ ಸೇರಿದ ಗಣಿಗಾರಿಕೆ ಪ್ರದೇಶದಲ್ಲಿ ಗಣಿಗಾರಿಕೆ ಕಾರ್ಯಕ್ಕಾಗಿ ಪಡೆದಿದ್ದ 11ಕೆವಿ ವಿದ್ಯುತ್ ಸಂಪರ್ಕದ ಸಮೀಪ ಹಿಟ್ಯಾಚ್ ಜೆಸಿಬಿಯಿಂದ ಕೆಲಸ ಮಾಡುತ್ತಿದ್ದ ವೇಳೆ, ಯಂತ್ರದ ಬಕೆಟ್ ವಿದ್ಯುತ್ ತಂತಿಗೆ ತಗುಲಿದ ಪರಿಣಾಮ ದುರಂತ ಸಂಭವಿಸಿದೆ. ವಿದ್ಯುತ್ ತಗುಲುತ್ತಿದ್ದಂತೆಯೇ ಪ್ರಾಣ ಉಳಿಸಿಕೊಳ್ಳಲು ಜೆಸಿಬಿಯಿಂದ ಕೆಳಗೆ ಜಿಗಿದ ಕಾರ್ಮಿಕರು ಹತ್ತಿರದಲ್ಲಿದ್ದ ನೀರಿಗೆ ಬಿದ್ದಿದ್ದಾರೆ. ಆದರೆ, ನೀರಿನಲ್ಲೂ ವಿದ್ಯುತ್ ಹರಿದ ಪರಿಣಾಮ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆಯ ಕುರಿತು ಸವದತ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಉಜ್ಜಯನಿ ರಥೋತ್ಸವಕ್ಕೆ ಆಗಮಿಸಿದ ಭಕ್ತಗಣ


ಕೊಟ್ಟೂರು: ತಾಲೂಕಿನ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿನ ಜಗದ್ಗುರು ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ ಪ್ರಯುಕ್ತ ಮಂಗಳವಾರ ಬೆಳಗಿನಿಂದಲೇ ಸಹಸ್ರಾರು ಸಂಖ್ಯೆಯ ಭಕ್ತರು ಆಗಮಿಸಿ ಶ್ರೀ ಸ್ವಾಮಿ ದರ್ಶನ ಪಡೆದರು.



ಕೊಟ್ಟೂರು ಸೇರಿ ನಾನಾ ಭಾಗಗಳಿಂದ ಭಕ್ತರು ಕಾಲ್ನಡಿಗೆಯಲ್ಲಿ ಉಜ್ಜಯಿನಿಗೆ ಆಗಮಿಸಿ ಸರದಿಯಲ್ಲಿ ನಿಂತು ಸ್ವಾಮಿ ದರ್ಶನ ಪಡೆದರು. ರಥೋತ್ಸವ ಅಂಗವಾಗಿ ದೇವಸ್ಥಾನವನ್ನು ವಿವಿಧ ಹೂವುಗಳಿಂದ ಆಕರ್ಷಣೀಯವಾಗಿ ಅಲಂಕಾರ ಮಾಡಲಾಗಿತ್ತು. ದೇವಸ್ಥಾನದಲ್ಲಿ ನೂಕು ನುಗ್ಗಲು ಆಗದಂತೆ ಸಿಪಿಐ ಡಿ.ದುರುಗಪ್ಪ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಸದ್ಧರ್ಮ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ರಥೋತ್ಸವ ಪ್ರಯುಕ್ತವಾಗಿ ಗ್ರಾಮದಲ್ಲಿರುವ ಎಲ್ಲ ದೇವಸ್ಥಾನಗಳಿಗೆ, ದರ್ಗಾಕ್ಕೆ ಭೇಟಿ ನೀಡಿದರು. ಜಗದ್ಗುರುಗಳು ದಲಿತಕೇರಿಯ ದೇವಸ್ಥಾನಕ್ಕೆ ಬಂದಾಗ ದಲಿತ ಯುವಕರು ಹಲಗೆ ವಾದನ ಮೂಲಕ ಗುರುಗಳನ್ನು ಸ್ವಾಗತ ಮಾಡಿಕೊಂಡರು. ಮಹಿಳೆಯರು ಆರತಿ ಬೆಳಗಿದರು. ರಥೋತ್ಸವಕ್ಕೆ ಆಗಮಿಸಿರುವ ಭಕ್ತರಿಗಾಗಿ ಶ್ರೀ ಜ್ಞಾನಗುರು ವಿದ್ಯಾಪೀಠದ ಪಿಯು ಕಾಲೇಜು ಮೈದಾನಕ್ಕೆ ಆಗಮಿಸಿದ ಜಗದ್ಗುರುಗಳು ತಯಾರಿಸಿದ್ದ ಸಿಹಿ, ಅನ್ನ, ಸಾಂಬಾರು ಪ್ರಸಾದಕ್ಕೆ ಪೂಜೆ ಸಲ್ಲಿಸಿ ಪ್ರಸಾದ ಸೇವನೆಗೆ ಚಾಲನೆ ನೀಡಿದರು. ಜಗದ್ಗುರುಗಳೊಂದಿಗೆ ನಾನಾ ಶಿವಾಚಾರ್ಯರು ಹಾಗೂ ಊರಿನ ಅನೇಕ ಮುಖಂಡರು ಹಾಜರಿದ್ದರು.

ಎಲ್ಲದರಲ್ಲೂ ಪರಮಾತ್ಮನ ಕಂಡ ಶಂಕರಾಚಾರ್ಯರು : ಶ್ರೀಗಳು

ಸಿದ್ದಾಪುರ: ಇಂದು ಶಂಕರ ಜಯಂತಿ. ಶಂಕರನೇ ಅವತರಿಸಿ ಧರಣಿಗೆ ಶಂಕರಾಚಾರ್ಯರಾಗಿ ಬಂದ ದಿನ. ಆದಿಗುರು ಲೋಕಕ್ಕೆ ಇಳಿದು ಬಂದ ಸುದಿನ. ಗುರು ಸೂರ್ಯೋದಯವಾಗಿ ಅಂತರಂಗದ ಕತ್ತಲು ಕಳೆದ ದಿನ ಎಂದು ಶ್ರೀ ರಾಘವೇಶ್ವರಭಾರತೀ ಶ್ರೀಗಳು ಹೇಳಿದರು.



ತಾಲೂಕಿನ ಭಾನ್ಕುಳಿಯ ಶ್ರೀ ರಾಮದೇವಮಠ ಗೋ ಸ್ವರ್ಗದಲ್ಲಿ ಜರುಗುತ್ತಿರುವ ಶಂಕರಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಮಹಾಪಾದುಕಾ ಪೂಜೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ವಿಪ್ರೋತ್ತಮ, ಗೋವು, ಆನೆ, ನಾಯಿ, ಶ್ವಪಚರು ದೂರ ದೃಷ್ಟಿಯಿಂದ ಬೇರೆ ಬೇರೆಯಾದರೂ ಇವರೆಲ್ಲರಲ್ಲಿಯೂ ಆಳದಲ್ಲಿ ಪರಮಾತ್ಮನಿದ್ದಾನೆ ಎಂದು ಕಂಡುಕೊಂಡವರು ಶಂಕರರು. ಸೂರ್ಯ ಪ್ರತಿಬಿಂಬ ಎಲ್ಲಡೆ ಬೀಳುವಂತೆ ಶಂಕರರು ಎಲ್ಲವನ್ನೂ ಸಮನಾಗಿ ಕಾಣಬಲ್ಲವರಾಗಿದ್ದರು. ಶಂಕರಾಚಾರ್ಯರ ವ್ಯಕ್ತಿತ್ವದ ಎತ್ತರದಿಂದಾಗಿ ಅವರಿಗೆ ದ್ವೈತ ಕಾಣಲಿಲ್ಲ. ಕಣ್ತೆರೆದರೆ ನಮಗೆ ಪ್ರಪಂಚ ಕಾಣುತ್ತದೆ. ಆದರೆ ಶಂಕರರಿಗೆ ಕಣ್ಣು ಬಿಟ್ಟಲ್ಲೆಲ್ಲಾ ಪರಮಾತ್ಮನೇ ಗೋಚರಿಸಿದ್ದಾನೆ.

ಯುಗಕ್ಕೊಮ್ಮೆ ಶಂಕರರಂತವರು ಹುಟ್ಟಬರುತ್ತಾರೆ. ಜ್ಞಾನಿಗಳೆಲ್ಲರೂ ಬೇರೆಯವರಿಗೆ ಮುಕ್ತಿಯ ಮಾರ್ಗ ತೋರುತ್ತಾರೆ ಎನ್ನಲಾಗದು. ನೌಕೆ ಎಲ್ಲರನ್ನೂ ಆಚೆ ದಡ ತಲುಪಿಸುವಂತೆ ಸಂಸಾರ ಸಮುದ್ರ ದಾಟಲು ಮಾರ್ಗದರ್ಶಿ ಸೂತ್ರ ಕೊಟ್ಟ ಶ್ರೇಷ್ಠರು ಶಂಕರಾಚಾರ್ಯರು. ಶಂಕರರ ಉಪದೇಶ, ರಚಿಸಿದ ಗ್ರಂಥಗಳನ್ನು ಗಮನಿಸಿದರೆ ಭವರೋಗ ನಿವಾರಿಸುವ ಅಮೃತ ದಯಪಾಲಿಸಿದವರೆಂಬುದು ಸ್ಪಷ್ಟವಾಗುತ್ತದೆ.

ಇಂತಹ ಗುರುವಿನ ಮನೆಗೆ ಬಾಗಿಲು ಗೋಡೆಗಳಿಲ್ಲ, ಪುಣ್ಯವಂತರು ಮಾತ್ರ ಗುರುವಿನ ಹತ್ತಿರ ಹೋಗಬಲ್ಲರು. ಭಗವಂತ ನಮ್ಮಲ್ಲಿಗೆ ಬ್ರಾಹ್ಮೀ ಮುಹೂರ್ತದಲ್ಲಿ ಅಮೃತ ಕಲಶ ತಂದಾಗ ನಾವು ಜಡನಿದ್ರೆಯಲ್ಲಿರುತ್ತೇವೆ. ಹೀಗೆ ದಿನಕಳೆಯುತ್ತಾ ಕೊನೆಯಲ್ಲಿ ಯಮನು ಪಾಶ ತೆಗೆದುಕೊಂಡು ನಮ್ಮಲ್ಲಿ ಬರುತ್ತಾನೆ. ಹೀಗಾಗಿ ನಾವು ರಾಮನ ಕಡೆ ಹೋಗಬೇಕು. ಆದಿಗುರು ಶಂಕರರು ಅದಕ್ಕಾಗಿಯೇ ನಮಗೆ ದಾರಿ ತೋರಿದ್ದಾರೆ. ಎದೆಯಲ್ಲಿ ಆದಿಗುರುವನ್ನು ಶಾಶ್ವತವಾಗಿ ಸ್ಥಾಪಿಸಿಕೊಳ್ಳಿ, ಅವರು ನಮ್ಮ ಬದುಕನ್ನು ಬೆಳಗುವಂತಾಗಲಿ. ಸಕಲರಿಗೂ ಒಳಿತಾಗಲಿ ಎಂದು ಶ್ರೀಗಳು ಹರಸಿದರು.

ವಿದ್ವಾನ್ ಶ್ರೀನಿವಾಸ ಭಟ್ಟ ಮೈಸೂರು ಇವರ ಆಚಾರ್ಯತ್ವದಲ್ಲಿ ಮಹಾಪಾದುಕಾ ಪೂಜೆ ಜರುಗಿತು. ವೇ.ಮಂಜುನಾಥ ಭಟ್ಟ ಹುಲಿಮನೆ, ವೇ.ವೆಂಕಟ್ರಮಣ (ನಂದ) ಭಟ್ಟ, ವೇ.ನಾಗರಾಜ ಭಟ್ಟ ಇತರರು ಪೂಜಾ ಕೈಂಕರ್ಯ ನೆರವೇರಿಸಿದರು. ಮಹಾಪಾದುಕಾ ಪೂಜೆಯ ಯಜಮಾನತ್ವವನ್ನು ವಿನಾಯಕ ಸುಬ್ರಾಯ ಹೆಗಡೆ ಹರಗಿ ಹಾಗೂ ಕುಟುಂಬದವರು ವಹಿಸಿಕೊಂಡಿದ್ದರು. ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ಶಿಷ್ಯಭಕ್ತರು ಅಖಂಡವಾಗಿ ನಾಲ್ಕು ತಾಸುಗಳ ಕಾಲ ನಡೆದ ಮಹಾಪಾದುಕಾ ಪೂಜೆಯನ್ನು ಶ್ರದ್ಧೆಯಿಂದ ಅನುಭವಿಸಿ ಪುನೀತರಾದರು.

ಭಾರೀ ಗಾಳಿಗೆ ಕಳಚಿ ಬಿದ್ದ ಕುಡಚಿ ಪುರಸಭೆ ಸ್ವಾಗತ ಕಮಾನು

ಕುಡಚಿ: ಸುಮಾರು ರೂ.10 ಲಕ್ಷ ವೆಚ್ಚದಲ್ಲಿ ಕೆಲವೇ ತಿಂಗಳ ಹಿಂದೆ ನಿರ್ಮಿಸಲಾದ ಕುಡಚಿ ಪುರಸಭೆಯ ಸ್ವಾಗತ ಕಮಾನು ಸೋಮವಾರ ಸಂಜೆ ಬಿರುಗಾಳಿಗೆ ತಲೆಕೆಳಗಾಗಿ ನೆಲಕ್ಕುರಿದ ಘಟನೆ ಪಟ್ಟಣದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.



ಹಜರತ ಮಾಸಾಹೇಬ ಕುಡಚಿಗೆ ಹಾರ್ದಿಕ ಸ್ವಾಗತ ಕೋರುವ ಉದ್ದೇಶದಿಂದ ಅಳವಡಿಸಲಾದ ಈ ಕಮಾನು ಗಾಳಿಯ ಅಬ್ಬರಕ್ಕೆ ಕ್ಷಣಾರ್ಧದಲ್ಲಿ ಕುಸಿದಿದ್ದು, ಕಾಮಗಾರಿಯ ಗುಣಮಟ್ಟದ ಬಗ್ಗೆ ಗಂಭೀರ ಅನುಮಾನಗಳು ವ್ಯಕ್ತವಾಗಿವೆ. ಕೆಲವೇ ತಿಂಗಳಲ್ಲಿ ಈ ರೀತಿಯಾಗಿ ಕುಸಿದಿರುವುದು ಪುರಸಭೆ ಕಾಮಗಾರಿಗಳ ದರ್ಜೆಯನ್ನೇ ಪ್ರಶ್ನಿಸುವಂತಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಘಟನೆಯ ಸಮಯದಲ್ಲಿ ರಸ್ತೆ ಮೇಲೆ ಜನ ಸಂಚಾರ ಕಡಿಮೆ ಇದ್ದುದರಿಂದ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಆದರೆ, ಸ್ವಲ್ಪ ವ್ಯತ್ಯಾಸವಾಗಿದ್ದರೂ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ. ಸಾರ್ವಜನಿಕ ಹಣದಲ್ಲಿ ನಿರ್ಮಿಸಲಾದ ಕಾಮಗಾರಿ ಇಷ್ಟು ಬೇಗ ಕುಸಿದಿರುವುದಕ್ಕೆ ಯಾರು ಹೊಣೆ ಎಂಬ ಪ್ರಶ್ನೆ ಇದೀಗ ಉದ್ಭವಿಸಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಳೆಯ ವೈಷಮ್ಯ: ಕೊಲೆಯಲ್ಲಿ ಅಂತ್ಯ

ಜಮಖಂಡಿ: ತಾಲೂಕಿನ ಕನ್ನೊಳ್ಳಿ ಗ್ರಾಮದಲ್ಲಿ ಸಂಬಂಧಿಕರ ನಡುವಿನ ಹಳೆಯ ವೈಷಮ್ಯ ಭೀಕರ ಕೊಲೆಯಲ್ಲಿ ಅಂತ್ಯಗೊಂಡ ಘಟನೆ ನಡೆದಿದೆ.

ಮೃತನನ್ನು ಸೋಮು ಅಲಿಯಾಸ್ ಸೋಮಲಿಂಗ ಪಡಸಲಗಿ (36) ಎಂದು ಗುರುತಿಸಲಾಗಿದ್ದು, ಅವರು ಕೃಷಿಕರಾಗಿದ್ದರು. ಪೊಲೀಸರ ಪ್ರಕಾರ, ಆರೋಪಿಯಾಗಿರುವ ಸದಾಶಿವ ಪಡಸಲಗಿ ಮೃತರ ದೊಡ್ಡಪ್ಪನ ಮಗನಾಗಿದ್ದು, ಆರೋಪಿಯ ಪತ್ನಿ ಹಾಗೂ ಮೃತರ ನಡುವೆ ಅನೈತಿಕ ಸಂಬಂಧವಿದೆ ಎಂಬ ಆರೋಪದ ಹಿನ್ನೆಲೆ ಇಬ್ಬರ ಮಧ್ಯೆ ಹಳೆಯ ವೈಷಮ್ಯವಿತ್ತು ಎನ್ನಲಾಗಿದೆ.

ಸೋಮು ಅವರು ಅದೇ ದಿನ ಸಂಜೆ ಹೊಸ ಕಾರು ಖರೀದಿಸಿ ಪೂಜೆ ಮಾಡಿಕೊಂಡು ಸುಮಾರು 7:30ರ ವೇಳೆಗೆ ಮನೆಗೆ ಮರಳುತ್ತಿದ್ದಾಗ, ಕನ್ನೊಳ್ಳಿ ಗ್ರಾಮದ ಮುಖ್ಯ ರಸ್ತೆ ಬಳಿ ಸದಾಶಿವ ಪಡಸಲಗಿ ತನ್ನ ಸಹಚರರಾದ ರವಿ ಪಾಟೀಲ ಹಾಗೂ ನವಿ ಅವರೊಂದಿಗೆ ಕಾಯುತ್ತಿದ್ದರು. ಈ ವೇಳೆ ಮೃತ ಸೋಮಲಿಂಗ ಸ್ಥಳಕ್ಕೆ ಆಗಮಿಸಿದಾಗ ವಾಗ್ವಾದ ಸಂಭವಿಸಿದ್ದು, ಕಾರಿನಿಂದ ಕೆಳಗಿಳಿದ ತಕ್ಷಣ ಮೂವರು ಸೇರಿ ಚಾಕುವಿನಿಂದ ಮೂರು ಬಾರಿ ಇರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆಯ ಬಳಿಕ ಆರೋಪಿಗಳು ಕಾರಿನಲ್ಲಿದ್ದ ಪೆಟ್ರೋಲ್ ಬಳಸಿ ಕಾರು ಹಾಗೂ ಮೃತದೇಹಕ್ಕೆ ಬೆಂಕಿ ಹಚ್ಚಿರುವುದು ಆತಂಕ ಮೂಡಿಸಿದೆ. ಘಟನೆಯ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಡಿ.ವೈ.ಎಸ್.ಪಿ ಸಯ್ಯದ ರೋಷನ್ ಜಮೀರ, ಸಿಪಿಐ ಮಲ್ಲಪ್ಪ ಮಡ್ಡಿ, ಪಿಎಸ್ಐಗಳಾದ ಅಪ್ಪು ಐಗಳಿ ಹಾಗೂ ಅನೀಲ ಕುಂಬಾರ ಅವರ ನೇತೃತ್ವದ ಸಾವಳಗಿ ಪೊಲೀಸ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಸದಾಶಿವ ಪಡಸಲಗಿ, ರವಿ ಪಾಟೀಲ ಹಾಗೂ ನವಿ ಅವರನ್ನು ವಶಕ್ಕೆ ಪಡೆದು, ಕೊಲೆ ಪ್ರಕರಣದಲ್ಲಿ ಬಳಸಿದ ಆಯುಧವನ್ನೂ ಜಪ್ತಿ ಮಾಡಿದ್ದಾರೆ. ಈ ಸಂಬಂಧ ಸಾವಳಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೆಎಸ್‌ಸಿಎನಿಂದ ಬೇಸಿಗೆ ಕ್ರಿಕೆಟ್ ಶಿಬಿರ: ಸವಡಿ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ಅಕಾಡೆಮಿ ವತಿಯಿಂದ ಏ.20ರಿಂದ ಬೇಸಿಗೆ ಕ್ರಿಕೆಟ್ ಶಿಬಿರ ಆರಂಭಗೊಂಡಿದ್ದು, ಪುರುಷ ಹಾಗೂ ಮಹಿಳೆಯರು ಸೇರಿ 125 ಆಟಗಾರರಿಗೆ ಶಿಬಿರ ನಡೆಯಲಿದೆ ಎಂದು ಕೆಎಸ್‌ಸಿಎ ಧಾರವಾಡ ವಲಯ ಸಂಚಾಲಕ ವೀರಣ್ಣ ಸವಡಿ ತಿಳಿಸಿದರು.



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧಾರವಾಡ, ಹುಬ್ಬಳ್ಳಿ, ಗದಗ, ಕಾರವಾರ ಹಾಗೂ ಬೆಳಗಾವಿದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿತ್ತು. 1716 ಆಟಗಾರರು ಈ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ಪುರುಷರ 14, 16 ಹಾಗೂ 19 ವಯೋಮಿತಿಗಳ ವಿಭಾಗದಲ್ಲಿ ತಲಾ 25ರಂತೆ 75 ಆಟಗಾರರನ್ನು ಮತ್ತು ಮಹಿಳೆಯರ 15 ಹಾಗೂ 19 ವಯೋಮಿತಿಗಳ ವಿಭಾಗದಲ್ಲಿ ತಲಾ 25ರಂತೆ 50 ಆಟಗಾರ್ತಿಯರನ್ನು ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ ಎಂದರು.

15 ಮತ್ತು 19 ವಯೋಮಿತಿಗಳ ವಿಭಾಗದಲ್ಲಿ ಮಹಿಳೆಯರಿಗೆ ಹುಬ್ಬಳ್ಳಿಯಲ್ಲಿ ಇದೇ ಮೊದಲ ಬಾರಿಗೆ 1 ತಿಂಗಳ ಅವಧಿಯ ಬೇಸಿಗೆ ಶಿಬಿರ ನಡೆಸಲಾಗುತ್ತಿದೆ. ಶಿಬಿರಾರ್ಥಿಗಳಿಗೆ ದೇಶಪಾಂಡೆ ನಗರ ಕರ್ನಾಟಕ ಜಿಮ್ ಖಾನಾ ಕ್ಲಬ್ ಹಾಗೂ ಖಾಸಗಿ ಹೋಟೆಲ್‌ನಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಎಲ್ಲ 5 ವಯೋಮಿತಿಗಳ ವಿಭಾಗಕ್ಕೆ ಪ್ರತ್ಯೇಕವಾಗಿ ಕೆಎಸ್‌ಸಿಎ (ಬೆಂಗಳೂರು)ನಿಂದಲೇ ಬಿಸಿಸಿಐ ಲೆವಲ್ 1 ಕೋಚ್ ನಿಯೋಜಿಸಲಾಗಿದೆ. ಫಿಜಿಯೋ, ವಿಡಿಯೋ ಅನಾಲಿಸ್ಟ್, ಸ್ಟ್ರೆಂಥನಿಂಗ್ ಕೋಚ್‌ಗಳು ಜತೆಗೆ ಇರಲಿದ್ದಾರೆ. ಮಹಿಳಾ ಆಟಗಾರರಿಗೆ ಮಹಿಳೆರಿಗೆ ವ್ಯಕ್ತಿತ್ವ ವಿಕಸನ ಹಾಗೂ ಆತ್ಮ ರಕ್ಷಣೆ ಬಗ್ಗೆ ಕಾರ್ಯಾಗಾರ ನಡೆಸಲಾಗುವುದು ಎಂದು ತಿಳಿಸಿದರು.

ಹುಬ್ಬಳ್ಳಿಯಲ್ಲಿ ಜನವರಿಯಲ್ಲಿ ನಡೆದ ರಣಜಿ ಟ್ರೋಫಿ ಫೈನಲ್ ಪಂದ್ಯಕ್ಕೆ ಸಿದ್ಧಪಡಿಸಲಾದ ಪಿಚ್ ಬಗ್ಗೆ ಬಿಸಿಸಿಐನಿಂದ ನಮಗಾಗಲಿ ಅಥವಾ ಕೆಎಸ್ ಸಿಎಗಾಗಲಿ ಯಾವುದೇ ದೂರುಗಳು ಬಂದಿಲ್ಲ. ಬಿಸಿಸಿಐ ತಟಸ್ಥ ಕ್ಯುರೇಟರ್ ಪಿಚ್ ಸಿದ್ಧಪಡಿಸಿದ್ದರು. ಜಮ್ಮು-ಕಾಶ್ಮೀರ ತಂಡದವರು ಬ್ಯಾಟಿಂಗ್‌ನಲ್ಲಿ ಬೃಹತ್ ಮೊತ್ತ ಗಳಿಸಿದ್ದರೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ಸಹ ನೀಡಿದ್ದರು. ಹಾಗಾಗಿ ಪಿಚ್ ಬಗ್ಗೆ ದೂರುವ ಪ್ರಶ್ನೆ ಇಲ್ಲ, ಬೌಲರ್‌ಗಳ ಸಾಮರ್ಥ್ಯ ನಿರ್ಣಾಯಕವಾಗಿರುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಧಾರವಾಡ ವಲಯ ಚೇರಮನ್ ಅಲ್ತಾಫ್ ಕಿತ್ತೂರ ಹಾಗೂ ವಂಸತ ಮುರಡೇಶ್ವರ ಇದ್ದರು.

ಶೀಘ್ರ ಕಾಮಗಾರಿ ಆರಂಭ

ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾ ಕೇಂದ್ರ (ಕ್ಲಬ್‌ಹೌಸ್) ಕಾಮಗಾರಿ ಶೀಘ್ರದಲ್ಲಿ ಆರಂಭಿಸಲಾಗುವುದು. ಡಿಸೆಂಬರ್ ಕಾಮಗಾರಿ ಮುಗಿಸುವುದಾಗಿ ಕೆಎಸ್‌ಸಿಎ ಕಾರ್ಯದರ್ಶಿಯವರು ಭರವಸೆ ನೀಡಿದ್ದಾರೆ. ಬೆಳಗಾವಿ, ಗದಗ ಮೈದಾನ ಅಭಿವೃದ್ಧಿ ಮಾಡಲಾಗುವುದು ಎಂದು ನಿಮಂತ್ರಕ ವೀರಣ್ಣ ಸವಡಿ ತಿಳಿಸಿದರು.

ಗುಂಡ್ಲುಪೇಟೆ ಅಭಿವೃದ್ಧಿಗೆ ಆದ್ಯತೆ

ಪುಟ ೧➡ ಆದರೆ ಜನರು ಇದರ ಸತ್ಯಾಸತ್ಯತೆ ಅರಿಯಬೇಕು. ಐದು ಗ್ಯಾರಂಟಿಗಳನ್ನು ನೀಡುವುದರ ಜತೆ ಅಭಿವೃದ್ಧಿಗೆ ಭರಪೂರ ಅನುದಾನ ನೀಡಲಾಗಿದೆ. ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿದೆ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು.

ಮೀಸಲಾತಿ ಮಸೂದೆ ಕುರಿತು ಸುಳ್ಳು ಪ್ರಚಾರ: ಪ್ರಸ್ತುತ ಮಹಿಳಾ ಮೀಸಲಾತಿ ಬಿಲ್ ಅನ್ನು ಕಾಂಗ್ರೆಸ್ ವಿರೋಧಿಸಿತು ಎಂದು ಬಿಜೆಪಿ ಸುಳ್ಳುಪ್ರಚಾರ ಮಾಡುತ್ತಿದೆ. ಆದರೆ ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿಯನ್ನು ವಿರೋಧಿಸಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರ. ಹಿಂದೆ ಸಂವಿಧಾನದ ಕಲಂ 73,74 ತಿದ್ದುಪಡಿಯನ್ನು ಬಿಜೆಪಿಯವರು ವಿರೋಧಿಸಿದ್ದರು. ಪ್ರಧಾನಿ ಮೋದಿಯವರು ಮಹಿಳಾ ಮೀಸಲಾತಿಯನ್ನು ವಿರೋಧಿಸಿದವರನ್ನು ಮಹಿಳೆಯರು ಕ್ಷಮಿಸುವುದಿಲ್ಲ ಎಂದಿದ್ದಾರೆ. ಆದರೆ 2023ರಲ್ಲಿಯೇ ಮಹಿಳಾ ಮೀಸಲಾತಿ ಕಾಯ್ದೆ ತರಲಾಗಿದ್ದು, ಈ ಕಾಯ್ದೆಗೆ ಕಾಂಗ್ರೆಸ್ ವಿರೋಧಿಸದೇ ಸ್ವಾಗತಿಸಿದ್ದೆವು. ಆದರೆ ಸಹಮತ ಸೂಚಿಸಲಾಗಿದ್ದ ಮಹಿಳಾ ಮೀಸಲಾತಿಯನ್ನು 2028ರವರೆಗೆ ಜಾರಿಗೆ ತರಲು ಸಾಧ್ಯವಿಲ್ಲವೆಂದು ಬಿಜೆಪಿಯವರೇ ಹೇಳಿದರು. ಕಾಂಗ್ರೆಸ್ ಪಕ್ಷ ಎಂದಿಗೂ ಮಹಿಳಾ ಮೀಸಲಾತಿಯನ್ನು ಬೆಂಬಲಿಸುತ್ತದೆ. ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದು, ಅವರಿಗೆ ನ್ಯಾಯಯುತವಾದ ಮೀಸಲಾತಿ ದೊರೆಯಬೇಕಿರುವುದು ಅತ್ಯಗತ್ಯ ಎಂದರು.

ಸಂತ್ರಸ್ತರ ಕುಟುಂಬದವರಿಗೆ ನೇಮಕ ಪತ್ರ ವಿತರಣೆ

ಪುಟ ೧➡ ಅಲ್ಲದೆ, ವಿವಿಧ ನಿಗಮದ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಿದರು.ಗುಂಡ್ಲುಪೇಟೆ ಆಕ್ಸಿಜನ್ ಕೊಲೆಗೆ ನ್ಯಾಯ ಒದಗಿಸಿದ್ದೇವೆ. ವಿಶೇಷ ತೀರ್ಮಾನ ತೆಗೆದುಕೊಂಡು 25 ಕುಟುಂಬಗಳಿಗೆ ಅದೇ ಆಸ್ಪತ್ರೆಯಲ್ಲೇ ಉದ್ಯೋಗ ಕಲ್ಪಿಸಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಆಕ್ಸಿಜನ್ ದುರಂತದಲ್ಲಿ ನಡೆದ ಕೊಲೆಯಲ್ಲಿ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಸುರೇಶ್‌ಕುಮಾರ್ ಅವರು ತಮ್ಮ ಆತ್ಮಸಾಕ್ಷಿಗೆ ಒಪ್ಪದೇ ಹೊರನಡೆದರು. ನಾವು ಪ್ರತಿ ಮನೆಗೂ ಭೇಟಿ ನೀಡಿ ನ್ಯಾಯ ಕೊಡಿಸುವುದಾಗಿ ಮಾತು ಕೊಟ್ಟೆವು. ಅದರಂತೆ ಇಂದು ನೇಮಕಾತಿ ಪತ್ರವನ್ನು ವಿತರಣೆ ಮಾಡಲಾಗಿದೆ ಎಂದರು.

ಡಿಲಿಮಿಟೇಷನ್ ಕಾಯ್ದೆಗೆ ಕಾಂಗ್ರೆಸ್ ವಿರೋಧ: ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿಗಳು, ನಗರಸಭೆ, ನಗರಪಾಲಿಕೆಗಳಲ್ಲಿ ಶೇ.50 ರಷ್ಟು ಮಹಿಳೆಯರಿದ್ದು, ಇದಕ್ಕೆ ಕಾಂಗ್ರೆಸ್ ಸರ್ಕಾರವೇ ಕಾರಣ. ಪ್ರಸ್ತುತ, ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಕಾಯ್ದೆಯ ಜೊತೆಗೆ ಡೀಲಿಮಿಟೇಷನ್ ಕಾಯ್ದೆ ತರಲು ಪ್ರಯತ್ನಿಸಿದ್ದರಿಂದ ವಿರೋಧವನ್ನು ವ್ಯಕ್ತಪಡಿಸಲಾಗಿದೆ. ಕಾಂಗ್ರೆಸ್ ಡಿಲಿಮಿಟೇಷನ್ ಕಾಯ್ದೆಯನ್ನು ವಿರೋಧಿಸಿದೆಯೇ ಹೊರತು ಮಹಿಳಾ ಮೀಸಲಾತಿಯನ್ನು ವಿರೋಧಿಸಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ವಿರೋಧಿಸಿದರು. ಆದರೆ ನಮ್ಮ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ಹಲವು ರಾಜ್ಯಗಳಲ್ಲಿ ಅನುಸರಿಸುತ್ತಿದ್ದಾರೆ. ಗ್ಯಾರಂಟಿಗಳ ಜತೆಗೆ ಅಭಿವೃದ್ಧಿಯನ್ನು ಸಾಧಿಸುತ್ತಿರುವುದಕ್ಕೆ ಇಂದು ಗುಂಡ್ಲುಪೇಟೆಯಲ್ಲಿ ನಡೆದಿರುವ ಈ ಕಾರ್ಯಕ್ರಮವೇ ಸಾಕ್ಷಿ. ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ ಎಂದರು. ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿ ಮೂರು ವರ್ಷಗಳಲ್ಲಿ 1 ಲಕ್ಷ 60 ಸಾವಿರ ಕೋಟಿ ವೆಚ್ಚದಲ್ಲಿ, ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಒಟ್ಟು 1 ಲಕ್ಷ 60 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ಎಸ್‌ಸಿಎಸ್‌ಪಿ / ಟಿಎಸ್‌ಪಿ ಯೋಜನೆಯಲ್ಲಿ 1 ಲಕ್ಷ 10 ಸಾವಿರ ಕೋಟಿ ಮಾತ್ರ ವೆಚ್ಚ ಮಾಡಿದೆ ಎಂದರು.

ಸಮಾಜದಲ್ಲಿ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು, ಹಿಂದುಳಿದವರು ಹಾಗೂ ಎಲ್ಲಾ ಧರ್ಮ, ಜಾತಿಗಳ ಬಡವರ ಪರವಾಗಿ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್ ಎಂದಿಗೂ ಬಡವರ, ಅಲ್ಪಸಂಖ್ಯಾತರ, ದಲಿತರ ಪಕ್ಷ. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಅರಾಫತ್ ಅಲಿಗೆ ಜೈಲು ಶಿಕ್ಷೆ ವಿಧಿಸಿ ತೀರ್ಪು

ಬೆಂಗಳೂರು: ದೇಶಾದ್ಯಂತ ಸಂಚಲನ ಮೂಡಿಸಿದ್ದ 2022ರ ಶಿವಮೊಗ್ಗ ಐಸಿಸ್ ಭಯೋತ್ಪಾದನಾ ಪಿತೂರಿ ಪ್ರಕರಣಕ್ಕೆಸಂಬಂಧಿಸಿದಂತೆ, ಎನ್‌ಐಎ ವಿಶೇಷನ್ಯಾಯಾಲಯವು ಮೂರನೇ ಆರೋಪಿ ಅರಾಫತ್ ಅಲಿಗೆ 6 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯವು ಜೈಲು ಶಿಕ್ಷೆ ವಿಧಿಸಿದೆ. ಇದೇ ಪ್ರಕರಣದಲ್ಲಿ ಕಳೆದ ನವೆಂಬರ್ 2025 ರಲ್ಲಿ ಇತರ ಇಬ್ಬರು ಆರೋಪಿಗಳಿಗೂ ತಲಾ 6ವರ್ಷಗಳ ಶಿಕ್ಷೆ ವಿಧಿಸಲಾಗಿತ್ತು. ಈ ಮೂಲಕ ಪ್ರಕರಣದಲ್ಲಿ ಶಿಕ್ಷೆಗೊಳಗಾದವರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಅಪರಾಧದ ಹಿನ್ನೆಲೆ: ನಿಷೇಧಿತ ಭಯೋತ್ಪಾದನಾ ಸಂಘಟನೆ ಐಸಿಸ್‌ನ ಸಕ್ರಿಯ ಸದಸ್ಯನಾಗಿದ್ದ ಅರಾಫತ್ ಅಲಿ, ಭಾರತದಲ್ಲಿ ಭಯೋತ್ಪಾದಕ ಸಿದ್ಧಾಂತವನ್ನು ಹರಡಲು ಸಂಚು ರೂಪಿಸಿದ್ದನು. ಶಿವಮೊಗ್ಗ ಐಸಿಸ್ ಮಾಡ್ಯೂಲ್ ಮೂಲಕ ಯುವಕರನ್ನು ಉಗ್ರಗಾಮಿ ಸಿದ್ಧಾಂತಕ್ಕೆ ಪ್ರೇರೇಪಿಸಿ ನೇಮಕಾತಿ ಮಾಡಿಕೊಳ್ಳುತ್ತಿದ್ದ ಎನ್ನುವುದು ತನಿಖೆಯಿಂದ ದೃಢಪಟ್ಟಿದೆ. ಅಷ್ಟೇ ಅಲ್ಲದೆ, ಮಂಗಳೂರು ನಗರದಲ್ಲಿ ಐಸಿಸ್ ಮತ್ತು ಲಷ್ಕರ್-ಎ-ತೈಬಾ ಪರವಾಗಿ ವಿವಾದಾತ್ಮಕ ಗೋಡೆ ಬರಹಗಳನ್ನು ಬರೆಯಲು ಇತರ ಆರೋಪಿಗಳನ್ನು ಪ್ರೇರೇಪಿಸಿದ ಆರೋಪವೂ ಈತನ ಮೇಲಿದೆ. ಸಮಾಜದಲ್ಲಿ ಅಶಾಂತಿ ಹರಡುವುದು ಮತ್ತು ಧರ್ಮಗಳ ನಡುವೆ ದ್ವೇಷ ಮೂಡಿಸುವುದು ಈ ಸಂಚಿನ ಪ್ರಮುಖ ಉದ್ದೇಶವಾಗಿತ್ತು.

ತಲೆಮರೆಸಿಕೊಂಡಿದ್ದ ಆರೋಪಿ: 2020 ರಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಂಧನದ ಭೀತಿಯಲ್ಲಿದ್ದ ಅರಾಫತ್, ದೇಶ ಬಿಟ್ಟು ಪರಾರಿಯಾಗಿದ್ದನು. ತನಿಖೆ ಮುಂದುವರಿಸಿದ್ದ ಎನ್‌ಐಎ ಅಧಿಕಾರಿಗಳು, ಸೆಪ್ಟೆಂಬರ್ 2023ರಲ್ಲಿ ದೆಹಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈತ ಬಂದಿಳಿಯುತ್ತಿದ್ದಂತೆ ಬಂಧಿಸಿದ್ದರು.

ಕ್ರಿಪ್ಟೋ ಕರೆನ್ಸಿ ಮೂಲಕ ಹಣ ವರ್ಗಾವಣೆ: ಎನ್‌ಐಎ ತನಿಖೆಯ ವೇಳೆ ಮತ್ತೊಂದು ಸ್ಫೋಟಕ ಮಾಹಿತಿ ಬೆಳಕಿಗೆ ಬಂದಿದೆ. ಆರೋಪಿಯು ಆನ್‌ಲೈನ್ ಮೂಲಕ ಐಸಿಸ್ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದನು. ಶಿವಮೊಗ್ಗ ಉಗ್ರ ಮಾಡ್ಯೂಲ್‌ಗೆ ಬೇಕಾದ ಹಣವನ್ನು ಕ್ರಿಪ್ಟೋ ಕರೆನ್ಸಿ ರೂಪದಲ್ಲಿ ಪಡೆದು, ಅದನ್ನು ಇತರ ಸಹಚರರಿಗೆ ಹಂಚುವ ಮೂಲಕ ಹಣಕಾಸಿನ ನೆರವು ನೀಡುತ್ತಿದ್ದನು ಎಂದು ಎನ್‌ಐಎ ತಿಳಿಸಿದೆ. ಆರಂಭದಲ್ಲಿ ಕರ್ನಾಟಕ ಪೊಲೀಸರು ದಾಖಲಿಸಿಕೊಂಡಿದ್ದ ಈ ಪ್ರಕರಣವನ್ನು ನಂತರ ಎನ್‌ಐಎ ಕೈಗೆತ್ತಿಕೊಂಡಿತ್ತು. ಪ್ರಕರಣದಲ್ಲಿ ಒಟ್ಟು 12 ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ.

ಕಿಡಿ ನುಡಿ

◆ ವಾಸುದೇವರಾವ್ ಕಕ್ಕೆನೇಜಿ

◈ ಯುದ್ಧವನ್ನು ಗೆದ್ದವರು ನಾವೇ - ಒಂದೆಡೆ ಇರಾನ್, ಇನ್ನೊಂದೆಡೆ ಅಮೇರಿಕಾ ಹೇಳಿಕೆ - ಗೆದ್ದವರು ಯಾರು ಎನ್ನುವುದು ಚರ್ಚೆಯ ಸಂಗತಿ, ಆದರೆ ಸೋತವರು ಜಗತ್ತಿನ ಜನಸಾಮಾನ್ಯರು ಎಂಬುದು ಸತ್ಯ ಸಂಗತಿ. ಕೋಣನೆರಡುಂ ಹೋರೆ ಗಿಡಮಿಂಗೆ ಮೃತ್ಯು ಎಂಬಂತೆ!

ದಿನ ಭವಿಷ್ಯ

ಮೇಷ ನೀವು ಮಾಡುವ ತಪ್ಪಿಗೆ ಇತರರನ್ನು ದೂರಬೇಡಿ. ಎಲ್ಲರ ಜತೆ ಸೌಹಾರ್ದದಿಂದ ವರ್ತಿಸಿದರೆ ಒಳಿತು. ಕೌಟುಂಬಿಕ ಅಶಾಂತಿ.

ವೃಷಭ ವೃತ್ತಿಗೆ ಸಂಬಂಧಿಸಿ ಪ್ರಮುಖ ಬದಲಾವಣೆ ಉಂಟಾದೀತು. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳಬೇಡಿ. ಸಂಬಂಧದಲ್ಲಿ ಒಡಕು ಸಂಭವ.

ಮಿಥುನ ಕೆಲಸವೊಂದು ಅನಿರೀಕ್ಷಿತ ಫಲ ನೀಡಲಿದೆ. ಒತ್ತಡ ನಿವಾರಣೆ. ಬಂಧುಗಳ ಜತೆ ಆತ್ಮೀಯ ಕಾಲಕ್ಷೇಪ. ಮಕ್ಕಳ ಸಾಧನೆಯ ತೃಪ್ತಿ.

ಕಟಕ ಕೆಲಸದ ಒತ್ತಡ ಅಧಿಕವಿದ್ದರೂ ನೀವು ವಿರಾಮ ಪಡೆಯಲು ಶಕ್ತರಾಗುವಿರಿ. ಖರ್ಚು ಅಧಿಕ ಮಾಡದಿರಿ. ಬಳಿಕ ಚಿಂತೆಗೆ ಕಾರಣವಾದೀತು.

ಸಿಂಹ ಮನೆಯವರ ಹಿತಾಸಕ್ತಿಗೆ ಹೆಚ್ಚಿನ ಗಮನ ಕೊಡಿ. ನಿಮಗೆ ಅರಿವಿಲ್ಲದೇ ಬಿಕ್ಕಟ್ಟು ಬೆಳೆಯುತ್ತಿದೆ. ಎಲ್ಲರ ಜತೆ ಸಮಾಲೋಚನೆ ನಡೆಸಿ.

ಕನ್ಯಾ ಸವಾಲುಗಳ ದಿನ. ನಿಭಾಯಿಸಲು ಸಮರ್ಥ. ಕೆಲವು ವಿಷಯಗಳಲ್ಲಿ ಸಮತೋಲನ ಸಾಧಿಸಿರಿ. ಏಕಪಕ್ಷೀಯ ಧೋರಣೆ ತಾಳದಿರಿ. ಧನವ್ಯಯ.

ತುಲಾ ನಿಮ್ಮ ಒಳ್ಳೆ ಕೆಲಸ ಯಾರೂ ಗಮನಿಸುತ್ತಿಲ್ಲ ಎಂಬ ಕೊರಗು ಬಿಡಿ. ಸೂಕ್ತ ಪ್ರಶಂಸೆ ಸಿಕ್ಕೇ ಸಿಗುವುದು. ಮನೆಯಲ್ಲಿ ಸೌಹಾರ್ದ ಪರಿಸರ.

ವೃಶ್ಚಿಕ ಕಷ್ಟವೆಂದುಕೊಂಡ ಕೆಲಸ ಸಕಾಲದಲ್ಲಿ ಮುಗಿಸುವಿರಿ. ಆತ್ಮವಿಶ್ವಾಸ ವೃದ್ಧಿ. ಮನೆಯಲ್ಲಿ ಅಸಹಕಾರ ಎದುರಿಸುವಿರಿ. ಸಹನೆಯಿಂದಿರಿ.

ಧನು ನಿಮ್ಮ ನಿರ್ವಹಣೆ ಇಂದು ಸುಧಾರಿಸಲಿದೆ. ಅದೃಷ್ಟವೂ ಜತೆಗಿದೆ. ಕ್ಲಿಷ್ಟಕರ ಪರಿಸ್ಥಿತಿಯೊಂದು ಅಚಾನಕ್ ಪರಿಹಾರ ಕಾಣುವುದು.

ಮಕರ ಇತ್ತೀಚೆಗೆ ಮೂಡಿದ್ದ ಕೆಲವು ಸಂಶಯಗಳಿಗೆ ಇಂದು ಪರಿಹಾರ ಸಿಗಲಿದೆ. ಮನಸ್ಸು ನಿರಾಳ. ಆರ್ಥಿಕ ಪರಿಸ್ಥಿತಿ ಉತ್ತಮ. ಖರ್ಚು ಹೆಚ್ಚಿದರೂ ಚಿಂತೆ ಕಾಡದು.

ಕುಂಭ ಮನವನ್ನು ಕಾಡುತ್ತಿರುವ ವಿಷಯ ಸರಿಯಾಗಿ ಇತ್ಯರ್ಥ ಪಡಿಸಿ. ಅದನ್ನು ಹಾಗೇ ಬೆಳೆಯಲು ಬಿಡಬೇಡಿ. ಕೌಟುಂಬಿಕ ಸಹಕಾರ.

ಮೀನ ನಿಮ್ಮ ಪಾಲಿಗೆ ಗುಣಾತ್ಮಕ ಬದಲಾವಣೆ ಉಂಟಾಗಲಿದೆ. ಮನೆಯವರ ಮಾತಿಗೆ ರೇಗದಿರಿ. ಸಮಾಧಾನದ ಪ್ರತಿಕ್ರಿಯೆ ನೀಡಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 3,8,1,5

ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಇಂಗಿತ

ಶೋಷಿತರ ಅಭಿವೃದ್ಧಿಯಾಗಲಿ

ವಿಜಯಪುರ: ವಿದ್ಯಾರ್ಥಿಗಳು ಕನಸು ಕಂಡು, ಅದನ್ನು ನನಸಾಗಿಸಲು ಸಾಹಸ ಮಾಡುವುದರ ಜೊತೆಗೆ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತಂದು, ವೈಯುಕ್ತಿಕ ಶ್ರೇಯೋಭಿವೃದ್ಧಿಯ ಜೊತೆಗೆ ಸಮಾಜದ ದುರ್ಬಲ ವರ್ಗ, ಶೋಷಿತ ವರ್ಗಗಳ ಕಲ್ಯಾಣಕ್ಕಾಗಿಯೂ ಯೋಗದಾನ ನೀಡಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.



ವಿದ್ಯಾರ್ಥಿಗಳ ಆತ್ಮಬಲ ಹೆಚ್ಚಲಿ

ಅಕ್ಕಮಹಾದೇವಿ ಹೆಸರಿನಲ್ಲಿ ಆರಂಭವಾಗಿರುವ ಮಹಿಳಾ ವಿವಿ ಆಧ್ಯಾತ್ಮಿಕ ಹಾಗೂ ಜ್ಞಾನ ಚೈತನ್ಯದ ಪ್ರತೀಕವಾಗಿದೆ. ಸತ್ಯಜ್ಞಾನ ಎಂಬುದು ಆತ್ಮ ನಿರ್ಭರವನ್ನಗಿಸುತ್ತದೆ ಎನ್ನುವುದು ಅಕ್ಕಮಹಾದೇವಿ ಚಿಂತನೆ, ಜ್ಞಾನ ಎಂಬುದು ಆತ್ಮಬಲ ಹಾಗೂ ಸೇವೆಯ ಮಾರ್ಗ ಎಂಬುದು ಅಕ್ಕಮಹಾದೇವಿ ದಿವ್ಯ ಚಿಂತನೆಯಾಗಿತ್ತು. ಈ ಚಿಂತನೆಯ ಬಲದೊಂದಿಗೆ ವಿದ್ಯಾರ್ಥಿಗಳು ಮುನ್ನಡೆಯಬೇಕು ಎಂದರು.

ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯದ 17ನೇ ಘಟಿಕೋತ್ಸವದಲ್ಲಿ ಮಹಿಳಾ ಸಾಧಕರಿಗೆ ಗೌರವ ಡಾಕ್ಟರೇಟ್, ಚಿನ್ನದ ಸಾಧಕರಿಗೆ ಚಿನ್ನದ ಪದಕ ಹಾಗೂ ಪಿಎಚ್‌ಡಿ ಪದವೀಧರರಿಗೆ ಸಂಶೋಧನಾ ಪ್ರಮಾಣಪತ್ರ ಪ್ರದಾನ ಮಾಡಿ ಅವರು ಮಾತನಾಡಿದರು.

ಇಂದಿನ ಆಧುನಿಕ ಯುಗದಲ್ಲಿ ಅನೇಕ ಸವಾಲುಗಳು ಎದುರಾಗುತ್ತವೆ. ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಜೊತೆ ಜೊತೆಗೆ ನೈತಿಕತೆ, ಸಂವೇದನೆಯನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕಿದೆ. ಆಧುನಿಕ ಭಾರತ ಡಿಜಿಟಲ್ ತಾಂತ್ರಿಕತೆಯಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದು, ಈ ಪ್ರಗತಿಯಲ್ಲಿ ವಿದ್ಯಾರ್ಥಿಗಳ ಯೋಗದಾನ ಅತ್ಯಂತ ಮಹತ್ವದ್ದಾಗಿದೆ. ವ್ಯಕ್ತಿಗತ ಶ್ರೇಯೋಭಿವೃದ್ಧಿಯ ಜೊತೆಗೆ ಸಾಮಾಜಿಕ ಶ್ರೇಯೋಭಿವೃದ್ಧಿ, ನೈತಿಕ ಮೌಲ್ಯಗಳ ಸಾಕ್ಷೀಕರಣದೊಂದಿಗೆ ಸಾಧಕರ ಮಾರ್ಗದಲ್ಲಿ ಸ್ಫೂರ್ತಿಯ ದಾರಿಯಲ್ಲಿ ಸಾಗಬೇಕಿದೆ ಎಂದರು.

ಎಲ್ಲಿ ನಾರಿ ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸುತ್ತಾಳೆ ಎಂಬುದು ನಮ್ಮ ಶಾಸ್ತ್ರಗಳ ಶ್ಲೋಕ, ಇದು ಕೇವಲ ಶ್ಲೋಕವಲ್ಲ ಇದು ಭಾರತೀಯ ಸಂಸ್ಕೃತಿಯ ಮೂಲ ದರ್ಶನವಾಗಿದೆ. ಮಹಿಳೆ ಶಿಕ್ಷಿತಳಾದರೆ ಇಡೀ ಸಮಾಜವನ್ನೇ ಶಿಕ್ಷಿತಳಾಗಿಸುತ್ತಾಳೆ. ಇಂದು ಮಹಿಳೆ ಅಗ್ರಣೀಯ ಶಕ್ತಿಯಾಗಿ ಮುನ್ನಡೆದಿದ್ದಾಳೆ. ರಾಷ್ಟ್ರೀಯ ಸೇವೆಯಲ್ಲಿ ಆಕೆಯ ಪಾತ್ರ ಅನನ್ಯ, ಅನೇಕ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಸಾಧನೆಯ ಹೆಜ್ಜೆ ಇರಿಸಿದ್ದಾಳೆ ಎಂದರು.

ವಿದ್ಯಾರ್ಥಿಗಳ ಈ ಉತ್ಸಾಹ ಜೀವನದ ಮಹತ್ವದಪೂರ್ಣ ಕ್ಷಣದ ಜೊತೆಗೆ ಇನ್ನೊಂದು ಜವಾಬ್ದಾರಿಯ ಆರಂಭವೂ ಹೌದು. ಇದು ನಿಮ್ಮ ಜ್ಞಾನದ ಪ್ರಮಾಣ ಅಷ್ಟೇ ಅಲ್ಲ ನಿಮ್ಮ ಪರಿಶ್ರಮದ ಸಂಕೇತವೂ ಹೌದು. ಸವಾಲಗಳು ಸಹ ಅಧಿಕ. ಅವುಗಳನ್ನು ಸಮರ್ಥವಾಗಿ ಎದುರಿಸಬೇಕು. ಖಗೋಳ, ವ್ಯವಸಾಯ, ಕ್ರೀಡೆ, ಗಣಿತ, ತಾಂತ್ರಿಕತೆ ಹಾಗೂ ಸೈನ್ಯದಲ್ಲಿ ಹಾಗೂ ಅಷ್ಟೇ ಅಲ್ಲದೇ ರಾಜಕೀಯದಲ್ಲಿಯೂ ಮುಂದಾಳತ್ವ ವಹಿಸಿದ್ದಾಳೆ ಎಂದರು.

ಕನ್ನಡದಲ್ಲಿಯೇ ಮಾತು ಆರಂಭಿಸಿದ ರಾಜ್ಯಪಾಲರು ಎಲ್ಲರಿಗೂ ನಮಸ್ಕಾರ, ನಿಮ್ಮನ್ನೂ ಹಾರ್ದಿಕವಾಗಿ ಸ್ವಾಗತಿಸುತ್ತೇನೆ ಎಂದು ಕನ್ನಡದಲ್ಲಿಯೇ ಭಾಷಣ ಆರಂಭಿಸಿದರು. ಇಡೀ ಸಭಿಕರಿಂದ ಕರತಾಡನ ಮುಗಿಲು ಮುಟ್ಟಿತ್ತು. ಮಹಿಳಾ ವಿವಿ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಇತರರು ಇದ್ದರು.

ಕೈ ಪಾಳೆಯಕ್ಕೆ ಮುಸ್ಲಿಮರ ಎಚ್ಚರಿಕೆ

ಪುಟ ೧➡ ಮುಸ್ಲಿಂ ಮೌಲ್ವಿಗಳು ಹಾಗೂ ನಾಯಕರು ಪತ್ರ ಬರೆದ ಬೆನ್ನಲ್ಲೇ ಎಚ್ಚೆತ್ತಿರುವ ಸಚಿವ ಜಮೀರ್ ಅಹ್ಮದ್ ಡ್ಯಾಮೇಜ್‌ಗೆ ತೇಪೆ ಹಚ್ಚುವ ಕೆಲಸಕ್ಕೆ ಮುಂದಾಗಿದ್ದಾರೆ. ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿ, ನಾನು ಮಾಧ್ಯಮಗಳಲ್ಲಿ ಪತ್ರವನ್ನು ನೋಡಿದ್ದೇನೆ. 16 ಜನ ಗುರುಗಳು ರಾಹುಲ್ ಗಾಂಧಿಗೆ ಪತ್ರ ಬರೆದಿರುವುದನ್ನು ಗಮನಿಸಿದ್ದೇನೆ. ಅವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ, ಕಾಂಗ್ರೆಸ್‌ನಲ್ಲಿ ಯಾವುದೇ ತಾರತಮ್ಯ ಆಗಿಲ್ಲ. ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗಲಾಗುತ್ತಿದೆ. ಒಬ್ಬೊಬ್ಬರು ಒಬ್ಬೊಬ್ಬರ ಪರ ಮಾತ ನಾಡುತ್ತಿದ್ದಾರೆ. ಒಬ್ಬರು ನನ್ನ ಪರ ಮಾತನಾಡುತ್ತಾರೆ, ಇನ್ನೊಬ್ಬರು ಮತ್ತೊಬ್ಬರ ಪರ ಮಾತನಾಡುತ್ತಾರೆ ಅದನ್ನೆಲ್ಲ ಪರಿಗಣಿಸಬೇಕಾಗಿಲ್ಲ ಎಂದು ಸಚಿವ ಜಮೀರ್ ತಿಳಿಸಿದರು.

ಡಿಕೆಶಿಗೆ ಜಮೀರ್ ಪರೋಕ್ಷ ಗುದ್ದು: ಸದ್ಯದ ಪರಸ್ಥಿತಿಯಲ್ಲಿ ಎಲ್ಲರ ಅಭಿಪ್ರಾಯ ನಜೀರ್ ಅಹಮದ್ ಪಕ್ಷದಲ್ಲಿ ಹಿರಿಯರಿದ್ದಾರೆ. ಅವರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದರೆ ಕ್ರಮ ಕೈಗೊಳ್ಳಲು ಅದಕ್ಕೆ ಒಂದು ಮಾನದಂಡವಿದೆ. ಕ್ರಮಕ್ಕೂ ಮೊದಲು ನೋಟಿಸ್ ಕೊಡಬೇಕಿತ್ತು, ಅವರ ಅಭಿಪ್ರಾಯ ಪಡೆದುಕೊಳ್ಳಬೇಕಾಗಿತ್ತು. ಬಳಿಕ ಕ್ರಮ ಕೈಗೊಳ್ಳಬೇಕಾಗಿತ್ತು ಎನ್ನುವ ಅಭಿಪ್ರಾಯ ಇದೆ. ಅವರು ಪಕ್ಷ ವಿರೋಧಿ ಕೆಲಸ ಮಾಡಿದ್ರೆ, ತೆಗೆದಿದ್ದು ತಪ್ಪು ಎಂದು ನಾನು ಹೇಳಲ್ಲ. ಪಕ್ಷ ಏನಾದ್ರೂ ತೀರ್ಮಾನ ಮಾಡಿದ್ರೆ ಯೋಚನೆ ಮಾಡಿ ಮಾಡಿರುತ್ತೆ ಎನ್ನುವ ನಂಬಿಕೆಯಿದೆ ಎಂದು ಡಿಕೆಶಿಗೆ ಜಮೀರ್ ತಿರುಗೇಟು ನೀಡಿದರು.

ಸ್ವಪಕ್ಷದವರ ವಿರುದ್ಧವೇ ಹರಿಹಾಯ್ದ ಜಮೀರ್: ದಾವಣಗೆರೆ ಉಪ ಚುನಾವಣೆ ಬಳಿಕ ಪತ್ರಿಕಾಗೋಷ್ಠಿ ನಡೆಸಿದ್ದ ಕೆಲವು ಮುಸ್ಲಿಂ ಶಾಸಕರ ವಿರುದ್ಧವೂ ಜಮೀರ್ ಹರಿಹಾಯ್ದಿದ್ದಾರೆ. ಪತ್ರಿಕಾಗೋಷ್ಠಿ ನಡೆಸಿದವರ ಬಳಿ ಯಾರದ್ದಾದರೂ ದಾಖಲೆ ಇದ್ದರೆ ಕೊಡಲಿ. ಯಾರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆ ಎನ್ನುವುದನ್ನು ಬಹಿರಂಗಪಡಿಸಲಿ. ನನ್ನ ಹೆಸರು ಹೇಳಿದ್ರೆ ನಾನು ಉತ್ತರ ಕೊಡುತ್ತಿದ್ದೆ ಎಂದು ತಿರುಗೇಟು ನೀಡಿದರು.

ಮುಸ್ಲಿಂ ಮುಖಂಡರ ಸಸ್ಪೆಂಡ್ ರದ್ದು ಸಾಧ್ಯತೆ: ಸತೀಶ್

ಮೈಸೂರು: ದಾವಣಗೆರೆ ಉಪಚುನಾವಣೆ ಫಲಿತಾಂಶ ಹೊರಬಂದ ಬಳಿಕ, ಅಲ್ಲಿನ ಮುಸ್ಲಿಂ ಮುಖಂಡರ ಅಮಾನತು ಆದೇಶವನ್ನು ಪಕ್ಷದ ವರಿಷ್ಠರು ಹಿಂತೆಗೆದುಕೊಳ್ಳಬಹುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ಉಪಚುನಾವಣೆಯಲ್ಲಿ ಅಬ್ದುಲ್ ಜಬ್ಬಾರ್ ಸೇರಿದಂತೆ ಕೇವಲ ಅಲ್ಪಸಂಖ್ಯಾತ ನಾಯಕರ ಮೇಲಿನ ಕ್ರಮವು ಮುಸ್ಲಿಂ ಮತಗಳ ಮೇಲೆ ಖಂಡಿತ ಪರಿಣಾಮ ಬೀರಲಿದೆ. ಈ ಕಾರಣಕ್ಕೆ ನಾವೆಲ್ಲ ಮಧ್ಯಸ್ಥಿಕೆ ವಹಿಸಿದ್ದೇವೆ. ಸಸ್ಪೆಂಡ್ ಆಗಿದ್ದವರು ಪಕ್ಷಕ್ಕೆ ವಾಪಸ್ ಬಂದಿದ್ದಾರೆ. ಈ ಹಿಂದೆಯೂ ಹೀಗೆ ಸಸ್ಪೆಂಡ್ ಆಗಿದ್ದವರು ಪಕ್ಷಕ್ಕೆ ವಾಪಸ್ ಆಗಿದ್ದಾರೆ. ಜಬ್ಬಾರ್ ಕೂಡ ಮರಳಬಹುದು. ಸದ್ಯ ಅವರನ್ನು ಹೊರತುಪಡಿಸಿ ಉಳಿದ ಯಾರ ಮೇಲೂ ಕ್ರಮ ಕೈಗೊಂಡಿಲ್ಲ ಎಂದರು.

4 ವಿವಾಹಗಳಿಗೆ ಅಂತ್ಯ ಖಚಿತ: ಅಮಿತ್ ಶಾ

ಪುಟ ೧➡ ಕುಲ್ಟಿಯಲ್ಲಿ ಚುನಾವಣಾ ರ್‍ಯಾಲಿ ಉದ್ದೇಶಿಸಿ ಸಚಿವ ಶಾ ಮಾತನಾಡಿದರು.

ಗೂರ್ಖಾ ಸಮಸ್ಯೆಗೆ 6 ತಿಂಗಳಲ್ಲಿ ಪರಿಹಾರ: ಗುಡ್ಡಗಾಡು ಪ್ರದೇಶ ಕುರ್ಸೆಯೊಂಗ್‌ನಲ್ಲಿ ರ್‍ಯಾಲಿ ಉದ್ದೇಶಿಸಿ, ಬಿಜೆಪಿ ಸರಕಾರ ರಚನೆಯಾದಲ್ಲಿ ದೀರ್ಘಕಾಲೀನ ಗೂರ್ಖಾ ಸಮಸ್ಯೆಯನ್ನು ಆರು ತಿಂಗಳೊಳಗೆ ಬಗೆಹರಿಸುವುದಾಗಿ ಸಚಿವ ಶಾ ಭರವಸೆ ನೀಡಿದರು. ಗೂರ್ಖಾ ಸಮುದಾಯದ ಆಶೋತ್ತರಗಳಿಗೆ ಪೂರಕವಾಗಿ ಶಾಶ್ವತ ರಾಜಕೀಯ ಪರಿಹಾರ ಕಂಡುಕೊಳ್ಳಲು ತನ್ನ ಪಕ್ಷ ಶ್ರಮಿಸಲಿದೆ. ಈ ಮೂಲಕ ಪ್ರತಿ ಗೂರ್ಖಾ ಬಂಧುವಿನ ಮೊಗದಲ್ಲಿ ಮಂದಹಾಸ ಮೂಡಿಸಲಿದ್ದೇವೆ ಎಂದು ಡಾರ್ಜಿಲಿಂಗ್ ಬೆಟ್ಟದಲ್ಲಿ ಮತದಾರರಿಗೆ ಭರವಸೆ ನೀಡಿದರು. ಪಶ್ಚಿಮ ಬಂಗಾಳದ ಆಳುವ ಟಿಎಂಸಿ ಸರಕಾರದ ದುರಾಡಳಿತ, ಐಡೆಂಟಿಟಿ ಪಾಲಿಟಿಕ್ಸ್, ತುಷ್ಟೀಕರಣ ರಾಜನೀತಿಗಳನ್ನು ಬಿಜೆಪಿ ತನ್ನ ಪ್ರಚಾರ ಅಭಿಯಾನ-ರ್‍ಯಾಲಿಗಳಲ್ಲಿ ತೀವ್ರವಾಗಿ ತರಾಟೆಗೆತ್ತಿಕೊಂಡಿದೆ. ಯುಸಿಸಿ ಜಾರಿ ಭರವಸೆಗೆ ತುಂಬು ಪ್ರಾಧಾನ್ಯತೆ ನೀಡಿದೆ ಅಥವಾ ಯುಸಿಸಿಯು ಬಿಜೆಪಿಯ ವಿಸ್ತೃತ ಪ್ರಚಾರ ಅಭಿಯಾನದ ಪ್ರಮುಖ ಭಾಗವಾಗಿದೆ. ಏಕರೂಪದ ಕಾನೂನು ಮತ್ತು ಲಿಂಗ ನ್ಯಾಯಕ್ಕೂ ಬಿಜೆಪಿ ಪ್ರಾಮುಖ್ಯತೆ ನೀಡಿದೆ. ವಿವಾಹ, ವಿಚ್ಛೇದನ, ದತ್ತುಸ್ವೀಕಾರ, ವಾರಸುತನ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿ, ನಾಗರಿಕರಿಗೆ ಸಮಾನ ಕಾನೂನನ್ನು ಅನ್ವಯಿಸುವುದು ಸಮಾನ ನಾಗರಿಕ ಸಂಹಿತೆಯ ಮೂಲೋದ್ದೇಶವಾಗಿದೆ. ಬಿಜೆಪಿಯ ದೀರ್ಘಕಾಲೀನ ರಾಜಕೀಯ ಭರವಸೆಗಳಲ್ಲಿ ಇದೂ ಒಂದಾಗಿದ್ದು, ನಿರಂತರವಾಗಿ ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.

ಮೋದಿ ಟೆರರಿಸ್ಟ್ ಖರ್ಗೆ ವ್ಯಗ್ರೋಕ್ತಿ

ಪುಟ ೧➡ 'ಅವರು ಎಡಿಎಂಕೆ ಮೋದಿ ಜತೆ ಹೇಗೆ ತಾನೆ ಕೈಜೋಡಿಸುತ್ತಾರೆ? ಅವರು ಒಬ್ಬ ಭಯೋತ್ಪಾದಕ. ಅವರು ಸಮಾನತೆಯಲ್ಲಿ ನಂಬಿಕೆ ಹೊಂದಿಲ್ಲ. ಅವರು ಪ್ರಜಾತಂತ್ರವನ್ನು ದುರ್ಬಲಗೊಳಿಸುತ್ತಿದ್ದಾರೆ. ಅವರು ಅಣ್ಣಾದುರೈ, ಕಾಮರಾಜ್, ಪೆರಿಯಾರ್, ಕಲೈಗ್ನಾರ್, ಬಾಬಾ ಸಾಹೇಬ್ ಅಂಬೇಡ್ಕರ್ ಅವರತತ್ತ್ವಗಳನ್ನು ದುರ್ಬಲಗೊಳಿಸುತ್ತಿದ್ದಾರೆ...' ಎಂದೆಲ್ಲ ಆರೋಪಿಸಿದ್ದರು.

ಪ್ರಧಾನಿಯವರು 'ಬೆದರಿಕೆ'ಗಳನ್ನು ಒಡ್ಡುತ್ತಿರುತ್ತಾರೆ. ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಿದ್ದಾರೆ... ನಾನು ಈ ಅರ್ಥದಲ್ಲಿ ಹೇಳಿದ್ದು... ಅವರು ಜನರನ್ನು, ರಾಜಕೀಯ ಪಕ್ಷಗಳನ್ನು ಹೆದರಿಸುತ್ತಾರೆ ಎಂದು ಖರ್ಗೆ ಸಮಜಾಯಿಷಿ ನೀಡಲೆತ್ನಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರು, ಇದು ಕಾಂಗ್ರೆಸ್‌ನ ಇನ್ನೊಂದು ಕ್ರೂರ ಪ್ರದರ್ಶನವಾಗಿದ್ದು, 'ಖರ್ಗೆ ಸಾರ್ವಜನಿಕ ಚರ್ಚೆಯನ್ನು ಇಷ್ಟೊಂದು ಕೀಳು ಮಟ್ಟಕ್ಕೆ ಎಳೆದಿರುವುದು ಇದೇ ಮೊದಲಲ್ಲ, ಈ ಹೇಳಿಕೆಯೊಂದಿಗೆ ಅವರು ತಮ್ಮನ್ನು ತಾವು ಕುಗ್ಗಿಸಿಕೊಂಡಿಲ್ಲ. ಬದಲಿಗೆ ಕಾಂಗ್ರೆಸ್‌ನ ಒಂದು ನಿರ್ದಿಷ್ಟ ವಿಧಾನವನ್ನು ಬಹಿರಂಗಪಡಿಸಿದ್ದಾರೆ. ಅರ್ಥಪೂರ್ಣ ಚರ್ಚೆಯ ಬದಲು ಭಾರತದ ಅತ್ಯಂತ ಜನಪ್ರಿಯ ನಾಯಕನ ವಿರುದ್ಧ ನಿಂದನೆ ಮತ್ತು ದೂಷಣೆ ರಾಜಕೀಯವನ್ನು ಅವಮಾನಕ್ಕೆ ಇಳಿಸಿದಾಗ, ಅದು ಶಕ್ತಿಯನ್ನು ಪ್ರತಿಬಿಂಬಿಸುವುದಿಲ್ಲ, ಬದಲಿಗೆ ಆಳವಾದ ಹತಾಶೆ, ವಿಶ್ವಾಸಾರ್ಹ ಪರ್ಯಾಯಗಳ ಕೊರತೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಪೋಸ್ಟ್ ಮಾಡಿದ್ದಾರೆ. ತಮಿಳುನಾಡಿನಲ್ಲಿ ಎಡಿಎಂಕೆ- ಬಿಜೆಪಿ ಮೈತ್ರಿಕೂಟದ ಸ್ಪರ್ಧೆ ಡಿಎಂಕೆ-ಕಾಂಗ್ರೆಸ್ ಕೂಟಕ್ಕೆ ಆತಂಕ ತಂದೊಡ್ಡಿದೆ ಎಂಬ ವರದಿಗಳ ನಡುವೆಯೇ ಕಾಂಗ್ರೆಸ್ ನಾಯಕರು ಮೋದಿಯವರನ್ನು ಗುರಿ ಮಾಡಿ ದೂಷಿಸುತ್ತಿದ್ದಾರೆ. ರಾಹುಲ್ ಗಾಂಧಿ ಕೂಡ ಪ್ರಧಾನಿ ಮೋದಿ ಟ್ರಂಪ್‌ಗೆ ಹೆದರಿ ಅವರು ಹೇಳಿದಂತೆ ಕೇಳುತ್ತಿದ್ದಾರೆ. ಆರೆಸ್ಸೆಸ್ ದ್ರಾವಿಡರನ್ನು ಆಳಲು ಯತ್ನಿಸುತ್ತಿದೆ ಎಂದು ಆರೋಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ನಡುವೆ ತೆಲಂಗಾಣ ಕಾಂಗ್ರೆಸ್ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಪ್ರಧಾನಿ ಮೋದಿಯವರನ್ನು ರಾಕ್ಷಸ ಮಾರೀಚನಿಗೆ ಹೋಲಿಸಿ ನಿಂದಿಸಿದ್ದಾರೆ. ರೇವಂತ್ ರೆಡ್ಡಿ ಹೇಳಿಕೆಯನ್ನು ಖಂಡಿಸಿದ ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಕಾಂಗ್ರೆಸ್‌ನೊಳಗಿನ ಒಂದು ಮೂಲ ತಿಳಿಸಿರುವಂತೆ, ವಿರೋಧ ಪಕ್ಷದ ಎಲ್ಲಾ ನಾಯಕರಿಗೂ, ಪಕ್ಷದ ಅಧ್ಯಕ್ಷರಿಗಿಂತಲೂ 'ಮೇಲಿರುವ' ಹೈಕಮಾಂಡ್‌ನಿಂದ ಮೋದಿಯನ್ನು ಗುರಿಯಾಗಿಸಲು ಸೂಚನೆ ನೀಡಲಾಗಿದೆ ಎಂದಿದ್ದಾರೆ. ಕಾಂಗ್ರೆಸ್ ಸಿಎಂ ದ್ವೇಷದ ರಾಜಕೀಯವನ್ನು ಹರಡುತ್ತಿದ್ದಾರೆ ಎಂದು ಆರೋಪಿಸಿದ ಪೂನಾವಾಲಾ, ಪ್ರಧಾನಿ ಮೋದಿ ಅವರ ಬಗ್ಗೆ ಅವಹೇಳನಕಾರಿ ಭಾಷೆ ಬಳಸಿ ರೇವಂತ್ ರೆಡ್ಡಿ ಪ್ರಧಾನಿಯ ಸಂವಿಧಾನಿಕ ಹುದ್ದೆಗೆ ಅವಮಾನ ಮಾಡಿದ್ದಾರೆ ಎಂದು ವಿಡಿಯೋ ಸಂದೇಶವೊಂದರಲ್ಲಿ ತಿಳಿಸಿದ್ದಾರೆ.

ಪ್ರಧಾನಿ ವೈಯಕ್ತಿಕ ನಿಂದನೆ ಮಾಡಿಲ್ಲ: ಖರ್ಗೆ ಸ್ಪಷ್ಟನೆ

ಕಲಬುರಗಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ವೈಯಕ್ತಿಕವಾಗಿ ಭಯೋತ್ಪಾದಕ ಎಂದು ಕರೆದಿಲ್ಲ. ಆದರೆ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳ ಮೂಲಕ ಜನರ ಮೇಲೆ ನಡೆಸುತ್ತಿರುವ ದೌರ್ಜನ್ಯವು ಭಯೋತ್ಪಾದನೆಯ ಸಂಕೇತವಾಗಿದೆ ಎಂದಷ್ಟೇ ಹೇಳಿದ್ದೇನೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟನೆ ನೀಡಿದರು.



ನಗರದಲ್ಲಿ ಮಂಗಳವಾರ ಸಂಜೆ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದರು. ಪ್ರಸ್ತುತ ಕೇಂದ್ರ ಸರ್ಕಾರವು ವಿರೋಧ ಪಕ್ಷದ ರಾಜಕಾರಣಿಗಳನ್ನು ಮತ್ತು ಅಭ್ಯರ್ಥಿಗಳನ್ನು ಗುರಿಯಾಗಿಸಿಕೊಂಡು ಭಯಪಡಿಸುವ ತಂತ್ರ ಅನುಸರಿಸುತ್ತಿದೆ. ದೇಶದಲ್ಲಿ ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ (ಐಟಿ) ಹಾಗೂ ಸಿಬಿಐ ದಾಳಿಗಳ ಮೂಲಕ ತೆರಿಗೆ ಭಯೋತ್ಪಾದನೆ ನಡೆಸಲಾಗುತ್ತಿದೆ. ಇಂತಹ ಬೆದರಿಕೆಯ ವಾತಾವರಣಕ್ಕೆ ಪ್ರಧಾನಿಯವರೇ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಗಂಭೀರವಾಗಿ ಆರೋಪಿಸಿದರು. ಚುನಾವಣಾ ಸಂದರ್ಭದಲ್ಲಿ ಜನರ ಧ್ವನಿಯನ್ನು ಅಡಗಿಸಲು ಮತ್ತು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಇಂತಹ ಮಾರ್ಗಗಳನ್ನು ಬಳಸಲಾಗುತ್ತಿದೆ. ದಾಳಿಗಳ ಮೂಲಕ ಅಭ್ಯರ್ಥಿಗಳಲ್ಲಿ ಆತಂಕ ಮೂಡಿಸಿ ಚುನಾವಣೆಯಲ್ಲಿ ಗೆಲ್ಲುವ ಪ್ರಯತ್ನ ನಡೆಯುತ್ತಿದೆ. ಜನರನ್ನು ಭಯಪಡಿಸುವ ಈ ಪದ್ಧತಿಯನ್ನು ನಾನು ಟೀಕಿಸಿದ್ದೇನೆಯೇ ಹೊರತು ವೈಯಕ್ತಿಕ ನಿಂದನೆ ಮಾಡಿಲ್ಲ ಎಂದರು.

ಸಿಎಂ ಜತೆ ಚರ್ಚಿಸಿ ಅಂತಿಮ ನಿರ್ಧಾರ: ಮಧು ಬಂಗಾರಪ್ಪ

ಪುಟ ೧➡ **ವಿದ್ಯಾರ್ಥಿಗಳಿಗೆ ಭರವಸೆ:** ಈ ಬೆಳವಣಿಗೆಯಿಂದ ವಿದ್ಯಾರ್ಥಿಗಳು ಆತಂಕಗೊಳ್ಳಬಾರದು ಎಂದು ಸಚಿವ ಮಧು ಬಂಗಾರಪ್ಪ ಮನವಿ ಮಾಡಿದರು. ಯಾವುದೇ ಕಾರಣಕ್ಕೂ ಮಕ್ಕಳು ಗಾಬರಿಯಾಗಬಾರದು. ಆದೇಶ ಈಗಷ್ಟೇ ಬಂದಿದೆ. ಅದರ ಪ್ರತಿ ನಮಗೆ ಸಿಗಬೇಕು. ನಂತರ ಸಂಪೂರ್ಣ ಪರಿಶೀಲನೆ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಮಧು ಬಂಗಾರಪ್ಪ ಹೇಳಿದರು.

> **ನ್ಯಾಯಾಲಯವು 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ತೃತೀಯ ಭಾಷೆಗಳ ಅಂಕಗಳಿಗೆ ಸಂಬಂಧಿಸಿದಂತೆ ಮೊದಲು ಇದ್ದಂತೆ ಅಂಕಗಳನ್ನು ನೀಡಲು, ಅಂಕಪಟ್ಟಿಯಲ್ಲಿ ಅಂಕಗಳನ್ನು ನಮೂದಿಸಿ ಫಲಿತಾಂಶ ಘೋಷಣೆ ಮಾಡಲು ಸರಕಾರಕ್ಕೆ ಸೂಚಿಸಿರುವ ಆದೇಶ ಸ್ವಾಗತಿಸುತ್ತೇವೆ.**
>
> ■ **ಚಿದಾನಂದ ಪಾಟೀಲ್,** ರಾಜ್ಯ ಉಪಾಧ್ಯಕ್ಷರು, ದೇಶೀಯ ಭಾಷೆ ಹಿತರಕ್ಷಣಾ ಒಕ್ಕೂಟ

ಏ.25ರಂದು ರಾಜ್ಯಾದ್ಯಂತ ಬಿಜೆಪಿ ಆಕ್ರೋಶ ಯಾತ್ರೆ

ಪುಟ ೧➡ ಅಲ್ಲದೆ, ಬೆಂಗಳೂರು, ಹುಬ್ಬಳ್ಳಿಯಲ್ಲಿ ಬೃಹತ್ ರ್‍ಯಾಲಿ ಸಂಘಟಿಸುವ ಕುರಿತು ಚರ್ಚೆ ನಡೆಯುತ್ತಿದೆ ಎಂದರು. ಈ ಸಂಬಂಧ ಕೇಂದ್ರ ಸಚಿವರು, ಸಂಸದರು ವಿಭಾಗ ಕೇಂದ್ರಗಳಲ್ಲಿ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ. ಮಂಗಳವಾರ (ಏ.21) ಶಿವಮೊಗ್ಗದಲ್ಲಿ ಸಂಸದ ಬಿ.ವೈ.ರಾಘವೇಂದ್ರ, ಮಂಗಳೂರಿನಲ್ಲಿ ಸಂಸದ ಬ್ರಿಜೇಶ್ ಚೌಟ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಬುಧವಾರ ಹಾಗೂ ಗುರುವಾರ ಸಂಸದರಾದ ಜಗದೀಶ ಶೆಟ್ಟರ್- ಬೆಳಗಾವಿ, ಬಸವರಾಜ ಬೊಮ್ಮಾಯಿ ಅವರು ಹಾವೇರಿಯಲ್ಲಿ, ಕೇಂದ್ರ ಸಚಿವ ಸೋಮಣ್ಣ ಅವರು ಏ.23ರಂದು ಮೈಸೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಕಾಂಗ್ರೆಸ್, ಅವರ ಮಿತ್ರಪಕ್ಷಗಳ ಮಹಿಳಾ ವಿರೋಧಿ ನೀತಿಯ ಕುರಿತು ತಿಳಿಸಲಿದ್ದಾರೆ ಎಂದು ವಿವರ ನೀಡಿದರು. ಕಾಂಗ್ರೆಸ್ ಪಕ್ಷವು ಇತಿಹಾಸದ ಉದ್ದಕ್ಕೂ ತನ್ನ ಮಹಿಳಾ ವಿರೋಧಿ ಧೋರಣೆ ಪ್ರದರ್ಶನ ಮಾಡಿದ ಕುರಿತು ತಿಳಿಸಲಿದ್ದಾರೆ ಎಂದರು. ಇಂದಿರಾ ಗಾಂಧಿ, ಸೋನಿಯಾಗಾಂಧಿ, ಪ್ರಿಯಾಂಕಾ ಗಾಂಧಿ ಅವರು ಮಾತ್ರ ಮಹಿಳೆಯರು ಎಂದು ಕಾಂಗ್ರೆಸ್ ಭಾವಿಸಿದಂತಿದೆ.

ಹ್ಯಾರಿಸ್ ಮನೆಯಲ್ಲಿದ್ದ ₹37 ಲಕ್ಷ ನಗದು ವಶ

ಪುಟ ೧➡ ಆತನ ಮನೆಯಲ್ಲಿ ಎರಡು ಲ್ಯಾಪ್‌ಟಾಪ್ ಸೇರಿದಂತೆ ಪ್ರಮುಖ ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಈ ಮಹತ್ವದ ಶೋಧದ ಸಂದರ್ಭದಲ್ಲಿ ಅಧಿಕಾರಿಗಳು ಹ್ಯಾರಿಸ್ ಅವರ ನಿವಾಸದಿಂದ ಸುಮಾರು 37 ಲಕ್ಷ ರೂ. ನಗದು ಸೇರಿದಂತೆ ವಿವಿಧ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ದಾಖಲೆಗಳು, ಆಸ್ತಿ ಪತ್ರಗಳು ಮತ್ತು ವಿವಿಧ ಕಂಪನಿಗಳಲ್ಲಿನ ಹೂಡಿಕೆಗಳ ವಿವರಗಳನ್ನು ಒಳಗೊಂಡ ಕಡತಗಳನ್ನು ಅಧಿಕಾರಿಗಳು ತಮ್ಮ ವಶಕ್ಕೆ ಪಡೆದಿದ್ದಾರೆ.

ಅಲ್ಲದೆ, ಉದ್ಯಮಿ ರಾಯ್ ಎಂಬುವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನೂ ತನಿಖಾ ತಂಡ ಕಲೆಹಾಕಿರುವುದು ಪ್ರಕರಣಕ್ಕೆ ಹೊಸ ತಿರುವು ನೀಡಿದೆ. ಈ ಇಡೀ ದಾಳಿಯ ಕೇಂದ್ರಬಿಂದು ಬಿಟ್‌ಕಾಯಿನ್ ಹಗರಣದ ಕಿಂಗ್‌ಪಿನ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ. ಜೈಲಿನಿಂದ ಹೊರಬಂದ ನಂತರವೂ ಅತ್ಯಂತ ಐಷಾರಾಮಿ ಜೀವನ ನಡೆಸುತ್ತಿದ್ದು, ಆತನಿಗೆ ಹಣಕಾಸಿನ ನೆರವು ನೀಡುತ್ತಿರುವುದು ಯಾರು ಎಂಬ ನಿಟ್ಟಿನಲ್ಲಿ ಇಡಿ ತನಿಖೆ ಆರಂಭಿಸಿತ್ತು. ಶ್ರೀಕಿ ಮತ್ತು ನಲಪಾಡ್ ನಡುವೆ ಸುಮಾರು 4.65 ಕೋಟಿ ರೂ.ಗಳಿಗೂ ಅಧಿಕ ಹಣಕಾಸು ವ್ಯವಹಾರ ನಡೆದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಹಿಂದೆ ಲಾವೆಲ್ಲೆ ರಸ್ತೆಯ ಶೋರೂಂನಲ್ಲಿ 57 ಲಕ್ಷ ರೂ. ನೀಡಿ ಪೋರ್ಷೆ ಕಾರು ಖರೀದಿಸಿದ ಪ್ರಕರಣ ಕೂಡ ಈಗ ತನಿಖೆಯ ವ್ಯಾಪ್ತಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ರಾಜಕೀಯ ದುರುದ್ದೇಶ: ನಲಪಾಡ್


ಇಡಿ ದಾಳಿಯ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಮೊಹಮ್ಮದ್ ನಲಪಾಡ್, ಇದು ರಾಜಕೀಯಪ್ರೇರಿತ ಸಂಚು. ತಮ್ಮ ತಂದೆ ಎನ್.ಎ. ಹ್ಯಾರಿಸ್ ಅವರಿಗೆ ಸಚಿವ ಸ್ಥಾನ ಸಿಗದಂತೆ ತಡೆಯಲು ಬಿಜೆಪಿಯವರು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಯೂತ್ ಕಾಂಗ್ರೆಸ್ ಅಧ್ಯಕ್ಷನಾಗಿ ತಾನು ಮಾಡುತ್ತಿರುವ ಕೆಲಸಗಳನ್ನು ಸಹಿಸಲಾರದೆ ಇಂತಹ ಕೇಸುಗಳ ಮೂಲಕ ತಮ್ಮನ್ನು ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ನನ್ನ ಮನೆಯಲ್ಲಿ ಯಾವುದೇ ನಗದು ಸಿಕ್ಕಿಲ್ಲ, ಅಧಿಕಾರಿಗಳು ಕೇವಲ ಎರಡು ಮೊಬೈಲ್ ಫೋನ್‌ಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಬಿಟ್‌ಕಾಯಿನ್ ಹಗರಣ ರಚನೆಯಾಗಿತ್ತು!

ಗೃಹ ಸಚಿವ ಡಾ. ಜಿ.ಪರಮೇಶ್ವರ ಇಡಿ ದಾಳಿ ಬಗ್ಗೆ ಪ್ರತಿಕ್ರಿಯೆ ನೀಡಿ, ಬಿಟ್ ಕಾಯಿನ್ ಹಗರಣ ಕುರಿತಂತೆ ರಾಜ್ಯದಲ್ಲಿ ಎಸ್‌ಐಟಿ ರಚನೆ ಮಾಡಲಾಗಿತ್ತು. ತನಿಖೆ ಕೊನೆ ಹಂತದಲ್ಲಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿ ಹೊಂದಿದೆ. ಅನೇಕ ವಿಚಾರಗಳಲ್ಲಿ ಮಾಹಿತಿಯನ್ನು ಕಲೆ ಹಾಕಿ ಅಂತಿಮ ವರದಿ ಕೊಡಬೇಕು. ಇದು ಅಂತಿಮ ಹಂತದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಗತ್ಯ ಮಾಹಿತಿ ಸಿಗುವವರೆಗೂ ತನಿಖೆ ನಡೆಸುತ್ತಾರೆ. ತಾಂತ್ರಿಕ ವಿಚಾರವಿರುವುದರಿಂದ ಮಾಹಿತಿಗಳನ್ನು ಕಲೆ ಹಾಕುವುದರಲ್ಲಿ ವಿಳಂಬವಾಗಿದೆ. ಶೀಘ್ರವಾಗಿ ಪೂರ್ಣಗೊಳಿಸಿ, ಮಧ್ಯಂತರ ಚಾರ್ಜ್‌ಶೀಟ್ ಸಲ್ಲಿಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಪರಿಹಾರ ತಾರತಮ್ಯಕ್ಕೆ ಜೆಡಿಎಸ್ ಶಾಸಕ ಶರಣಗೌಡ ಅತೃಪ್ತಿ

ಪುಟ ೧➡ ನೀವು ಕರ್ನಾಟಕದ ಮುಖ್ಯಮಂತ್ರಿಗಳೋ ಅಥವಾ ಮೈಸೂರು ಜಿಲ್ಲೆಗೆ ಮಾತ್ರ ಮುಖ್ಯಮಂತ್ರಿಗಳೋ ಎನ್ನುವ ಅನುಮಾನವನ್ನು ಈ ನಮ್ಮ ಕಲ್ಯಾಣ ಕರ್ನಾಟಕದ ಜನ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ ಎಂದು ಶಾಸಕ ಶರಣಗೌಡ ಕಂದಕೂರ್ ಸಿಎಂಗೆ ಪತ್ರ ಬರೆದಿದ್ದರು.



ಮಾ.29ರಂದು ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ನಗನೂರು ಗ್ರಾಮದ ರೈತನ ಕೃಷಿ ಹೊಂಡದಲ್ಲಿ ತಿಳಿಯದೇ ಬಿಸಿಲಿನ ತಾಪದಿಂದ ಈಜಾಡಲು ಹೋಗಿ ಒಂದೇ ಕುಟುಂಬದ ನಾಲ್ವರು ದಲಿತ ಮಕ್ಕಳು (ಪರಿಶಿಷ್ಟ ಪಂಗಡ) ಮೃತಪಟ್ಟಿದ್ದು, ಏ.17ರಂದು ಅದೇ ಸುರಪೂರ ತಾಲೂಕಿನ ಗೋಪಾಲಸ್ವಾಮಿ ದೇವಸ್ಥಾನದ ದರ್ಶನಕ್ಕೆ ಸಿರವಾರ ಗ್ರಾಮದ ಒಂದೇ ಕುಟುಂಬದ 9 ಜನರು ರಸ್ತೆ ಅಪಘಾತದಲ್ಲಿ ಸಜೀವ ದಹನಗೊಂಡರು.

ಈ ಘಟನೆಗಳು ಸಂಭವಿಸಿ ಹಲವು ದಿನ ಕಳೆದರೂ ಮೃತ ಕುಟುಂಬಗಳಿಗೆ ಪರಿಹಾರಧನ ಘೋಷಣೆ ಮಾಡುವುದಾಗಲಿ ಅಥವಾ ಕನಿಷ್ಠ ಸಾಂತ್ವನ ತಿಳಿಸುವುದಾಗಲಿ ಇಲ್ಲಿಯವರೆಗೆ ಆಗಿಲ್ಲ ಎಂದು ಕಂದಕೂರ್ ಪತ್ರ ಬರೆಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರು.

ಜಾಲತಾಣದಲ್ಲಿಯೂ ಆಕ್ರೋಶ: ಪರಿಹಾರ ಘೋಷಣೆ ವಿಚಾರವಾಗಿ ಸಾಮಾಜಿಕ ಜಾಲತಾಣದಲ್ಲಿಯೂ ಅಕ್ರೋಶ ವ್ಯಕ್ತವಾಗಿದೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸತ್ತರೆ ಪರಿಹಾರ ಸಿಗುವುದಿಲ್ಲ. ಮೈಸೂರು ಭಾಗದವರಿಗೆ ಮಾತ್ರ ಪರಿಹಾರ ಸಿಗುತ್ತದೆ. ಈ ಭಾಗದವರ ಜೀವ ಜೀವವಲ್ಲ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅದರಲ್ಲೂ ಒಂದು ನಿರ್ದಿಷ್ಟ ಸಮುದಾಯದವರಿಗೆ ಮಾತ್ರ ಪರಿಹಾರ ಬೇಗ ಸಿಗುತ್ತದೆ ಎಂದು ಜಾಲತಾಣದಲ್ಲಿ ಸರ್ಕಾರದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದ.ಕ.ದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮ: ಡಿಜಿಪಿ ಸಲೀಂ ಶ್ಲಾಘನೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ಕಾನೂನು ಮತ್ತು ಸುವ್ಯವಸ್ಥೆ ಅತ್ಯಂತ ಉತ್ತಮವಾಗಿದೆ. ಇದೇ ರೀತಿ ಶಾಂತಿಯ ವಾತಾವರಣ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ತಿಳಿಸಿದ್ದಾರೆ.



ಮಂಗಳೂರಿನಲ್ಲಿ ಮಂಗಳವಾರ ನಡೆದ ಪಶ್ಚಿಮ ವಲಯ ಪೊಲೀಸ್ ಇಲಾಖೆ ಅಧಿಕಾರಿಗಳ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ವಿಶೇಷ ಒತ್ತು ನೀಡುತ್ತಿದ್ದಾರೆ. ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಇರಿಸಿಕೊಳ್ಳುವಂತೆ ಪೊಲೀಸರಿಗೆ ನಿರ್ದೇಶನ ನೀಡಲಾಗಿದೆ. ಎಂದರು.

ಉತ್ತರ ಕರ್ನಾಟಕ ಭಾಗದ ಹಲವು ಮಂದಿ ಪೊಲೀಸ್ ಸಿಬ್ಬಂದಿಗಳು ಹಾಗೂ ಅವರ ಕುಟುಂಬದವರು ವರ್ಗಾವಣೆ ಕೋರಿ ಮನವಿ ಸಲ್ಲಿಸಿದ್ದಾರೆ. ಈ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಗಿದೆ. ಹಂತ ಹಂತವಾಗಿ ಅವರ ವರ್ಗಾವಣೆಗೆ ಅಗತ್ಯ ಕ್ರಮ ಕೈ ಗೊಳ್ಳಲಾಗುವುದು ಎಂದು ಡಿಜಿಪಿ ತಿಳಿಸಿದರು.

ದೂರಿಗಾಗಿ ಕಾದರು: ಮಂಗಳೂರಿನಲ್ಲಿ ಪಶ್ಚಿಮ ವಲಯ ಪೊಲೀಸ್ ಇಲಾಖೆ ಅಧಿಕಾರಿಗಳ ಸಭೆಗೆ ಮಂಗಳವಾರ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಆಗಮಿಸಿದ ವೇಳೆ ಕಳೆದ ಮೂರು ತಿಂಗಳಿಂದ ವರ್ಗಾವಣೆ ಆದೇಶ ಪತ್ರ ಬಂದರೂ ನಗರ ಪೊಲೀಸ್ ಕಮಿಷನರ್ ಕರ್ತವ್ಯದಿಂದ ಬಿಡುಗಡೆಗೊಳಿಸಿಲ್ಲ ಎಂದು ಆರೋಪಿಸಿ ವರ್ಗಾವಣೆ ಆದೇಶ ಪಡೆದ ಪೊಲೀಸರ ಕುಟುಂಬಸ್ಥರು ಅಸಮಾಧಾನ ವ್ಯಕ್ತಪಡಿಸಿ ಅಹವಾಲು ಸಲ್ಲಿಸಿದ ವಿದ್ಯಮಾನ ನಡೆಯಿತು. ವರ್ಗಾವಣೆ ಆದೇಶ ಬಂದು ಮೂರು ತಿಂಗಳು ಕಳೆದಿದೆ. ಇನ್ನೂ ನಿಯುಕ್ತಿ ಮಾಡಿಲ್ಲ. ಒಮ್ಮೆ ವರ್ಗಾವಣೆ ಆದೇಶ ಕಾರ್ಯಗತಗೊಳಿಸಿ ಎಂದು ವರ್ಗಾವಣೆಗೊಂಡ ಪೊಲೀಸ್ ಕುಟುಂಬಸ್ಥರು ಡಿಜಿಪಿ ಬಳಿ ಆಗ್ರಹಿಸಿದರು.

ಪದವಿ ಪ್ರದಾನ



ವಿಜಯಪುರದಲ್ಲಿ ಮಂಗಳವಾರ ನಡೆದ ಅಕ್ಕಮಹಾದೇವಿ ಮಹಿಳಾ ವಿವಿ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಇಂದಿನಿಂದ ಸಿಇಟಿ ಪರೀಕ್ಷೆ

ಬೆಂಗಳೂರು: ಇಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಏ.22ರಿಂದ 24ರವರೆಗೆ ಸುಮಾರು 745 ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆಯಲಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏ.22ರಂದು ಕನ್ನಡ ಭಾಷಾ ಪರೀಕ್ಷೆಯು ನಡೆಯಲಿದೆ. ಏ.23ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗೂ ಏ.24ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿದೆ ಎಂದು ತಿಳಿಸಿದ್ದಾರೆ.

ಎಲ್ಲ 745 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಿದ್ದು, ಕಟ್ಟೆಚ್ಚರವಹಿಸಲಾಗಿದೆ. ಬೆಂಗಳೂರಿನ 163 ಕೇಂದ್ರಗಳಲ್ಲಿ ಅತಿ ಹೆಚ್ಚು ಅಂದರೆ ಒಟ್ಟು 77,604 ಅಭ್ಯರ್ಥಿಗಳು ಪರೀಕ್ಷೆ ಬರೆಯು ತ್ತಿದ್ದು, ಇದರ ಕಮಾಂಡ್ ಸೆಂಟರ್ ಕೆಇಎ ಕಚೇರಿಯಲ್ಲಿ ಸ್ಥಾಪಿಸಲಾಗಿದೆ. ಒಟ್ಟು 970 ವಿಶೇಷ ಚೇತನ ಮಕ್ಕಳು ಸಿಇಟಿ ಬರೆಯುತ್ತಿದ್ದು, ಅವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಶ್ರವಣ ಸಾಧನ ಬಳಸಿಕೊಂಡು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗಿರುವ ಕಾರಣ ಅಂತಹವರು ಎರಡು ಗಂಟೆ ಮುಂಚಿತವಾಗಿ ಕೇಂದ್ರಕ್ಕೆ ಬರಬೇಕೆಂದು ಸಲಹೆ ನೀಡಿದ್ದಾರೆ.

ಎರಡು ಗಂಟೆ ಮುಂಚೆ ಬನ್ನಿ: ಅಭ್ಯರ್ಥಿಗಳನ್ನು ತೀವ್ರ ತಪಾಸಣೆ ಮಾಡಿಯೇ ಪರೀಕ್ಷಾ ಕೇಂದ್ರದೊಳಗೆ ಬಿಡುವ ಕಾರಣಕ್ಕೆ ಕನಿಷ್ಠ ಎರಡು ಗಂಟೆ ಮುಂಚಿತ ವಾಗಿ ಅವರು ಪರೀಕ್ಷಾ ಕೇಂದ್ರಕ್ಕೆ ಹೋಗಬೇಕು. ಅಭ್ಯರ್ಥಿಯ ಮುಖ ಚಹರೆ ಮತ್ತು ಕ್ಯೂಆರ್ ಕೋಡ್ ವ್ಯವಸ್ಥೆ ಮೂಲಕ ಅಭ್ಯರ್ಥಿಯ ನೈಜತೆ ಪರಿಶೀಲನೆ ಮಾಡಲಾಗುತ್ತದೆ. ಯಾರದ್ದೊ ಪರೀಕ್ಷೆಯನ್ನು ಇನ್ಯಾರೊ ಬರೆಯುವು ದನ್ನು ತಡೆಯುವ ಉದ್ದೇಶದಿಂದ ಈ ವ್ಯವಸ್ಥೆ ಜಾರಿ ಮಾಡಿದ್ದು, ಸೀಟು ಹಂಚಿಕೆಯಾಗಿ ಕಾಲೇಜುಗಳಿಗೆ ಪ್ರವೇಶ ಆಗುವ ಸಂದರ್ಭದಲ್ಲಿ ಕೂಡ ಅಭ್ಯರ್ಥಿಯ ಭಾವಚಿತ್ರವನ್ನು ಹೋಲಿಕೆ ಮಾಡಿಯೇ ಪ್ರವೇಶ ನೀಡುವ ವ್ಯವಸ್ಥೆ ಮಾಡಿದ್ದು, ನಕಲಿ ಅಭ್ಯರ್ಥಿಗಳಿಗೆ ಸಂಪೂರ್ಣ ಕಡಿವಾಣ ಹಾಕಲಾಗಿದೆ ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಬಿಜೆಪಿ ಮುಖಂಡರ ಹೇಳಿಕೆಗೆ ಕಿಮ್ಮನೆ ಖಂಡನೆ

ಶಿವಮೊಗ್ಗ: ಬಿಜೆಪಿ ಮುಖಂಡರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವುದು ಖಂಡನೀಯ ಎಂದು ಮಾಜಿ ಕಿಮ್ಮನೆ ರತ್ನಾಕರ ಆಕ್ರೋಶ ವ್ಯಕ್ತಪಡಿಸಿದರು. ಮಂಗಳ ವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಅವರು ಆರ್‌ಎಸ್‌ಎಸ್ ವಿಷಜಂತುಗಳು, ಅವರನ್ನು ಕೊಲ್ಲಬೇಕು ಎಂದಿರುವುದು ಸೈದ್ಧಾಂತಿಕ ವಿಚಾರಕ್ಕೆ ಸಂಬಂಧ ಪಟ್ಟಂತೆ ಮಾತ್ರ. ಹಾಗಂತ ಮನುಷ್ಯರನ್ನು ಕೊಲ್ಲು ಎಂದು ಅರ್ಥವಲ್ಲ. ಖರ್ಗೆಯವರ ಹೇಳಿಕೆಯನ್ನು ನಾನು ಕೂಡ ಸಮರ್ಥಿಸುತ್ತೇನೆ. ವಿಷಜಂತು ಎಂದು ಕರೆದಿರುವುದರಲ್ಲಿ ತಪ್ಪೇನು ಇಲ್ಲ ಎಂದು ಸಮರ್ಥಿಸಿಕೊಂಡರು. ಹಿಂದೂಗಳಲ್ಲಿ ದಲಿತರು ಹಿಂದುಗಳಲ್ಲವೇ? ಅವರನ್ನು ಎಷ್ಟು ಶತಮಾನಗಳ ಕಾಲ ಇನ್ನೂ ಅಸ್ಪೃಶ್ಯವಾಗಿ ನೋಡುತ್ತೀರಾ? ವರ್ಣಬೇಧವನ್ನು ಇನ್ನೆಷ್ಟು ಶತಮಾನಗಳ ಕಾಲ ಮುಂದುವರಿಸುತ್ತೀರಾ? ಹಾಗಾಗಿ ಖರ್ಗೆಯವರ ಹೇಳಿಕೆ ಸರಿಯಾಗಿಯೇ ಇದೆ. ಅದನ್ನು ವಾಸ್ತವಕ್ಕೆ ಪದಶಃವಾಗಿ ಕಲ್ಪಿಸಿಕೊಳ್ಳುವ ಅವಶ್ಯಕತೆ ಇಲ್ಲ. ಕೊಲ್ಲುವುದು ಎಂದರೆ ಸಿದ್ಧಾಂತಗಳನ್ನೇ ಹೊರತು, ಮನುಷ್ಯರನ್ನಲ್ಲ ಎಂದರು.

ಹಿಂದಿ ಅಂಕ: ಸರ್ಕಾರಕ್ಕೆ ಮುಖಭಂಗ: ರವಿಕುಮಾರ್

ಬೆಂಗಳೂರು: ಹಿಂದಿ ಭಾಷೆಗೆ ಅಂಕ ನೀಡಬೇಕೆಂದು ರಾಜ್ಯ ಹೈಕೋರ್ಟ್ ತೀರ್ಪು ಕೊಟ್ಟಿದ್ದು, ಇದರಿಂದ ರಾಜ್ಯ ಸರ್ಕಾರ, ಶಿಕ್ಷಣ ಸಚಿವರಿಗೆ ಹಾಗೂ ಶಿಕ್ಷಣ ಇಲಾಖೆಗೆ ದೊಡ್ಡ ಮುಖಭಂಗ ಆಗಿದೆ ಎಂದು ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದ್ದಾರೆ.



ಮಂಗಳವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ವಿದ್ಯಾರ್ಥಿಗಳು ಗಂಭೀರವಾಗಿ ಓದಿರುತ್ತಾರೆ, ಅಧ್ಯಯನ ಮಾಡಿರುತ್ತಾರೆ. ಅವರಿಗೆ ಅಪಮಾನ ಮಾಡಬಾರದು. ಆದ್ದರಿಂದ ಗ್ರೇಡಿಂಗ್ ಬದಲು ಅಂಕ ನೀಡಬೇಕೆಂದು ಕೋರ್ಟ್ ತಿಳಿಸಿದೆ. ಸರ್ಕಾರದ ನಿರ್ಧಾರವನ್ನು ಕಡೆಗಣಿಸಿ, ವಿರೋಧಿಸಿ ಹೈಕೋರ್ಟ್ ತೀರ್ಪು ಕೊಟ್ಟಿದೆ ಎಂದು ವಿವರಿಸಿದರು. ಸರ್ಕಾರದ ಅಪ್ರಬುದ್ಧ ನಿರ್ಧಾರವನ್ನು ಹೈಕೋರ್ಟ್ ವಿರೋಧಿಸಿದೆ. ಹೈಕೋರ್ಟಿನ ಈ ನಿರ್ಧಾರವನ್ನು ಬಿಜೆಪಿ ಸ್ವಾಗತಿಸುತ್ತದೆ. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಇದರಿಂದ ಬಹಳಷ್ಟು ಸಂತಸವಾಗಿದೆ. ಇಂಥ ಅಪ್ರಬುದ್ಧ ನಿರ್ಧಾರ ಮಾಡುವುದನ್ನು ಸರ್ಕಾರ ಈಗಲಾದರೂ ಕೈಬಿಡಬೇಕೆಂದು ಅವರು ಆಗ್ರಹಿಸಿದರು.

ಏ.30ರಂದೇ ಸಾರಿಗೆ ನೌಕರರಿಗೆ ವೇತನ

ಬೆಂಗಳೂರು: ಕೆಎಸ್‌ಆರ್‌ಟಿಸಿ ಎಲ್ಲಾ ಅಧಿಕಾರಿ/ನೌಕರರ ವೇತನವನ್ನು ಈ ಬಾರಿ ಮೇ1ರ ಬದಲಿಗೆ ಏ.30ಕ್ಕೆ ಬ್ಯಾಂಕ್ ಖಾತೆಗೆ ಜಮೆಗೊಳಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಆದೇಶ ಹೊರಡಿಸಿದ್ದಾರೆ. ಪ್ರತಿ ತಿಂಗಳು ಕೆಎಸ್‌ಆರ್‌ಟಿಸಿ ಎಲ್ಲಾ ಅಧಿಕಾರಿ/ನೌಕರರ ಮೇ 1ರಂದು ವೇತನ ನೀಡಲಾಗುತ್ತಿತ್ತು. ಆದರೆ ಎಪ್ರಿಲ್ ತಿಂಗಳ ಮೇ1ರಂದು ಬ್ಯಾಂಕ್ ರಜೆ ಹಾಗೂ ಕಾರ್ಮಿಕ ದಿನಾಚರಣೆ ಪ್ರಯುಕ್ತ ನಿಗಮದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಏಪ್ರಿಲ್ -2026 ರ ಮಾಹೆಯ ವೇತನವನ್ನು ಏ.30 ರಂದು ಪಾವತಿಸಲು ನಿರ್ಧರಿಸಲಾಗಿದ್ದು, ಹಾಗಾಗಿ ಏ.30ರಂದು ನೌಕರರ ಬ್ಯಾಂಕ್ ಖಾತೆಗೆ ಜಮೆಗೊಳಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಸುಪ್ರೀಂನಲ್ಲೂ ಕರ್ನಾಟಕಕ್ಕೆ ಜಯ: ಡಿಸಿಎಂ ಶಿವಕುಮಾರ್

ಮೇಕೆದಾಟಿಗೆ ಡಿಪಿಆರ್ ಸಿದ್ಧ

ಪಿರಿಯಾಪಟ್ಟಣ: ಮೇಕೆದಾಟು ಯೋಜನೆ ವಿಚಾರದಲ್ಲಿ ಕಾಂಗ್ರೆಸ್ ಹೋರಾಟಕ್ಕೆ ಜಯ ಸಿಕ್ಕಿದ್ದು, ಹತ್ತು ದಿನದೊಳಗೆ ಕೇಂದ್ರಕ್ಕೆ ಯೋಜನೆಯ ಡಿಪಿಆರ್ ಸಲ್ಲಿಸಲಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದರು.



ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಮಂಗಳವಾರ ಜಿಲ್ಲೆಯ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ನಡೆಯುವ 419.78 ಕೋಟಿ ರೂಗಳ ವಿವಿಧ ಇಲಾಖೆಗಳಲ್ಲಿನ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.ಮೇಕೆದಾಟು ಯೋಜನೆ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲೂ ಕರ್ನಾಟಕಕ್ಕೆ ಜಯ ಸಿಕ್ಕಿದೆ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು ಮತ್ತು ಸಂಸದರಿಗೆ ಶಕ್ತಿ ಇದ್ದರೆ ಯೋಜನೆ ಅನುಷ್ಠಾನಕ್ಕೆ ಸಹಕಾರಿಸಲಿ ಎಂದರು.

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳ ಜತೆಗೆ ಅರನೇ ಗ್ಯಾರಂಟಿಯಾಗಿ ಭೂ ದಾಖಲೆಗಳನ್ನು ಕಂದಾಯ ಇಲಾಖೆಯಿಂದ ಒದಗಿಸುವ ಕೆಲಸ ಮಾಡುತ್ತಿದೆ' ಎಂದರು. 1.11 ಕೋಟಿ ಜನರಿಗೆ ಅವರ ಭೂದಾಖಲೆಗಳನ್ನು ಒದಗಿಸಲಾಗಿದೆ. ಇಂತಹ ಒಂದು ಕಾರ್ಯಕ್ರಮ ಬಿಜೆಪಿ-ಜೆಡಿಎಸ್ ಮಾಡಿಲ್ಲ ಎಂದು ಟಾಂಗ್ ನೀಡಿದರು. ತಮಿಳುನಾಡಿನಲ್ಲೂ ಮಹಿಳೆಯರಿಗೆ 2 ಸಾವಿರ ಘೋಷಣೆ ಮಾಡಿದ್ದೇವೆ. ನಮ್ಮ ಗ್ಯಾರಂಟಿ ಕಾರ್ಯಕ್ರಮ ಇಡೀ ದೇಶಕ್ಕೆ ಮಾದರಿ ಆಗಿದೆ ಎಂದರು.

ಅಭಿವೃದ್ಧಿ ಪಥದಲ್ಲಿ ಸರ್ಕಾರ: ನಮ್ಮದು ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವ ಸರ್ಕಾರ, ಇದಕ್ಕೆ ಸಾಕ್ಷಿ ಇಂದಿನ ಅಭಿವೃದ್ಧಿ ಕಾಮಗಾರಿಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಮ್ಮದು ನುಡಿದಂತೆ ನಡೆವ ಸರ್ಕಾರ. 2014ರಲ್ಲಿ 168 ಭರವಸೆಗಳನ್ನು ನೀಡಿದ್ದೆವು ಇದರಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೆವು. ಅಲ್ಲದೆ ಹೊಸ 20 ಯೋಜನೆಗಳನ್ನು ಜಾರಿಗೆ ತಂದೆವು. ಈ ಬಾರಿ ಭರವಸೆ ನೀಡಿದ್ದ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದು ಅಸಾಧ್ಯ. ಇವನ್ನು ಜಾರಿಗೆ ತಂದರೆ ರಾಜ್ಯದ ಖಜಾನೆ ಖಾಲಿಯಾಗುತ್ತದೆ ಎಂದು ಟೀಕಿಸಿದ್ದರು. ಆದರೆ, ಇತರೆ ರಾಜ್ಯಗಳಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕಾಪಿ ಮಾಡುತ್ತಿದ್ದಾರೆ ಎಂದರು. ನಾವು 4,48,004 ಕೋಟಿ ವೆಚ್ಚದ ಬಜೆಟನ್ನು ಮಂಡಿಸಿದ್ದೇವೆ. ನಮ್ಮ ಸರ್ಕಾರ ಆರ್ಥಿಕವಾಗಿ ಸದೃಢವಾಗಿದೆ. ಜನರು ನಮ್ಮ ಪರ ಇದ್ದಾರೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನ ಅಂತರ್ಜಲ ಅಭಿವೃದ್ಧಿ ಪಡಿಸಲು ಕೆರೆ ತುಂಬಿಸುವ ಯೋಜನೆಯನ್ನು ಜಾರಿಗೆ ತಂದಿದ್ದೆವು. ಇದರಿಂದ ಜಿಲ್ಲೆಯ ಅಂತರ್ಜಲ ಮಟ್ಟ ಹೆಚ್ಚಳ ಆಗಿದೆ. 50 -60 ವರ್ಷಗಳಿಂದ ಪೋಡಿ ಆಗದ, ಪೌತಿ ಖಾತೆ ಆಗದ ಜಾಮೀನನ್ನು ಪೌತಿ ಖಾತೆ ಮಾಡಿ ಕೊಡಲಾಗುತ್ತಿದೆ. ರಸ್ತೆಗಳಿಗೆ ಹೊಸ ರೂಪವನ್ನು ಕೊಟ್ಟು ಗುಣಮಟ್ಟದ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.

63 ಮೆಗಾ ವ್ಯಾಟ್ ಉತ್ಪಾದನೆ

ಕೃಷಿ ಇಲಾಖೆಯಿಂದ 3 ಸಾವಿರ ಕೋಟಿ ವೆಚ್ಚದಲ್ಲಿ ರಾಜ್ಯದಾದ್ಯಂತ ರೈತರಿಗೆ ಕೃಷಿ ಉಪಕರಣಗಳನ್ನು ವಿತರಣೆ ಮಾಡಲಾಗುತ್ತಿದೆ. ಇಡೀ ರಾಜ್ಯದಲ್ಲಿ ಪಂಪ್ ಸೆಟ್‌ಗೆ 7 ಗಂಟೆಗಳ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇದರ ಅವಲಂಬನೆಯನ್ನು ಕಡಿಮೆ ಮಾಡಲು ಸೋಲಾರ್ ಪಂಪ್ ಅಳವಡಿಸಲು ಸಹಾಯಧನ ನೀಡಲಾಗುತ್ತಿದೆ. ತಾಲೂಕಿನಲ್ಲಿ 63 ಮೆಗಾ ವ್ಯಾಟ್ ಉತ್ಪಾದನೆಯ ಸೋಲಾರ್ ಯೋಜನೆಯನ್ನು ಎರಡು ಕಡೆ ಜಾರಿಗೆ ತರಲಾಗಿದೆ. ಮೇಕೆದಾಟು ಯೋಜನೆಗೆ ಅಗತ್ಯ ಭೂಮಿ ನೀಡಿ, ಡಿಪಿಆರ್ ತಯಾರಿಸಲಾಗಿದೆ. ನಮ್ಮ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿಯಾಗಿವೆ ಎಂದು ಉಪ ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ತಿಳಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ಷೇಪ

ದೇಶದ ಜನರಿಗೆ ಖರ್ಗೆ ಅಪಮಾನ: ಆಕ್ರೋಶ

ಬೆಂಗಳೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅರವರನ್ನು ಟೀಕಿಸುವ ಭರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ದೇಶದ 140 ಕೋಟಿ ಜನರನ್ನು ಹಾಗೂ ನಮ್ಮ ಪ್ರಜಾಪ್ರಭುತ್ವದ ಘನತೆಯನ್ನು ಅಪಮಾನಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ಷೇಪಿಸಿದ್ದಾರೆ.



ವಿಶ್ವದ 32ಕ್ಕೂ ಹೆಚ್ಚು ದೇಶಗಳ ಅತ್ಯುನ್ನತ ಗೌರವಗಳಿಗೆ ಪಾತ್ರರಾಗಿ, ಭಾರತದ ಕೀರ್ತಿಯನ್ನು ಜಗತ್ತಿನ ಶಿಖರಕ್ಕೇರಿಸಿದ ಕೋಟ್ಯಂತರ ಭಾರತೀಯರ ಹೆಮ್ಮೆಯ ನಾಯಕನ ಬಗ್ಗೆ ಇಂತಹ ನಂಜಿನ, ವಿಷಕಾರಿ ಮಾತುಗಳು, ನಿಮ್ಮ ವಿಕೃತ ಮನಸ್ಥಿತಿಯನ್ನು, ನಿಮ್ಮ ರಾಜಕೀಯ ದ್ವೇಷವನ್ನು, ನಿಮ್ಮ ಹತಾಶೆಯನ್ನು ಬಿಂಬಿಸುತ್ತವೆಯೇ ಹೊರತು, ಮೋದಿ ಅವರ ವ್ಯಕ್ತಿತ್ವಕ್ಕೆ ಭಂಗವುಂಟು ಮಾಡುವುದು ಸಾಧ್ಯವಿಲ್ಲ ಎಂದು ತಿಳಿಸಿದರು.

ಸರ್ಜಿಕಲ್ ಸ್ಟ್ರೈಕ್, ಬಾಲಕೋಟ್ ಏರ್ ಸ್ಟ್ರೈಕ್ ಮತ್ತು ಇತ್ತೀಚಿನ ಆಪರೇಷನ್ ಸಿಂದೂರ್ ಮೂಲಕ ಭಯೋತ್ಪಾದಕರ ಹೆಡೆಮುರಿ ಕಟ್ಟಿದ ಧೀಮಂತ ನಾಯಕನ ಬಗ್ಗೆ, ನಕ್ಸಲಿಸಂ ಅನ್ನು ನಿರ್ನಾಮ ಮಾಡಿದ ಅದ್ವಿತೀಯ ನೇತಾರನ ಬಗ್ಗೆ, ಶತ್ರು ರಾಷ್ಟ್ರದ ಒಳಗೆ ನುಗ್ಗಿ ಹೊಡೆಯುವ ದಿಟ್ಟತನದ ಪ್ರಧಾನಿಗಳ ಬಗ್ಗೆ, ತಾಯಂದಿರ ಸೌಭಾಗ್ಯವನ್ನು ಅಳಿಸಲು ಬಂದವರ ವಿರುದ್ಧ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆಸಿ, ಅವರ ಅಡಗುದಾಣಗಳನ್ನೇ ಧೂಳೀಪಟ ಮಾಡಿದ ಮೋದಿ ಅವರ ನಿಮ್ಮ ಅವಹೇಳನ, ನಿಮ್ಮ ನೈಜ ಮುಖವನ್ನು ಬಯಲು ಮಾಡಿದೆ ಎಂದಿದ್ದಾರೆ.

ಕೈ ಕಾರುತ್ತಿರುವ ವೈಷಮ್ಯ

ನರೇಂದ್ರ, ಮೋದಿ ಅವರ ವಿರುದ್ಧ ಕಾಂಗ್ರೆಸ್ ಕಾರುತ್ತಿರುವ ವೈಷಮ್ಯ, ದ್ವೇಷ, ಅಸೂಯೆಗಳು ಹೊಸದೇನಲ್ಲ. ಈ ಮನಸ್ಥಿತಿಯಿಂದಲೇ ದೇಶದ ಹಾಗೂ ಪ್ರಧಾನಿ ಹುದ್ದೆಯ ಘನತೆಯನ್ನು ಕುಗ್ಗಿಸುವ ಮಟ್ಟಕ್ಕೆ ಕಾಂಗ್ರೆಸ್ ಕುಸಿದಿರುವುದನ್ನೂ ಕೂಡ ದೇಶದ ಜನ ಕಂಡಿದ್ದಾರೆ. ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ನೀವು ಭಾರತದ ಗೌರವವನ್ನು ಕುಗ್ಗಿಸುತ್ತಿದ್ದೀರಿ. ಈ ಹಿಂದೆ ಮೌತ್ ಕಾ ಸೌದಾಗರ್ ಎಂದವರನ್ನು, ಚಾಯ್ ವಾಲಾ ಎಂದವರನ್ನು ಜನತೆ ಹೇಗೆ ಮೂಲೆಗುಂಪು ಮಾಡಿದ್ದಾರೆ ಎನ್ನುವುದು ನಿಮಗೆ ನೆನಪಿರಲಿ ಎಂದು ತಿಳಿಸಿದ್ದಾರೆ.

7 ಎಕರೆ ಭೂಮಿಯಲ್ಲಿ 100 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣ: ಎಸ್.ನರೇಶ್

ಬೆಳಗಾವಿಯಲ್ಲಿ ತಿರುಪತಿ ಮಾದರಿ ದೇವಸ್ಥಾನ

ಬೆಳಗಾವಿ: ಇಲ್ಲಿನ ಸದಾಶಿವನಗರದ ರೆಡ್ಡಿ ಭವನದಲ್ಲಿ ಬೆಳಗಾವಿ ರೆಡ್ಡಿ ಸಂಘ ಬೆಳಗಾವಿ ನಗರದ ಹೊರವಲಯದಲ್ಲಿ ಏಳು ಎಕರೆ ಪ್ರದೇಶದಲ್ಲಿ ಬೃಹತ್ ವೆಂಕಟೇಶ್ವರ ದೇವಸ್ಥಾನ ಕಟ್ಟಲು ಆಂಧ್ರಪ್ರದೇಶದ ತಿರುಮಲ ತಿರುಪತಿ ದೇವಸ್ಥಾನ ಆಡಳಿತ ಮಂಡಳಿ(ಟಿಟಿಡಿ) ಭೂಮಿ ಹಸ್ತಾಂತರ ಕಾರ್ಯಕ್ರಮ ನಡೆಯಿತು.



ಮಂಗಳವಾರ ನಗರದ ಸದಾಶಿವ ನಗರದ ರೆಡ್ಡಿ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಆಡಳಿತ ಮಂಡಳಿಗೆ ಭೂಮಿ ಹಸ್ತಾಂತರ, ದೇವಸ್ಥಾನ ನಿರ್ಮಾಣ ಕುರಿತು ಮಹತ್ವದ ಮಾಹಿತಿ ಹಂಚಿಕೊಳ್ಳಲಾಯಿತು. ಟಿಟಿಡಿ ಆಡಳಿತ ಮಂಡಳಿಯ ಸದಸ್ಯರಾದ ಎಸ್.ನರೇಶ್ ಕುಮಾರ್ ಮಾತನಾಡಿ, ದೇವಸ್ಥಾನ ನಿರ್ಮಾಣಕ್ಕಾಗಿ ಬೆಳಗಾವಿ ರೆಡ್ಡಿ ಸಂಘವು ಸದಭಿಪ್ರಾಯದಿಂದ 7 ಎಕರೆ ಭೂಮಿಯನ್ನು ಹಸ್ತಾಂತರ ಮಾಡಿರುವುದು ಶ್ಲಾಘನೀಯ ಕ್ರಮವಾಗಿದೆ ಎಂದರು.

ಮುಂದಿನ ಎರಡು ವರ್ಷಗಳಲ್ಲಿ ಸುಮಾರು ರೂ.100 ಕೋಟಿ ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣಗೊಳ್ಳಲಿದ್ದು, ಇದರಲ್ಲಿ ಶೇ.80ರಷ್ಟು ಅನುದಾನವನ್ನು ಟಿಟಿಡಿ ಒದಗಿಸಲಿದ್ದು, ಶೇ.10 ರಷ್ಟು ರೆಡ್ಡಿ ಸಂಘ ಹಾಗೂ ಉಳಿದ ಶೇ.10ರಷ್ಟು ದಾನಿಗಳಿಂದ ಸಂಗ್ರಹಿಸಲಾಗುವುದು ಎಂದು ವಿವರಿಸಿದರು. ಕರ್ನಾಟಕದ ದಾನಿಗಳ ಸಹಕಾರದಿಂದಲೇ ದೇವಸ್ಥಾನ ನಿರ್ಮಾಣ ಮಾಡುವ ಸಂಕಲ್ಪ ಕೈಗೊಂಡಿರುವುದಾಗಿ ಎಂದು ತಿಳಿಸಿದ ಅವರು, ಮೂರು ರಾಜ್ಯಗಳ ಕೇಂದ್ರ ಸ್ಥಾನವಾಗಿರುವ ಬೆಳಗಾವಿ ನಗರದ ಹೊರವಲಯದಲ್ಲಿ ತಿರುಮಲ ವೆಂಕಟರಮಣ ದೇವಸ್ಥಾನ ನಿರ್ಮಾಣವಾಗುವುದರಿಂದ ಭಕ್ತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಹೇಳಿದರು.

ಮಹಾರಾಷ್ಟ್ರದ ಕೊಲ್ಲಾಪುರದಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ಕೂಡ ಈ ದೇವಸ್ಥಾನದಿಂದ ಹೆಚ್ಚಿನ ಸೌಲಭ್ಯ ದೊರೆಯಲಿದೆ. ತಿರುಪತಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ಇಲ್ಲಿ ಸಹ ಆಯೋಜಿಸಲಾಗುವುದು ಎಂದರು.

9,000 ಕೋಟಿ ಮೀಸಲು

ಟಿಟಿಡಿ ಸಂಸ್ಥೆ ದೇವಸ್ಥಾನಗಳ ನಿರ್ಮಾಣ ಮತ್ತು ಪುನರುಜ್ಜೀವನಕ್ಕಾಗಿ ಸುಮಾರು ರೂ.9,000 ಕೋಟಿ ಮೊತ್ತವನ್ನು ಮೀಸಲಿಟ್ಟಿದ್ದು, ದೇಶದ ಆರು ಕಡೆಗಳಲ್ಲಿ ಟಿಟಿಡಿ ದೇವಸ್ಥಾನಗಳು ಕಾರ್ಯನಿರ್ವಹಿಸುತ್ತಿವೆ ಎಂದು ಮಾಹಿತಿ ನೀಡಿದರು. ಕರ್ನಾಟಕ ರಾಜ್ಯ ರಡ್ಡಿ ಜನಸಂಘ ಅಧ್ಯಕ್ಷ ಲಕ್ಷ್ಮಣ ರೆಡ್ಡಿ ಮಾತನಾಡಿ, ಬೆಳಗಾವಿಯಲ್ಲಿ ಟಿಟಿಡಿ ವತಿಯಿಂದ ದೇವಸ್ಥಾನ ನಿರ್ಮಾಣ ಆಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಬೆಳಗಾವಿ ರಡ್ಡಿ ಸಂಘದ ಸಹಕಾರ ಬಹಳ ದೊಡ್ಡದಾಗಿದೆ. ನಿಮ್ಮ ಸಹಕಾರ ಹೀಗೆ ಮುಂದುವರಿಯಬೇಕು ಎಂದು ವಿನಂತಿಸಿದರು.

ಕುಮಾರಸ್ವಾಮಿ ಹೇಳಿಕೆಗೆ ಡಿಸಿಎಂ ಶಿವಕುಮಾರ್ ತಿರುಗೇಟು

ಮರುವಿಂಗಡಣೆಗೆ ಎಲ್ಲರ ಒಪ್ಪಿಗೆ

ಬೆಂಗಳೂರು: ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುಗುಣವಾಗಿ ವಿರೋಧ ಪಕ್ಷದ ಶಾಸಕರು, ಸಾರ್ವಜನಿಕರನ್ನು ವಿಶ್ವಾಸಕ್ಕೆ ಪಡೆದು ಜಿಬಿಎ ಪಾಲಿಕೆಗಳು ಹಾಗೂ ವಾರ್ಡ್ ಗಳ ಮರುವಿಂಗಡಣೆ ಮಾಡಲಾಗಿದೆ. ಆದರೆ ಈ ಬಗ್ಗೆ ಕುಮಾರಸ್ವಾಮಿ ಅವರಿಗೆ ಅರಿವಿಲ್ಲ. ಬೇಕಿದ್ದರೇ ಅವರ ಶಾಸಕರನ್ನೇ ಕೇಳಿ ತಿಳಿದುಕೊಳ್ಳಲಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿರುಗೇಟು ನೀಡಿದ್ದಾರೆ.



ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳೊಂದಿಗೆ ಮಂಗಳವಾರ ಮಾತನಾಡಿ, ಬೆಂಗಳೂರು ವಾರ್ಡ್‌ಗಳ ಮರುವಿಂಗಡನೆ ಕುರಿತು ಕೇಂದ್ರ ಸಚಿವ ಕುಮಾರಸ್ವಾಮಿ ವರ ಹೇಳಿಕೆ ಪ್ರತಿಕ್ರಿಯೆ ನೀಡಿದ ಅವರು, ಬೆಂಗಳೂರು ವಾರ್ಡ್ ಗಳ ಮರುವಿಂಗಡಣೆ ವೇಳೆ ಎಲ್ಲಾ ಪಕ್ಷದ ಶಾಸಕರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಅವರ ಪಕ್ಷದ ಶಾಸಕರು ಸಮಿತಿಯ ಭಾಗವಾಗಿದ್ದರು. ಜೆಡಿಎಸ್ ಹಾಗೂ ಬಿಜೆಪಿ ಶಾಸಕರ ಜತೆ ಚರ್ಚೆ ಮಾಡಿ, ಅವರೆಲ್ಲರ ಅಭಿಪ್ರಾಯ ಪಡೆದ ನಂತರವೇ ಅಂತಿಮ ತೀರ್ಮಾನ ಮಾಡಲಾಗಿದೆ ಎಂದರು.

ಕುಮಾರಸ್ವಾಮಿ ಅವರು ದೊಡ್ಡ ವ್ಯಕ್ತಿ ಇರಬಹುದು. ನನಗೂ ಸಣ್ಣ ಅನುಭವವಿದೆ. ಈ ಅನುಭವದ ಮೇಲೆ ಹೇಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಶಾಸಕರು, ನಾಯಕರನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬುದು ನನಗೂ ಗೊತ್ತಿದೆ. ನಾನು ಅವರ ಶಾಸಕರ ಜತೆ ಎಷ್ಟು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ, ಎಷ್ಟು ಗಂಟೆಗಳ ಕಾಲ ಸಾರ್ವಜನಿಕರೊಂದಿಗೆ ಸಂವಾದ ಮಾಡಲಾಗಿದೆ ಎಂದು ಕುಮಾರಸ್ವಾಮಿ ಅವರು ತಿಳಿದುಕೊಂಡು ಮಾತನಾಡುವುದು ಸೂಕ್ತ ಎಂದರು. ಜಿಬಿಎ ಪಾಲಿಕೆಗಳ ಚುನಾವಣೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ನಾವು ಚುನಾವಣೆಗೆ ಸಿದ್ಧವಿರುವುದಾಗಿ ತಿಳಿಸಿದ್ದೇವೆ ಎಂದರು.

ಮುಸಲ್ಮಾನರ ಬಗ್ಗೆ ಹಗೆ ಸುಳ್ಳು ಆರೋಪ

ಮುಸಲ್ಮಾನ ಸಮುದಾಯದ ಮುಖಂಡರು ಹೈಕಮಾಂಡ್ ನಾಯಕರಿಗೆ ಪತ್ರ ಬರೆದಿರುವ ಬಗ್ಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಅದೆಲ್ಲ ಸುಳ್ಳು. ಯಾರೂ ಹಗೆ ಸಾಧಿಸುತ್ತಿಲ್ಲ. ಪಕ್ಷವು ಶಿಸ್ತು ಪಾಲನೆಗೆ ಆದ್ಯತೆ ನೀಡುತ್ತಿದೆ. ಎಲ್ಲರೂ ಶಿಸ್ತು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಬೇಸಿಗೆ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ನಿರ್ವಹಣೆ ವಿಚಾರವಾಗಿ ಈಗಾಗಲೇ ಬಿಡಬ್ಲ್ಯೂಎಸ್ ಎಸ್‌ಬಿ ಅಧಿಕಾರಿಗಳ ಜತೆ ಚರ್ಚೆ ನಡೆಸಲಾಗಿದೆ. ಅಂತರ್ಜಲ ಹೆಚ್ಚಳದ ಬಗ್ಗೆ ಮಾತನಾಡಿದ್ದು, ಏನೇ ಸಮಸ್ಯೆ ಬಂದರೂ ನಾವು ಅದನ್ನು ಸಮರ್ಥವಾಗಿ ನಿಭಾಯಿಸುತ್ತೇವೆ ಎಂದು ತಿಳಿಸಿದರು.

ಸಚಿವರ ವಿರುದ್ಧ ದೂರು ದಾಖಲಿಸಿ

ಬೆಂಗಳೂರು/ತುಮಕೂರು: ಕಬಡ್ಡಿ ಪಂದ್ಯಾವಳಿಯ ವೇಳೆ ಬಹಿರಂಗವಾಗಿ ಬೆಟ್ಟಿಂಗ್ ಕಟ್ಟಿದ್ದಾಗಿ ಹೇಳಿಕೆ ನೀಡಿದ್ದ ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರಿಗೆ ಕಾನೂನು ಸಂಕಷ್ಟ ಎದುರಾಗಿದೆ.



ಈ ಕುರಿತ ಖಾಸಗಿ ದೂರಿನ ವಿಚಾರಣೆ ನಡೆಸಿದ ನ್ಯಾಯಾಲಯವು, ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದೆ. ಸಚಿವರ ಈ ನಡೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿತ್ತು. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರೇ ಬೆಟ್ಟಿಂಗ್‌ನಂತಹ ಕಾನೂನುಬಾಹಿರ ಚಟುವಟಿಕೆಯನ್ನು ಒಪ್ಪಿಕೊಂಡಿರುವುದು ತಪ್ಪು ಎಂದು ಆರೋಪಿಸಿ ಎಚ್.ಆರ್. ನಾಗಭೂಷಣ್ ಎಂಬವರು ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಕೆ.ಎನ್. ಶಿವಕುಮಾರ್ ಅವರು, ಸಚಿವರ ವಿರುದ್ಧ ಎಫ್ ಐಆರ್ ದಾಖಲಿಸಿ ಸಮಗ್ರ ತನಿಖೆ ನಡೆಸುವಂತೆ ತುಮಕೂರಿನ ಕೊಡಿಗೇಹಳ್ಳಿ ಪೊಲೀಸರಿಗೆ ಆದೇಶಿಸಿದ್ದಾರೆ.

ಸಮಗ್ರ ತನಿಖೆ ನಡೆಸಿ ವರದಿ ನೀಡಿ: ಪರಂ

ಬೆಂಗಳೂರು: ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳ ವಿರುದ್ಧ ಕೇಳಿಬಂದಿರುವ ಕಿರುಕುಳದ ಆರೋಪ ಹಾಗೂ ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಎಸ್ಪಿಯೊಬ್ಬರು ಪತ್ರ ಬರೆದಿರುವ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿರುವುದಾಗಿ ಗೃಹ ಸಚಿವ ಡಾ. ಜಿ. ಪರಮೇಶ್ವರ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಡಿಸಿಆರ್‌ಇ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಎಂಬವರು ಮೇಲಧಿಕಾರಿಗಳ ವಿರುದ್ಧ ಗಂಭೀರವಾದ ಕಿರುಕುಳದ ಆರೋಪಗಳನ್ನು ಮಾಡಿದ್ದಾರೆ. ಇದರೊಂದಿಗೆ ಮಂಗಳೂರು ನಗರ ಪೊಲೀಸ್ ಕಮಿಷನರ್ ವಿರುದ್ಧ ಎಸ್ಪಿ ಕಾಶಿನಾಥ್ ಅವರು ಡಿಜಿಪಿಯವರಿಗೆ ಪತ್ರ ಬರೆದಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದರು.

ಸತ್ಯಾಸತ್ಯತೆ ಆಧಾರದ ಮೇಲೆ ಕ್ರಮ: ಪೊಲೀಸ್ ಇಲಾಖೆಯಂತಹ ಶಿಸ್ತಿನ ಪಡೆಯಲ್ಲಿ ಇಂತಹ ಬೆಳವಣಿಗೆಗಳು ನಡೆಯುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ. ಈ ಹಿನ್ನೆಲೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳ ಕುರಿತು ವರದಿ ಸಲ್ಲಿಸುವಂತೆ ಡಿಜಿಪಿಯವರಿಗೆ ಸೂಚಿಸಲಾಗಿದೆ.

ವರದಿ ಕೈ ಸೇರಿದ ನಂತರ ಅದರಲ್ಲಿನ ಅಂಶಗಳನ್ನು ಪರಿಶೀಲಿಸಿ, ಸತ್ಯಾಸತ್ಯತೆಯ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಬೈಕ್ ಟ್ಯಾಕ್ಸಿ ಸೇವೆಗೆ ನಿರ್ದೇಶನ: ಸಿಎಂ

ಬೆಂಗಳೂರು: ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ಕಾರ್ಯಾಚರಣೆಯನ್ನು ಸಕ್ರಿಯಗೊಳಿಸಲು ಸಮಗ್ರ ಮತ್ತು ಕಾನೂನುಬದ್ಧವಾಗಿ ಉತ್ತಮ ಚೌಕಟ್ಟನ್ನು ರೂಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈಗಾಗಲೇ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು, ಬೈಕ್ ಟ್ಯಾಕ್ಸಿಗಳನ್ನು ಕಾರ್ಯಗತಗೊಳಿಸಲು ಸಮರ್ಪಕ ಮತ್ತು ರಚಿತ ಚೌಕಟ್ಟು ರೂಪಿಸಬೇಕೆನ್ನುವ ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಮನವಿಯನ್ನು ಪರಿಗಣಿಸಿ ಎಂದು ತಿಳಿಸಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳ ಕಾರ್ಯಾಚರಣೆಯನ್ನು ಸಕ್ರಿಯಗೊಳಿಸಲು ಸಮಗ್ರ ಮತ್ತು ಕಾನೂನುಬದ್ಧವಾಗಿ ಉತ್ತಮ ಚೌಕಟ್ಟನ್ನು ರೂಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈಗಾಗಲೇ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದ್ದೇನೆ ಎಂದು ಹೇಳಿದ್ದಾರೆ.

ನಾಗರಿಕರಿಗೆ ಉತ್ತಮ ಸೇವೆಗೆ ಒತ್ತು

ಕರ್ನಾಟಕದಾದ್ಯಂತ ಕುಟುಂಬಗಳಿಗೆ ಬೈಕ್ ಟ್ಯಾಕ್ಸಿಗಳು ಪ್ರಮುಖ ಜೀವನೋಪಾಯದ ಮೂಲಗಳು ಮತ್ತು ನಾಗರಿಕರಿಗೆ ಸುರಕ್ಷಿತ, ಅಗ್ಗದ ಹಾಗೂ ಪರಿಣಾಮಕಾರಿ ಲಾಸ್ಟ್ ಮೇಲ್ ಪ್ರಯಾಣದ ಆಯ್ಕೆಯನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ನ್ಯಾಯಸಮ್ಮತ ಮತ್ತು ಸಮರ್ಪಕವಾಗಿ ನಿಯಂತ್ರಿತ ಸಾರಿಗೆ ಪರಿಸರವನ್ನು ಖಚಿತಪಡಿಸಲು ನಾವು ಎಲ್ಲಾ ಹಿತಾಸಕ್ತಿಪಕ್ಷಗಳೊಂದಿಗೆ ರಚನಾತ್ಮಕವಾಗಿ ಕೆಲಸ ಮಾಡಲು ಬದ್ಧರಾಗಿದ್ದೇವೆ ಎಂದು ಬೈಕ್ ಟ್ಯಾಕ್ಸಿ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಆದಿ ನಾರಾಯಣ್ ಹೇಳಿದ್ದಾರೆ.

ಮುಖ್ಯಮಂತ್ರಿಗೆ ಮಾಟ ಮಾಡಿಸಿದ್ದಾರೆ: ರಾಜಣ್ಣ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಪುನರುಚ್ಚರಿಸಿದ್ದು, ಜತೆಗೆ ಯಾರಾದರೂ ಮಾಟ ಮಂತ್ರ ಮಾಡಿಸಿದ್ದಾರೆ ಎಂದು ಹೇಳಿರುವುದು ಚರ್ಚೆಗೆ ಗ್ರಾಸವಾಗಿದೆ.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇಷ್ಟು ಅಸಹಾಯಕರಾತಿದ್ದಾರೆ ಅಂತ ನೋಡಿದಾಗ ಯಾರಾದ್ರೂ ಮಾಟ ಮಂತ್ರ ಮಾಡಿಸಿದ್ದಾರೇನೋ ಅಂತ ನಾನು ವಿಚಾರ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ. ಆಸ್ತಿಕ ಅಥವಾ ನಾಸ್ತಿಕ ಅಂತ ಇಲ್ಲ, ಬರುವಂತ ತೊಂದರೆ ಯಾರನ್ನು ಬಿಡುವುದಿಲ್ಲ. ನಾನು ಮಾಟ ಮಂತ್ರದಲ್ಲಿ ನಂಬಿಕೆ ಇಲ್ಲದೆ ಇರುವವನು, ಆದರೆ ಮಾಡಿರಬಹುದು ಏನೋ, ಮಾಡಿದ್ದಾರೋ ಇಲ್ವೋ ಅನ್ನೋದನ್ನ ನಾನು ತನಿಖೆ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ.

ಸಂಪಾದಕೀಯ

ಎಂದೂ ಮರೆಯಲಾಗದ ಪಹಲ್ಗಾಮ್ ಹತ್ಯಾಕಾಂಡ

ಅದೊಂದು ಚಿತ್ರ ಭಾರತೀಯರು ಎಂದೂ ಮರೆಯಲಾರದಂತಹುದು. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರಿಂದ ಹತ್ಯೆಗೀಡಾದ ಪತಿಯ ಪಕ್ಕದಲ್ಲಿ ಕೂತು ರೋಧಿಸುತ್ತಿರುವ ಪತ್ನಿಯ ಚಿತ್ರವದು. ಆ ಚಿತ್ರವು ಇಡೀ ದೇಶದ ಮನ ಕಲಕಿತ್ತು. ಪ್ರತಿಯೊಬ್ಬರ ಮನದಲ್ಲೂ ಕ್ರೋಧವನ್ನೂ ಉಕ್ಕಿಸಿತ್ತು. ಅದು ಭಯೋತ್ಪಾದಕರ ಪೈಶಾಚಿಕತೆಯನ್ನು ಬಿಂಬಿಸಿದಂತೆಯೇ, ಭಯೋತ್ಪಾದನೆಯ ವಿರುದ್ಧದ ಭಾರತದ ಹೋರಾಟವು ನೂತನ ಆಯಾಮವನ್ನು ಪಡೆದುದನ್ನೂ ಸಂಕೇತಿಸಿತ್ತು. ನಿಜ, ಇಂದಿಗೆ ಪಹಲ್ಗಾಮ್ ಹತ್ಯಾಕಾಂಡ ನಡೆದು ಒಂದು ವರ್ಷ ತುಂಬುತ್ತದೆ. ಕಳೆದ ವರ್ಷ ಏಪ್ರಿಲ್ 22ರಂದು ಭಯೋತ್ಪಾದಕರು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಮೇಲೆರಗಿ 26 ಮಂದಿಯನ್ನು ಹತ್ಯೆಗೈದಿದ್ದರು. ಈ ಹತ್ಯಾಕಾಂಡವು ಪಾಕಿಸ್ತಾನದ ಚಿತಾವಣೆಯಿಂದ ನಡೆದುದು ಎಂಬುದಕ್ಕೆ ಬೇರೆ ಪುರಾವೆ ಬೇಕಿರಲಿಲ್ಲ. ಅದರ ಬಳಿಕ ನಡೆದುದು ಹೊಸ ಇತಿಹಾಸ. ಭಾರತವು ಪಾಕಿಸ್ತಾನದ ಭಯೋತ್ಪಾದಕ ನೆಲೆಗಳ ಮೇಲೆರಗಿ ಅವುಗಳನ್ನು ನಾಶಪಡಿಸಿತ್ತಷ್ಟೇ ಅಲ್ಲದೆ, ಅದಕ್ಕೆ ಪ್ರತಿರೋಧ ತೋರಿದ ಪಾಕಿಸ್ತಾನದ ಮೇಲೂ ಸಮರ ಸಾರಿತ್ತು.



ಕೆಲವೇ ದಿನಗಳ ಸಮರದಲ್ಲಿ ಪಾಕಿಸ್ತಾನವನ್ನು ಸಂಪೂರ್ಣ ಮಣಿಸಿತ್ತು. 'ಅಪರೇಷನ್ ಸಿಂದೂರ'ದ ವಿಜಯವನ್ನು ಪಹಲ್ಗಾಮ್‌ನಲ್ಲಿ ಮಡಿದ ಜೀವಗಳಿಗೆ ಅರ್ಪಿಸಿತ್ತು.

ಆದರೆ ಈ ಘಟನೆಯು ಭಾರತದ ನೀತಿಯಲ್ಲಿ ಒಂದು ಆಮೂಲಾಗ್ರ ಬದಲಾವಣೆ ತಂದುದೂ ಅಷ್ಟೇ ಸತ್ಯ. ಆವರೆಗೆ ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆಗೆ ರಕ್ಷಣಾತ್ಮಕವಾಗಿಯಷ್ಟೆ ಪ್ರತಿಕ್ರಿಯಿಸುತ್ತಿದ್ದ ಹಾಗೂ ದೇಶೀಯವಾಗಿಯಷ್ಟೆ ಭಯೋತ್ಪಾದಕರನ್ನು ದಮನಿಸಲು ಯತ್ನಿಸುತ್ತಿದ್ದ ಭಾರತವು ಆ ದಿನದ ಬಳಿಕ ತನ್ನ ನೀತಿಯನ್ನು ಬದಲಿಸಿತು. ಭಾರತದ ನೆಲದಲ್ಲಿ ನಡೆಯುವ ಯಾವುದೇ ಒಂದು ಭಯೋತ್ಪಾದಕ ಕೃತ್ಯವೂ ದೇಶದ ಮೇಲೆ ಸಾರಿದ ಯುದ್ಧಕ್ಕೆ ಸಮಾನ ಎಂದು ಪರಿಗಣಿಸಲಾರಂಭಿಸಿತು. ಸಂಭವನೀಯ ಭಯೋತ್ಪಾದನೆಯನ್ನು ತಡೆಯುವ ಸಲುವಾಗಿ ಭಯೋತ್ಪಾದಕರನ್ನು ವಿದೇಶಿ ನೆಲದಲ್ಲಿಯೇ 'ಇಲ್ಲ'ವಾಗಿಸುವ ಯೋಜನೆಯನ್ನು ಜಾರಿಗೆ ತಂದಿತು. ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಭಾರತವು ಕಟಿಬದ್ಧವಾಗಿದೆ ಹಾಗೂ ಈ ನಿಟ್ಟಿನಲ್ಲಿ ಪಾಕಿಸ್ತಾನದ 'ಪರಮಾಣು ಬ್ಲ್ಯಾಕ್‌ಮೇಲ್'ನ್ನು ಕೂಡಾ ಲೆಕ್ಕಿಸುವುದಿಲ್ಲ ಎಂಬ ಸಂದೇಶವನ್ನೂ ಭಾರತವು ಸಾರಿತು. ಸಿಂಧೂ ನದಿ ಒಪ್ಪಂದವನ್ನು ರದ್ದುಪಡಿಸಿ ಭಯೋತ್ಪಾದಕ ರಾಷ್ಟ್ರದೊಂದಿಗೆ ಯಾವುದೇ ಒಪ್ಪಂದಗಳೂ ಮಾನ್ಯವಲ್ಲ ಎಂದು ಘೋಷಿಸಿತು.

'ಆಪರೇಷನ್ ಸಿಂದೂರ್ ನ್ಯಾಯದಾನದ ಹೊಸ ವರಸೆ' ಎಂಬುದಾಗಿ ಪ್ರಧಾನಿ ಮೋದಿಯವರು ಅಂದು ಬಣ್ಣಿಸಿದ್ದರು. ಪಹಲ್ಗಾಮ್ ಘಟನೆಯು ಭಾರತಕ್ಕೆ ಮರೆಯಲಾಗದ ಘಟನೆಯಾಗಿರುವಂತೆಯೆ, ಭಾರತವು ಪಾಕಿಸ್ತಾನಕ್ಕೆ ಮರೆಯಲಾಗದ ಪಾಠ ಕಲಿಸಿರುವುದೂ ಅಷ್ಟೇ ಸತ್ಯ.

ಹಿಂದಿ ದ್ವೇಷಕ್ಕೆ ವಿದ್ಯಾರ್ಥಿಗಳು ಬಲಿಯಾದರೇ?

ಖಾರಾ ಬಾತ್
ವಿನಾಯಕ ಭಟ್ಟ ಮೂರೂರು
vakradanta@gmail.com



ಹಿಂದಿ ಬಗ್ಗೆ ನಮ್ಮಲ್ಲಿ ಕೆಲವರಿಗೆ ಅನಗತ್ಯ ದ್ವೇಷ. ಯಾವುದೇ ಭಾಷೆಯನ್ನು ನಾವು ಜ್ಞಾನದ ಮಾರ್ಗವಾಗಿ ನೋಡಬೇಕೇ ಹೊರತು ಅದನ್ನು ವೈರಿಯಂತೆ ಕಂಡರೆ ಅದರಿಂದ ನಮಗೇ ಅನ್ಯಾಯವಾಗುತ್ತದೆಯೇ ಹೊರತು ಹಿಂದಿ ಮಾತನಾಡುವ ಅಥವಾ ಹಿಂದಿ ನಾಡಿನ ಜನರಿಗಲ್ಲ. ಇಂಗ್ಲಿಷ್ ಬಗ್ಗೆ ಇಲ್ಲದ ತಕರಾರು ನಮ್ಮದೇ ಭಾರತೀಯ ಭಾಷೆಯಾದ ಹಿಂದಿ ಬಗ್ಗೆ ಇದೆ. ಹಿಂದಿ ಹೇರಿಕೆ ಎಂದೇ ಮಾತನಾಡಲು ಆರಂಭಿಸುತ್ತಾರೆ.

ಈ ಹಿಂದಿ ದ್ವೇಷ ಈಗ ಯಾವ ಮಟ್ಟಕ್ಕೆ ತಲುಪಿದೆ ಎಂದರೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿದ್ದ ಸಮಯದಲ್ಲಿಯೇ ಪತ್ರಿಕಾಗೋಷ್ಠಿ ಕರೆದ ನಮ್ಮ ಶಿಕ್ಷಣ ಸಚಿವರು, ತೃತೀಯ ಭಾಷೆ ಹಿಂದಿಯ ಅಂಕಗಳನ್ನು ನಾವು ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶಕ್ಕೆ ಪರಿಗಣಿಸುವುದಿಲ್ಲ. ಬದಲಾಗಿ ತೃತೀಯ ಭಾಷೆಗೆ ನಾವು ಗ್ರೇಡ್ ನೀಡುತ್ತೇವೆ.

ಹಾಗಾಗಿ ಎಸ್ಸೆಸ್ಸೆಲ್ಸಿ ಒಟ್ಟು ಅಂಕಗಳು 525ಕ್ಕೆ ಫಲಿತಾಂಶ ಪ್ರಕಟಿಸಲಿದ್ದೇವೆ ಎಂದುಬಿಟ್ಟರು. ಕೆಲವು ಕನ್ನಡ ಹೋರಾಟಗಾರರು ದಿಢೀರನೆ ಹೋಗಿ ಸಚಿವರನ್ನು ಹಾರ ಹಾಕಿ ಸನ್ಮಾನವನ್ನೂ ಮಾಡಿಬಿಟ್ಟರು.

ಹೇಗೂ ಲೆಕ್ಕಕ್ಕಿಲ್ಲ ಅಂದಾದ ಮೇಲೆ ಸಹಜವಾಗಿ ಆ ಪರೀಕ್ಷೆಯನ್ನು ಅಷ್ಟು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಹಾಗೆ ಎಷ್ಟೋ ವಿದ್ಯಾರ್ಥಿಗಳು ಹೆಚ್ಚು ಗಮನ ಕೊಡದೆ ಬರೆದಿರಲೂ ಸಾಕು. ವಿಶೇಷವೆಂದರೆ ಸಚಿವರ ಮಾತಿನ ಪ್ರಭಾವವೊ ಏನೊ ಹಿಂದಿ ಪರೀಕ್ಷೆಗೆ 13,226 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಅವರು ಪರೀಕ್ಷೆ ಬರೆಯುವ ಗೋಜಿಗೇ ಹೋಗಿಲ್ಲ. ಆದರೆ ಈಗ ಎಲ್ಲವೂ ಉಲ್ಟಾ ಹೊಡೆದಿದೆ.

ಸರ್ಕಾರದ ಈ ನಿರ್ಧಾರ ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಹೈಕೋರ್ಟ್ ಈಗ ತೃತೀಯ ಭಾಷೆಗೆ ಮೊದಲು ಘೋಷಿಸಿದಂತೆ ಅಂಕವನ್ನೇ ನೀಡಬೇಕು ಎಂದು ಹೇಳಿದೆ. ಏಪ್ರಿಲ್ 24ಕ್ಕೆ ಎಸ್ಸೆಸ್ಸೆಲ್ಸಿ ಫಲಿತಾಂಶ ನೀಡಲು ಸಿದ್ಧವಾಗಿದ್ದ ಶಿಕ್ಷಣ ಇಲಾಖೆ ಈಗ ತಡಬಡಾಯಿಸುತ್ತಿದೆ. ಮೌಲ್ಯಮಾಪನದಲ್ಲಿ ಹೇಗೂ ಅಂಕಗಳನ್ನೇ ಹಾಕಲಾಗಿದೆ. ಅಂಕಪಟ್ಟಿಯಲ್ಲಿ ಮಾತ್ರ ಗ್ರೇಡ್ ನೀಡಬೇಕಿತ್ತು. ಈಗಾಗಲೇ ತೃತೀಯ ಭಾಷೆಗೆ ಗ್ರೇಡ್ ನೀಡುವ ಲೆಕ್ಕದಲ್ಲಿ, ಮಕ್ಕಳ ಅಂಕಪಟ್ಟಿ, ಅವರ ಪರ್ಸಂಟೇಜ್, ರ‍್ಯಾಂಕ್ ಎಲ್ಲವೂ ಸಿದ್ಧವಾಗಿರುತ್ತದೆ. ಈಗ ತೃತೀಯ ಭಾಷೆಯ ಅಂಕಗಳನ್ನು ಸೇರಿಸಿ ಹೊಸದಾಗಿ ಲೆಕ್ಕ ಮಾಡಿ, ಪರ್ಸಂಟೇಜ್ ತೆಗೆದು ಎಲ್ಲ ಮಾಡಬೇಕು. ಅದಕ್ಕೆ ಸಾಫ್ಟ್‌ವೇರ್ ಇದೆ. ಅದಲ್ಲದೆ ಹೇಗೂ ಇಲಾಖೆಯೇ ಮಾಡಿಕೊಂಡ ಅಧ್ವಾನ, ಹಾಗಾಗಿ ಅವರು ಮಾಡುತ್ತಾರೆ ಅಂದುಕೊಳ್ಳೋಣ.

ಆದರೆ ಮಕ್ಕಳ ಕತೆ?

ಹೇಗೂ ಸರ್ಕಾರ ಘೋಷಣೆ ಮಾಡಿದೆ ಎಂದು ತೃತೀಯ ಭಾಷೆ ಪರೀಕ್ಷೆಯನ್ನು ಸರಿಯಾಗಿ ಬರೆಯದ ಅಥವಾ ಗಂಭೀರವಾಗಿ ಪರಿಗಣಿಸದ ವಿದ್ಯಾರ್ಥಿಗಳ ಫಲಿತಾಂಶ ಈಗ ಏರುಪೇರಾಗುತ್ತದೆ. ಅವರ ಒಟ್ಟಾರೆ ಪರ್ಸಂಟೇಜ್ ಕಡಿಮೆಯಾಗುತ್ತದೆ. ಇಲಾಖೆ ಅಂಕ ಅಥವಾ ಗ್ರೇಡ್ ಎರಡಕ್ಕೂ ಸಿದ್ಧತೆ ಮಾಡಿಕೊಂಡಿತ್ತು. ಆದರೆ ವಿದ್ಯಾರ್ಥಿಗಳು? ಅವರಿಗೆಲ್ಲಿ ಈ ರೀತಿಯ ಅವಕಾಶವಿತ್ತು? ಸರ್ಕಾರಿ ಅಧಿಕಾರಿಗಳಿಗೆ ಇದೆಲ್ಲ ಹೊಸ ವಿಷಯಗಳಲ್ಲ, ಯಾರೋ ನ್ಯಾಯಾಲಯದ ಮೊರೆ ಹೋಗಬಹುದು, ಆಗ ಇದೆಲ್ಲ ಬದಲಾಗಬಹುದು ಎಂಬ ಎಚ್ಚರಿಕೆ ಅವರಿಗೆ ಇದ್ದೇ ಇರುತ್ತದೆ.

> ಈ ವರ್ಷ ಶೈಕ್ಷಣಿವ ವರ್ಷದ ನಡುವೆ ಅಲ್ಲ, ಮುಕ್ಕಾಲು ಭಾಗದಲ್ಲೂ ಅಲ್ಲ, ಬದಲಾಗಿ ಪರೀಕ್ಷೆ ನಡೆಯುತ್ತಿರುವಾಗ, ತೃತೀಯ ಭಾಷೆ ಪರೀಕ್ಷೆಯ ಒಂದೆರಡು ದಿನಗಳ ಹಿಂದೆ ದಿಢೀರನೆ ಈ ರೀತಿಯ ನಿರ್ಧಾರ ಘೋಷಿಸಲಾಗಿದೆ. ಇದು ಯಾವ ರೀತಿಯ ಹುಚ್ಚಾಟವೋ ಆ ದೇವರೆ ಬಲ್ಲ. ಈಗ ಮತ್ತೆ ನ್ಯಾಯಾಲಯದಲ್ಲಿ ನಿರ್ಧಾರಕ್ಕೆ ತಡೆಬಿದ್ದಿದೆ. ಇನ್ನು ಮುಂದಾದರೂ ಶಿಕ್ಷಣ ಇಲಾಖೆ ಹಾಗೂ ಸಚಿವರು ಶೈಕ್ಷಣಿಕ ವರ್ಷದ ಕೊನೆಯ ಹಂತದಲ್ಲಿ ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡು, ವಿದ್ಯಾರ್ಥಿಗಳ ಜತೆ ಚೆಲ್ಲಾಟವಾಡುವುದನ್ನು ಇನ್ನಾದರೂ ನಿಲ್ಲಿಸಲಿ.

ಅದಕ್ಕೆ ತಕ್ಕ ಸಿದ್ಧತೆಯನ್ನೂ ಅವರು ಮಾಡಿಕೊಂಡಿರುತ್ತಾರೆ. ಆದರೆ ವಿದ್ಯಾರ್ಥಿಗಳಿಗೆ ಇದು ಹೊಸದು.

ಈಗ ಅಕಸ್ಮಾತ್ ಯಾವುದೋ ವಿದ್ಯಾರ್ಥಿ ಅಥವಾ ಪೋಷಕರು ಬಂದು, ಪರೀಕ್ಷೆ ಸಂದರ್ಭದಲ್ಲಿ ಸಚಿವರು ಘೋಷಿಸಿದರು ಎಂಬ ಕಾರಣಕ್ಕೆ ತೃತೀಯ ಭಾಷೆ ಪರೀಕ್ಷೆಯನ್ನು ನಾವು ಸರಿಯಾಗಿ ಬರೆದಿಲ್ಲ. ಈಗ ಅಂಕಗಳನ್ನು ನೀಡುವಂತೆ ನ್ಯಾಯಾಲಯ ಹೇಳಿರುವುದರಿಂದ, ಅದರಿಂದಾಗಿ ಪರ್ಸಂಟೇಜ್ ಕಡಿಮೆಯಾಗಿ ತಮಗೆ ಅನ್ಯಾಯವಾಗುತ್ತದೆ. ರ‍್ಯಾಂಕ್‌ಗಳು ಕೂಡ ತಪ್ಪುವ ಸಾಧ್ಯತೆ ಇರುತ್ತದೆ. ಒಂದೆರಡು ಪರ್ಸಂಟೇಜ್‌ನಲ್ಲಿ ಕಾಲೇಜು ಸೀಟುಗಳು ಕೈತಪ್ಪುವ ಸಾಧ್ಯತೆಗಳು ಕೂಡ ಇವೆ. ಹಾಗಾಗಿ ಇನ್ನೊಮ್ಮೆ ಹಿಂದಿ ಪರೀಕ್ಷೆ ಮಾಡಿಸಬೇಕು ಎಂದು ಅರ್ಜಿ ಹಾಕಿದರೆ? ಆವಾಗ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಣೆಯ ಕತೆ ಏನಾಗಬೇಕು?

ಹಿಂದಿ ದ್ವೇಷಕ್ಕಾಗಿ ಸರ್ಕಾರ ಇಲ್ಲದ ಸಮಸ್ಯೆಯೊಂದನ್ನು ಹೊಸದಾಗಿ ಸೃಷ್ಟಿಸಿತು. ಈ ವರ್ಷ ಒಟ್ಟು 8,18,487 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದಾರೆ. ಅಷ್ಟು ವಿದ್ಯಾರ್ಥಿಗಳು ಹಾಗೂ ಅವರ ಪಾಲಕರಲ್ಲಿ ಅನಗತ್ಯ ಗೊಂದಲ, ಒತ್ತಡ ಸೃಷ್ಟಿಸಿದೆ. ವಿದ್ಯಾರ್ಥಿಗಳ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಅತ್ಯಂತ ಪ್ರಮುಖ ಘಟ್ಟ, ಅಂತಹ ಹಂತದಲ್ಲಿ ಈ ರೀತಿಯ ಗೊಂದಲಗಳು, ಸಮಸ್ಯೆಗಳು ಅವರ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚು. ಇದು ಅವರ ಜೀವನದಲ್ಲಿ ಕಾಯಂ ಆಗಿ



ಅಂಕಪಟ್ಟಿಯಲ್ಲಿ ದಾಖಲಾಗಿಬಿಡುತ್ತದೆ. ಯಾವಾಗೆಲ್ಲ ಅವರು ಎಸ್ಸೆಸ್ಸೆಲ್ಸಿ ಪರೀಕ್ಷೆಯ ಅಂಕಪಟ್ಟಿ ನೋಡುತ್ತಾರೊ ಆವಾಗೆಲ್ಲ ಸರ್ಕಾರದ ಎಡವಟ್ಟು ಅವರಿಗೆ ನೆನಪಾಗದೆ ಇರುವುದಿಲ್ಲ.

ಇನ್ನೂ ಬೇಸರದ ಸಂಗತಿಯೇನೆಂದರೆ, ಶಿಕ್ಷಣ ಇಲಾಖೆ ಹೀಗೆ ಮಾಡುತ್ತಿರುವುದು ಇದೇ ಮೊದಲೇನೂ ಅಲ್ಲ. ಡಿಸೆಂಬರ್, ಜನವರಿಯಲ್ಲಿ ಇದ್ದಕ್ಕಿದ್ದಂತೆ ಶಿಕ್ಷಣ ಇಲಾಖೆ ಜ್ಞಾನೋದಯವಾದಂತೆ ಹೊಸ ಹೊಸ ಆದೇಶಗಳನ್ನು ಮಾಡುತ್ತಿದೆ. ಮೂರು ಪರೀಕ್ಷೆ ಎಂಬ ಅದ್ಭುತ ಕಲ್ಪನೆ ಹೊರಟಿದ್ದು ಕೂಡ ಶೈಕ್ಷಣಿಕ ವರ್ಷದ ಮುಕ್ಕಾಲು ಭಾಗದ ಸಮಯದಲ್ಲಿಯೆ. ಈ ಹಿಂದೆ 7ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ಮಾಡಬೇಕೆಂದು ಜ್ಞಾನೋದಯವಾಗಿದ್ದು ಕೂಡ ಜನವರಿಯಲ್ಲಿ. ಕೊನೆಗೆ ಅದು ಸುಪ್ರೀಂ ಕೋರ್ಟ್‌ತನಕ ಹೋಗಿ ರದ್ದಾಯಿತು. ಹಾಗೆ ಪಬ್ಲಿಕ್ ಪರೀಕ್ಷೆಯನ್ನು ರದ್ದು ಮಾಡುವ ಸಮಯದಲ್ಲಿ ಸುಪ್ರೀಂ ಕೋರ್ಟ್, ಈ ರೀತಿ ಯಾವುದೇ ನಿಯಮ, ಹೊಸ ಸಂಗತಿಗಳನ್ನು ಜಾರಿ ಮಾಡುವುದಾದರೆ ಅದನ್ನು ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಮಾಡಿ. ಯಾವ ಯಾವಾಗಲೋ ಈ ರೀತಿ ಬದಲಾವಣೆ ಮಾಡಿ ವಿದ್ಯಾರ್ಥಿಗಳಲ್ಲಿ ಗೊಂದಲ, ಸಮಸ್ಯೆ ಸೃಷ್ಟಿಸಬೇಡಿ. ಆ ಕಾರಣಕ್ಕಾಗಿಯೇ ಪಬ್ಲಿಕ್ ಪರೀಕ್ಷೆ ರದ್ದುಪಡಿಸುತ್ತಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿತ್ತು.

ಅಷ್ಟೆಲ್ಲ ಆದ ನಂತರವೂ ಇಲಾಖೆ ಪಾಠ ಕಲಿತಂತಿಲ್ಲ. ಬದಲಾಗಿ ಹಳೇ ಚಾಳಿಯನ್ನೇ ಮತ್ತೆ ಮುಂದುವರಿಸಿ, ಈ ವರ್ಷ ಶೈಕ್ಷಣಿವ ವರ್ಷದ ನಡುವೆ ಅಲ್ಲ, ಮುಕ್ಕಾಲು ಭಾಗದಲ್ಲೂ ಅಲ್ಲ, ಬದಲಾಗಿ ಪರೀಕ್ಷೆ ನಡೆಯುತ್ತಿರುವಾಗ, ತೃತೀಯ ಭಾಷೆ ಪರೀಕ್ಷೆಯ ಒಂದೆರಡು ದಿನಗಳ ಹಿಂದೆ ದಿಢೀರನೆ ಈ ರೀತಿಯ ನಿರ್ಧಾರ ಘೋಷಿಸಲಾಗಿದೆ. ಇದು ಯಾವ ರೀತಿಯ ಹುಚ್ಚಾಟವೋ ಆ ದೇವರೆ ಬಲ್ಲ. ಈಗ ಮತ್ತೆ ನ್ಯಾಯಾಲಯದಲ್ಲಿ ನಿರ್ಧಾರಕ್ಕೆ ತಡೆಬಿದ್ದಿದೆ. ಇನ್ನು ಮುಂದಾದರೂ ಶಿಕ್ಷಣ ಇಲಾಖೆ ಹಾಗೂ ಸಚಿವರು ಶೈಕ್ಷಣಿಕ ವರ್ಷದ ಕೊನೆಯ ಹಂತದಲ್ಲಿ ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಂಡು, ವಿದ್ಯಾರ್ಥಿಗಳ ಜತೆ ಚೆಲ್ಲಾಟವಾಡುವುದನ್ನು ಇನ್ನಾದರೂ ನಿಲ್ಲಿಸಲಿ.

ಮಾಡುವ ಕೆಲಸ ಎಂತಿರಬೇಕು

ಯತ್ ಕೃತ್ವಾ ನ ಭವೇತ್ ಧರ್ಮೋ ನ ಕೀರ್ತಿರ್ನ ಯಶೋ ಧ್ರುವಮ್।
ಶರೀರಸ್ಯ ಭವೇತ್ ಖೇದಃ ಕಸ್ತತ್ಕರ್ಮ ಸಮಾಚರೇತ್॥ -ರಾಮಾಯಣ

ಏನು ಮಾಡಿದರೆ ಧರ್ಮವಾಗಲೀ, ಕೀರ್ತಿಯಾಗಲೀ, ಶಾಶ್ವತವಾದ ಯಶಸ್ಸಾಗಲೀ ಉಂಟಾಗದೇ ಶರೀರಕ್ಕೆ ಖೇದ ಮಾತ್ರ ಉಂಟಾಗುತ್ತದೆಯೋ ಅಂಥ ಕೆಲಸವನ್ನು ಯಾವನು ತಾನೇ ಮಾಡುತ್ತಾನೆ – ಎಂಬುದು ಶ್ಲೋಕಾರ್ಥ.

'ಕುರ್ವನ್ನೇವೇಹ ಕರ್ಮಾಣಿ ಜೀವಿಶೇತ್ ಶತಂ ಸಮಾಃ' ಕರ್ತವ್ಯಗಳನ್ನು ಮಾಡುತ್ತಾ ನೂರು ವರ್ಷ ಬಾಳಬೇಕು ಎಂಬುದು ಸೂಕ್ತಿಯ ಆಶಯ. 'ನಿಯತಂ ಕುರು ಕರ್ಮತ್ವಂ' ನಿರಂತರ ಕೆಲಸ ಮಾಡುತ್ತಿರು ಎಂಬುದು ಗೀತೋಪದೇಶ.

ಮಾಡುವುದೆಲ್ಲವೂ ಕೆಲಸವೇ. ಆದರೆ ಯಾವ ಕೆಲಸವನ್ನು ಮಾಡಬೇಕು, ಯಾವ ಕೆಲಸವನ್ನು ಮಾಡಬಾರದು ಎಂಬುದು ಪ್ರಶ್ನೆ. ಇದಕ್ಕೆ ಉತ್ತರರೂಪವಾಗಿ ಈ ಶ್ಲೋಕ ಹೊರಟಿದೆ. ಒಳ್ಳೆಯ ಕೆಲಸಗಳನ್ನೇ ಮಾಡಬೇಕು ಎಂಬುದು ಕಥನದ ತಾತ್ಪರ್ಯ.

ಶ್ಲೋಕ ಸಾಗರ
ಡಾ.ಸೋಂದಾ ಭಾಸ್ಕರ ಭಟ್

ಮಾಡುವ ಕೆಲಸ ಧರ್ಮ ಸಮ್ಮತವಾಗಿರಬೇಕು. ಲೋಕಹಿತದಿಂದ ಕೂಡಿರಬೇಕು. ಹತ್ತಾರು ಜನರಿಗಾದರೂ ಸಂತೋಷ ಕೊಡಬೇಕು.

ಕೈಗೊಂಡ ಕೆಲಸವು ಕೀರ್ತಿಯನ್ನು ತಂದುಕೊಡಬೇಕು. ಇತರರು ಮೆಚ್ಚುವ ಸಾಧನೆಯಾಗಿರಬೇಕು. ಯಾವತ್ತೂ ಅಪಕೀರ್ತಿಗೆ ಕಾರಣವಾದ ಕೆಲಸವನ್ನು ಮಾಡಬಾರದು.

ಯಾವುದೇ ಕೆಲಸವನ್ನು ಆಯ್ದುಕೊಂಡರೂ ಅದು ಶಾಶ್ವತ ಯಶಸ್ಸನ್ನು ತಂದುಕೊಡಬೇಕು. ಅಂತಹ ಕೆಲಸವನ್ನೇ ಆಯ್ದುಕೊಂಡು ಮುಂದುವರಿಯಬೇಕು. ಮಧ್ಯದಲ್ಲಿ ಅಪಯಶಸ್ಸನ್ನು ತಂದುಕೊಡುವಂತಿದ್ದರೆ ಅದರಿಂದ ಎಲ್ಲವೂ ವ್ಯರ್ಥವಾಗಿಬಿಡುತ್ತದೆ. ಯೋಚಿಸಿ ವಿಮರ್ಶಿಸಿ, ಅಳೆದು, ತೂಗಿ ಶಾಶ್ವತ ಕೀರ್ತಿ ತಂದುಕೊಡುವ ಕೆಲಸವನ್ನು ಆಯ್ದುಕೊಳ್ಳಬೇಕು.

ಈ ಎಚ್ಚರವಿಲ್ಲದಿದ್ದರೆ ಖೇದಕ್ಕೆ ಕಾರಣವಾಗುತ್ತದೆ. ಶಾರೀರಿಕ ಶ್ರಮ ವ್ಯರ್ಥವಾಗುತ್ತದೆ. ಬೌದ್ಧಿಕ ಮಟ್ಟ ಸೋಲುತ್ತದೆ. ಸಂಪತ್ತಿನ ವ್ಯರ್ಥ ವ್ಯಯವಾಗುತ್ತದೆ. ಕೆಲಸ ಕೆಟ್ಟ ಮೇಲೆ ವ್ಯಥೆಪಟ್ಟರೆ, ದುಃಖಿಸಿದರೆ ಪ್ರಯೋಜನವಾಗದು. ಬುದ್ಧಿವಂತನಾದವನು ಶರೀರಕ್ಕೆ ಖೇದವನ್ನುಂಟು ಮಾಡುವ ಕೆಲಸಗಳಿಗೆಂದೂ ಮನಸ್ಸು ಮಾಡಬಾರದು. ಆಲೋಚಿಸಿಯೇ ಕಾರ್ಯವೆಸಗಬೇಕು.

ಯಾವುದೇ ಕೆಲಸ ಮಾಡುವಾಗಲೂ ಸಾಕಷ್ಟು ಯೋಚಿಸಬೇಕು. ಒಮ್ಮೆ ತಪ್ಪಾದರೆ ಸರಿಪಡಿಸುವುದು ಕಷ್ಟ. ನಷ್ಟವಾದರೆ ಭರಿಸುವುದು ಕಷ್ಟ. ಸೋತಾಗ ಯಾರೂ ಸಮೀಪ ಸುಳಿಯುವುದಿಲ್ಲ. ವಿಶ್ವಾಸ ತುಂಬುವುದಿಲ್ಲ. ಸರಿಪಡಿಸಲು ಮುಂದಾಗುವುದಿಲ್ಲ. 'ನಗುವಾಗ ಇರುವವರು ಅಳುವಾಗ ಇರುವುದಿಲ್ಲ'

ಬುದ್ಧಿವಂತನಾದವನು ಇಂತಹ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಕೆಲಸಕ್ಕೆ ಮುಂದಾಗುವಾಗಲೇ ಎಚ್ಚರವಹಿಸಬೇಕು. ನೋಡಿ ಹೆಜ್ಜೆಯಿಡಬೇಕು. ವಿಮರ್ಶಿಸಿ ತೊಡಗಿಕೊಳ್ಳಬೇಕು. ಸಾಧ್ಯವಾದುದನ್ನು ಮಾತ್ರ ಮಾಡಲು ಮುಂದಾಗಬೇಕು.

ಮಹಿಳಾ ಮೀಸಲಾತಿ: ನಿರೀಕ್ಷೆ ಇನ್ನೂ ಜೀವಂತ?

ಡಾ. ಮೈತ್ರಿ ಭಟ್, ವಿಟ್ಲ



ಕೇವಲ ಅಡುಗೆ ಮನೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿದ್ದ ಸ್ತ್ರೀಯು ಇಂದು ಬಾನೆತ್ತರಕ್ಕೆ ಚಿಮ್ಮುವಷ್ಟು ವಿಶಾಲವಾಗಿ, ವೈವಿಧ್ಯಮಯವಾಗಿ ಬೆಳೆದಿದ್ದಾಳೆ. ಇಂತಹ ಮಹಿಳೆ ಭಾರತೀಯ ಪ್ರಜಾಪ್ರಭುತ್ವದ ಅಭಿವೃದ್ಧಿಯ ಪಯಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರೂ ಮಹಿಳೆಯರ ಪ್ರಾತಿನಿಧಿತ್ವ ಎಂಬ ಪ್ರಶ್ನೆ ದೀರ್ಘಕಾಲದಿಂದಲೂ ಚರ್ಚೆಯ ವಿಷಯವಾಗಿದೆ. ಈ ಅಸಮಾನತೆಯನ್ನು ಸರಿಪಡಿಸುವಲ್ಲಿ ಮಹಿಳಾ ಮೀಸಲಾತಿ ಒಂದು ಐತಿಹಾಸಿಕ ಹೆಜ್ಜೆಯಾಗಿದ್ದರೂ ಆ ಮಸೂದೆಯೀಗ ಸೋಲು ಕಂಡಿದೆ.

ಮಹಿಳೆಯರು ತಮ್ಮ ಸಾಮರ್ಥ್ಯದಿಂದಲೇ ಸ್ಥಾನ ಗಳಿಸಬೇಕು, ಮೀಸಲಾತಿಯ ಅವಲಂಬನೆ ಬೇಡ ಎಂಬ ಮಾತು, ವಾದ ಒಂದೆಡೆಯಿದ್ದರೂ ಮಹಿಳಾ ಮೀಸಲಾತಿಯ ಮೂಲ ಉದ್ದೇಶವೇ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಅದರಲ್ಲೂ ಮಹಿಳೆಯರು ಸಮಾಜದಲ್ಲಿನ ಸಾಂಸ್ಕೃತಿಕ, ಆರ್ಥಿಕ, ಮತ್ತು ಶೈಕ್ಷಣಿಕ ಅಡೆತಡೆಗಳ ಪರಿಣಾಮವಾಗಿ ರಾಜಕೀಯ ಕ್ಷೇತ್ರದಲ್ಲಿ ಮುಂದುವರಿಯುವುದು ಸುಲಭವಲ್ಲ. ಆದುದರಿಂದ ಮೀಸಲಾತಿಯ ಮೂಲಕ ಸಮಾನತೆ ತರುವ ಪ್ರಯತ್ನವಿದು. ಪಂಚಾಯತ್ ಮಟ್ಟದಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಬಂದ ನಂತರ ಅನೇಕ ಮಹಿಳೆಯರು ನಾಯಕತ್ವವನ್ನು ಸ್ವೀಕರಿಸಿದ್ದು ಇದು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಸಾಮಾಜಿಕ ಬದಲಾವಣೆಗೆ ದಾರಿ ಮಾಡಿಕೊಟ್ಟಿದೆ. ಹೀಗಿದ್ದೂ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಮಾತ್ರ ಇನ್ನೂ ಕಡಿಮೆಯೇ ಇದೆ.

ಕಳೆದ ಕೆಲವು ದಶಕಗಳಿಂದ ನಡೆಯುತ್ತಿರುವ ಈ ಚರ್ಚೆಯ ಮಧ್ಯೆ ಮಹಿಳಾ ಮೀಸಲಾತಿ ಮಸೂದೆ ಒಂದು ವೇಳೆ ಸಂಸತ್ತಿನಲ್ಲಿ ಅಂಗೀಕಾರವಾಗುತ್ತಿದ್ದರೆ ದೇಶದಲ್ಲಿಯೇ ಈ ನಿರ್ಣಯ ಒಂದು ಮಹತ್ವದ ಹೆಜ್ಜೆಯಾಗಬೇಕಾಗಿತ್ತು. ಮಹಿಳೆಯರಿಗೆ 33% ಮೀಸಲಾತಿ ನೀಡುವ ಉದ್ದೇಶದಿಂದ ರೂಪುಗೊಂಡ ಈ ಮಸೂದೆ ಮಹಿಳೆಯರಿಗೆ ರಾಜಕೀಯವಾಗಿಯೂ ಅವಕಾಶಗಳನ್ನು ವಿಸ್ತರಿಸುವ ದಿಕ್ಕಿನಲ್ಲಿ ಕ್ರಾಂತಿಕಾರಿಯಾಗಬಹುದಿತ್ತು. ಆದರೆ ಈ ಮಸೂದೆಗೆ ಉಂಟಾದ ಸೋಲು ಕೇವಲ ಕಾನೂನಿನ ವಿಫಲತೆ ಮಾತ್ರವಾಗಿರದೆ ಸಮಾಜದ ಮನೋಭಾವ, ರಾಜಕೀಯ ಉದ್ದೇಶಗಳು ಮತ್ತು ಲಿಂಗ ಸಮಾನತೆಯ ವಿಚಾರಗಳನ್ನೇ ಪ್ರಶ್ನೆಗೊಳಪಡಿಸುತ್ತದೆ.

ಮೊದಲನೆಯದಾಗಿ ಇದು ರಾಜಕೀಯ ಪಕ್ಷಗಳ ದ್ವಂದ್ವ ನಿಲುವನ್ನು ಸೂಚಿಸುತ್ತದೆ. ಮಹಿಳಾ ಸಬಲೀಕರಣದ ಬಗ್ಗೆ ಸದಾ ಘೋಷಣೆಗಳನ್ನು ಕೂಗುತ್ತಾ ಬೊಬ್ಬಿರಿಯುವ ಪಕ್ಷಗಳು ಕಾರ್ಯರೂಪಕ್ಕೆ ಬರುವ ಕ್ಷಣದಲ್ಲಿ ಹಿಂದೇಟು ಹಾಕಿರುವುದರಿಂದ ದ್ವಂದ್ವ ನಿಲುವು ಸ್ಪಷ್ಟವಾಗಿದೆ. ಜೊತೆಗೆ ಸಮಾಜದಲ್ಲಿ ಹಿಂದಿನಿಂದಲೂ ಬೇರು ಬಿಟ್ಟಿರುವ, ಸದ್ದಿಲ್ಲದೇ ಮನದೊಳಗೆ ಅಡಗಿರುವ ಪಿತೃತ್ವ ಮನೋಭಾವದ ಬಗೆಗೂ ಮತ್ತೆ ಯೋಚಿಸುವಂತೆ ಮಾಡಿ ಮಹಿಳೆಯರು ಆಡಳಿತ ಚುಕ್ಕಾಣಿ ಹಿಡಿಯಲು ಇನ್ನೂ ಅಡ್ಡಿಗಳಿವೆ ಎಂಬುದನ್ನು ಈ ಘಟನೆ ಮತ್ತೊಮ್ಮೆ ಸಾಬೀತುಪಡಿಸಿದೆ. ಸೂಕ್ಷ್ಮವಾಗಿ ಗಮನಿಸಿದರೆ ಮಹಿಳೆಯರ ಸಾಮರ್ಥ್ಯವನ್ನು ಪ್ರಶ್ನಿಸುವ ಧೋರಣೆ,



ಮಹಿಳೆಯರೇ ಸಿದ್ಧರಿಲ್ಲ ಎಂಬ ನೆಪದಲ್ಲಿ ಅವರಿಗೆ ಅವಕಾಶಗಳನ್ನು ನಿರಾಕರಿಸುವುದು ಇವೆಲ್ಲವೂ ಪ್ರಗತಿಗೆ ಅಡ್ಡಿಗಳಾಗಿವೆ.

ಮಸೂದೆ ಜಾರಿಯನ್ನು ಜನಗಣತಿ ಮತ್ತು ಕ್ಷೇತ್ರ ಪುನರ್ವಿಂಗಡಣೆ ನಂತರಕ್ಕೆ ಮುಂದೂಡಿದ್ದರೂ, ಈ ಸೋಲಿನಿಂದ ನಾವೊಂದು ಪ್ರಮುಖ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ನಿಜವಾಗಿಯೂ ನಾವು ಲಿಂಗ ಸಮಾನತೆಯ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದೇವೆಯೇ? ಇದನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ ಈ ಸೋಲು ಮತ್ತೊಂದು ಅವಕಾಶವೂ ಹೌದು. ಇದು ಚರ್ಚೆಯನ್ನು ಮತ್ತೆ ಜೀವಂತಗೊಳಿಸಿ ಮಹಿಳಾ ಸಂಘಟನೆಗಳು, ನಾಗರಿಕ ಸಮಾಜ ಮತ್ತು ಯುವಜನತೆ ಈ ವಿಷಯವನ್ನು ಮತ್ತಷ್ಟು ಗಂಭೀರವಾಗಿ ಯೋಚಿಸುವಂತೆ ಮಾಡಿದೆ. ಸಾಮಾನ್ಯವಾಗಿ ಒಂದು ಸಮಾಜದ ಒತ್ತಡಕ್ಕೆ ರಾಜಕೀಯ ನಿರ್ಧಾರಗಳನ್ನು ಬದಲಾಯಿಸುವ ಶಕ್ತಿಯಿದೆ.

ಕೇವಲ ಸಂಖ್ಯೆಯ ವಿಷಯವಲ್ಲ

ಹಾಗೆಂದು ಮಹಿಳೆಯರ ರಾಜಕೀಯ ಪ್ರತಿನಿಧಿತ್ವವು ಕೇವಲ ಸಂಖ್ಯೆಯ ವಿಷಯವಲ್ಲ; ಅದು ನೀತಿ ರೂಪಿಸುವ ಪ್ರಕ್ರಿಯೆಯ ಗುಣಮಟ್ಟವನ್ನು ಕೂಡಾ ನಿರ್ಧರಿಸುತ್ತದೆ. ಮಹಿಳೆಯರು ಆಡಳಿತದಲ್ಲಿ ಹೆಚ್ಚು ಭಾಗವಹಿಸಿದಾಗ ಆರೋಗ್ಯ, ಶಿಕ್ಷಣ, ಮಕ್ಕಳ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯದ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತದೆ ಎಂಬುದು ಅಧ್ಯಯನಗಳಿಂದ ಸಾಬೀತಾಗಿದೆ. ಹೀಗಾಗಿ ಮಹಿಳೆಯರ ಪ್ರತಿನಿಧಿತ್ವ ಹೆಚ್ಚಾದರೆ ಸಮಾಜದ ಸಮಗ್ರ ಅಭಿವೃದ್ಧಿಗೆ ಸಹಕಾರಿ ಆಗಬಹುದು.

ಹಾಗೆಂದು ಮಹಿಳೆಯರಿಗೆ ಮೀಸಲಾತಿ ಸಿಗುವುದರಿಂದಲೇ ಸಮಾನತೆ ಸಾಧ್ಯವಾಗುವುದಿಲ್ಲ. ರಾಜಕೀಯ ಪಕ್ಷಗಳು ಕೂಡಾ ಮಹಿಳಾ ಅಭ್ಯರ್ಥಿಗಳನ್ನು ನಾಯಕತ್ವಕ್ಕೆ ಉತ್ತೇಜಿಸುವ ಮನೋಭಾವ ಬೆಳೆಸಿಕೊಳ್ಳಬೇಕಿದೆ. ಇಲ್ಲವಾದರೆ ಪ್ರಾಕ್ಸಿ ರಾಜಕೀಯ ಹೆಚ್ಚಾಗುವ ಸಾಧ್ಯತೆ ಇದೆ. ಅಂದರೆ ಮಹಿಳೆಯರು ಅಧಿಕಾರದಲ್ಲಿದ್ದರೂ ನಿರ್ಧಾರಗಳನ್ನು ಪುರುಷರು ತೆಗೆದುಕೊಳ್ಳುವ ಸ್ಥಿತಿ ಕೆಲವೆಡೆ ಕಂಡುಬರುತ್ತದೆ. ಇದು ಮೀಸಲಾತಿಯ ಮೂಲ ಉದ್ದೇಶವನ್ನೇ ಹಾಳುಗೆಡಹುತ್ತದೆ. ಮಹಿಳೆಯರ ಸ್ವತಂತ್ರ ನಾಯಕತ್ವ ಬೆಳೆಯಬೇಕಾದರೆ ಅವರಿಗೆ ಶಿಕ್ಷಣ, ಜಾಗೃತಿ ಮತ್ತು ಆರ್ಥಿಕ ಸ್ವಾವಲಂಬನೆ ಅಗತ್ಯ.

> ಮಹಿಳೆಯರ ರಾಜಕೀಯ ಪ್ರತಿನಿಧಿತ್ವವು ಕೇವಲ ಸಂಖ್ಯೆಯ ವಿಷಯವಲ್ಲ; ಅದು ನೀತಿ ರೂಪಿಸುವ ಪ್ರಕ್ರಿಯೆಯ ಗುಣಮಟ್ಟವನ್ನು ಕೂಡಾ ನಿರ್ಧರಿಸುತ್ತದೆ.

ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಪ್ರಭಾವ ಹೊಂದಿರುವ ಕುಟುಂಬಗಳ ಮಹಿಳೆಯರು ಮೀಸಲಾತಿಯಿಂದ ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ ಎಂಬ ಟೀಕೆ ಇದೆ. ಹೀಗಾಗಿ ಮೀಸಲಾತಿಯ ಲಾಭವು ಸಮಾನವಾಗಿ ಹಂಚಿಕೆಯಾಗುವುದಿಲ್ಲ ಎಂಬ ಆತಂಕವೂ ಇದೆ. ಮಾತ್ರವಲ್ಲ, ಇಂದಿನ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ವಿಷಯವು ಚುನಾವಣೆ ಸಮಯದಲ್ಲಿ ಮಹಿಳೆಯರ ಮತಗಳನ್ನು ಆಕರ್ಷಿಸಲು ರಾಜಕೀಯ ಲಾಭಕ್ಕಾಗಿ ಬಳಸಲ್ಪಡುತ್ತದೆ ಎಂಬ ಆರೋಪವೂ ಇದೆ. ಜೊತೆಗೆ ಮಹಿಳೆಯರು ಕೇವಲ ಸಂಖ್ಯೆಯಲ್ಲಿ ಪ್ರತಿನಿಧಿಸಿದರೆ ಸಾಲದು. ಅವರಿಗೆ ಪರಿಣಾಮಕಾರಿ ನಾಯಕತ್ವಕ್ಕಾಗಿ ತರಬೇತಿ, ಮಾರ್ಗದರ್ಶನ ಮತ್ತು ರಾಜಕೀಯ ಜ್ಞಾನ ಅಗತ್ಯ ಹಾಗೂ ಅದು ಕೇವಲ ಕಾಗದದಲ್ಲಿನ ಸುಧಾರಣೆಯಾಗಿ ಮಾತ್ರವೇ ಆಗಿರದೆ ಮಸೂದೆ ಜಾರಿ, ಸಮಗ್ರ ಒಳಮೀಸಲಾತಿ ಮತ್ತು ಮಹಿಳೆಯರ ನೈಜ ಸಬಲೀಕರಣವನ್ನು ಒಳಗೊಂಡಾಗ ಮಾತ್ರ ಮಸೂದೆಯ ಉದ್ದೇಶ ಈಡೇರಲು ಸಾಧ್ಯ.

ಪುಟ್ಟ ವಿರಾಮ ಮಾತ್ರ

ಈ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸೋಲು ಎಂಬುದು ಒಂದು ಪುಟ್ಟ ವಿರಾಮ ಮಾತ್ರ. ಏಕೆಂದರೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಿಸಬೇಕೆಂಬುದು ಕೇವಲ ಘೋಷಣೆಯಲ್ಲ, ಅದು ಕಾರ್ಯರೂಪಕ್ಕೆ ಬರಬೇಕಾದ ಅಗತ್ಯವಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ನೀಡಲಾದ ಮೀಸಲಾತಿಯು ಹಲವಾರು ಉತ್ತಮ ಫಲಿತಾಂಶಗಳನ್ನು ನೀಡಿರುವುದು ನಮ್ಮ ಕಣ್ಣ ಮುಂದಿದೆ. ಅದೇ ಮಾದರಿಯನ್ನು ರಾಷ್ಟ್ರಕ್ಕೂ ವಿಸ್ತರಿಸುವುದು ಉಚಿತವೂ ಹೌದು. ಅಷ್ಟಾದರೆ ಸಾಲದು, ಸಾಮಾಜಿಕ ಮನೋಭಾವದಲ್ಲಿ ಬದಲಾವಣೆ ಅಗತ್ಯವಾಗಿದ್ದು, ಮಹಿಳೆಯರನ್ನು ಸಮಾನವಾಗಿ ಕಾಣುವ ಸಂಸ್ಕೃತಿ ಬೆಳೆಯಬೇಕು. ಮನೆಯಿಂದಲೇ ಲಿಂಗ ಸಮಾನತೆಯ ಮೌಲ್ಯಗಳನ್ನು ಬೆಳೆಸಬೇಕು ಹಾಗೂ ಮಹಿಳೆಯರು ಸಮಾಜದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಗೆ ಬಂದಾಗ ಮಾತ್ರ ನಿಜವಾದ ಸಮಾನತೆ ಸಾಧ್ಯ. ಇಲ್ಲಿ ಮಹಿಳೆಯರಿಗೆ ಅವಕಾಶ ನೀಡುವುದು ಎಂದರೆ ಅದು ಕೃಪೆಯಲ್ಲ. ಅದು ಅವರ ಹಕ್ಕು. ಆದುದರಿಂದ ಆ ಹಕ್ಕನ್ನು ಒದಗಿಸಲು ವಿಫಲವಾದರೆ ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯೇ ಅಪೂರ್ಣವಾಗುತ್ತದೆ.

ಒಟ್ಟಿನಲ್ಲಿ ಇದರ ಯಶಸ್ಸು ಕೇವಲ ಕಾನೂನುಬದ್ಧ ವ್ಯವಸ್ಥೆಯ ಮೇಲೆ ಮಾತ್ರ ಅವಲಂಬಿತವಾಗಿಲ್ಲ; ಅದು ಸಾಮಾಜಿಕ ಬದಲಾವಣೆ, ರಾಜಕೀಯ ಇಚ್ಛಾಶಕ್ತಿ ಮತ್ತು ಮಹಿಳೆಯರ ಸಕ್ರೀಯ ಭಾಗವಹಿಸುವಿಕೆಯ ಮೇಲೆ ಅವಲಂಬಿತವಾಗಿದೆ. ಹೀಗಿರುವಾಗ ಈ ಕಾಯ್ದೆಯನ್ನು ಕೇವಲ ರಾಜಕೀಯ ಸಾಧನವಾಗಿ ಬಳಸದೇ ನಿಜ ಸಬಲೀಕರಣದ ಮಾಧ್ಯಮವಾಗಿ ರೂಪಿಸುವುದು ಎಲ್ಲರ ಜವಾಬ್ದಾರಿಯಾಗಿದೆ.

ಲಾಲೂ ಜಂಗಲ್‌ರಾಜ್‌ಗಿಂತ ಕೆಟ್ಟದು 'ಮಮತಾ ಜಂಗಲ್‌ರಾಜ್'

ಮಜುಂದಾರ್

ಬಿಹಾರದಲ್ಲಿ ಲಾಲೂಪ್ರಸಾದ್ ಅವರ ಆಡಳಿತ ಕಾಲವನ್ನು ದೇಶದ ಅತ್ಯಂತ ದುರಾಡಳಿತದ ಅವಧಿ ಎಂಬುದಾಗಿ ಪರಿಗಣಿಸಲಾಗುತ್ತದೆ. ಯಾವುದೇ ಕೆಟ್ಟ ಆಡಳಿತವನ್ನು ಅದರೊಂದಿಗೆ ಹೋಲಿಸಲಾಗುತ್ತದೆ. 1990ರಿಂದ 2000 ಇಸವಿಯವರೆಗೆ ಬಿಹಾರದಲ್ಲಿ ಅಪರಾಧಗಳು, ಜಾತಿ ಸಂಘರ್ಷ, ಅಪಹರಣ, ಕೊಲೆ, ಅತ್ಯಾಚಾರ, ಆರ್ಥಿಕ ದುಃಸ್ಥಿತಿ ಮುಂತಾದವೆಲ್ಲ ದೈನಂದಿನ ವ್ಯವಹಾರದಂತಿದ್ದವು. ಲಾಲೂ ಪ್ರಸಾದ್ ಆಡಳಿತವನ್ನು ಜಂಗಲ್‌ರಾಜ್ ಎಂದೇ ಕರೆಯಲಾಗುತ್ತಿತ್ತು. ಅವರ ಬಳಿಕ ಅಧಿಕಾರಕ್ಕೇರಿದ ಪತ್ನಿ ರಾಬ್ಡಿ ದೇವಿ ಆಡಳಿತಾವಧಿ ಕೂಡಾ ಅದಕ್ಕಿಂತ ಭಿನ್ನಾಗಿರಲಿಲ್ಲ. ಏಕೆಂದರೆ ಅಧಿಕಾರದ ಸೂತ್ರ ಲಾಲೂ ಪ್ರಸಾದ್‌ರ ಕೈಯಲ್ಲೇ ಇತ್ತು. ಲಾಲೂ ಪ್ರಸಾದ್‌ರ ಜಂಗಲ್‌ರಾಜ್‌ನ್ನು ಮೀರಿಸುವ ದುರಾಡಳಿತ ಇನ್ನಾವುದೂ ಇಲ್ಲ ಎನ್ನಲಾಗುತ್ತಿತ್ತು.

ಈಗ ನೋಡಿದರೆ ಪ.ಬಂಗಾಳದ ಮಮತಾ ಬ್ಯಾನರ್ಜಿ ಆಡಳಿತವು ಬಿಹಾರದ ಜಂಗಲ್‌ರಾಜ್‌ನ್ನೂ ಮೀರಿಸುವ ಮಟ್ಟಿಗೆ ಕುಪ್ರಸಿದ್ಧಿಪಡೆಯುತ್ತಿದೆ. ಮಮತಾ ಆಡಳಿತವು ಪ.ಬಂಗಾಳವಷ್ಟೇ ಅಲ್ಲದೇ ಇಡೀ ದೇಶದ ಪಾಲಿಗೆ ಅಪಾಯಕಾರಿಯಾಗಿ ಪರಿಣಮಿಸುತ್ತಿದೆ.

ನರೇಂದ್ರ ಮೋದಿಯವರು ಟಿಎಂಸಿ ಅಧಿಕಾರವನ್ನು 'ಮಹಾ ಜಂಗಲ್‌ರಾಜ್' ಎಂಬುದಾಗಿ ಇತ್ತೀಚೆಗೆ ಬಣ್ಣಿಸಿದ್ದು ಅತಿಶಯೋಕ್ತಿಯಾಗಿ ಕಂಡುಬರುವುದಿಲ್ಲ. ಮಮತಾ ದುರಾಡಳಿತವು ರಾಜ್ಯದ ವ್ಯವಸ್ಥೆಯನ್ನೇ ಹದಗೆಡಿಸಿದ್ದು, ರಾಜ್ಯದಲ್ಲಿ ಅಪರಾಧ, ಗೂಂಡಾಪ್ರವೃತ್ತಿ ಹೆಚ್ಚುವಂತಾಗಿದೆ. ಅದರ ಜತೆಗೇ ರಾಷ್ಟ್ರವಿರೋಧಿ ಶಕ್ತಿಗಳೂ ಹೆಚ್ಚೆಚ್ಚು ಸಕ್ರಿಯವಾಗಿದ್ದು, ಇದು ಇಡೀ ದೇಶದ ಮೇಲೆಯೇ ದೀರ್ಘಾವಧಿ ದುಷ್ಪರಿಣಾಮ ಬೀರುವಂತಾದ್ದಾಗಿದೆ.

ಪ.ಬಂಗಾಳದಲ್ಲಿ ರಾಜಕೀಯ ಹಿಂಸಾಚಾರವು ದೈನಂದಿನ ವ್ಯವಹಾರದಂತಾಗಿದೆ. ಮಮತಾ ಪಕ್ಷವು ರಾಜಕೀಯ ಹಿಂಸೆಯನ್ನು ಸಾಂಸ್ಥಿಕಗೊಳಿಸಿದೆ. ಅದೀಗ ಸಿಂಡಿಕೇಟ್ ರಾಜ್‌ನಂತಾಗಿದೆ. ಗೋವು ಸಾಗಣೆ, ಕಲ್ಲಿದ್ದಲು ಸಾಗಣೆ, ಮರಳು ಸಾಗಣೆ, ರಿಯಲ್ ಎಸ್ಟೇಟ್, ಶಿಕ್ಷಣ, ಆರೋಗ್ಯ, ಮೂಲಸೌಲಭ್ಯ ಮತ್ತು ಪ್ರಕೃತಿ ವಿಕೋಪ ಪರಿಹಾರ ಮೊದಲಾದವುಗಳೆಲ್ಲಾ ಮಾಫಿಯಾ ಕೈಗೆ ಒಪ್ಪಿಸಲ್ಪಟ್ಟಿದೆ. ರಾಜಕೀಯ ಬೆದರಿಕೆ ಮತ್ತು ಕೊಲೆಗಳು ಲಾಲೂ ಜಂಗಲ್‌ರಾಜ್‌ನಲ್ಲಿ ಕಂಡುಬಂದುದಕ್ಕಿಂತಲೂ ಅಧಿಕವಾಗಿದೆ.

ಆರ್ಥಿಕ ಮಾನದಂಡದಲ್ಲಿ ಮಮತಾ ಸರಕಾರವು ಲಾಲೂ ಸರಕಾರಕ್ಕಿಂತ ತುಸು ಮೇಲಿದೆ ನಿಜ. ಒಟ್ಟು ಜಿಡಿಪಿ ಲಾಲೂ ಆಡಳಿತಾವಧಿಯಲ್ಲಿ ಶೇ. 2-4 ಇದ್ದರೆ, ಮಮತಾ ಅವಧಿಯಲ್ಲಿ ಶೇ. 6-7 ಇದೆ. ಬಿಹಾರವು ಸದಾ ಬಡತನದ ಪರಿಸ್ಥಿತಿಯಲ್ಲೇ ಇದ್ದರೆ ಪಂ.ಬಂಗಾಳವು ಅದಕ್ಕಿಂತ ತುಸು ಮೇಲ್ಮಟ್ಟದಲ್ಲಿದೆ.



ಆದರೆ ಮಮತಾ ಆಡಳಿತಾವಧಿಯಲ್ಲಿ ಕೈಗಾರಿಕೆಗಳು ಮತ್ತು ಹೂಡಿಕೆಯು ಅಧೋಗತಿ ಕಾಣುತ್ತಿದೆ. ಕಂಪೆನಿಗಳೆಲ್ಲಾ ಪ.ಬಂಗಾಳದಿಂದ ಗುಳೇ ಏಳುತ್ತಿವೆ. 2011ರಿಂದ 2025ರ ಅವಧಿಯಲ್ಲಿ 6688 ಕಂಪನಿಗಳು ಪ.ಬಂಗಾಳದಿಂದ ಬೇರೆ ರಾಜ್ಯಕ್ಕೆ ತೆರಳಿವೆ. ಮಮತಾ ಆಡಳಿತಾವಧಿಯಲ್ಲಿ ರಾಜ್ಯದ ಸಾಲವು ರೂ. 7 ಲಕ್ಷ ಕೋಟಿ ತಲುಪಿದೆ. ಒಂದು ಕಾಲದಲ್ಲಿ ಪ.ಬಂಗಾಳದ ಶಿಕ್ಷಣ ವ್ಯವಸ್ಥೆಯು ಪ್ರಖ್ಯಾತವಾಗಿತ್ತು. ಆದರೆ ಈಗ ಅದು ಕುಸಿಯತೊಡಗಿದೆ. ಕಾಲೇಜು ಕ್ಯಾಂಪಸ್‌ಗಳು ರಾಜಕೀಯ ಮತ್ತು ಹಿಂಸೆಯ ಅಡ್ಡೆಗಳಾಗಿವೆ.

ಎಡಪಂಥೀಯರ ಆಳ್ವಿಕೆಯಿಂದಲೇ ರಾಜ್ಯದ ಈ ಅವನತಿ ಆರಂಭವಾಗಿದ್ದು ಮಮತಾ ಅವಧಿಯಲ್ಲಿ ಇನ್ನೂ ಪತನ ಕಂಡಿದೆ. ಕಾನೂನು ವ್ಯವಸ್ಥೆಯಂತೂ ಲಾಲೂ ಅವಧಿಯ ಬಿಹಾರಕ್ಕಿಂತಲೂ ಕುಸಿದಿದೆ. 2011ರಿಂದ 2020ರ ಅವಧಿಯಲ್ಲಿ ಪ.ಬಂಗಾಳದಲ್ಲಿ 114 ರಾಜಕೀಯ ಕೊಲೆಗಳು ಸಂಭವಿಸಿವೆ. 2019ರ ಲೋಕಸಭಾ ಚುನಾವಣೆಯ ಬಳಿಕ ಬಿಜೆಪಿಯ ನೂರಾರು ಮಂದಿ ಸದಸ್ಯರನ್ನು ಕೊಲ್ಲಲಾಗಿದೆ ಎಂದು ಪಕ್ಷವು ಆರೋಪಿಸುತ್ತಿದೆ. 2021ರ ಚುನಾವಣೆ ನಂತರ ನಡೆದ ಹಿಂಸಾಚಾರದಲ್ಲಿ ಬಹಳಷ್ಟು ಬಿಜೆಪಿ ಕಾರ್ಯಕರ್ತರು ಸಾವಿಗೀಡಾಗಿದ್ದರು.

90ರ ದಶಕದ ಬಿಹಾರವು ಅಪರಾಧ ಕೃತ್ಯದಲ್ಲಿ ಅಗ್ರಸ್ಥಾನದಲ್ಲಿದ್ದರೆ (ಡಕಾಯಿತಿ, ಅಪಹರಣ, ಕೊಲೆ, ಜಾತಿ ಆಧಾರಿತ ಹಿಂಸಾಚಾರ) ಈಗ ಪ.ಬಂಗಾಳವು ಆ ಸ್ಥಾನವನ್ನು ಕಸಿದಿದೆ. ಮಹಿಳೆಯ ವಿರುದ್ಧ ಹಿಂಸಾಚಾರ ಮತ್ತು ದೌರ್ಜನ್ಯ ಮೇರೆ ಮೀರಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಪ.ಬಂಗಾಳವು ಆತಂಕಕಾರಿಯಾಗಿ ಕಂಡುಬರುತ್ತಿರುವುದು ಅಲ್ಲಿನ ಜನಸಂಖ್ಯಾ ಬದಲಾವಣೆ ಕಾರಣಕ್ಕಾಗಿ. ಅಕ್ರಮ ವಲಸಿಗರು ರಾಜ್ಯವನ್ನು ನಿರಂತರವಾಗಿ ತುಂಬುತ್ತಿದ್ದಾರೆ. ಇದು ಇಡೀ ದೇಶದ ಭದ್ರತೆಗೇ ಅಪಾಯಕಾರಿಯಾಗಿ ಪರಿಣಮಿಸಿದೆ. ಭಯೋತ್ಪಾದಕ ಸಂಘಟನೆಗಳು ಹೆಚ್ಚುತ್ತಿದ್ದು, ದೇಶವಿರೋಧಿ ಚಟುವಟಿಕೆಗಳೂ ಹೆಚ್ಚುತ್ತಿವೆ. ಗಡಿಯಾಚೆಗಿನ ಭಾರತ ವಿರೋಧಿ ಶಕ್ತಿಗಳೊಂದಿಗೆ ಇಲ್ಲಿನ ಜನರ ಸಂಪರ್ಕ ಹೆಚ್ಚುತ್ತಿದೆ.

ಮಾಲ್ಡಾ, ಮುರ್ಶಿದಾಬಾದ್, ದಕ್ಷಿಣ ದಿನಾಜ್‌ಪುರ, ದಕ್ಷಿಣ 24 ಪರಗಣ ಜಿಲ್ಲೆಗಳಲ್ಲಿ ಬಾಂಗ್ಲಾದೇಶೀ ಅತಿಕ್ರಮಣಕಾರರ ಸಂಖ್ಯೆ ವಿಪರೀತ ಹೆಚ್ಚಿದೆ. ವಲಸಿಗರಿಂದ ನಡೆಯುತ್ತಿರುವ ಅಪರಾಧ ಕೃತ್ಯಗಳೂ ಹೆಚ್ಚಿವೆ. ಇವೆಲ್ಲಾ ದೇಶದ ಭದ್ರತೆಗೆ ಅಪಾಯಕಾರಿ ಬೆಳವಣಿಗೆಗಳು. ವಿಪರ್ಯಾಸವೆಂದರೆ ಗಡಿಯಲ್ಲಿ ಬೇಲಿ ಹಾಕುವುದಕ್ಕೂ ಟಿಎಂಸಿ ವಿರೋಧ ವ್ಯಕ್ತಪಡಿಸುತ್ತಿದೆ. ಆ ಮೂಲಕ ಜಿಹಾದಿ ಶಕ್ತಿಗಳಿಗೆ ಪರೋಕ್ಷ ಬೆಂಬಲ ನೀಡುತ್ತಿದೆ. ಇದಕ್ಕೆ ಹೋಲಿಸಿದರೆ, ಬಿಹಾರದಲ್ಲಿ ಇಸ್ಲಾಮಿಕ್ ಭಯೋತ್ಪಾದಕರಿಗೆ ಈ ಬಗೆಯ ಬೆಂಬಲ ಸಿಗುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು.

ಒಟ್ಟಿನಲ್ಲಿ ಮಮತಾ ಬ್ಯಾನರ್ಜಿಯವರ ಪ.ಬಂಗಾಳವು ದೇಶದ ಭದ್ರತೆಗೆ ದೊಡ್ಡ ಸವಾಲನ್ನು ಒಡ್ಡುತ್ತಿದೆ. ಲಾಲೂ ಪ್ರಸಾದರ ಬಿಹಾರಕ್ಕಿಂತಲೂ ಈ ಸವಾಲು ದೊಡ್ಡದು. ಹಾಗಾಗಿ ಪ.ಬಂಗಾಳದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯು ಆ ರಾಜ್ಯಕ್ಕಷ್ಟೇ ಅಲ್ಲದೆ ಇಡೀ ದೇಶದ ಪಾಲಿಗೆ ನಿರ್ಣಾಯಕವಾಗಿದೆ.

> ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಆಡಳಿತವು ಬಿಹಾರದ ಲಾಲೂ ಆಡಳಿತಕ್ಕಿಂತ ಹೆಚ್ಚು ದುರಾಡಳಿತ ಹೊಂದಿದೆ. ಜತೆಗೇ ಇದು ದೇಶದ ಪಾಲಿಗೂ ಅಪಾಯಕಾರಿಯಾಗಿದೆ.

ಇರಾನ್ ಒಪ್ಪಂದ ಮಾಡಿಕೊಳ್ಳದಿದ್ದರೆ ದಾಳಿ
ಶಾಂತಿ ಸಭೆಗೂ ಮುನ್ನ ಟ್ರಂಪ್ ಹೊಸ ಬೆದರಿಕೆ

ಒಪ್ಪಂದ ಆಗದಿದ್ದರೆ ಇರಾನ್‌ಗೆ ಬಾಂಬ್?

ವಾಷಿಂಗ್ಟನ್: ತಾತ್ಕಾಲಿಕ ಕದನ ವಿರಾಮವನ್ನು ವಿಸ್ತರಿಸುವ ಯಾವುದೇ ಇಚ್ಛೆಯಿಲ್ಲ, ಬುಧವಾರದೊಳಗೆ ಒಪ್ಪಂದ ಮಾಡಿಕೊಳ್ಳಲು ಇರಾನ್ ಒಪ್ಪಿಕೊಳ್ಳದಿದ್ದರೆ, ಇರಾನ್ ಮೇಲೆ ಬಾಂಬ್ ದಾಳಿ ಆರಂಭಿಸುತ್ತೇನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೊಸ ಬೆದರಿಕೆಯೊಡ್ಡಿದ್ದಾರೆ.

ಅಮೆರಿಕ-ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮವು ಬುಧವಾರ (ಏ.22) ಕೊನೆಗೊಳ್ಳಲಿದೆ. ಇರಾನ್‌ನೊಂದಿಗಿನ ಕದನ ವಿರಾಮ ವಿಸ್ತರಿಸುವ ಮೂಲಕ ಶಾಂತಿ ಮಾತುಕತೆಗೆ ಇನ್ನಷ್ಟು ಸಮಯ ನೀಡುವಿರಾ ಎಂಬ ಸುದ್ದಿಗಾರರ ಪ್ರಶ್ನೆಗೆ ಅಧ್ಯಕ್ಷ ಟ್ರಂಪ್, ಕದನ ವಿರಾಮವನ್ನು ವಿಸ್ತರಿಸಲು ನಾನು ಬಯಸುವುದಿಲ್ಲ. ಅಷ್ಟೊಂದು ಸಮಯ ನಮ್ಮ ಬಳಿಯಿಲ್ಲ ಎಂದು ಉತ್ತರಿಸಿದ್ದಾರೆ.



ಒಪ್ಪಂದ ಮಾಡಿಕೊಂಡರೆ, ಬಲಿಷ್ಠವಾಗಲಿದೆ ಇರಾನ್: ಒಪ್ಪಂದ ಮಾಡಿಕೊಳ್ಳಲು ಇರಾನ್ ಮಾತುಕತೆ ನಡೆಸಿದರೆ, ಉತ್ತಮ ನೆಲೆ ಕಾಣಬಹುದು. ನಮ್ಮ ಜತೆ ಒಪ್ಪಂದ ಮಾಡಿಕೊಂಡರೆ ಇರಾನ್ ಮತ್ತೆ ಬಲಿಷ್ಠ ರಾಷ್ಟ್ರವಾಗಲಿದೆ. ಇರಾನ್ ಮತ್ತೆ ಅದ್ಭುತ ರಾಷ್ಟ್ರವಾಗಲಿದೆ ಎಂದು ಹೇಳಿದ್ದಾರೆ.

ಇರಾನ್ ಬಳಿ ಬೇರೆ ಆಯ್ಕೆಗಳಿಲ್ಲ: ಇರಾನ್‌ನೊಂದಿಗಿನ ಎರಡನೇ ಸುತ್ತಿನ ಶಾಂತಿ ಮಾತುಕತೆ ಬಗ್ಗೆ ನಿಮ್ಮ ನಿರೀಕ್ಷೆ ಏನಿದೆಯೆಂಬ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, ಇರಾನ್‌ಗೆ ನಮ್ಮ ಜತೆ ಒಪ್ಪಂದ ಮಾಡಿಕೊಳ್ಳದೆ ಬೇರೆ ಆಯ್ಕೆಗಳಿಲ್ಲ. ಅವರ ನೌಕಾಪಡೆ ನಾಶ ಮಾಡಿದ್ದೇವೆ. ಅವರ ವಾಯುಪಡೆ ನಾಶ ಮಾಡಿದ್ದೇವೆ ಮತ್ತು ಇರಾನ್ ನಾಯಕರನ್ನು ಸದೆಬಡಿದಿದ್ದೇವೆ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅವರ ಹಳೆಯ ನಾಯಕರನ್ನು ಸದೆಬಡಿದಿದ್ದು, ಒಂದು ರೀತಿಯಲ್ಲಿ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದ್ದ ನಿಜ. ಹಳೆಯ ನಾಯಕರಿಗಿಂತ ಹೊಸ ನಾಯಕರು ಬಹಳ ಹೊಸ ಚಿಂತನಾಶಕ್ತಿ ಉಳ್ಳವರಾಗಿದ್ದಾರೆ. ಇರಾನ್‌ನಲ್ಲಿ ಆಡಳಿತದ ಬದಲಾವಣೆ ಆಗಿದೆ ಎಂಬುದು ಸತ್ಯ. ಅದು ಪರೋಕ್ಷವಾಗಿ ನನ್ನಿಂದಲೇ ಆಗಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿಕೊಂಡಿದ್ದಾರೆ. ಏ.11 ಮತ್ತು 12ರಂದು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಅಮೆರಿಕ- ಇರಾನ್ ನಡುವಿನ ಮೊದಲ ಹಂತದ ಶಾಂತಿ ಮಾತುಕತೆ ಒಪ್ಪಂದ ಅಂತಿಮಗೊಳ್ಳದೆ ಕೊನೆಗೊಂಡಿತ್ತು. ಎರಡನೇ ಸುತ್ತಿನ ಮಾತುಕತೆಯ ಸುತ್ತಲೂ ಹಲವು ಅನಿಶ್ಚಿತತೆಗಳು ಆವರಿಸಿಕೊಂಡಿವೆ.





ಬಾಂಬ್ ದಾಳಿ ಉತ್ತಮ ಆಯ್ಕೆ



ಬುಧವಾರದೊಳಗೆ ಇರಾನ್‌ನೊಂದಿಗೆ ಒಪ್ಪಂದ ಅಂತಿಮಗೊಳ್ಳದಿದ್ದರೆ ನಾನು ಬಾಂಬ್ ದಾಳಿ ಪುನರಾರಂಭಿಸುವ ಸಾಧ್ಯತೆಯಿದೆ. ಬಾಂಬ್ ದಾಳಿ ನಡೆಸುವುದೇ ಉತ್ತಮವೆಂದು ಭಾವಿಸುತ್ತಿದ್ದೇನೆ ಎಂದು ಅಧ್ಯಕ್ಷ ಟ್ರಂಪ್, ಇರಾನ್ ಮೇಲೆ ದಾಳಿ ಪುನರಾರಂಭಿಸುವ ಪೂರ್ವಸಿದ್ಧತೆ ನಡೆಸುತ್ತಿರುವ ಸುಳಿವು ನೀಡಿದ್ದಾರೆ. ಒಪ್ಪಂದ ಮಾಡಿಕೊಳ್ಳದಿದ್ದರೆ ಬಾಂಬ್ ದಾಳಿ ಆರಂಭಿಸುವುದಾಗಿ ಟ್ರಂಪ್ ಇರಾನ್ ನಿಯೋಗಕ್ಕೆ ಬೆದರಿಕೆಯೊಡ್ಡಿದ್ದಾರೆ.

8 ವನಿತೆಯರ ಬಿಡುಗಡೆಗೆ ಮನವಿ

ಇರಾನ್‌ನಲ್ಲಿ 8 ವನಿತೆಯರನ್ನು ಗಲ್ಲಿಗೇರಿಸಲಿದ್ದಾರೆಂಬ ಸುದ್ದಿಗೆ ಪ್ರತಿಕ್ರಿಯಿಸಿದ ಅಧ್ಯಕ್ಷ ಟ್ರಂಪ್, ವನಿತೆಯರನ್ನು ಶೀಘ್ರ ಬಿಡುಗಡೆಗೊಳಿಸಬೇಕು. ಅವರಿಗೆ ಯಾವುದೇ ತೊಂದರೆ ಆಗಬಾರದು. ಇದು ನಮ್ಮ ಒಪ್ಪಂದ ಮಾಡಿಕೊಳ್ಳಲು ಉತ್ತಮ ಆರಂಭವಾಗಲಿದೆ ಎಂದು ಇರಾನ್ ನಾಯಕರಿಗೆ ಮನವಿ ಮಾಡಿದ್ದಾರೆ.

ಬಲಿಷ್ಠ ಸ್ಥಾನದಲ್ಲಿ ಅಮೆರಿಕ: ಟ್ರಂಪ್

ಇರಾನ್‌ನೊಂದಿಗೆ ಒಪ್ಪಂದ ಮಾತುಕತೆಯಲ್ಲಿ ಅಮೆರಿಕ ಬಲಿಷ್ಠ ಸ್ಥಾನದಲ್ಲಿದೆ. ನಾವು ಶ್ರೇಷ್ಠ ಒಪ್ಪಂದ ಮಾಡಿಕೊಳ್ಳಲಿದ್ದೇವೆ. ನಮ್ಮ ಷರತ್ತಿನ ಮೇಲೆ ಒಪ್ಪಂದ ಮಾಡಿಕೊಳ್ಳದೆ ಇರಾನ್ ಮುಂದೆ ಬೇರೆ ಆಯ್ಕೆಗಳಿಲ್ಲ ಎಂದು ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಭೆಗೆ ಭಾಗವಹಿಸಲು ಪಾಕ್ ಬೇಡಿಕೆ

ಶಾಂತಿ ಮಾತುಕತೆಯಲ್ಲಿ ಅಮೆರಿಕ-ಇರಾನ್ ನಿಯೋಗಗಳೆರಡೂ ಭಾಗವಹಿಸಲು ಪಾಕಿಸ್ತಾನ ಎರಡೂ ರಾಷ್ಟ್ರಗಳಿಗೆ ಮನವಿ ಮಾಡಿಕೊಂಡಿದೆ. ಅದರಲ್ಲೂ ವಿಶೇಷವಾಗಿ ಅಮೆರಿಕ ಜತೆ ಮಾತುಕತೆಗೆ ಹಿಂದೇಟು ಹಾಕುತ್ತಿರುವ ಇರಾನ್‌ಗೆ ಭಾಗವಹಿಸುವಂತೆ ಪಾಕ್ ಅಕ್ಷರಶಃ ಬೇಡಿಕೊಂಡಿದೆ. ಶಾಂತಿ ಮಾತುಕತೆ ನಡೆಯಬೇಕಾದರೆ ಇರಾನ್ ನಿರ್ಧಾರವೇ ನಿರ್ಣಾಯಕ, ಇರಾನ್ ಇನ್ನೂ ತನ್ನ ನಿರ್ಧಾರ ಪ್ರಕಟಿಸಿಲ್ಲ ಎಂದು ಪಾಕ್ ಮೂಲಗಳು ಹೇಳಿವೆ.

ಕದನ ವಿರಾಮ ವಿಸ್ತರಣೆಗೆ ಪಾಕ್ ಮನವಿ!

ಅಮೆರಿಕ-ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಬುಧವಾರ ಕೊನೆಗೊಳ್ಳುವ ಹಿನ್ನೆಲೆ, ಕದನ ವಿರಾಮವನ್ನು ವಿಸ್ತರಿಸುವಂತೆ ಅಮೆರಿಕ ಮತ್ತು ಇರಾನ್ ಎರಡೂ ರಾಷ್ಟ್ರಗಳಿಗೆ ಪಾಕಿಸ್ತಾನ ಸರ್ಕಾರ ಮನವಿ ಮಾಡಿದೆ.

ಹಾರ್ಮುಜ್ ದಿಗ್ಬಂಧನ

ಒಪ್ಪಂದ ಅಂತಿಮಗೊಳ್ಳುವವರೆಗೆ ಹಾರ್ಮುಜ್ ಜಲಸಂಧಿ ಹಾಗೂ ಇರಾನ್ ಕರಾವಳಿ ಪ್ರದೇಶಗಳು, ಬಂದರುಗಳ ಮೇಲಿನ ಅಮೆರಿಕ ಸೇನೆಯ ದಿಗ್ಬಂಧನ ಮುಂದುವರಿಯಲಿದೆ. ದಿಗ್ಬಂಧನದ ಪರಿಣಾಮ ಪ್ರತಿ ದಿನ ಇರಾನ್‌ಗೆ 500 ದಶಲಕ್ಷ ಡಾಲರ್ ನಷ್ಟವಾಗುತ್ತಿದೆ ಎಂದು ಟ್ರಂಪ್ ಹೇಳಿದ್ದಾರೆ.

ರೋರಿಂಗ್ ಲಯನ್‌ನಲ್ಲಿ ಮೊಸಾದ್ ಏಜೆಂಟ್ ಬಲಿ

ಜೆರುಸಲೇಮ್: ಯೋಮ್ ಹಾಜಿಕರೋನ್- ರಾಷ್ಟ್ರೀಯ ಸ್ಮಾರಕ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಇಸ್ರೇಲಿ ಗುಪ್ತಚರ ಸಂಸ್ಥೆ ಮೊಸಾದ್ ನಿರ್ದೇಶಕ ಡೇವಿಡ್ ಬಾರ್ನಿಯಾ, ಇರಾನ್ ವಿರುದ್ಧದ ಆಪರೇಷನ್ ರೋರಿಂಗ್ ಲಯನ್‌ನಲ್ಲಿ ಒಬ್ಬ ಮೊಸಾದ್ ಏಜೆಂಟ್ ವಿದೇಶದಲ್ಲಿಯೇ ಹುತಾತ್ಮರಾಗಿದ್ದಾರೆ ಎಂಬ ರಹಸ್ಯ ಮಾಹಿತಿಯನ್ನು ಬಹಿರಂಗಪಡಿಸಿದ್ದಾರೆ. ಹುತಾತ್ಮರಿಗೆ ನಮನ ಸಲ್ಲಿಸಲು ಇಸ್ರೇಲ್, ಜೆರುಸಲೇಮ್‌ನಲ್ಲಿ ಇರುವ ಯಹೂದಿಗಳ ಪವಿತ್ರ ಗೋಡೆಯ ಮುಂದೆ ರಾಷ್ಟ್ರೀಯ ಸ್ಮಾರಕ ದಿನ ಆಚರಿಸುತ್ತದೆ. ಇರಾನ್ ವಿರುದ್ಧದ ಕಾರ್ಯಾಚರಣೆ ವೇಳೆ ಎಂ ಹೆಸರಿನಿಂದ ಗುರುತಿಸಲ್ಪಟ್ಟಿದ್ದ ಮೊಸಾದ್ ಏಜೆಂಟ್ ವಿದೇಶದಲ್ಲೇ ಹುತಾತ್ಮರಾಗಿದ್ದಾರೆ. ಕಾರ್ಯಾಚರಣಾ ಚತುರ, ತಂತ್ರಜ್ಞಾನ ಪರಿಣತ ಮತ್ತು ಇರಾನ್ ವಿರುದ್ಧ ಅಭೂತಪೂರ್ವ ಯಶಸ್ಸು ಸಾಧಿಸಿದ್ದ ಎಂ ಅವರಿಗೆ ನನ್ನ ಹೃದಯಾಂತರಾಳದ ಗೌರವ ನಮನ ಸಲ್ಲಿಸುತ್ತೇನೆ ಎಂದು ಡೇವಿಡ್ ಕಂಬನಿ ನುಡಿದರು.

ಪಾಕ್‌ಗೆ ವ್ಯಾನ್ಸ್ ನೇತೃತ್ವದ ನಿಯೋಗ

ಇರಾನ್‌ನೊಂದಿಗೆ ಎರಡನೇ ಹಂತದ ಶಾಂತಿ ಮಾತುಕತೆಗೆ ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ನಿಯೋಗ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಭೇಟಿ ನೀಡುವ ಸಾಧ್ಯತೆಯಿದೆ. ವ್ಯಾನ್ಸ್ ಜತೆ ಟ್ರಂಪ್ ಆಪ್ತ ಸ್ಟೀವ್ ವಿಟ್ಕಾಫ್ ಮತ್ತು ಅಳಿಯ ಜರೇಡ್ ಕುಶ್ನರ್ ಇರಲಿದ್ದಾರೆ.

ಮಾತುಕತೆ ಅನಿಶ್ಚಿತತೆ

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಅಸ್ತಿತ್ವದಲ್ಲಿರುವ ಕದನ ವಿರಾಮ ಇಂದಿಗೆ (ಬುಧವಾರ) ಮುಕ್ತಾಯಗೊಳ್ಳಲಿದ್ದು, ಪಾಕಿಸ್ತಾನದಲ್ಲಿ ಎರಡನೇ ಸುತ್ತಿನ ಶಾಂತಿ ಮಾತುಕತೆ ನಡೆಸುವ ಜಾಗತಿಕ ರಾಜತಾಂತ್ರಿಕ ಪ್ರಯತ್ನಗಳು ತೀವ್ರ ಅನಿಶ್ಚಿತತೆ ಎದುರಿಸುತ್ತಿವೆ.

ಪಾಕಿಸ್ತಾನ ರಾಜತಾಂತ್ರಿಕ ಬಿಕ್ಕಟ್ಟು: ಇರಾನ್‌ನ ಮುಖ್ಯ ಸಂಧಾನಕಾರ ಮೊಹಮ್ಮದ್ ಬಾಘರ್ ಘಾಲಿಬಾಫ್ ಮಂಗಳವಾರ ಮಾತನಾಡಿ, ಬೆದರಿಕೆಗಳ ನಡುವೆ ಇರಾನ್ ಮಾತುಕತೆ ನಡೆಸುವುದಿಲ್ಲ ಮತ್ತು ಇಸ್ಲಾಮಿಕ್ ಗಣರಾಜ್ಯ ಹೊಸ ಮಿಲಿಟರಿ ಆಯ್ಕೆಗಳನ್ನು ಬಹಿರಂಗಪಡಿಸಲು ಸಿದ್ಧವಾಗಿದೆ ಎಂದಿದ್ದಾರೆ. ಅಮೆರಿಕ ಅಧ್ಯಕ್ಷರು, ಉಪಾಧ್ಯಕ್ಷ ಜೆಡಿ ವ್ಯಾನ್ ನೇತೃತ್ವದ ತಂಡವನ್ನು ಇಸ್ಲಾಮಾಬಾದ್‌ಗೆ ಕಳುಹಿಸುವ ನಿರೀಕ್ಷೆಯಿದೆ. ಆದರೆ ಕದನ ವಿರಾಮವನ್ನು ನವೀಕರಿಸುವ ಸಾಧ್ಯತೆ ಕಡಿಮೆ. ಸಂಘರ್ಷ ಕೊನೆಗೊಳಿಸಲು ತಮಗೆ ಯಾವುದೇ ಅವಸರವಿಲ್ಲ, ಎಂದೂ ಘಾಲಿಬಾಫ್ ತೀಕ್ಷ್ಣವಾಗಿ ಹೇಳಿದ್ದಾರೆ.

ಪ್ರಾಣಹಾನಿ ಮತ್ತು ಪ್ರಾದೇಶಿಕ ಪರಿಣಾಮ: ಯುದ್ಧ ಪ್ರಾರಂಭವಾದಾಗಿನಿಂದ ಇರಾನ್‌ನಲ್ಲಿ 3,375, ಲೆಬನಾನ್‌ನಲ್ಲಿ 2,290, ಇಸ್ರೇಲ್‌ನಲ್ಲಿ 23 ಮತ್ತು ಗಲ್ಫ್ ಅರಬ್ ರಾಷ್ಟ್ರಗಳಲ್ಲಿ 12 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಮೃತರಲ್ಲಿ ಲೆಬನಾನ್‌ನಲ್ಲಿ 15 ಇಸ್ರೇಲಿ ಸೈನಿಕರು ಮತ್ತು ಇರಾನ್ ಜತೆಗಿನ ಘರ್ಷಣೆಯಲ್ಲಿ13 ಮಂದಿ ಅಮೆರಿಕನ್ನರೂ ಸೇರಿದ್ದಾರೆ. ಮತ್ತೊಂದು ಕಡೆ, ಗಾಜಾದಲ್ಲಿ ಮಂಗಳವಾರ ನಡೆದ ಇಸ್ರೇಲಿ ದಾಳಿಯಲ್ಲಿ ಖಾನ್ ಯೂನಿಸ್‌ನ ನಾಲ್ವರು ಪುರುಷರು ಮತ್ತು ಬೀತ್ ಲಾಹಿಯಾದ ಒಬ್ಬ ಮಹಿಳೆ ಸೇರಿದಂತೆ ಐವರು ಮೃತಪಟ್ಟಿದ್ದಾರೆ.

ಇರಾನ್‌ನ ಆಂತರಿಕ ಸಮಾಲೋಚನೆ: ಇರಾನ್ ಸರ್ಕಾರಿ ದೂರದರ್ಶನ ಮಂಗಳವಾರ ವರದಿ ಮಾಡಿರುವಂತೆ, ಇದುವರೆಗೆ ಯಾವುದೇ ನಿಯೋಗ ಇಸ್ಲಾಮಾಬಾದ್‌ಗೆ ಭೇಟಿ ನೀಡಿಲ್ಲ. ಯುಎಸ್ ನೌಕಾಪಡೆ ಇರಾನ್‌ನ ಕಂಟೇನರ್ ಹಡಗನ್ನು ವಶಪಡಿಸಿಕೊಂಡ ನಂತರ ಈ ಬೆಳವಣಿಗೆ ನಡೆದಿದೆ. ಯುಎಸ್ ಅಧಿಕಾರಿಗಳು ಸಿದ್ಧವಾಗಿದ್ದರೂ, ಇರಾನ್ ಈ ಸುತ್ತಿನ ಮಾತುಕತೆಗೆ ತನ್ನ ಮುಖ್ಯ ಸಂಧಾನಕಾರನನ್ನು ಇನ್ನೂ ಹೆಸರಿಸಿಲ್ಲ. ಇರಾನ್ ಮಂಗಳವಾರ ತಡರಾತ್ರಿ ತನ್ನ ನಿಯೋಗವನ್ನು ಕಳುಹಿಸಲಿದೆ ಎಂದು ಪಾಕಿಸ್ತಾನದ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದರೂ, ಇರಾನ್ ಪ್ರತಿಕ್ರಿಯಿಸಿಲ್ಲ.

ಅಂತಾರಾಷ್ಟ್ರೀಯ ಸಂಧಾನ ಪ್ರಯತ್ನಗಳು: ಚೀನಾದ ವಿದೇಶಾಂಗ ಸಚಿವಾಲಯ, ಎಲ್ಲಾ ಪಕ್ಷಗಳು ಮಾತುಕತೆ ಮುಂದುವರಿಸಬೇಕೆಂದು ಒತ್ತಾಯಿಸಿದೆ. ಪ್ರಸ್ತುತ ಪರಿಸ್ಥಿತಿಯನ್ನು ಯುದ್ಧ ಮತ್ತು ಶಾಂತಿಯ ನಡುವಿನ ನಿರ್ಣಾಯಕ ಹಂತ ಎಂದು ಅದು ಬಣ್ಣಿಸಿದೆ. ಚೀನಾದ ರಾಯಭಾರಿ ಜಿಯಾಂಗ್ ಜೈಡಾಂಗ್, ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಅವರನ್ನು ಭೇಟಿ ಮಾಡಿ, ಮಾತುಕತೆಗೆ ಅನುಕೂಲ ಮಾಡಿಕೊಡುವಲ್ಲಿ ಪಾಕಿಸ್ತಾನದ ಪಾತ್ರಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಪಾಕ್- ಈಜಿಪ್ಟ್ ಮಾತುಕತೆ: ಅಮೆರಿಕ ಮತ್ತು ಇರಾನ್ ನಡುವೆ ನಡೆಯಲಿರುವ ಸಂಭವನೀಯ ಎರಡನೇ ಸುತ್ತಿನ ಮಾತುಕತೆಗೆ ಸಂಬಂಧಿಸಿದ ರಾಜತಾಂತ್ರಿಕ ಪ್ರಯತ್ನಗಳ ಭಾಗವಾಗಿ, ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಮಂಗಳವಾರ, ತಮ್ಮ ಈಜಿಪ್ಟ್ ಸಹವರ್ತಿ ಬದ್ರ್ ಅಬ್ದೆಲಾಟ್ಟಿ ಅವರೊಂದಿಗೆ ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚಿಸಿದರು.

ವರ್ಚುವಲ್‌ನಲ್ಲಿ ಟ್ರಂಪ್ ಭಾಗಿ?

ಅಮೆರಿಕ, ಇರಾನ್ ಶಾಂತಿ ಮಾತುಕತೆಗಳು ಪಾಕಿಸ್ತಾನದಲ್ಲಿ ಪುನರಾರಂಭಗೊಳ್ಳಲು ವೇದಿಕೆ ಸಿದ್ಧವಾಗುತ್ತಿದ್ದು, ಬುಧವಾರ ಮಾತುಕತೆ ಗಳು ಮತ್ತೆ ಶುರುವಾಗುವ ಲಕ್ಷಣ ಕಂಡುಬರುತ್ತಿವೆ.

ಉನ್ನತ ಮಟ್ಟದ ಮಾತುಕತೆ?: ಒಂದು ವೇಳೆ ಒಪ್ಪಂದಕ್ಕೆ ಸಹಿ ಹಾಕುವ ಹಂತ ತಲುಪಿದರೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖುದ್ದಾಗಿ ಅಥವಾ ವರ್ಚುವಲ್ ಆಗಿ ಭಾಗವಹಿಸುವ ಸಾಧ್ಯತೆಯಿದೆ ಎಂದು ಪಾಕಿಸ್ತಾನದ ಮೂಲಗಳು ತಿಳಿಸಿವೆ. ಹಗೆತನ ಕೊನೆಗಾಣಿಸುವ ನಿಟ್ಟಿನಲ್ಲಿ ಮಾತುಕತೆಗಳು ಮುಂದುವರಿಯುವ ಬಗ್ಗೆ ಅಮೆರಿಕ ವಿಶ್ವಾಸ ವ್ಯಕ್ತಪಡಿಸಿದೆ. ಈ ಹಿಂದೆ ಪ್ರಕ್ರಿಯೆಯಿಂದ ಹೊರಗುಳಿಯುವುದಾಗಿ ಹೇಳಿದ್ದ ಇರಾನ್, ಈಗ ಸಂಧಾನದಲ್ಲಿ ಭಾಗವಹಿಸುವ ಬಗ್ಗೆ ಸಕಾರಾತ್ಮಕವಾಗಿ ಪರಿಗಣಿಸುತ್ತಿದೆ ಎಂದು ಹಿರಿಯ ಇರಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಯಕಟ್ಟಿನ ಉದ್ದೇಶ, ಬೇಡಿಕೆಗಳು: ತೈಲ ಬೆಲೆ ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿನ ಅಸ್ಥಿರತೆ ತಡೆಯಲು ವಾಷಿಂಗ್ಟನ್ ಒಪ್ಪಂದದ ಮೊರೆ ಹೋಗಿದೆ. ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಶಸ್ತ್ರಾಸ್ತ್ರ ಸಾಮರ್ಥ್ಯ ಹೊಂದಬಾರದು ಎಂಬುದು ಟ್ರಂಪ್ ನಿಲುವಾಗಿದೆ. ಮತ್ತೊಂದೆಡೆ, ಇರಾನ್ ತನ್ನ ಪರಮಾಣು ಕಾರ್ಯಕ್ರಮಕ್ಕೆ ಇರುವ ಅಡ್ಡಿಗಳಿಂದ ಮುಕ್ತಿ ಪಡೆಯಲು ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ನಿಯಂತ್ರಣವನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ. ಹಿಂದಿನ ಸುತ್ತಿನ ಮಾತುಕತೆಗಳು ಫಲಿತಾಂಶ ನೀಡದ ಕಾರಣ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಏರಿಳಿತ ಮುಂದುವರಿದಿದೆ.

ಉದ್ವಿಗ್ನತೆ ಮತ್ತು ಹಿನ್ನೆಲೆ: ಕಳೆದ ವಾರಾಂತ್ಯದಲ್ಲಿ ಇರಾನ್‌ನ ವಾಣಿಜ್ಯ ಹಡಗು 'ತೌಸ್ಕಾ'ವನ್ನು ಅಮೆರಿಕ ವಶಪಡಿಸಿಕೊಂಡಿರುವುದು ಉದ್ವಿಗ್ನತೆಯನ್ನು ಹೆಚ್ಚಿಸಿದೆ. ಈ ಹಡಗು ಮಿಲಿಟರಿ ಉದ್ದೇಶಗಳಿಗೆ ಬಳಸಬಹುದಾದ ವಸ್ತುಗಳನ್ನು ಸಾಗಿಸುತ್ತಿತ್ತು ಎಂದು ಅಮೆರಿಕ ಶಂಕಿಸಿದ್ದು, ಇರಾನ್ ತನ್ನ ಹಡಗು ಮತ್ತು ಸಿಬ್ಬಂದಿಯ ಬಿಡುಗಡೆಗೆ ಒತ್ತಾಯಿಸಿದೆ. ಫೆಬ್ರವರಿ 28 ರಂದು ಪ್ರಾರಂಭವಾದ ಈ ಸಂಘರ್ಷ, ಇರಾನ್‌ನ ಪ್ರಮುಖ ನಾಯಕರೂ ಸೇರಿದಂತೆ, ಸಾವಿರಾರು ಜನರ ಸಾವಿಗೆ ಕಾರಣವಾಗಿದೆ ಮತ್ತು ಜಾಗತಿಕ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟುಮಾಡಿದೆ. ಹಾರ್ಮುಜ್ ಜಲಸಂಧಿ ವಿಶ್ವದ ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯ ಐದನೇ ಒಂದು ಭಾಗವನ್ನು ನಿರ್ವಹಿಸುತ್ತದೆ.

ಕಿರುಸುದ್ದಿ

ಮಾನವೀಯತೆ ಗಡಿ ಮೀರಿ ಹೋದರೆ ತೀಕ್ಷ್ಣ ಪ್ರತಿಕ್ರಿಯೆ

ಹೊಸದಿಲ್ಲಿ: ಪಹಲ್ಗಾಮ್ ಉಗ್ರ ದಾಳಿ ಒಂದು ವರ್ಷ ಕಳೆದ ಹಿನ್ನೆಲೆ ಭಾರತೀಯ ಸೇನೆ ಮಂಗಳವಾರ ಉಗ್ರವಾದ ವಿರುದ್ಧ ಹೋರಾಡುವ ತನ್ನ ಸಂಕಲ್ಪವನ್ನು ಪುನರುಚ್ಚರಿಸಿದ್ದು, ಮಾನವೀಯತೆಯ ಗಡಿಗಳನ್ನು ಮೀರಿ ಹೋದಾಗ ಖಾರ ಪ್ರತಿಕ್ರಿಯೆ ನೀಡುವುದಾಗಿ ಸ್ಪಷ್ಟಪಡಿಸಿದೆ. ಕಳೆದ ವರ್ಷ ಏ.22ರಂದು ದಕ್ಷಿಣ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮೂವರು ಪಾಕಿಸ್ತಾನಿ ಉಗ್ರರು 26 ಜನರನ್ನು ಗುಂಡಿಟ್ಟು ಹತ್ಯೆಗೈದಿದ್ದರು. ಪ್ರತಿಯಾಗಿ, ಭಾರತ ಮೇ 7ರ ಮುಂಜಾನೆ ಸೈನಿಕ ಕಾರ್ಯಾಚರಣೆ ಆರಂಭಿಸಿ, ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಪ್ರದೇಶಗಳಲ್ಲಿ ಉಗ್ರ ಅಡಗುದಾಣಗಳನ್ನು ಧ್ವಂಸಗೊಳಿಸಿತ್ತು. ಇದೇ ವೇಳೆ ಜೈಶ್-ಎ-ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆ ಸ್ಥಾಪಕ ಮಸೂದ್ ಅಜರ್ ಕುಟುಂಬ ಸದಸ್ಯರ ಸಹಿತ 100ಕ್ಕೂ ಹೆಚ್ಚು ಉಗ್ರರು ದಾಳಿಗೆ ಬಲಿಯಾಗಿದ್ದರು. ಭಾರತೀಯ ಸೇನೆ ತನ್ನ ಎಕ್ಸ್ ಖಾತೆಯಲ್ಲಿ, ಮಾನವೀಯತೆಯ ಗಡಿಗಳನ್ನು ಮೀರಿದಾಗ ನಿರ್ಣಾಯಕ ಪ್ರತಿಕ್ರಿಯೆ ನೀಡುತ್ತೇವೆ, ನ್ಯಾಯ ಒದಗಿಸುತ್ತೇವೆ. ಭಾರತ ಒಂದಾಗಿ ನಿಂತಿದೆ ಎಂಬ ಸಂದೇಶ ಹಂಚಿಕೊಂಡಿದೆ.

ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ಸಲ್ಲಿಕೆ

ಹೊಸದಿಲ್ಲಿ: ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಬಳಿ ಹಕ್ಕುಚ್ಯುತಿ ಸಲ್ಲಿಸಿದ್ದು, ಮಹಿಳಾ ಮೀಸಲಾತಿ ಕಾಯ್ದೆಯನ್ನು ಅಂಗೀಕರಿಸಲು ಸಾಧ್ಯವಾಗದ ಹಿನ್ನೆಲೆ ಪ್ರಧಾನಿ ತಮ್ಮ ಅಧಿಕಾರದ ದುರುಪಯೋಗ ಮಾಡಿಕೊಂಡು ವಿರೋಧ ಪಕ್ಷವನ್ನು ಟೀಕಿಸುವುದು ಸದನದ ಹಕ್ಕುಚ್ಯುತಿ ಹಾಗೂ ಮಾದರಿ ನೀತಿ ಸಂಹಿತೆಯ ಗಂಭೀರ ಉಲ್ಲಂಘನೆ ಎಂದು ವೇಣುಗೋಪಾಲ್ ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಕಾಯ್ದೆಯನ್ನು ಅಂಗೀಕರಿಸಲು ಸಂಸತ್ತಿನಲ್ಲಿ ಅವಶ್ಯಕ ಬಹುಮತ ಸಿಗದ ಹಿನ್ನೆಲೆ ಏ.18ರಂದು ದೇಶವನ್ನುದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿ ತಮ್ಮ ಅಧಿಕಾರದ ದುರುಪಯೋಗ ಮಾಡಿದ್ದಾರೆ ಎಂದು ಕೆ.ಸಿ. ವೇಣುಗೋಪಾಲ್ ಆರೋಪ ಮಾಡಿದ್ದಾರೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ವೇಣುಗೋಪಾಲ್ ಸಲ್ಲಿಸಿದ ನೋಟಿಸ್‌ನಲ್ಲಿ, ಸಂಸತ್ತಿನಲ್ಲಿ ಸೋಲಿನ ಹಿನ್ನೆಲೆ ವಿರೋಧ ಪಕ್ಷಗಳನ್ನು ಟೀಕಿಸಲು ವೇದಿಕೆಯನ್ನು ಬಳಸಿರುವುದು ಅನೈತಿಕ, ಸದನದ ಘನತೆಗೆ ಚ್ಯುತಿ ತರುವಂತದ್ದು ಮತ್ತು ಅವಮಾನಕರ ಎಂದು ಕಾಂಗ್ರೆಸ್ ನಾಯಕ ಉಲ್ಲೇಖಿಸಿದ್ದಾರೆ.

ಇಂತಹ ಹೇಳಿಕೆಗಳು ಸದನದ ಗೌರವ ಮತ್ತು ಅಧಿಕಾರವನ್ನು ಕುಗ್ಗಿಸುತ್ತವೆ ಹಾಗೂ ಸದಸ್ಯರು ತಮ್ಮ ಕರ್ತವ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸುವುದಕ್ಕೆ ಅಡ್ಡಿಯಾಗುತ್ತವೆ. ಆದ್ದರಿಂದ, ಪ್ರಧಾನಿ ಭಾಷಣದಿಂದ ಸ್ಪಷ್ಟ ಮತ್ತು ಗಂಭೀರ ಹಕ್ಕುಚ್ಯುತಿಯಾಗಿದೆ ಎಂದು ಅವರು ಹಕ್ಕುಚ್ಯುತಿಯಲ್ಲಿ ಉಲ್ಲೇಖಿಸಿದ್ದಾರೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 13 ಮಂದಿ ಸಾವು

ತ್ರಿಶೂರ್: ಮುಂಡತ್ತಿಕೋಡ್‌ನಲ್ಲಿರುವ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಮಂಗಳವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 13 ಜನರು ಮೃತಪಟ್ಟಿದ್ದು, 40 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಒಣಗಿದ ಭತ್ತದ ಗದ್ದೆಯಲ್ಲಿದ್ದ ಘಟಕದಲ್ಲಿ ಮಧ್ಯಾಹ್ನ 3:35ಕ್ಕೆ ಈ ಸ್ಫೋಟ ಸಂಭವಿಸಿದೆ. ಐವರು ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ವಡಕ್ಕಾಂಚೇರಿ, ಕುನ್ನಂಕುಳಂ ಮತ್ತು ತ್ರಿಶೂರ್‌ನ ರಕ್ಷಣಾ ತಂಡಗಳು ಸಮನ್ವಯದೊಂದಿಗೆ ಕಾರ್ಯಾಚರಣೆ ನಡೆಸುತ್ತಿವೆ. ಗಾಯಾಳುಗಳಿಗೆ ತ್ರಿಶೂರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಪಾಲಕ್ಕಾಡ್‌ನಿಂದ ಹೆಚ್ಚುವರಿ ವೈದ್ಯಕೀಯ ತಂಡಗಳು ಆಗಮಿಸಿವೆ.

ಸರ್ಕಾರದ ಕ್ರಮ: ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅಗತ್ಯ ವೈದ್ಯಕೀಯ ನೆರವು ನೀಡುವಂತೆ ಸರ್ಕಾರಿ ವ್ಯವಸ್ಥೆಗಳಿಗೆ ಸೂಚನೆ ನೀಡಿದ್ದಾರೆ ಮತ್ತು ಅಗತ್ಯವಿದ್ದಲ್ಲಿ ಹೊರರಾಜ್ಯಗಳ ತಜ್ಞ ವೈದ್ಯರ ಸೇವೆಯನ್ನು ಬಳಸಿಕೊಳ್ಳಲಾಗುವುದು, ಎಂದು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದುರಂತಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

ಸ್ಥಳದ ಸುರಕ್ಷತಾ ಆತಂಕಗಳು: ಬೇಸಿಗೆಯ ತೀವ್ರ ಶಾಖ ಈ ಘಟನೆಗೆ ಕಾರಣವಾಗಿರಬಹುದು ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಸಂಗ್ರಹಿಸಿಟ್ಟಿರುವ ಸ್ಫೋಟಕ ವಸ್ತುಗಳಿಂದ ಹೆಚ್ಚಿನ ಸ್ಫೋಟಗಳು ಸಂಭವಿಸುವ ಭೀತಿಯಿರುವುದರಿಂದ ಅಧಿಕಾರಿಗಳಿಗೆ ಘಟಕದ ನಿಖರವಾದ ಕೇಂದ್ರಭಾಗ ತಲುಪುವುದು ಸವಾಲಾಗಿ ಪರಿಣಮಿಸಿತು.

ಗ್ರೆನೇಡ್ ದಾಳಿ ಸಂಚು: ಭಟ್ಟಿ ಸಹಚರರಿಬ್ಬರ ಸೆರೆ

ಹೊಸದಿಲ್ಲಿ: ರಾಷ್ಟ್ರ ರಾಜಧಾನಿಯಲ್ಲಿ ಗ್ರೆನೇಡ್ ದಾಳಿ ಮತ್ತು ಗುರಿ ಹತ್ಯೆಗಳನ್ನು ನಡೆಸಲು ಪಾಕಿಸ್ತಾನಿ ಗ್ಯಾಂಗ್‌ಸ್ಟರ್‌ನ ಇಬ್ಬರು ಸಹಚರರು ರೂಪಿಸಿದ್ದ ಸಂಚನ್ನು ದಿಲ್ಲಿ ಪೊಲೀಸರು ಭೇದಿಸಿದ್ದಾರೆ. ಪಾಕ್ ಐಎಸ್ಐ ಗ್ಯಾಂಗ್‌ಸ್ಟರ್ ಶಹಜಾದ್ ಭಟ್ಟಿ ಸಂಪರ್ಕದಲ್ಲಿದ್ದ ರಾಜ್‌ವೀರ್ (21) ಮತ್ತು ವಿವೇಕ್ ಬಂಜಾರ (19) ಎಂಬ ವ್ಯಕ್ತಿಗಳನ್ನು ದಿಲ್ಲಿ ಪೊಲೀಸರು ಬಂಧಿಸಿದ್ದಾರೆ. ಇವರು ಮಧ್ಯಪ್ರದೇಶದ ಗ್ವಾಲಿಯರ್ ಜಿಲ್ಲೆಯ ನಿವಾಸಿಗಳಾಗಿದ್ದಾರೆ.

ಇವರಿಬ್ಬರ ಬಂಧನದಿಂದಾಗಿ ರಾಷ್ಟ್ರರಾಜಧಾನಿಯಲ್ಲಿ ನಡೆಯಲಿದ್ದ ದೊಡ್ಡ ದಾಳಿಗಳು ಸ್ವಲ್ಪದರಲ್ಲೇ ತಪ್ಪಿಹೋಗಿವೆ. ಇವರ ಬಂಧನದಿಂದ ಪಾಕ್ ಏಜೆಂಟ್ ಭಟ್ಟಿ ಮತ್ತು ಇತರ ಐಎಸ್ಐ ಹ್ಯಾಂಡ್ಲರ್‌ಗಳು ಜತೆಗೂಡಿ ಭಾರತ ವಿರೋಧಿ ಸಂಚುಗಳನ್ನು ರೂಪಿಸುತ್ತಿರುವ ಕುರಿತು ಸುಳಿವುಗಳು ದಿಲ್ಲಿ ಪೊಲೀಸರಿಗೆ ಲಭ್ಯವಾಗಿವೆ.

ರಾಜ್ ವೀರ್ ಗ್ಯಾಂಗ್‌ಸ್ಟರ್ ಭಟ್ಟಿಯ ನಿರ್ದೇಶನದ ಮೇರೆಗೆ ದಿಲ್ಲಿ-ಎನ್‌ಸಿಆರ್‌ನ ಪ್ರಮುಖ ಹೋಟೆಲ್ ಅನ್ನು ಗುರಿಯಾಗಿಸಲು ತಯಾರಿ ನಡೆಸುತ್ತಿದ್ದ ಎಂಬ ಮಾಹಿತಿ ಬಹಿರಂಗಗೊಂಡ ಬೆನ್ನಲ್ಲೇ ಆತನನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಆತನಿಂದ ಒಂದು ಪಿಸ್ತೂಲ್ ಮತ್ತು ಆರು ಜೀವಂತ ಕಾಟ್ರ್ರಿಜ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ.

ಜಾಲತಾಣವೇ ಅಸ್ತ್ರ: ಶಹಜಾದ್ ಭಟ್ಟಿ ಸೇರಿ ಹೆಚ್ಚಿನ ಪಾಕ್ ಹ್ಯಾಂಡ್ಲರ್‌ಗಳು ಸಾಮಾಜಿಕ ಜಾಲತಾಣಗಳ ಮೂಲಕವೇ ಭಾರತೀಯ ಯುವಕರನ್ನು ತಮ್ಮ ಗ್ಯಾಂಗ್‌ಗಳಿಗೆ ನೇಮಕಾತಿ ಮಾಡುತ್ತಿದ್ದಾರೆ. ಆ ಮೂಲಕ ದಿಲ್ಲಿ ನಗರದಲ್ಲಿ ಹಿಂಸಾಚಾರ, ಭಯೋತ್ಪಾದನೆ ನಡೆಸಲು ಪ್ರೇರೇಪಣೆ ನೀಡುತ್ತಿದ್ದಾರೆ.

ಭಾರತ-ಬ್ರಿಟನ್ ರಕ್ಷಣಾ ಸಹಕಾರ ಬಲಕ್ಕೆ ಒತ್ತು

ಲಂಡನ್: ಸಂಘರ್ಷಗಳ ಬದಲಾಗುತ್ತಿರುವ ಸ್ವರೂಪ ಮತ್ತು ಇಂಡೋ-ಪೆಸಿಫಿಕ್ ಭದ್ರತಾ ಸವಾಲುಗಳನ್ನು ಎದುರಿಸುವ ಕುರಿತು ಚರ್ಚಿಸಲು, ಭಾರತದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಈ ವಾರ ಲಂಡನ್‌ನಲ್ಲಿ ಉನ್ನತ ಮಟ್ಟದ ಮಾತುಕತೆ ನಡೆಸಿದ್ದಾರೆ. ಜನರಲ್ ಚೌಹಾಣ್, ಬ್ರಿಟನ್ ಸಚಿವ ರಾದ ಲ್ಯೂಕ್ ಪೋಲಾರ್ಡ್ ಮತ್ತು ಸೀಮಾ ಮಲ್ಹೋತ್ರಾರನ್ನು ಭೇಟಿ ಮಾಡಿ, ಡಿಫೆನ್ಸ್ ಇಂಡಸ್ಟ್ರಿಯಲ್ ರೋಡ್‌ಮ್ಯಾಪ್ ಮತ್ತು ವಿಷನ್ 2035 ಒಪ್ಪಂದವನ್ನು ಮುಂದುವರಿಸುವ ಬಗ್ಗೆ ಚರ್ಚಿಸಿದರು. ಸೈಬರ್ ಗುಪ್ತಚರ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸುವತ್ತ ಈ ಮಾತುಕತೆಗಳು ಗಮನಹರಿಸಿದ್ದವು. ಏರ್ ಚೀಫ್ ಮಾರ್ಷಲ್ ಸರ್ ರಿಚರ್ಡ್ ನೈಟನ್ ಅವರಿಂದ ಔಪಚಾರಿಕ ಸ್ವಾಗತ ಸ್ವೀಕರಿಸಿದ ನಂತರ, ಜ. ಚೌಹಾಣ್, ಕಿಂಗ್ಸ್ ಕಾಲೇಜ್ ಲಂಡನ್‌ನಲ್ಲಿ ಮಿಲಿಟರಿ ಕುರಿತಾದ ಸಭೆಯಲ್ಲಿ ಭಾಗವಹಿಸಿದರು.

ಜಗತ್ತಿಗಿಂದು ಬದುಕಿನ ಬಗ್ಗೆ ಭಾರತ ಹೊಂದಿರುವ ದೃಷ್ಟಿಕೋನದ ಅಗತ್ಯವಿದೆ: ಭಾಗ್ವತ್

ಸತ್ಯ ಸಾಬೀತುಪಡಿಸುವ ತಾಕತ್ತು ಮುಖ್ಯ

ಹೊಸದಿಲ್ಲಿ: ಸತ್ಯವಂತರಾದರೆ ಸಾಲದು, ಸತ್ಯವನ್ನು ಸಾಬೀತುಪಡಿಸುವ ತಾಕತ್ತು ಕೂಡ ಮುಖ್ಯ. ಜ್ಞಾನವೆಂದರೆ ಬರೇ ಭಾಷಣವಲ್ಲ, ತಿಳುವಳಿಕೆ ಅಥವಾ ಅರ್ಥ ಮಾಡಿಕೊಳ್ಳುವುದೇ ಜ್ಞಾನ. ಸುಮಾರು 2ಸಾವಿರ ವರ್ಷಗಳವರೆಗೆ ಇಡೀ ಜಗತ್ತು ವಿಜ್ಞಾನದಿಂದ ಸಮಾಜವಾದವರೆಗೆ ಹಲವು ಸಿದ್ಧಾಂತಗಳ ಅನುಭವಧಾರೆ ಪಡೆಯಿತು. ಪ್ರಸಕ್ತ ಜಗತ್ತಿಗಿಂದು ಬದುಕಿನ ಬಗ್ಗೆ ಭಾರತ ಹೊಂದಿರುವ ದೃಷ್ಟಿಕೋನದ ಅಗತ್ಯವಿದೆ ಎಂಬುದನ್ನು ಇಡೀ ಜಗತ್ತು ಅರ್ಥೈಸಿಕೊಂಡಿದೆ .ಜಗತ್ತಿಂದು ಭಾರತದತ್ತ ನೋಡುತ್ತಿರುವುದು ಕೂಡ ಇದೇ ಕಾರಣಕ್ಕೆ ಎಂದು ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್ ನುಡಿದರು.

ಪಶ್ಚಿಮ ತ್ರಿಪುರಾ ಜಿಲ್ಲೆಯ ಮೋಹನ್‌ಪುರ ಸಬ್ ಡಿವಿಜನ್ ವ್ಯಾಪ್ತಿಯ ಫಕೀರ್‌ಮುರಾ ಗ್ರಾಮದಲ್ಲಿ, ಆದಿ ಶಂಕರಾಚಾರ್ಯರ ಜಯಂತಿಯಂದೇ ಮಂಗಳವಾರ, ಮಾ ತ್ರಿಪುರೇಶ್ವರಿ ಮಾತೆಗೆ ಸಮರ್ಪಿತ ಮಾ ಸೌಂದರ್ಯ ಚಿನ್ಮಯಿ ಮಂದಿರವನ್ನು ಲೋಕಾರ್ಪಣೆ ಮಾಡಿ ಭಾಗ್ವತ್ ಈ ರೀತಿ ವಿಶ್ಲೇಷಿಸಿದರು. ಸಂಪೂರ್ಣವಾಗಿ ಉಚಿತ ಶಿಕ್ಷಣ ನೀಡುವ ಚಿನ್ಮಯ ಹರಿಹರ ವಿದ್ಯಾಲಯದ ಧ್ಯೇಯೋದ್ದೇಶವನ್ನು ಸಮಾರಂಭದ ಮುಖ್ಯ ಅತಿಥಿಯೂ ಆಗಿದ್ದ ಭಾಗ್ವತ್ ಮುಕ್ತ ಕಂಠದಿಂದ ಕೊಂಡಾಡಿದರು. ಪವಿತ್ರ ವಾದ ಗರಿಯಾ ಪೂಜಾ ದಿನದಂದು ಅಪಾರ ಸಂಖ್ಯೆಯಲ್ಲಿ ನೆರೆದ ಜನಸ್ತೋಮದ ಧರ್ಮನಿಷ್ಠೆಯನ್ನು ಭಾಗ್ವತ್ ಶ್ಲಾಘಿಸಿದರು.



ಜಗತ್ತಿಗೆ ಸೂಕ್ತ ಪಥ ತೋರುವ ಸನಾತನ ಧರ್ಮ: ಸನಾತನ ಧರ್ಮವು ಇಡೀ ಜಗತ್ತಿಗೆ ಸೂಕ್ತ ಪಥವನ್ನು ತೋರಿಸುತ್ತಿದೆ. ದೇವಾಲಯಗಳು ಭಾರತೀಯ ಸಾಮಾಜಿಕ ಬದುಕಿನ ಕೇಂದ್ರಗಳಾಗಿವೆ. ಇಂದಿನ ಜಗತ್ತಿನಲ್ಲಿ ಶಕ್ತಿಸಾಮರ್ಥ್ಯ ಜತೆ ಭಕ್ತಿ ಕೂಡ ಅಗತ್ಯ. ಪ್ರತಿಯೋರ್ವರ ಜತೆ ಬೆರೆತು ಜನಸೇವೆ ಮಾಡುವ ಗುಣವಿರುವವರನ್ನು ಸಮಾಜವು ಸದಾ ಸ್ಮರಿಸುತ್ತಿರುತ್ತದೆ ಮತ್ತು ಇದೇ ಭಾರತೀಯ ಸಂಸ್ಕೃತಿ ಎಂದು ಭಾಗ್ವತ್ ಬಣ್ಣಿಸಿದರು.

ನಾಲ್ಕು ರಾಜ್ಯಗಳಿಂದ ನಿರಂತರ ಸೇವಾಕಾರ್ಯ: ದಕ್ಷಿಣದ 4 ರಾಜ್ಯಗಳು ತುಂಬು ಸೇವಾಕಾರ್ಯಗಳಲ್ಲಿ ನಿರತವಾಗಿವೆ. ಸುದೀರ್ಘ ಕಾಲದಿಂದ ನಮ್ಮಲ್ಲಿ ವೈವಿಧ್ಯತೆಯಿದೆಯಾದರೂ ನಾವೆಲ್ಲರು ಒಗ್ಗಟ್ಟಾಗಿದ್ದೇವೆ. ವಿವಿಧತೆಯಲ್ಲಿ ಏಕತೆಯೇ ನಮ್ಮ ಬಲ. ನಮ್ಮ ಉನ್ನತಿಯನ್ನು ತಡೆಯುವುದಕ್ಕಾಗಿ ವಿದೇಶಿ ಶಕ್ತಿಗಳು ನಮ್ಮೊಳಗೆ ಒಡಕು ಮೂಡಿಸಲು ಶತಾಯಗತಾಯ ಶ್ರಮಿಸುತ್ತಿವೆ ಮತ್ತು ಈ ಬಗ್ಗೆ ನಾವು ಸದಾ ಎಚ್ಚರದಿಂದಿರಬೇಕು ಎಂದು ಕರೆ ನೀಡಿದರು.

ಇಂಧನ ಭದ್ರತೆಗೆ ವೇಗ ಮಾತ್ರವಲ್ಲ ರೈತರಿಗೂ ನೇರ ಪ್ರಯೋಜನ

ಎಥೆನಾಲ್ ಮಿಶ್ರಣಕ್ಕೆ ಮುನ್ನುಡಿ

ಹೊಸದಿಲ್ಲಿ: ಪೆಟ್ರೋಲ್‌ಗೆ ಶೇ.100 ಎಥೆನಾಲ್ ಮಿಶ್ರಣದ ಮಹತ್ವದ ಸ್ಥಿತ್ಯಂತರಕ್ಕೆ ಭಾರತ ಮುನ್ನುಡಿ ಬರೆಯಲಿದೆ. ತೈಲಕ್ಕಾಗಿ ಅನ್ಯದೇಶವನ್ನು ಅವಲಂಬಿಸಿರುವ ಭಾರತದ ಪಾಲಿಗೆ ಇದೊಂದು ಗೇಮ್‌ಚೇಂಜರ್ ಆಗುವ ಸಾಧ್ಯತೆಗಳಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಇಂಡಿಯನ್ ಫೆಡರೇಶನ್ ಆಫ್ ಗ್ರೀನ್ ಎನರ್ಜಿ ಮಂಗಳವಾರ ಆಯೋಜಿಸಿದ ಹಸಿರು ಸಾರಿಗೆ ಸಮಾವೇಶದಲ್ಲಿ ಪಾಲ್ಗೊಂಡ ಸಚಿವ ಗಡ್ಕರಿ, ಸಂಪೂರ್ಣ ಇಂಧನ ಸ್ವಾವಲಂಬನೆಯು ಬರೇ ಪರಿಸರಾತ್ಮಕ ಗುರಿಯಾಗುಳಿದಿಲ್ಲ, ಬದಲಾಗಿ ರಾಷ್ಟ್ರೀಯ ಭದ್ರತಾ ಆವಶ್ಯಕತೆಯಾಗಿದೆ ಎಂದಿದ್ದಾರೆ. ಪ.ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ಇಂಧನ ಮಾರುಕಟ್ಟೆಗಳು ಸಂಕಷ್ಟಕ್ಕೀಡಾಗಿರುವುದು, ಸಾಂಪ್ರದಾಯಿಕ ತೈಲ ಪೂರೈಕೆ ಕೊಂಡಿಗಳು ಅಸ್ತವ್ಯಸ್ತಗೊಂಡಿರುವುದು ಮತ್ತು ಆಮದು ಬಿಲ್‌ಗಳು ಗಗನಕ್ಕೇರಿರುವ ಅತ್ಯಂತ ಸಂಕಷ್ಟದ ಸನ್ನಿವೇಶದಲ್ಲೇ ಸಚಿವ ಗಡ್ಕರಿ ಪ್ರಸ್ತುತ ಹೇಳಿಕೆ ನೀಡಿದ್ದಾರೆ.

ಭಾರತವು ಪಳೆಯುಳಿಕೆ ಇಂಧನಗಳ ಆಮದನ್ನು ಅವಲಂಬಿಸಿರುವ ಹಿನ್ನೆಲೆಯಲ್ಲಿ, ಪೆಟ್ರೋಲ್‌ಗೆ ಶೇ. 100 ಎಥೆನಾಲ್ ಮಿಶ್ರಣದ ಮಹತ್ವದ ಟಾರ್ಗೆಟ್ ಹೊಂದಲಾಗಿದೆ. ರಾಷ್ಟ್ರದ ಶೇ.87ರಷ್ಟು ತೈಲ ಆವಶ್ಯಕತೆಗಳು ಈಡೇರುವುದು ಆಮದುಗಳ ಮುಖೇನ.



ಅಂದರೆ ತೈಲ ಆಮದುಗಳಿಗಾಗಿ ಸರಕಾರದ ಬೊಕ್ಕಸಕ್ಕೆ ಬೀಳುವ ಹೊರೆ ವಾರ್ಷಿಕ 22ಲಕ್ಷ ಕೋಟಿ ರೂಗಳಷ್ಟು. ಈ ಆಮದು ವ್ಯವಸ್ಥೆಯ ದೌರ್ಬಲ್ಯವನ್ನು ಪ.ಏಷ್ಯಾ ಸಂಘರ್ಷ ಬಯಲಾಗಿಸಿದೆ. ತನ್ಮೂಲಕ ತನ್ನ ಸಾರಿಗೆ ರಂಗವನ್ನು ಅಂತಾರಾಷ್ಟ್ರೀಯ ಕಚ್ಚಾತೈಲ ದರದುಬ್ಬರಗಳಿಂದ ಪಾರು ಮಾಡುವುದು ಭಾರತಕ್ಕೆ ಅತ್ಯವಶ್ಯವಾಗಿದೆ ಎಂದು ಗಡ್ಕರಿ ಹೇಳಿದ್ದಾರೆ.

ಇಂಧನ ಪೂರೈಕೆದಾರ ರೈತ: ಶೇ.100 ಎಥೆನಾಲ್ ಮಾದರಿಯೆಡೆಗೆ ಹೆಜ್ಜೆ ಹಾಕುವುದರಿಂದ ಇಂಧನ ಭದ್ರತೆಗೆ ವೇಗ ಸಿಗುವುದು ಮಾತ್ರವಲ್ಲ, ರೈತರಿಗೂ ನೇರ ಆರ್ಥಿಕ ಪ್ರಯೋಜನಗಳಾಗಲಿವೆ ಅಥವಾ ಅನ್ನದಾತರು ಇಂಧನ ಪೂರೈಕೆದಾರರಾಗಲಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಕಿರುಸುದ್ದಿ

ಬೈಕ್‌ಗೆ ಕಾರ್ ಡಿಕ್ಕಿ: ಓರ್ವ ಸಾವು

• **ಚನ್ನಮ್ಮನ ಕಿತ್ತೂರು:** ಧಾರವಾಡದಿಂದ ಬೆಳಗಾವಿ ಮಾರ್ಗವಾಗಿ ಯಕ್ಸಂಬಾಕ್ಕೆ ಬೈಕ್ ಮೇಲೆ ಹೋಗುವಾಗ ಬೈಕ್‌ಗೆ ಕಾರ್ ಡಿಕ್ಕಿ ಹೊಡೆದು ಕಾರ್‌ನಲ್ಲಿದ್ದ ವ್ಯಕ್ತಿ ಸ್ಥಳದಲ್ಲಿಯೇ ಸಾವಿಗೀಡಾಗಿ ಚಾಲಕನಿಗೂ ಗಾಯವಾಗಿದ್ದು, ಬೈಕ್ ಮೇಲೆ ಹೋಗುತ್ತಿದ್ದ ಇಬ್ಬರು ಸವಾರರಿಗೂ ಗಂಭೀರ ಗಾಯವಾದ ಘಟನೆ ಮಂಗಳವಾರ ನಡೆದಿದೆ.

ಬೈಕ್ ಸವಾರರಾದ ಕಾಗವಾಡ ತಾಲೂಕಿನ ಕುಸುನಾಳ ಗ್ರಾಮದ ಸಚಿನ ಅನಿಲ ಜಾಧವ(22) ಹಾಗೂ ಚಿಕ್ಕೋಡಿ ತಾಲೂಕಿನ ಯಕ್ಸಂಬಾದ ಶ್ಯಾಮರಾವ್ ಸದಾಶಿವ ಕುಂಬಾರ(32) ಇವರಿಬ್ಬರೂ ಬೈಕ್ ಮೇಲೆ ಹೋಗುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ 48ರ ಮೇಲೆ ಕಿತ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಕುರಬರ ತೆಗ್ಗಿನ ಹತ್ತಿರ ಹೋಗುತ್ತಿರುವಾಗ ಮಂಟೂರ ರೋಡ್ ಹುಬ್ಬಳ್ಳಿಯ ಕಾರ್ ಚಾಲಕ ಮೊಹಮ್ಮದಗೌಸ್ ಮೊಹಮ್ಮದರಫಿಕ್(22) ಈತನು ತನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಮೋಟರ್ ಸೈಕಲ್‌ಗೆ ಡಿಕ್ಕಿ ಹೊಡೆದು ಅಪಘಾತಪಡಿಸಿದ್ದು, ಇತನಿಗೂ ಗಂಭಿರ ಗಾಯವಾಗಿದ್ದು ಹಾಗೂ ಕಾರ್ ಗಾಡಿಯಲ್ಲಿದ್ದ ಪ್ರಯಾಣಿಕ ಹರಿಯಾಣದ ಹಾಲಿ ವಸ್ತಿ ಹುಬ್ಬಳ್ಳಿಯ ಉಣಕಲ್‌ದ ಮೊಹಮ್ಮದ್ ಇರ್ಫಾನ್ ತಂದೆ ಮೊಹಮ್ಮದ್ ಸಾಧಿಕ್(32) ಇವನು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಘಟನಾ ಸ್ಥಳಕ್ಕೆ ಪೊಲೀಸ್ ಠಾಣೆಯ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್‌ಐ ಪ್ರವೀಣ ಗಂಗೋಳ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿದ್ದಾರೆ.

ಅಜಗಾಂವ ಸಮೀಪ ಭೀಕರ ಅಪಘಾತ: ಇಬ್ಬರ ದುರ್ಮರಣ



• **ದಾಂಡೇಲಿ:** ತಾಲೂಕಿನ ಕರ್ಕಾ ಕ್ರಾಸ್ ಅಜಗಾಂವ ಸಮೀಪ ಸೋಮವಾರ ರಾತ್ರಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಸ್ಥಳದಲ್ಲೇ ಈರ್ವರು ಮೃತಪಟ್ಟ ಘಟನೆ ನಡೆದಿದೆ. ದಾಂಡೇಲಿಯಿಂದ ಹಳಿಯಾಳ ಕಡೆಗೆ ತೆರಳುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಕಾರು ಎರಡು ಮರದ ನಡುವೆ ಸಿಲುಕಿ, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಮೂವರಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತಪಟ್ಟವರಲ್ಲಿ ಓರ್ವ ಧಾರವಾಡದ ಫಾರೂಖ್ ಸಾಬ್ ಹಾಗೂ ಇನ್ನೋರ್ವ ಹಳಿಯಾಳದ ಮುದಸ್ಸಿರ್ ಇಸ್ಮಾಯಿಲ್ ಮುಲ್ಲಾ ಎಂದು ತಿಳಿದು ಬಂದಿದೆ. ಮೃತ ದೇಹವನ್ನು ಹಳಿಯಾಳದ ತಾಲ್ಲೂಕು ಆಸ್ಪತ್ರೆಗೆ ಸಾಗಿಸಲಾಗಿದೆ.ಗಂಭೀರವಾಗಿ ಗಾಯಗೊಂಡಿರುವ ಚಾಲಕನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಸಿಪಿಐ ಶಿವಾನಂದ ಅಂಬಿಗೇರ ಹಾಗೂ ದಾಂಡೇಲಿ ಗ್ರಾಮೀಣ ಠಾಣೆಯ ಪಿಎಸ್‌ಐ ಶಿವಾನಂದ ನಾವದಗಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	5866	5866
ಕಡಲೆಕಾಳು	1569	5656
ಉದ್ದಿನಕಾಳು	6851	7011
ಒಣ ಮೆಣಸಿನಕಾಯಿ	28666	47500
ಅವರೇಕಾಯಿ	6631	6631
ಹೆಸರುಕಾಳು	1919	7086
ನೆಲಗಡಲೆ (ಶೇಂಗಾ)	3334	7100
ಹುರುಳಿ ಕಾಳು	3716	3716
ಜೋಳ	1001	3815
ಮೆಕ್ಕೆಜೋಳ	1611	1836
ಮಡಿಕೆ (ಮಟಕಿ)	10001	10001
ಈರುಳ್ಳಿ	500	2000
ಆಲೂಗಡ್ಡೆ	1400	1600
ಕುಸುಬೆ	4370	5516
ಸೋಯಾಬಿನ್	4590	5710
ಗೋಧಿ	1000	5009

ಸ್ತೋತ್ರ ಪಠಿಸಿ ಪೂಜಿಸುವ ಸಂಸ್ಕಾರ ರೂಢಿಸಿಕೊಳ್ಳಿ: ಶ್ರೀಗಳು

• **ಶಿರಸಿ:** ಸಮಾಜದಲ್ಲಿ ಜ್ಞಾನಿಗಳ ಮಾತುಗಳು ಯಾವಾಗಲೂ ಒಪ್ಪಿತವಾಗುತ್ತವೆ. ಸಾವಿರಾರು ವರ್ಷಗಳಾದರೂ ಶಂಕರಾಚಾರ್ಯರ ವ್ಯಕ್ತಿತ್ವ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿರುವುದೇ ಇದಕ್ಕೆ ಸಾಕ್ಷಿ. ಪ್ರತಿಯೊಬ್ಬರೂ ಮನೆಯಲ್ಲಿ ಭಗವತ್ಪಾದರ ಭಾವಚಿತ್ರವಿರಿಸಿ, ಕನಿಷ್ಠ ಶಂಕರ ಜಯಂತಿಯಂದಾದರೂ ಸ್ತೋತ್ರ ಪಠಿಸಿ ಪೂಜಿಸುವ ಸಂಸ್ಕಾರ ರೂಢಿಸಿಕೊಳ್ಳಬೇಕು ಎಂದು ಸ್ವರ್ಣವಲ್ಲೀ ಮಠಾಧೀಶ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ತಿಳಿಸಿದರು.

ಮಂಗಳವಾರ ಸ್ವರ್ಣವಲ್ಲೀ ಮಠದಲ್ಲಿ ನಡೆದ ಶಂಕರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಜ್ಞಾನಿಗಳು ನಿರ್ಭಿಡೆಯಿಂದ ಸತ್ಯವನ್ನು ನುಡಿಯುತ್ತಾರೆ. ಶಂಕರರ ಕೃತಿಗಳಲ್ಲಿ ಅಂತಹ ಜ್ಞಾನದರ್ಶನವಿದೆ ಎಂದರು.

ಶ್ರೀಮಠದ ಕಿರಿಯ ಶ್ರೀಗಳಾದ ಶ್ರೀ ಆನಂದಬೋಧೇಂದ್ರ ಸರಸ್ವತೀ ಮಹಾಸ್ವಾಮಿಗಳು ಮಾತನಾಡಿ, ವಿಷಯ ಸುಖದ ಆಸೆಯು ಮನುಷ್ಯನನ್ನು ಅವನತಿಯತ್ತ ಕೊಂಡೊಯ್ಯುತ್ತದೆ. ಇಂದ್ರೀಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅವಶ್ಯ ಎಂದು ನುಡಿದರು.



ಶಿವಮೊಗ್ಗ ರಾಮಕೃಷ್ಣಾಶ್ರಮದ ಶ್ರೀ ವಿನಯಾನಂದ ಸರಸ್ವತೀ ಸ್ವಾಮೀಜಿ ಮಾತನಾಡಿ, ಸಾಧು ಸಂಘ ಹಾಗೂ ನಾಮಸ್ಮರಣೆಯಿಂದ ನೆಮ್ಮದಿ ಸಾಧ್ಯ. ಭಾರತೀಯ ಶಿಕ್ಷಣ ಮತ್ತು ಸಂಸ್ಕೃತಿ ನಮ್ಮನ್ನು ಉನ್ನತಿಯತ್ತ ಕೊಂಡೊಯ್ಯುತ್ತವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನವದೆಹಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ವಿಶ್ರಾಂತ ಉಪಕುಲಪತಿ ಡಾ.ಪರಮೇಶ್ವರ ಶಾಸ್ತ್ರಿ ಅವರಿಗೆ ಸಾಧನಾ ಶಂಕರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವೆಂಕಟರಮಣ ನರಸಿಂಹ ಗೇರಗದ್ದೆ ದಂಪತಿಗೆ ಸನ್ಮಾನ ಮಾಡಲಾಯಿತು. ಡಿ.ಎಸ್.ವಿಶ್ವಾಮಿತ್ರ ರಚಿತ ಹಾಗೂ ರಾಧಾ ದೇಸಾಯಿ ಹಾಡಿರುವ ಗುರುಪಾದುಕಾ ಸ್ತೋತ್ರ ಸಿಡಿಯನ್ನು ಶ್ರೀಗಳು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ವೇದಘೋಷ ಹಾಗೂ ಮಾತೆಯರಿಂದ ಸ್ತೋತ್ರ ಪಠಣ ನಡೆಯಿತು. ಮಠದ ಕಾರ್ಯಾಧ್ಯಕ್ಷ ವಿ.ಎನ್.ಹೆಗಡೆ ಬೊಮ್ಮನಳ್ಳಿ ವಂದಿಸಿದರು. ಡಾ.ಶಂಕರ ಭಟ್ಟ ಉಂಚಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ಬೆಳಗ್ಗೆಯಿಂದಲೇ ಮಠದಲ್ಲಿ ವಿಶೇಷ ಪೂಜೆ, ಪಾರಾಯಣ ಹಾಗೂ ಮಹಾಪೂಜೆಗಳು ಶಾಸ್ತ್ರೋಕ್ತವಾಗಿ ನೆರವೇರಿದವು.

ಜಗಜ್ಯೋತಿ ಬಸವೇಶ್ವರ ಜಯಂತಿ

• **ಹುಬ್ಬಳ್ಳಿ:** ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 67 ರಲ್ಲಿ ಬರುವ ತಂಬದ ಓಣಿ ಐದುಮನೆಸಾಲ ನಲ್ಲಿ ಸೋಮವಾರ ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಿಸಲಾಯಿತು.

ಶೈಲಜಾ ಹರ್ತಿ, ಸುಮಂಗಲಾ ಹರ್ತಿ, ರೂಪಾ ದಾಟಿನಾಳ, ಅಕ್ಕಮಹಾದೇವಿ ಕೋರ್ಯಾನಮಠ, ಮೀನಾ ಹರ್ತಿ, ಇಂದುಮತಿ ನೀಲಕ್ಕ ಹಾದಿಮನಿ ಹರ್ತಿ, ಯಶಸ್ವಿನಿ ಹರ್ತಿ, ಗುರುಸಿದ್ದಪ್ಪ ಹರ್ತಿ ಸಂಗನಬಸಪ್ಪ ಹರ್ತಿ, ಮಹಲಿಂಗಪ್ಪ ಹರ್ತಿ, ರಾಜು ಕೋರ್ಯಾಣಮಠ, ನಂದೀಶ್ ಹಾದಿಮನಿ, ಬಸವರಾಜ ಲೂಟಿಮಠ, ವಿಶಾಲ ಹರ್ತಿ ಇದ್ದರು.

ಎಪಿಎಂಸಿಯಲ್ಲಿ: ಜಗಜ್ಯೋತಿ ಬಸವೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಹುಬ್ಬಳ್ಳಿ (ಎಪಿಎಂಸಿ) ಆಹಾರಧಾನ್ಯ ವರ್ತಕರ ಸಂಘದ ಆಶ್ರಯದಲ್ಲಿ ಬಸವಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಂಘದ ಅಧ್ಯಕ್ಷ ಚನ್ನುಹೊಸಮನಿ, ಗಣ್ಯ ವ್ಯಾಪಾರಸ್ಥರಾದ ಪ್ರಕಾಶ್ ಸಾಂಬ್ರಾಣಿ, ಬಸವರಾಜ ಲಕ್ಷ್ಮೇಶ್ವರ, ಸಿದ್ದು ಮಮಾದಾಪುರ, ಚೇತನ ಹೊರಕೇರಿ. ಮಲ್ಲಿಕಾರ್ಜುನ ಬೂರಟ್ಟಿ. ಮೃತ್ಯುಂಜಯ ಹಿರೇಮಠ ಮುಂತಾದ ವ್ಯಾಪಾರಸ್ಥರು ಇದ್ದರು.



ಎಲ್ಲ ದಾನಕ್ಕಿಂತ ರಕ್ತದಾನ ಶ್ರೇಷ್ಠ: ಸ್ವಾಮೀಜಿ



• **ಉಪ್ಪಿನಬೆಟಗೇರಿ:** ಎಲ್ಲ ದಾನಕ್ಕಿಂತ ರಕ್ತದಾನ ಪವಿತ್ರವಾದಿದ್ದು ಶಿಬಿರದಲ್ಲಿ ಅನೇಕರು ಸ್ವಯಂ ಸ್ಫೂರ್ತಿಯಿಂದ ರಕ್ತದಾನ ಮಾಡುವ ಮೂಲಕ ಜೀವ ಉಳಿಸುವ ಈ ಪವಿತ್ರ ಕಾರ್ಯದಲ್ಲಿ ಪಾಲ್ಗೊಂಡಿದ್ದು ತುಂಬಾ ಸಂತಸವಾಗಿದೆ ಎಂದು ಸ್ಥಳೀಯ ಮೂರುಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಅಭಿಪ್ರಾಯಪಟ್ಟರು.

ಉಪ್ಪಿನಬೆಟಗೇರಿ ಮೂರುಸಾವಿರ ವಿರಕ್ತಮಠ ಹಾಗೂ ಜಿಲ್ಲಾ ಆಸ್ಪತ್ರೆ ಧಾರವಾಡ ಮತ್ತು ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗ ಇವರ ಸಂಯುಕ್ತಾಶ್ರಯದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿ ಹಾಗೂ ಮೂರುಸಾವಿರ ವಿರಕ್ತಮಠದ ಪೀಠಾಧಿಪತಿ ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿ ಅವರ 52ನೇ ಹುಟ್ಟು ಹಬ್ಬದ ಅಂಗವಾಗಿ ಶ್ರೀಮಠದಲ್ಲಿ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ಶ್ರೀಗಳು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ರಕ್ತದಾನ ಮಾಡುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಧಾರವಾಡ ಜಿಲ್ಲಾಸ್ಪತ್ರೆಯ ರಕ್ತಕೇಂದ್ರ ವೈದ್ಯಾಧಿಕಾರಿ ಡಾ.ಮಮತಾ ಪಾಟೀಲ ಮಾತನಾಡಿ, ರಕ್ತದಾನ ಜೀವದಾನವಿದ್ದಂತೆ. ರಕ್ತದಾನ ಮಾಡಿದರೆ ಜೀವ ಉಳಿಸಿದ ಪುಣ್ಯದ ಫಲ ದೊರಕುವುದು. ಗ್ರಾಮದ ಅಪಾರ ಪ್ರಮಾಣದ ಜನತೆ ಸ್ವಚ್ಛೆಯಿಂದ ರಕ್ತದಾನ ಮಾಡಿದ್ದು ಅತ್ಯಂತ ಶ್ಲಾಘನೀಯ ಎಂದರು.

ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ಯ ವೈದ್ಯಾಧಿಕಾರಿ ಡಾ.ಬಿ.ಎಸ್. ಖಂಡೂನಾಯಕ, ಜಿಲ್ಲಾಸ್ಪತ್ರೆಯ ಅಭಿಷೇಕ ಗದಗ, ಶ್ರೀಶೈಲ ಕಲಕುಟ್ರ ಹಾಗೂ ಸಿಬ್ಬಂದಿ ವರ್ಗ ರಕ್ತದಾನ ಶಿಬಿರ ನಡೆಸಿದರು. ಉಪ್ಪಿನಬೆಟಗೇರಿ ಹಾಗೂ ಸುತ್ತಮುತ್ತಲಿನ ಗ್ರಾಮದ ಯುವಕರು ರಕ್ತದಾನ ನೀಡಿದರು.

ಬಸವಣ್ಣನವರ ಕೊಡುಗೆ ಮನುಕುಲಕ್ಕೆ ಮಾದರಿ

• **ಬೆಳಗಾವಿ:** ಸಮಾಜದಲ್ಲಿ ಬೇರು ಬಿಟ್ಟಿರುವ ಜಾತಿ ವರ್ಗ ಲಿಂಗ ಅಸಮಾನತೆಗಳನ್ನು ಕಿತ್ತು ಹಾಕಲು 12ನೇ ಶತಮಾನದಲ್ಲಿ ಹೋರಾಡಿದ ಬಸವಣ್ಣವರ ಕ್ರಾಂತಿ ಮನುಕುಲಕ್ಕೆ ಉತ್ತಮ ನಿರ್ದೇಶನವಾಗಿದೆ. ಇಂದಿಗೂ ಇಂತಹ ಅಸಮಾನತೆ ವಿರುದ್ಧ ಸಮಾಜ ಬಸವಲಿಯುತ್ತಿರುವ ಸಂದರ್ಭದಲ್ಲಿ ಬಸವಣ್ಣವರು ಮಾಡಿದ ಹೋರಾಟ ನೆನಪಾಗುತ್ತದೆ ಎಂದು ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷರು ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಉಪಾಧ್ಯಕ್ಷರಾದ

ಡಾ. ಪ್ರಭಾಕರ್ ಕೋರೆ ಹೇಳಿದರು.

ಅವರು ಹನುಮಾನ ನಗರದಲ್ಲಿ ಹಮ್ಮಿಕೊಂಡಿದ್ದ ಶಿವಬಸವ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ಬಸವಣ್ಣನವರು ಮಹಾ ಮಾನವತಾವಾದಿಯಾಗಿದ್ದರು. ಬಸವಣ್ಣ ಸಾಮಾಜಿಕ ಸ್ತರವಿನ್ಯಾಸವನ್ನು ಕಿತ್ತು ಹಾಕಲು 900 ವರ್ಷಗಳ ಹಿಂದೆ ಹೋರಾಡಿದ್ದರು ಎಂದರೆ ಆಶ್ಚರ್ಯವೆನಿಸುತ್ತದೆ. ಇಂದಿಗೂ ಕೂಡ ಸಾಮಾಜಿಕ ಅಸಮಾನತೆಯನ್ನು ಕಿತ್ತುಹಾಕಲು ಸಾಧ್ಯವಾಗುತ್ತಿಲ್ಲ, ಅನುಭವ ಮಂಟಪ ವೆಂಬ ಪಾರ್ಲಿಮೆಂಟಿನಲ್ಲಿ ಮಹಿಳಾ ಸಮಾನತೆಯನ್ನು ನೀಡಿದ ಪ್ರಥಮ ನಾಯಕ ಬಸವಣ್ಣ, ಸಮಾಜದ ಎಲ್ಲ ವರ್ಗದವರನ್ನು ಇವ ನಮ್ಮವ ಇವ ನಮ್ಮವ ಎಂದವರು ಕಾಯಕ ದಾಸೋಹವನ್ನು ಅನುಷ್ಠಾನಕ್ಕೆ ತಂದರು.



ಬೆಳಗಾವಿ ಉತ್ತರ ಶಾಸಕರಾದ ರಾಜು ಶೇಠ್ ಮಾತನಾಡಿ, ಮಹಾತ್ಮ ಬಸವೇಶ್ವರ ಹಾಗೂ ಶಿವಾಜಿ ಮಹಾರಾಜರು ಈ ಸಮಾಜಕ್ಕೆ ನೀಡಿದ ಸೇವೆ ಅಗಾಧವಾದದ್ದು ಇಂಥ ಪುಣ್ಯಪುರುಷರ ದಾರಿಯಲ್ಲಿ ನಮ್ಮ ಜನಾಂಗ ಸಾಗಿದ್ದೆ ಆದರೆ ಸಮಾಜ ಪರಿವರ್ತನೆ ಸಾಧ್ಯ ಎಂದು ಹೇಳಿದರು.

ಮಾಜಿ ಸಚಿವ ಎ.ಬಿ ಪಾಟೀಲ, ಉಪ ಮಹಾಪೌರ ಹಣಮಂತ ಕೊಂಗಾಳಿ ಮಾತನಾಡಿದರು.

ಈ ವೇಳೆ ಸಭಾ ಅಧ್ಯಕ್ಷರಾದ ಮುರುಗೇಶ್ ಡಪಲಾಪುರ್, ಪ್ರಶಾಂತ್ ರಾಂಪುರೆ, ಪ್ರಾಚಾರ್ಯ ಬಿಎಸ್ ಗವಿಮಠ್, ನಗರಸೇವಕ ಸಂದೀಪ್ ಜೀರಿಗೆಹಾಳ ವೇದಿಕೆ ಮೇಲೆ ಉಪಸ್ಥಿತರಿದ್ದರು. ಕೆಎಲ್‌ಇ ಆಸ್ಪತ್ರೆಯ ರಕ್ತಭಂಡಾರದ ಮುಖ್ಯಸ್ಥರಾದ ಶ್ರೀಕಾಂತ್ ವಿರ್ಗಿ, ವಿಟಿಯು ಕುಲ ಸಚಿವರಾದ ಡಾ ಪ್ರಸಾದ್ ರಾಂಪುರ ವಿಶೇಷ ಶ್ರೀಕಾಂತ್ ಶಾನವಾಡ, ರಾಜೇಂದ್ರ ಚಿಟಗಿ ಸೇರಿದಂತೆ ಹಲವರು ಇದ್ದರು.

ಗ್ರಾನೈಟ್ ಕ್ವಾರಿಯಲ್ಲಿ ಈಜಲು ಹೋಗಿದ್ದ ಬಾಲಕರಿಬ್ಬರು ನೀರುಪಾಲು

• **ಇಳಕಲ್:** ಬೇಸಿಗೆಯ ಬಿಸಿಲಿನ ತಾಪ ತಾಳಲಾರದೆ ಗ್ರಾನೈಟ್ ಕ್ವಾರಿಯಲ್ಲಿ ಈಜಲು ಹೋಗಿದ್ದ ಬಾಲಕರಿಬ್ಬರು ಮೃತಪಟ್ಟ ಘಟನೆ ಮಂಗಳವಾರ ನಡೆದಿದೆ.

ನಗರದ ಹೊರವಲಯದ ಹನುಮನಾಳ ಗ್ರಾಮದ ಬಳಿಯ ಗ್ರಾನೈಟ್ ಕ್ವಾರಿಯಲ್ಲಿ ಈ ಅವಘಡ ಸಂಭವಿಸಿದ್ದು, ಅಲಂಪುರ್ ಪೇಟೆಯ ನಿವಾಸಿಗಳಾದ ವಿಜಯ ಮಹಾಂತೇಶ ನಾಗಪ್ಪ ವಾಲಿಕಾರ (16) ಹಾಗೂ ವಿನಯ ಭೀಮಣ್ಣ ಗೊಲ್ಲರ (12) ಮೃತಪಟ್ಟ ದುರ್ದೈವಿಗಳು ಎಂದು ತಿಳಿದು ಬಂಧಿದೆ.



ಇವರು ತಮ್ಮ ಗೆಳೆಯರೊಂದಿಗೆ ಹನುಮನಾಳ ಗ್ರಾಮದ ಸಮೀಪವಿರುವ ಬಂದಿರುವ ಗ್ರಾನೈಟ್ ಕ್ವಾರಿ ಬಳಿ ತೆರಳಿದ್ದರು. ಈಜಲು ಬಾರದಿದ್ದರೂ ನೀರಿನ ಹೊಂಡಕ್ಕೆ ಇಳಿದ ಬಾಲಕರು ಆಳ ತಿಳಿಯದೇ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿ , ಸ್ಥಳೀಯ ಮೀನುಗಾರರು ಸತತ ನಾಲ್ಕು ಗಂಟೆ ಕಾರ್ಯಾಚರಣೆ ನಡೆಸಿ ಮೃತದೇಹಗಳನ್ನು ಪತ್ತೆ ಹಚ್ಚಿ ಹೊರ ತೆಗೆದಿದ್ದಾರೆ. ಬಾಲಕರನ್ನು ಕಳೆದುಕೊಂಡ ಪೋಷಕರ ಮತ್ತು ಕುಟುಂಬಸ್ಥರ ರೋಧನ ಮುಗಿಲು ಮುಟ್ಟಿದೆ.

ಇಳಕಲ್ ಶಹರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದ್ದು, ಗ್ರಾಮೀಣ ಠಾಣೆಯ ಪಿಎಸ್‌ಐ ಮಲ್ಲಿಕಾರ್ಜುನ ಸತಿಗೌಡರ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ. ಅಗ್ನಿಶಾಮಕದ ಠಾಣಾ ಅಧಿಕಾರಿಗಳಾದ ಪಿ.ಆರ್. ಚಿತ್ತರಗಿ, ಭೀಮಪ್ಪ ವಣಿಕ್ಯಾಳ, ಪ್ರಭು ಬೆಳ್ಳಿಹಾಳ, ಯಲ್ಲನಗೌಡ, ಬಸವರಾಜ ಶೀಲವಂತರ, ರವಿಚಂದ್ರ, ದೊಡ್ಡೇಶ ಹಾಗೂ ಗ್ರಾಮೀಣ ಪೊಲೀಸ್ ಠಾಣೆಯ ಎ.ಎಸ್.ಐ ಮಹಾಂತೇಶ ಕಲಗುಟಿಕರ ಮತ್ತು ಸಿಬ್ಬಂದಿ ಇದ್ದರು.

ಲೋಕಕಲ್ಯಾಣಕ್ಕಾಗಿ ಜನ್ಮವೆತ್ತಿದ ಶಂಕರಾಚಾರ್ಯರು

• **ಕಲಘಟಗಿ:** ಶಂಕರಾಚಾರ್ಯರು ಲೋಕಕಲ್ಯಾಣಕ್ಕಾಗಿ ಜನ್ಮವೆತ್ತಿದವರು. ಭಾರತದಲ್ಲಿ ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದರು ಎಂದು ವೇದಮೂರ್ತಿ ಚಿದಂಬರ ಜೋಶಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಶಂಕರಾಚಾರ್ಯರ ಜಯಂತಿ ಉತ್ಸವದಲ್ಲಿ ಮಾತನಾಡಿದ ಅವರು, ಶಿವನ ಅನುಗ್ರಹದಿಂದ ಜನ್ಮ ತಾಳಿದ ಶ್ರೀಗಳು ಲೋಕಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು. ಬಾಲ್ಯದಿಂದಲೇ ಲೌಕಿಕ ಜೀವನದಲ್ಲಿ ಆಸಕ್ತಿ ಇಲ್ಲದೆ ಕೇವಲ 12 ವರ್ಷಗಳಲ್ಲಿ ಆಧ್ಯಾತ್ಮಿಕ ಜ್ಞಾನ ಪಡೆದುಕೊಂಡಿದ್ದರು. ಪ್ರಪ್ರಥಮವಾಗಿ ಗುರುಪೀಠಗಳನ್ನು ಸ್ಥಾಪಿಸಿದವರು, ಕೇವಲ 32 ವರ್ಷ ಬದುಕಿದ್ದರೂ ಆಧ್ಯಾತ್ಮಿಕ ಜ್ಞಾನದಿಂದಲೇ ಮುಕ್ತಿ ಎನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾ ಯತಿಗಳು, ವೈಶಾಖ ಮಾಸದ ಶುಕ್ಲಪಂಚಮಿ ಶಂಕರ ಜಯಂತ್ಯುತ್ಸವದ ಶುಭದಿನವು ಎಲ್ಲರ ಮನೆಗಳಲ್ಲಿ ಹಬ್ಬ ಆಚರಿಸಿದಂತಾಗಲಿ ಎಂದರು. ತಹಶೀಲ್ದಾರ್ ಬಸವರಾಜ ಹೊಂಕಣದವರ ಮಾತನಾಡಿ, ಶ್ರೀಗಳು ಪ್ರತೀ ಜೀವ ಕುಲಕ್ಕೂ ಒಳಿತನ್ನು ಬಯಸಿದವರು. ಅವರ ಆದರ್ಶಗಳು ಪ್ರಪಂಚದ ಮನುಕುಲಕ್ಕೆ ಆದರ್ಶವಾಗಿರಲಿ ಎಂದರು. ಪುರಾಣಿಗಳಾದ ಮಾತೃಕಾ, ತ್ರಿವರ್ಣಾ ಗುರುಸ್ತುತಿ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಸಚಿವರ ಆಪ್ತಕಾರ್ಯದರ್ಶಿ ಸೋಮಶೇಖರ ಬೆನ್ನೂರ, ಅರಣ್ಯಾಧಿಕಾರಿ ಅರುಣ ಕುಮಾರ ಅಷ್ಟಗಿ, ವಿವಿಧ ಇಲಾಖೆಯ ಅಧಿಕಾರಿಗಳು, ಪಾಂಡುರಂಗ ಜೋಶಿ, ಸತೀಶ್ ವರ್ಕು, ನಾಗರಾಜ ಕುಲಕರ್ಣಿ, ವಿನಾಯಕ ಪೂಜಾರ, ಚಿಂತಿತಾ ಜೋಶಿ ಹಾಗೂ ವಿವಿಧ ಸಮಾಜದ ಹಿರಿಯರು ಉಪಸ್ಥಿತರಿದ್ದರು.



ಚಿಂತನೆ ಬೆಳೆಸಲು ಎನ್‌ಎಸ್‌ಎಸ್ ಸಹಕಾರಿ



• **ಧಾರವಾಡ:** ವಿದ್ಯಾರ್ಥಿಗಳಲ್ಲಿ ಶ್ರಮ, ಸಂಸ್ಕೃತಿ ಮತ್ತು ಸಮಾಜಮುಖಿ ಚಿಂತನೆಗಳನ್ನು ಬೆಳೆಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಪಾತ್ರ ಬಹಳ ಪ್ರಮುಖ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರೊ.ಎಸ್.ವಿ.ವಸ್ತ್ರದ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶವು ಕವಿವಿಯ ಸೆನೆಟ್ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡ ಏಳು ದಿನಗಳ ವಿಶ್ವವಿದ್ಯಾಲಯ ಮಟ್ಟದ ನಾಯಕತ್ವ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಮೌಲ್ಯಗಳು ಬೆಳೆಸುವ ಜೊತೆ ಬೌದ್ಧಿಕ, ಸಮಾಜದ ವಸ್ತು ಸ್ಥಿತಿ ಅರಿಯಲು ನಿಜಜೀವನದ ಸವಾಲುಗಳು ಎದುರಿಸಲು ಎನ್ನೆಸ್ಸೆಸ್ ಸಹಾಯಕ. ಎನ್ನೆಸ್ಸೆಸ್ ಯೋಜನೆ ರಾಷ್ಟ್ರನಿರ್ಮಾಣದಲ್ಲಿ ತನ್ನದಾದ ಕೊಡುಗೆ ನೀಡುತ್ತಿದೆ ಎಂದರು. ಕವಿವಿ ಎನ್ನೆಸ್ಸೆಸ್ ಸಂಯೋಜಕ ಡಾ. ಎಂ.ಬಿ.ದಳಪತಿ ಮಾತನಾಡಿ, ಇಂದಿನ ಯುವಜನಾಂಗ ಸಮಾಜಮುಖಿ ಕೆಲಸದಲ್ಲಿ ತೊಡಲು ಎನ್ನೆಸ್ಸೆಸ್ ಬಹಳಷ್ಟು ಉಪಯುಕ್ತ. ಸ್ವಚ್ಛತೆ, ನಾಯಕತ್ವ, ಜೀವಜಲ, ಸಾಕ್ಷರತೆ, ಶ್ರಮದಾನ ಕಾರ್ಯಕ್ರಮ ಹಮ್ಮಿಕೊಂಡಿದ್ದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಡಾ.ನಾಗರಾಜ ತಳವಾರ, ಡಾ.ಜಯಾನಂದ ಹಟ್ಟಿ, ಡಾ.ತೇಜಸ್ವಿನಿ ಅರಳಿಕಟ್ಟೆ, ಡಾ.ಪ್ರಭಾಕರ ಕಾಂಬಳೆ, ಪ್ರೊ.ಈರಪ್ಪ ಪೂಜಾರ, ಪ್ರೊ.ಶಿವಯೋಗಿ ಹಾವೇರಿ, ಡಾ. ನಾಗರಾಜ ಸೇರಿದಂತೆ 150 ಕಾಲೇಜುಗಳಿಂದ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಏ.26ರಂದು ಸಮಾವೇಶ

• **ಹುಬ್ಬಳ್ಳಿ:** ಶ್ರೀ ಶಿವಗಂಗಾ ವೀರಶೈವ ಸರ್ವಧರ್ಮ ವಧು-ವರರ ಮಾಹಿತಿ ಕೇಂದ್ರದ ವತಿಯಿಂದ ಶ್ರೀ ವೀರಶೈವ ಲಿಂಗಯತ ವಧು-ವರರ ಹಾಗೂ ಪಾಲಕರ ರಾಜ್ಯಮಟ್ಟದ ಸಮಾವೇಶವನ್ನು ಏ.26ರಂದು ಬೆಳಗ್ಗೆ 10 ರಿಂದ ಇಲ್ಲಿನ ಮೂರುಸಾವಿರಮಠದ ಡಾ.ಮೂಜಗಂ ಸಭಾಭವನದಲ್ಲಿ ಆಯೋಜಿಸಲಾಗಿದೆ ಎಂದು ಮಾಹಿತಿ ಕೇಂದ್ರದ ಮುಖ್ಯ ಸಂಯೋಜಕ ಶಂಕ್ರಪ್ಪ ಚಕ್ರಸಾಲಿ ಹೇಳಿದರು.

ನಗರದಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಪಂಚಮಸಾಲಿ, ಬಣಜಿಗ, ಸಾದರು, ಜಂಗಮ, ಆದಿ ಬಣಜಿಗ, ಶಿವಶಿಂಪಿ, ಕುಂಬಾರ, ಕಮ್ಮಾರ, ಹೂಗಾರ, ಬಡಿಗೇರ, ನೇಕಾರರು, ಬಣಕಾರ, ಗಾಣಿಗೇರ, ಮಾಲಗಾರ, ನಾವಿ, ಹಡಪದ, ಕುಡಲವಕ್ಕಲಿಗ, ಉಪ್ಪಾರ, ಲಿಂಗಾಯತ, ರಡ್ಡಿ, ಕುರುವಿನಶೆಟ್ಟಿ, ನೊಳಂಗ ಹೀಗೆ ಹಲವಾರು ಒಳಪಂಗಡದ ವಧು-ವರರು ಪಾಲ್ಗೊಳ್ಳಲಿದ್ದಾರೆ. ವಿವಾಹ ವಿಚ್ಛೇದಿತರು, ವಿಧುರ-ವಿಧವೆಯರು, ವಿಳಂಬಾವಗಿ ಮದುವೆ ಆಗದವರು, ವಿಶಿಷ್ಟಚೇತನರು ಸಹ ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಅನಿಷ್ಟಗಳ ನಿರ್ಮೂಲನೆಗೆ ಪ್ರಯತ್ನಿಸಿದ ಬಸವೇಶ್ವರರು



• **ನವಲಗುಂದ:** ಕರ್ನಾಟಕದ ಇತಿಹಾಸದಲ್ಲಿ 12ನೇ ಶತಮಾನ ತನ್ನದೇ ಆದ ಮಹತ್ವ ಪಡೆದಿದ್ದು, ಜಗಜ್ಯೋತಿ ಬಸವೇಶ್ವರರು ಸರಳ ವಚನಗಳ ಮುಖಾಂತರ ಸಮಾಜದಲ್ಲಿರುವ ಅನಿಷ್ಟಗಳ ನಿರ್ಮೂಲನೆಗೆ ಪ್ರಯತ್ನಿಸಿದರು ಹಾಗೂ ಎಲ್ಲ ವರ್ಗಗಳ ಜನರಲ್ಲಿ ಸಮಾನತೆ ತರಲು ಹಗಳಿರಲು ಶ್ರಮಿಸಿದ ಇವರ ಆದರ್ಶಗಳು ನಮಗೆಲ್ಲ ಅನುಕರಣೀಯ ಎಂದು ಗ್ರಂಥಪಾಲಕ ಹಾಗೂ ಬಸವ ತತ್ವಗಳ ಚಿಂತಕ ಶ್ರೀಧರ ಲೋಣಕರ ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಜಗಜ್ಯೋತಿ ಬಸವೇಶ್ವರರ ಜಯಂತಿಯಲ್ಲಿ ಅವರು ಮಾತನಾಡಿದರು.

ಪ್ರಾಂಶುಪಾಲ ಡಾ. ಎಂ.ಬಿ.ಬಾಗಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿ ಜಾತಿ, ಲಿಂಗ ಬೇಧವಿಲ್ಲದೆ ಎಲ್ಲಾ ಶರಣರು, ಕವಿಗಳು ಮತ್ತು ತತ್ವಜ್ಞಾನಿಗಳು ಒಗ್ಗೂಡಿ ವಚನಗಳ ಮೂಲಕ ಸಾಮಾಜಿಕ ಸಮಾನತೆ ಹಾಗೂ ಕಾಯಕ ತತ್ವವನ್ನು ಚರ್ಚಿಸಲು ಪ್ರಯತ್ನಿಸಿದ ಕೀರ್ತಿ ಬಸವಣ್ಣವರಿಗೆ ಸಲ್ಲುತ್ತದೆ ಎಂದರು.

ಬಸವೇಶ್ವರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಡಾ. ಸುಜಾತಾ ಬರದೂರ ಸ್ವಾಗತಿಸಿ, ನಿರೂಪಿಸಿದರು. ರವಿ ಬ್ಯಾಹಟ್ಟಿ ವಂದಿಸಿದರು. ಪ್ರೊ. ಐ.ಬಿ.ಸಾತಿಹಾಳ, ಡಾ. ಸಂತೋಷ ಹುಬ್ಬಳ್ಳಿ, ಡಾ. ಪ್ರಸನ್ನ ಪಂಢರಿ, ನಾಗರತ್ನ ಕುರಡೇಕರ್, ಬಿ.ವಿ. ಏಣಗಿ, ಸವಿತಾ ಚಿಕ್ಕಣ್ಣವರ, ಗಣೇಶ ಧೋಂಗಡಿ, ಗಂಗಾಧರ ಗೌಡರ, ಪ್ರತಿಭಾ ನಿಡಗುಂದಿ, ಡಾ. ವೈ.ಎನ್. ಗುಲಗಂಧಿ, ಡಾ. ಪ್ರವೀಣ ದೊಡಮನಿ, ಜ್ಯೋತಿಭಾ ದೊಡಮನಿ, ಖಾದಿರಬಿ ನಧಾಪ, ವಸಂತ ಮುಂದಿನಮನಿ, ಮಂಜುನಾಥ ಜಾಡರ, ಮಲ್ಲಿಕಾರ್ಜುನ ಗಡಾದ, ಮಧು ಹುಣಸಗಿ, ಮುಂತಾದ ಸಿಬ್ಬಂದಿ ಇದ್ದರು.

ಸದಲಗಾದಲ್ಲಿ 1 ಕೋಟಿ ರೂ. ಮೊತ್ತದಲ್ಲಿ ರಸ್ತೆ ಕಾಮಗಾರಿಗೆ ಪ್ರಕಾಶ ಹುಕ್ಕೇರಿ ಭೂಮಿಪೂಜೆ

• **ಚಿಕ್ಕೋಡಿ:** ಸದಲಗಾ ಪಟ್ಟಣದ ಪ್ರಮುಖ ರಸ್ತೆಗಳ ಅಭಿವೃದ್ಧಿಯನ್ನು ಮಾಡಲಾಗುತ್ತಿದ್ದು, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಯನ್ನು ಕೈಗೊಂಡು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹೇಳಿದರು.

ತಾಲೂಕಿನ ಸದಲಗಾ ಪಟ್ಟಣದ ಹೊರವಲಯದಲ್ಲಿ ಸದಲಗಾ-ದತ್ತವಾಡ ಕ್ರಾಸ್‌ನಿಂದ ಘೋಸರವಾಡ ನದಿ ಬಾಂದಾರವರೆಗೆ 1 ಕೋಟಿ ರೂ. ಅನುದಾನದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಸದಲಗಾ-ಬೋರಗಾಂವ, ಸದಲಗಾ-ದತ್ತವಾಡ, ಸದಲಗಾ ಪಟ್ಟಣದಲ್ಲಿ ಶಿವಾಜಿ ವೃತ್ತದಿಂದ ಬಸವೇಶ್ವರ ವೃತ್ತದವರೆಗಿನ ಎಲ್ಲ ಪ್ರಮುಖ ರಸ್ತೆ ಸುಧಾರಣಾ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಅರುಣ ದೇಸಾಯಿ, ಉದಯ ಬದನಿಕಾಯಿ, ಮಹಾದೇವ ಮೆಥಾಳೆ, ಚಂದ್ರಕಾಂತ ಪಾಟೀಲ, ರಮೇಶ ದೇಸಾಯಿ, ಕಲ್ಲಪ್ಪ ಪಡಲಾಳೆ, ಸಂಜು ಪಾಟೀಲ, ಪೀರಗೌಡ ಪಾಟೀಲ, ಅತಾವುಲ್ಲಾ ಮುಜಾವಾರ, ಸಂತೋಷ ನವಲೆ, ಗುರುಲಿಂಗ ಮಾನೆ, ಚಾಂದಸಾಬ್ ಸನದಿ, ಸುಕುಮಾರ ಉಗಾರೆ, ರಣಜಿತ ಪಾಟೀಲ, ಸಂಜಯ ಡಾಂಗೆ, ಭೀಮವಾರ ಮಾಳಗೆ ಇತರರು ಇದ್ದರು.



ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್

ಮುಖ್ಯ ಅಭಿಯಂತರರು–02ರ ಕಛೇರಿ
ಸಂ.30/1, ಯುಎಸ್‌ಐ ಕಟ್ಟಡ, 3ನೇ ಮಹಡಿ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬ್ಯಾಂಡ್ ಪ್ರದೇಶ, ಬೆಂಗಳೂರು–560052.

ಸಂಖ್ಯೆ: BSMILE/CE-02/TEND/01/2026-27 ದಿನಾಂಕ: 21.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಐಎಫ್‌ಟಿ) (ದ್ವಿ–ಲಕೋಟೆ ಪದ್ಧತಿ)

(ಜಿಒಕೆ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಮೂಲಸೌಕರ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು **"ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (B-SMILE)"** ಸಂಸ್ಥೆಯನ್ನು ಸ್ಥಾಪಿಸಿದೆ. ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (B-SMILE) ಪರವಾಗಿ ಮುಖ್ಯ ಅಭಿಯಂತರರು–02 ಅವರು ಸಮಾನ ಸ್ವಭಾವದ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ವಿವರವಾದ ಯೋಜನಾ ವರದಿ (DPR) ತಯಾರಿ/ಯೋಜನಾ ನಿರ್ವಹಣಾ ಸಲಹೆಗಾರರಿಂದ (Consultants) ಕೆಳಗಿನ ಪಟ್ಟಿಯಲ್ಲಿ ವಿವರಿಸಿದ ಕಾಮಗಾರಿಗಳಿಗೆ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗುತ್ತದೆ:

ಕ್ರಸಂ	ಕಾಮಗಾರಿಯ ವಿವರ
1	Consultancy services for assisting in preparation of Detailed Project Report (DPR) including investigations such as Topographical survey, Bituminous Core Cutting (Thickness), Subgrade Bearing Capacity (CBR), Falling weight Deflectometer (FWD) for the Comprehensive Development of Roads by providing White Topping in Bengaluru Central City Corporation Zone-1 limits in Bengaluru City for the year 2026-27. ಟೆಂಡರ್ ಮೊತ್ತ: ರೂ. 9.60 ಲಕ್ಷಗಳು. ಇಎಂಡಿ @ 1% (ರೂ.ಗಳಲ್ಲಿ): 9,600.
2	Consultancy services for assisting in preparation of Detailed Project Report (DPR) including investigations such as Topographical survey, Bituminous Core Cutting (Thickness), Subgrade Bearing Capacity (CBR), Falling weight Deflectometer (FWD) for the Comprehensive Development of Roads by providing White Topping in Bengaluru Central City Corporation Zone-2 limits in Bengaluru City for the year 2026-27. ಟೆಂಡರ್ ಮೊತ್ತ: ರೂ. 9.90 ಲಕ್ಷಗಳು. ಇಎಂಡಿ @ 1% (ರೂ.ಗಳಲ್ಲಿ): 9,900.
3	Consultancy services for assisting in preparation of Detailed Project Report (DPR) including investigations such as Topographical survey, Bituminous Core Cutting (Thickness), Subgrade Bearing Capacity (CBR), Falling weight Deflectometer (FWD) for the Comprehensive Development of Roads by providing White Topping in Bengaluru East City Corporation Zone-1 limits in Bengaluru City for the year 2026-27. ಟೆಂಡರ್ ಮೊತ್ತ: ರೂ. 16.40 ಲಕ್ಷಗಳು. ಇಎಂಡಿ @ 1% (ರೂ.ಗಳಲ್ಲಿ): 16400.
4	Consultancy services for assisting in preparation of Detailed Project Report (DPR) including investigations such as Topographical survey, Bituminous Core Cutting (Thickness), Subgrade Bearing Capacity (CBR), Falling weight Deflectometer (FWD) for the Comprehensive Development of Roads by providing White Topping in Bengaluru East City Corporation Zone-2 limits in Bengaluru City for the year 2026-27. ಟೆಂಡರ್ ಮೊತ್ತ: ರೂ. 7.30 ಲಕ್ಷಗಳು. ಇಎಂಡಿ @ 1% (ರೂ.ಗಳಲ್ಲಿ): 7300.

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳ ಲಭ್ಯತೆ: **22.04.2026, 16.30 ಗಂಟೆಗಳಿಂದ.** (2) ಪೂರ್ವ–ಬಿಡ್ ಸಭೆ: **28.04.2026, 16.00 ಗಂಟೆಗಳು.** (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **02.05.2026, 16.00 ಗಂಟೆಗಳು.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **04.05.2026, 10.30 ಗಂಟೆಗಳು.** (5) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಮೌಲ್ಯಮಾಪನದ ಅನುಮೋದನೆಯ ನಂತರ.**

ಸಹಿ/– ಮುಖ್ಯ ಅಭಿಯಂತರರು–02
ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್

ಹೆಸರಿನ ಬದಲಾವಣೆ

ನಾನು, **ಲಾಯಪ್ಪ ದ ಸುಳ್ಳು**, ಪಾನ್ ಕಾರ್ಡ್ ಪ್ರಕಾರ.ವಯಸ್ಸು: 46 ವರ್ಷ. ಉದ್ಯೋಗ: ಕೃಷಿ. ನಿವಾಸಿ: ಸಿದ್ದಾಪುರ ಮಾನೆನ ದೊಡ್ಡಿ, ತಾ: ತಿಕೋಟಾ, ಜಿ: ವಿಜಯಪುರ. ಕರ್ನಾಟಕ.

ಈಗ ನಾನು ನನ್ನ ಹೆಸರನ್ನು **ತಾಯಪ್ಪಾ ದಾದು ಸುಳ್ಳು** , ಆಧಾರ ಕಾರ್ಡ ಪ್ರಕಾರ ಬದಲಾಯಿಸಿಕೊಂಡಿದ್ದೇನೆ ಮೇಲ್ಕಂಡ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ ಎಂದು ಈ ಮೂಲಕ ಘೋಷಿಸುತ್ತೇನೆ. ದಿನಾಂಕ 17–04–2026 ರಂದು ಇದನ್ನು ನೋಟರಿ ಎ.ಎಮ್. ಜಕ್ನೂರ್, ವಿಜಯಪುರ ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸಲಾಗಿದೆ.

CHANGE OF NAME

I, **OMKAR KHARADE** resident of H No: 4001 Kharade Galli Nipani have changed my name **OMKAR SHASHIKANT KHARADE** with wild affidavit before the Notary of **Smt. A. H. Suryawanshi** of Nipani dated 21st April 2026.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ. ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.ಫೋನ್ : 0836–2315225 ಫ್ಯಾಕ್ಸ್ :2315226.
e-mail : knnl@knnlindia.com e-mail : eeknnl3byt@gmail.com Website: www.knnlindia.com

ಸಂ.ಕನೀನಿನಿ/ಮಬದವಿ–3/ಎ.ಇ–2/ಇ–ಟೆಂಡರ/2026–27/86
ದಿನಾಂಕ: 21–04–2026

ಟೆಂಡರ್

ಧಾರವಾಡ ತಾಲೂಕಿನ 9 ಕೆರೆಗಳಿಗೆ ತುಪ್ಪರಿ ಹಳ್ಳದಿಂದ ನೀರು ತುಂಬಿಸುವ ಯೋಜನೆಯ ಜಾಕ್‌ವೆಲ್ ಕಮ್ ಪಂಪ್‌ಹೌಸ್ ಮತ್ತು ಸೇವಾ ರಸ್ತೆಯ ನೇರ ಖರೀದಿ ಕುರಿತು.

ಧಾರವಾಡ ತಾಲೂಕಿನ ತುಪ್ಪರಿಹಳ್ಳದಿಂದ 9 ಕೆರೆ ತುಂಬಿಸುವ ಯೋಜನೆಗೆ ಸಂಬಂಧಿಸಿದಂತೆ ಹಂಗರ್ಕಿ ಗ್ರಾಮದಲ್ಲಿ ಬರುವ ಸ್ಕೀಮ್–2ರ ಜಾಕ್‌ವೆಲ್ ಕಮ್ ಪಂಪ್ ಹೌಸ್ ಮತ್ತು ಸೇವಾ ರಸ್ತೆ ನಿರ್ಮಿಸುವ ಸಲುವಾಗಿ ಖಾಸಗಿ ಜಮೀನುಗಳನ್ನು ನೇರ ಖರೀದಿ ಮೂಲಕ ಖರೀದಿಸಲು ದಿನಾಂಕ: 02–08–2022 ರಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ದರ ನಿರ್ಧಾರಣಾ ಸಮಿತಿ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿದ **ಸಭೆಯಲ್ಲಿ ಪ್ರತಿ ಎಕರೆಗೆ ರೂ. 5,41,344.21 (ರೂ. ಐದು ಲಕ್ಷ ನಾಲ್ವತ್ತೊಂದು ಸಾವಿರ ಮೂರ ನೂರ ನಾಲ್ವತ್ತ ನಾಲ್ಕ ಮತ್ತು ಪೈಸೆ ಇಪತ್ತೋಂದು ಮಾತ್ರ)** ರಂತೆ ಮಾನ್ಯ ಜಿಲ್ಲಾಧಿಕಾರಿಗಳು ದರ ನಿಗದಿಪಡಿಸಿರುತ್ತಾರೆ. ಹಂಗರ್ಕಿ ಗ್ರಾಮದ ರಿ.ಸ.ನಂ: 121/3B, 121/3A, 121/6, 121/5, 121/4, 121/2 & 121/1 ರ ಒಟ್ಟು 1 ಎಕರೆ–20 ಗುಂಟೆ–12ಆಣೆ ಜಮೀನು ಅವಶ್ಯಕವಿರುತ್ತದೆ.

ಮುಂದುವರೆದು, ಹಳೆತೇಗೂರ ಗ್ರಾಮದಲ್ಲಿ ಬರುವ ಸ್ಕೀಮ್–1ರ ಜಾಕ್‌ವೆಲ್ ಕಮ್ ಪಂಪ್ ಹೌಸ್ ಮತ್ತು ಸೇವಾ ರಸ್ತೆ ನಿರ್ಮಿಸುವ ಸಲುವಾಗಿ ಖಾಸಗಿ ಜಮೀನುಗಳನ್ನು ನೇರ ಖರೀದಿ ಮೂಲಕ ಖರೀದಿಸಲು ದಿನಾಂಕ:02/03/2026 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ ಅಧ್ಯಕ್ಷರು, ಜಿಲ್ಲಾ ದರ ನಿರ್ಧಾರಣಾ ಸಮೀತಿ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಪ್ರತಿ ಎಕರೆಗೆ **ರೂ. 3,00,000.00 (ರೂ. ಮೂರು ಲಕ್ಷ ಮಾತ್ರ)** ರಂತೆ ಮಾನ್ಯ ಜಿಲ್ಲಾಧಿಕಾರಿಗಳು ದರ ನಿಗದಿಪಡಿಸಿರುತ್ತಾರೆ. ಹಳೆತೇಗೂರ ಗ್ರಾಮದ ರಿ.ಸ.ನಂ: 96/6, 96/8, 96/7 & 97 ರ ಒಟ್ಟು 17 ಗುಂಟೆ–13ಆಣೆ ಜಮೀನು ಅವಶ್ಯಕವಿರುತ್ತದೆ.

ಜಿಲ್ಲಾಧಿಕಾರಿಗಳ ದರ ನಿರ್ಧರಣಾ ಸಲಹಾ ಸಮೀತಿ ನಿರ್ಧರಿಸಿರುವ ದರದಂತೆ ಜಮೀನು ಖರೀದಿ ಮಾಡಲು ಅಕ್ಷೇಪಣೆಗಳಿದ್ದಲ್ಲಿ ಅಂತಹ ಅಕ್ಷೇಪಣೆಗಳನ್ನು 30ದಿನಗಳ ಒಳಗಾಗಿ ಅಂದರೇ **22–05–2026** ರ ಒಳಗಾಗಿ ಲಿಖಿತ ರೂಪದಲ್ಲಿ ಈ ಕಚೇರಿಗೆ ಸಲ್ಲಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3
ಬ್ಯಾಹಟ್ಟಿ

ಡಿಐಪಿಆರ್/ಧಾರವಾಡ/74/ಮಣಿಪಾಲ್/2026–27

ಕ್ರಿ. ಮಿ. ನಂ. 47/2026
ಮಾನ್ಯ 2ನೇ ಜೆ ಎಮ್ ಎಫ್ ಸಿ ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರ : ಶ್ರೀ ವೀರಣ್ಣ ತಂದೆ ಮಹಾದೇವಪ್ಪ ಅಂಗಡಿ
ವಿರುದ್ಧ
ಎದುರುಗಾರರು : ಮಾನ್ಯ ತಹಶೀಲ್ದಾರರು, ಜನನ ಮರಣ ನೋಂದಣಿ ಅಧಿಕಾರಿಗಳು, ಹುಬ್ಬಳ್ಳಿ ತಾಲೂಕ ಹುಬ್ಬಳ್ಳಿ.

ನೋಟಿಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ಮೃತ ತನ್ನ ತಾಯಿಯಾದ **ಶ್ರೀಮತಿ ರುದ್ರವ್ವ ಕೋಂ ಮಹಾದೇವಪ್ಪ ಅಂಗಡಿ** ಇವರು ದಿ: **27–10–2019** ರಂದು **ಹುಬ್ಬಳ್ಳಿ ತಾಲೂಕ ಅದರಗುಂಚಿ ಗ್ರಾಮದ ಅವರ ಮನೆಯಲ್ಲಿ ಫೋತಿಯಾಗಿದ್ದು ಇರುತ್ತದೆ** ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಸದರ ಮರಣ ದಾಖಲಾತಿ ಕುರಿತು ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಂಟೆ ತಕರಾರು. ಹಕ್ಕು ಹಿತ ಸಂಬಂಧ ವಗೈರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ: 25–05–2026 ರಂದು ಬೆಳಗಿನ 11 :00 ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣ ವನ್ನು ನಿರ್ಣಯಿಸಲಾಗುವದು.

ಈ ಹೊತ್ತು ನನ್ನ ಸಹಿ ಮತ್ತು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ದಿ:09–04–2026 ರಂದು ಇದನ್ನು ಕೊಡಲಾಗಿದೆ.

ಹುಬ್ಬಳ್ಳಿ
ದಿ: 09–04–2026
(ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ
ಸಹಿ/– ಶಿರಸ್ತೇದಾರರು
(ಎಮ್.ಬಿ.ಪಾಟೀಲ) ಮಾನ್ಯ 2ನೇ ಜೆ.ಎಮ್.ಎಫ್.ಸಿ.,
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ. ನ್ಯಾಯಾಲಯ, ಹುಬ್ಬಳ್ಳಿ.

IN THE COURT OF CIVIL JUDGE & JMFC AT SIRUGUPPA

Criminal. Misc. Case No: 345/2026
Between:
Muka .....Petitioner
And
To,
The Chief officer-Cum- Birth and Deaths Registrar TMC Office Tekkalakote.
.....Respondents

TO WHOM SO EVER IT MAY CONCERN
NOTICE

Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Mother by name Mukamma W/o Talavara Pakkirappa, Who was expired on 30-12-2012 at the residence of the petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 27-04-2026 at 11.00 am before this court.

In default of your appearance on the date/ day of above petition will be heard and determined as "Ex-parte".

Given under my hand & seal of the court this 21st day of APRIL-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- Sridhara H.
Advocates Siruguppa,

IN THE COURT OF CIVIL JUDGE & JMFC AT SIRUGUPPA

Criminal. Misc. Case No: 346/2026
Between:
Muka .....Petitioner
And
To,
The Chief officer-Cum- Birth and Deaths Registrar TMC Office Tekkalakote.
.....Respondents

TO WHOM SO EVER IT MAY CONCERN
NOTICE

Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Mother by name Bagewadi Eramma w/o Mudligi Siddaiah, Who was expired on 23-02-2003 at the residence of the petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 27-04-2026 at 11.00 am before this court.

In default of your appearance on the date/ day of above petition will be heard and determined as "Ex-parte".

Given under my hand & seal of the court this 21st day of APRIL-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- Sridhara H.
Advocates Siruguppa,

CHANGE OF NAME

I, **BIBI BATUL** (Old Name) Resident of At Post Valki Tq: Honnavar Uttara Kannada 581335, Karnataka, have changed my name as **BIBI BATUL SIDDIBAPA** (New Name) henceforth I will be called and recognized by new name for all future purposes, dated: 21/04/2026.

CHANGE OF NAME

I, **NAZIRA SANA MOHAMMED MEERA SHIRURU** (Old Name) Resident of National Colony 6th Cross Post: Murdeshwar Tq: Bhatkal Dist: Karwar 581350 (address), have changed my name as **NAZIRA SANA** (New Name) henceforth I will be called and recognized by new name for all future purposes, dated: 21/04/2026.

CHANGE OF NAME

I, **VARSHA GADIVADDAR** (Old Name) Resident of H No: 158, Rajeevnagar Near Realiance Smart Vidyangar Hubli - 580031, have changed my name as **VARSHA DEVARAJ SHIGGANVI** (New Name) henceforth I will be called and recognized by new name for all future purposes, dated: 21/04/2026.

CHANGE OF NAME

I, **SUKESHINI RAJENDRA JINAGONDA** (Old Name) Resident of H No: 474, Patil Oni, Near Jain Basadi, Hebbal, Tq: Hukkeri, Dist: Belagavi, Karnataka - 591221, have changed my name as **SUKESHINI RAVIRAJ PATIL** (New Name) henceforth I will be called and recognized by new name for all future purposes, dated: 21/04/2026.

CHANGE OF NAME

I, **REETA DUMING LOBO** (Old Name) Resident of 1613, Mission Road, Alnavar, Dharwad, Karnataka, Pin Code: 581103, have changed my name as **REETA CLANE RODRIGUES** (New Name) henceforth I will be called and recognized by new name for all future purposes, dated: 21/04/2026.

CHANGE OF NAME

I, **ZAREEN SAYED ABU TAHIR SARGIRO** (Old Name) Resident of Nizamuddin Colony 1st Cross K S R T C Depot Road Dharwad 580001 (address), have changed my name as **ZAREEN SARGIRO** (New Name) henceforth I will be called and recognized by new name for all future purposes, dated: 21/04/2026.

IN THE COURT OF CIVIL JUDGE & JMFC AT SIRUGUPPA

Criminal. Misc. Case No: 347/2026
Between:
Muka .....Petitioner
And
To,
The Chief officer-Cum- Birth and Deaths Registrar TMC Office Tekkalakote.
.....Respondents

TO WHOM SO EVER IT MAY CONCERN
NOTICE

Whereas above named petitioner here in have instituted above petition under section 13(3) of birth and death Acts 1969 against the respondents for purpose of seeking death certificate of petitioners Grandfather by name Mudligi Siddaiah S/o Gyanappa, Who was expired on 03-09-1998 at the residence of the petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 28-04-2026 at 11.00 am before this court.

In default of your appearance on the date/ day of above petition will be heard and determined as "Ex-parte".

Given under my hand & seal of the court this 21st day of APRIL-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- Sridhara H.
Advocates Siruguppa,

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ನಗರಸಭಾ ಕಾರ್ಯಾಲಯ ಹೊಸಪೇಟೆ.

No:CMC HOSPETE/OW/TENDER/2025-26
Dated:18.04.2026

ಟೆಂಡರಿಗಾಗಿಆಹ್ವಾನ (ಐ.ಎಫ್.ಟಿ.) ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)

2025–26 ನೇ ಸಾಲಿನ ನಗರಸಭೆ ನಿಧಿಅನುದಾನದಡಿಯಲ್ಲಿಈ ಕೆಳಗಿನ ಕೆಲಸಕ್ಕಾಗಿಸೂಕ್ತ ದರ್ಜೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್‌ಟೆಂಡರ್‌ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು.ಗುತ್ತಿಗೆದಾರರುತಮಗೆ ಬೇಕಾದಟೆಂಡರ್ ವಿವರಗಳನ್ನು **www.eproc.karnataka.govt.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ– ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:01–05–2026 ಸಂಜೆ 5.00 ಗಂಟೆ ವರೆಗೆ,**ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **02–05–2026 ಸಂಜೆ 5.00 ಗಂಟೆ** ವರೆಗೆಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ, **ಹೊಸಪೇಟೆ.**ಕಾಮಗಾರಿಯ ವಿವರ:DMA/2026-27/BD/WORK_INDENT 57453, Construction of SamudayaBhavan in Ashok Nagar At ward no 25 in Hosapete city. **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ) : **5.70** ಗಳು

ಸಹಿ/–ಸಹಾಯಕಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ, ಹೊಸಪೇಟೆ.
ಸಹಿ/–ಪೌರಾಯುಕ್ತರು ನಗರಸಭೆ, ಹೊಸಪೇಟೆ

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/34

ಕರ್ನಾಟಕ ಗೃಹ ಮಂಡಳಿ

Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಬೆಂಗಳೂರು, ಕಾವೇರಿ ಭವನ, ಸಿಬಿಎಬಿ ಕಾಂಪ್ಲೆಕ್ಸ್‌ನ 2026–27ನೇ ಸಾಲಿನ ವಿದ್ಯುತ್ ವಾರ್ಷಿಕ ನಿರ್ವಹಣೆ ಕಾಮಗಾರಿ. **Work Indent No. : KHB/2026-27/OW/WORK INDENT 751 & IFT No.17/2026-27 Date: 17.04.2026.** ಟೆಂಡರ್‌ಗಿಟ್ಟ ಮೊತ್ತ ರೂ.32,49,982/-.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **02.05.2026 ಸಂಜೆ 4.00 ಗಂಟೆಗೆ.** ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/276/ಅಕಾರ್/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ–581301.
ದೂರವಾಣಿ: 08382–228935 ಫ್ಯಾಕ್ಸ್: 229735 E-mail: eerdwsd.uk@gmail.com
ಸಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/PMC/ಅಲ್ಪಾವಧಿ ಟೆಂಡರ ಪ್ರಕಟಣೆ/2026–27/83
ದಿನಾಂಕ: 18/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (KPP Portal ಮೂಲಕ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ನೀರಿನ ಗುಣಮಟ್ಟವನ್ನು ಪರಿಕ್ಷೀಸಲು ಜಿಲ್ಲಾ ಹಾಗೂ ತಾಲೂಕಾ ಪ್ರಯೋಗಾಲಯಕ್ಕೆ ಅಗತ್ಯ ಸಿಬ್ಬಂಧಿಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ (12 ತಿಂಗಳು) ಅವಧಿಗೆ ಹೊರಗುತ್ತಿಗೆ ಆಧಾರದ ಮೂಲಕ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ತೆ ಅಧಿನಿಯಮ–1999 ಹಾಗೂ ನಿಯಮ–2000 ರಂತೆ ತತ್ಸಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು KPP ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಗ್ರಾ.ಕು.ನೀ.&ನೈ. ಇಲಾಖೆಯಡಿ ನೋಂದಾಯಿತ/ಎಂಪಾನೆಲ್ಡ್ ತಾಂತ್ರಿಕ ಸಂಸ್ಥೆ/ಏಜೆನ್ಸಿಗಳು ಅಥವಾ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಸಂಸ್ಥೆ/ಏಜನ್ಸಿಗಳಿಂದ ಟೆಂಡರ್ ನಿಯಮಾವಳಿಗಳಂತೆ https://kppp.karnataka.gov.in KPP ಪೋರ್ಟಲ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಮತ್ತು ಇನ್ನಿತರೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರನಲ್ಲಿ ಭಾಗವಹಿಸುವುದು. ವಿವರ ಈ ಕೆಳಗಿನಂತಿವೆ.

ವಿವರ: INDENT NUMBER: RWSSD/2026-27/SE0881

(1) ಟೆಂಡರ್ ದಾಖಲಾತಿಗಳನ್ನು KPP ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 19/04/2026 ರಿಂದ 28/04/2026 ರ 16.30 ಗಂಟೆಯವರೆಗೆ (2) ಟೆಂಡರುಗಳನ್ನು KPP ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 28/04/2026 ರ 16.30 ಗಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: 29/04/2026 ರಂದು 17.00 ಗಂಟೆಯ ನಂತರ, ಉಳಿದ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಗ್ರಾ. ಕು. ನೀ. ಮತ್ತು ನೈ. ವಿಭಾಗ, ಕಾರವಾರ (ಉ. ಕ. ಜಿಲ್ಲೆ)

DIPR/KWR/KSMCA/88/26-27 dt.18.04.2026

ಕ್ರಿಮಿನಲ್ ಮಿಸಲೇನಿಯಸ್ ನಂ : 322/2026
ಮಾನ್ಯ ಜೆ.ಎಮ್.ಎಫ್.ಸಿ. ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು: ಬಸವಣ್ಣೆಪ್ಪ ತಂದೆ ವೀರಭದ್ರಪ್ಪ ಗೊಜನೂರ, ವಯಾ: ವಯಸ್ಕರು, ಉದ್ಯೋಗ: ಶೇತ್ಕಿ, ಸಾ: ಚವಡಾಳ ಗ್ರಾಮ ತಾ: ಸವಣೂರ

ವಿರುದ್ಧ

ಎದುರುಗಾರರು : ಜನನ–ಮರಣಗಳ ನೋಂದಣಿ ಅಧಿಕಾರಿಗಳು ಸವಣೂರ ಇವರ ಪರವಾಗಿ ತಹಶೀಲ್ದಾರರು ಸವಣೂರ

ಸಾರ್ವಜನಿಕ ನೋಟೀಸು

ಇದರಲ್ಲಿ ಅರ್ಜಿದಾರರಾದ ಬಸವಣ್ಣೆಪ್ಪ ತಂದೆ ವೀರಭದ್ರಪ್ಪ ಗೊಜನೂರ ಇವರು ತಮ್ಮ ತಂದೆ ಶ್ರೀ ವೀರಭದ್ರಪ್ಪ ಗುರುಬಸಪ್ಪ ಗೊಜನೂರ ಇವರು ಸವಣೂರ ತಾಲೂಕ ಚವಡಾಳ ಗ್ರಾಮದ ಅರ್ಜಿದಾರರ ಮನೆಯಲ್ಲಿ ದಿನಾಂಕ: 04–06–1983 ರಂದು ಮರಣ ಹೊಂದಿರುತ್ತಾರೆಂದು ಎದುರುಗಾರರ ಮರಣಗಳ ನೋಂದಣಿ ರಜಿಸ್ಟರದಲ್ಲಿ ಮರಣದ ದಿನಾಂಕವನ್ನು ನೊಂದಾಯಿಸಿಕೊಳ್ಳಲು ಮೇಲ್ಕಾಣಿಸಿದ ಕೋರ್ಟಿನಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ವಗೈರೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ: 27–05–2026 ರಂದು ಮುಂಜಾನೆ 10–30 ಗಂಟೆಗೆ ಮೇಲ್ಕಾಣಿಸಿದ ಮಾನ್ಯ ಕೋರ್ಟಿನ ಪ್ರಕರಣದಲ್ಲಿ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮೂಲಕವಾಗಲಿ, ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು.ಇಲ್ಲದೆ ಇದ್ದಲ್ಲಿ ಕಾನೂನ ಪ್ರಕಾರ ಮುಂದಿನ ಆದೇಶ ಮಾಡಲಾಗುತ್ತದೆ. ಈ ದಿನ 21–04–2026 ರಂದು ಮೊಹರನೊಂದಿಗೆ ಕೊಡಲ್ಪಟ್ಟಿರುತ್ತದೆ.

ಸ್ಥಳ: ಸವಣೂರ
ದಿನಾಂಕ: 21–04–2026

ಸಹಿ/– ಶಿರಸ್ತೆದಾರರು
ದಿವಾಣಿ ನ್ಯಾಯಾಧೀಶರು ವ 1ನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯ.
ಸಹಿ/– ಎಮ್.ಆರ್. ಬೋವಿ
ಅರ್ಜಿದಾರರ ಪರ ವಕೀಲರು, ಸವಣೂರ

ಕ್ರಿಮಿನಲ್ ಮಿಸಲೇನಿಯಸ್ ನಂ. 88/2025
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಕಿತ್ತೂರ ಇವರ ನ್ಯಾಯಾಲಯದಲ್ಲಿ

1) ಶ್ರೀ ಈಶ್ವರಯ್ಯ ತಂದೆ ಮುಂಡಯ್ಯ ಹಿರೇಮಠ .....ಅರ್ಜಿದಾರರು

ವಿರುದ್ಧ

1) ಮಾನ್ಯ ತಹಶೀಲ್ದಾರ ಕಿತ್ತೂರ ತಾಲೂಕ ಕಿತ್ತೂರ, ಜಿಲ್ಲಾ ಬೆಳಗಾವಿ .....ಎದುರುಗಾರರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಮೇರೆಗೆ ನೋಟಿಸು

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ಕೊಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

ಅರ್ಜಿದಾರನು ಮಾನ್ಯ ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲ ಮಾಡಿಕೊಂಡು ಅರ್ಜಿದಾರರ ತಾಯಿಯವರಾದ ಶ್ರೀಮತಿ ಶಾಂತವ್ವ ಕೋಂ ಮುಂಡಯ್ಯ ಹಿರೇಮಠ ಇವರು ದಿ: 03/09/2003 ರಂದು ಕಿತ್ತೂರ ತಾಲೂಕಿನ ಬಸ್ಸಾಪೂರ ಗ್ರಾಮದಲ್ಲಿ ಮೃತರಾಗಿರುತ್ತಾರೆ. ಕಾರಣ ಅರ್ಜಿದಾರರು ಮೃತರ ಮರಣ ಪ್ರಮಾಣ ಪತ್ರವನ್ನು ಪೂರೈಸುವ ಸಲುವಾಗಿ ಈ ಅರ್ಜಿಯನ್ನು ಮಾಡಿಕೊಂಡಿದ್ದು, ಸದರಿ ಮೃತರ ಮರಣದ ಬಗ್ಗೆ ಎದುರುಗಾರರ ಮರಣ ರಜಿಸ್ಟರದಲ್ಲಿ ದಾಖಲಿಸಿಕೊಳ್ಳುವ ಕುರಿತು ಕನ್ನಡ ದಿನಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಮಾಡುವುದಕ್ಕೆ ಪ್ರಸ್ತುತ ಅರ್ಜಿಯನ್ನು ದಾಖಲ ಮಾಡಿಕೊಂಡಿರುತ್ತಾರೆ. ಈ ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ: 04/06/2026 ರಂದು ನಿಗದಿಯಾಗಿರುತ್ತದೆ. ಕಾರಣ ಸದರಿ ಪ್ರಸ್ತುತ ಪ್ರಕರಣದಲ್ಲಿ ಯಾರಾದರೂ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಇದ್ದರೆ ದಿನಾಂಕ: 04/06/2026 ರಂದು ಮುಂಜಾನೆ 11.00ಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಸ್ವತಃ ಆಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರ ಆಗಲಿ ಹಾಜರಾಗಬೇಕು. ಇಲ್ಲದಿದ್ದರೆ ಅರ್ಜಿದಾರರ ಮಾಗಣಿಯ ಪ್ರಕಾರ ಪ್ರಸ್ತುತ ಅರ್ಜಿಯನ್ನು ಕಾನೂನು ರೀತ್ಯ ನಿರ್ಣಯಿಸಲಾಗುವದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್

ಈ ದಿನಾಂಕ: 16/04/2026 ರಂದು ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ನೀಡಲಾಯಿತು.

ಸ್ಥಳ: ಕಿತ್ತೂರ
16/04/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಜೆ.ಎಮ್. ಕಂಬಾರ, ಶಿರಸ್ತೆದಾರ
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕಿತ್ತೂರ
ಸಹಿ/– ಆರ್.ಎಮ್ ಜವಳಿ
(ಬೆಂಚ್ ಕ್ಲರ್ಕ್)
ಸಹಿ/– ಎಮ್.ಎಸ್. ಸಾಣಿಕೊಪ್ಪ
(ಅರ್ಜಿದಾರ ಪರ ವಕೀಲರು)

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ–591302

ಸಂಖ್ಯೆ: ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026–27/74–81 ದಿನಾಂಕ: 21.04.2026

"ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ"
(ಕೆಪಿಪಿ–ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ
1	Providing Infrastructure facility to Kukadolli Village coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/ RD/WORK_INDENT4335)**	254.15	ದರ್ಜೆ 2 ಮತ್ತು ಮೇಲ್ಪಟ್ಟು
2	Providing infrastructure facilities to Bakanur, Hangaraga and Rankunde villages coming under the jurisdiction of Belagavi Rural Constituency under Hangarag TFS in Belagavi Tulaka. **(W.I. No. KNNL/202627/RD/WORK_ INDENT4336)**	422.72	ದರ್ಜೆ 2 ಮತ್ತು ಮೇಲ್ಪಟ್ಟು
3	Improvements of Roads in Navage, Nandihalli and Santibstwad Village Belagavi Taluka, Belagavi Dist. **(W.I. No. KNNL/2026-27/RD/WORK_ INDENT4337)**	422.40	ದರ್ಜೆ 2 ಮತ್ತು ಮೇಲ್ಪಟ್ಟು
4	Providing infrastructure facilities to Karadiguddi, Marihal, Tumaraguddi, Siddanahalli, Karikatti and Balekundri KH villages coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_ INDENT4338)**	207.40	ದರ್ಜೆ 2 ಮತ್ತು ಮೇಲ್ಪಟ್ಟು
5	Providing Infrastructure facility to Benakanhalli and Hindalaga Gram Panchayat Limits coming under Hangaraga TFS in Belagavi. (for the year 2025-26) **(W.I. No. KNNL/2026-27/RD/ WORK_INDENT4339)**	422.49	ದರ್ಜೆ 2 ಮತ್ತು ಮೇಲ್ಪಟ್ಟು
6	Improvements to road from Marihal to Marikatti road (up to Narasappa Bhimappa Karanachi Field) and from Marihal Sulebhavi Main (Chavvan House) to Hodma Nala, roads, at Balekundri KH, Kallehola and Yaddalbhavihatti villages in Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4340)**	422.69	ದರ್ಜೆ 2 ಮತ್ತು ಮೇಲ್ಪಟ್ಟು
7	Providing Infrastructure facility to Badas KH Village coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4341)**	338.87	ದರ್ಜೆ 2 ಮತ್ತು ಮೇಲ್ಪಟ್ಟು
8	Providing Infrastructure facility to Halagimardi Village coming under the jurisdiction of Belagavi Rural Constituency under Bagewadi TFS in Belagavi Taluka. **(W.I. No. KNNL/2026-27/RD/WORK_INDENT4342)**	169.27	ದರ್ಜೆ 3 ಮತ್ತು ಮೇಲ್ಪಟ್ಟು

https://kppp.karnataka.gov.inನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **04.05.2026ರಂದು ಸಂಜೆ 4.00ಗಂಟೆ** ವರೆಗೆ ಸಲ್ಲಿಸಬಹುದು. ಪ್ರಿ–ಬಿಡ್ ಸಭೆಯನ್ನು ದಿನಾಂಕ: **27.04.2026ರಂದು ಮುಂಜಾನೆ 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.05.2026 ಸಂಜೆ 4.30 ಗಂಟೆಗೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ–ಪೋರ್ಟಲ್ ಮುಖಾಂತರ **https://kppp.karnataka.gov.in** ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08336–222163 ಸಂಪರ್ಕಿಸುವದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ

ವಾ.ಸಾ.ಇ/ಬೆಳಗಾವಿ/136/ದೇಶಪಾಂಡೆಪಬ್ಲಿಸಿಟಿ/2026–27

ಪಟ್ಟಣ ಪಂಚಾಯತ ಕಾರ್ಯಾಲಯ ಕುಂದಗೋಳ

ಜಿ:ಧಾರವಾಡ, ಕರ್ನಾಟಕ – 581113
ದೂರವಾಣಿ/ಫ್ಯಾಕ್ಸ್: 08304-290225 Email: ka.kundagol.tp@gmail.com

ಸಂ:ಪ.ಪಂ.ಕು/ಇ.ವಿಭಾಗ/ಟೆಂಡರ್/ವಹಿ/2026–27 ದಿನಾಂಕ: 21–04–2026

ಟೆಂಡರ್ ಪ್ರಕಟಣೆ

ಸನ್ 2026–27ನೇ ಸಾಲಿನಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ ಆದೇಶ ಪತ್ರಸಂಖ್ಯೆ:ಡಿಯುಡಿಸಿ/ಎಸ್‌ಎಫ್.ಸಿ/ಕುಂದಗೋಳ/ಸಿ.ಆರ್–01/2026–27/45 ದಿ: 08–04–2026 ರ ಅನ್ವಯ ಎಸ್.ಎಫ್.ಸಿ ಹಾಗೂ ಪುರಸಭೆ ಅನುದಾನದ ಶೇ24.10, ಶೇ7.25, ಹಾಗೂ ಶೇ5 ರ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೇ ಹಿಂದುಳಿದ ವರ್ಗ, ವಿಕಲಚೇತನರ ಕಲ್ಯಾಣ ಕಾರ್ಯಕ್ರಮ ಯೋಜನೆ ಅಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ 1999 ಮತ್ತು (ತಿದ್ದುಪಡಿ) 2001 ರಂತೆ ಅರ್ಹ ನೊಂದಾಯಿತ ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಇ–ಪೋರ್ಟಲ್ ಹಾಗೂ ಮ್ಯಾನುವಲ್ ಮುಖಾಂತರ ಟೆಂಡರ್ ಕರೆಯಲಾಗಿದೆ, ಸ್ಪರ್ಧಾತ್ಮಕ ಕೆ.ಡಬ್ಲ್ಯೂ 01 ಹಾಗೂ ಕೆ.ಜಿ 01 ರನ್ವಯ ಕಾಮಗಾರಿ ನಿರ್ವಹಿಸಲು ಆಹ್ವಾನಿಸಲಾಗಿದೆ.

ಅ. ನಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ ಜಿಎಸ್.ಟಿ.ಸೇರಿ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ	ಟೆಂಡರ್ ಫಾರ್ಮ ಫೀ	ಅವಧಿ
1	ವಾರ್ಡ ನಂ 16 ರಲ್ಲಿ ಬರುವ ಛಬ್ಬಿಯವರ ಪ್ಲಾಟಿನ 2ನೇ ರಸ್ತೆಯಿಂದ ಶ್ರೀ ದಾನಪ್ಪ ನಾಗಣ್ಣವರ ಮನೆಯವರೆಗೆ ಮೇಟಲಿಂಗ್ ರಸ್ತೆ ಕಾಮಗಾರಿ	0.39	975	500 + (GST)	15 ದಿನ
2	ವಿಕಲಚೇತನರಿಗೆ ಸ್ಟ್ಯಾಂಡಿಗ್ ಫಾರ್ಮ ಹಾಗೂ ಹೈಟ್ ರೇಸ್ ಸ್ಟ್ಯಾಂಡಲ್ ಸಾಮಗ್ರಿ ಪೂರೈಸುವುದು	0.45	1125	500 + (GST)	15 ದಿನ
3	ಪರಿಶಿಷ್ಟ ಜಾತಿ ವರ್ಗದ ಪೌರಕಾರ್ಮಿಕರಿಗೆ ಸುರಕ್ಷಾ ಪರಿಕರ ಪೂರೈಸುವುದು	0.17	425	500 + (GST)	15 ದಿನ
4	ಪರಿಶಿಷ್ಟ ಜಾತಿ ವರ್ಗದ ಕಾನೂನು ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಾನೂನು ಪುಸ್ತಕಗಳು ಖರೀದಿಸಿ ನೀಡುವುದು	0.41	1025	500 + (GST)	15 ದಿನ
5	ಪರಿಶಿಷ್ಟ ಪಂಗಡ ವರ್ಗದ ಕಾನೂನು ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಾನೂನು ಪುಸ್ತಕಗಳು ಖರೀದಿಸಿ ನೀಡುವುದು	0.21	525	500 + (GST)	15 ದಿನ
6	ಕುಂದಗೋಳ ಪಟ್ಟಣ ಪಂಚಾಯತಿ ವ್ಯಾಪ್ತಿ ಯಲ್ಲಿನ ಹಿಂದುಳಿದ ವರ್ಗದ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ದೋಸೆ ಹಂಚು, ಇಡ್ಲಿ ಕುಕ್ಕರ ಸೆಟ್ ಒದಗಿಸುವುದು	0.21	525	500 + (GST)	15 ದಿನ
7	ಕೆ.ಪಿ.ಪಿ ಇಂಡೆಂಟ್ ನಂ : DMA/2026-27/OW/ WORK_INDENT57566	3.51	ಇ–ಪೋರ್ಟಲ್‌ನಲ್ಲಿ ತಿಳಿಸಿದಂತೆ		60 ದಿನ

ಷರತ್ತುಗಳು:–
1) ಭರ್ತಿ ಮಾಡಿದ ಟೆಂಡರ್ ಸೇಡುಲ್‌ಗಳನ್ನು ಟೆಂಡರ್ ಪೆಟ್ಟಿಗೆಗೆ ಹಾಕಲು ಹಾಗೂ ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 06–05–2026 ಸಂಜೆ 4.00 ಗಂಟೆವರೆಗೆ.
2) ಮ್ಯಾನುವಲ್ ಹಾಗೂ ಇ–ಪೋರ್ಟಲ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ: 07–05–2026 ಸಾಯಂಕಾಲ 04–30 ಗಂಟೆಗೆ.
3) ಹೆಚ್ಚಿನ ಮಾಹಿತಿ ಬೇಕಾದಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಿಂದ ಪಡೆಯಬಹುದಾಗಿದೆ.
4) ಮ್ಯಾನ್ಯುಯಲ್ ಟೆಂಡರ್ ಫಾರ್ಮ ಶುಲ್ಕ ಮತ್ತು ಇಎಮ್‌ಡಿ ಶುಲ್ಕವನ್ನು ಡಿಡಿ ಮುಖಾಂತರ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಕುಂದಗೋಳ ಅವರ ಹೆಸರಿನಲ್ಲಿ ಪಾವತಿಸಬೇಕು.

ಸಹಿ/–ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ, ಕುಂದಗೋಳ

ವಾ.ಸಾ.ಸಂ.ಇ/ಧಾರವಾಡ/78/ದೇಶಪಾಂಡೆಪಬ್ಲಿಸಿಟಿ/2026–27

ಸಹಿ/–ಆಡಳಿತಾಧಿಕಾರಿ
ಪಟ್ಟಣ ಪಂಚಾಯತ, ಕುಂದಗೋಳ

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂ:ಕಾಇಂ/ಲೋಇವಿ/ಮಧು/ಸಇಂ–1/ಟೆಂಡರ್/2026–27 ದಿ: 16.04.2026


ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2026–27
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1,2&3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ, ಕೊರಟಗೆರೆ, ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137–283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ: 80.57 ಲಕ್ಷಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 27–04–2026 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 28–04–2026 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 29–04–2026 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: : 22–04–2026 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/26/KSMCA/2026-27



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	6	4	2	0	8	+0.599
ಹೈದರಾಬಾದ್	6	3	3	0	6	+0.566
ದಿಲ್ಲಿ	5	3	2	0	6	+0.310
ಗುಜರಾತ್	6	3	3	0	6	-0.821
ಮುಂಬೈ	6	2	4	0	4	+0.067
ಚೆನ್ನೈ	6	2	4	0	4	-0.780
ಲಖನೌ	6	2	4	0	4	-1.173
ಕೆಕೆಆರ್	7	1	5	1	3	-0.879

ಎಸ್‌ಆರ್‌ಎಚ್ 242/2 | 135* ರನ್ ಬಾರಿಸಿದ ಅಭಿಷೇಕ್ | ಕ್ಲಾಸೆನ್, ಹೆಡ್ ಅಬ್ಬರ

ಹೈದರಾಬಾದ್‌ನಲ್ಲಿ ದಾಖಲೆ ಅಭಿಷೇಕ

ಹೈದರಾಬಾದ್: ಒಂದೇ ಪಂದ್ಯದಲ್ಲಿ 10 ಬೌಂಡರಿ, 10 ಸಿಕ್ಸರ್ ಸಿಡಿಸಿದ ಅಭಿಷೇಕ್ ಶರ್ಮ, ದಾಖಲೆಗಳ ಸುರಿಮಳೆಗೈದಿದ್ದು, ಸನ್‌ರೈಸರ್ಸ್ ಹೈದರಾಬಾದ್ ದೊಡ್ಡ ಸ್ಕೋರ್ ನಿರ್ಮಿಸಿತು.

20 ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ಅಭಿಷೇಕ್ ಶರ್ಮ, ಸುಮಾರು 11 ಓವರ್ ಬ್ಯಾಟಿಂಗ್ ಮಾಡಿ 135 ರನ್ ಬಾರಿಸಿದರು. ಅದಕ್ಕಿಷ್ಟು ಕಿಶನ್, ಹೆಡ್ ಮತ್ತು ಕ್ಲಾಸೆನ್ ಸಾಥ್ ಸಿಕ್ಕ ನಂತರ ಸನ್ ತಂಡ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 242 ರನ್ ಬಾರಿಸಿತು.

ಅಭಿಷೇಕ್ ಅಬ್ಬರ: ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಹೈದರಾಬಾದ್‌ಗೆ ಅಬ್ಬರದ ಆರಂಭ ಸಿಕ್ಕಿತು. ಕಳೆದ ಪಂದ್ಯದಲ್ಲಿ ಲಯಕ್ಕೆ ಮರಳಿರುವ ಅಭಿಷೇಕ್ ಶರ್ಮ ಸಿಕ್ಸರ್‌ಗಳ ಸುರಿಮಳೆಗೈಯಲು ಶುರು ಮಾಡಿದರು. ಟ್ರಾವಿಸ್ ಹೆಡ್ ಅವರಿಗೆ ಸಿಂಗಲ್‌ಗಳ ಮೂಲಕ ಸಾಥ್ ನೀಡುತ್ತಿದ್ದಂತೆ ಹೈದರಾಬಾದ್ ಹಳಿ ಹಿಡಿಯಿತು. ಅಭಿಷೇಕ್ ಸಿಕ್ಸರ್‌ಗಳ ಸುರಿಮಳೆಗೈದಿದ್ದಲ್ಲದೆ ಬೌಂಡರಿಗಳ ಅಬ್ಬರವನ್ನೂ ಪ್ರದರ್ಶಿಸಿದರು. ಪವರ್‌ಪ್ಲೇನಲ್ಲಿ ಅವರದ್ದೇ ಆಟ ನಡೆಯಿತು. ಮುಕ್ತಾಯಕ್ಕೆ 67 ರನ್ ಗಳಿಸಿತು. ಅಭಿಷೇಕ್ ಅರ್ಧಶತಕದತ್ತ ಸಾಗಿದರು.

ಮಧ್ಯಮ ಓವರ್‌ಗಳಲ್ಲಿ ಸೆಟ್ ಆಗಿದ್ದ ಅಭಿ ಅರ್ಧಶತಕ ಪೂರೈಸಿಕೊಂಡರು. ಮುಂದೆ ತೀರಾ ಭಯಂಕರ ಬ್ಯಾಟಿಂಗ್ ಶುರು ಮಾಡಿದರು. ಹೆಡ್ 37 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಇಶಾನ್ ಕಿಶನ್ ಕೂಡ ಕೈಜೋಡಿಸಿದರು. ಅಭಿ ಆಟಕ್ಕೆ ದಿಲ್ಲಿ ತತ್ತರಿಸಿತು.



ಯಾವುದೇ ಆಟಗಾರ ಕೂಡ ತಡೆಯಲಾಗಲೇ ಇಲ್ಲ. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದರು. ಬಾನಿನೆತ್ತರದ ಸಿಕ್ಸರ್, ನಿಲ್ಲಿಸಲಾಗದ ಬೌಂಡರಿಗಳನ್ನು ಬಾರಿಸಿದರು. ಅವರ ವೈಭವಕ್ಕೆ ಸರಿಸಾಟಿಯೇ ಇಲ್ಲದಂತೆ 47 ಬಾಲ್‌ಗಳಲ್ಲಿ ಶತಕ ಬಾರಿಸಿಬಿಟ್ಟರು. ಶತಕದ ಆಟಕ್ಕೆ ತಡೆಯೊಡ್ಡಲು ಯಾರಿಂದಲೂ ಸಾಧ್ಯವೇ ಆಗಲಿಲ್ಲ.

ಒಂದೇ ಓವರ್‌ನಲ್ಲಿ 23 ರನ್: 15ನೇ ಓವರ್ ಮಾಡಲು ನಿತಿಶ್ ರಾಣಾ ಬಂದರು. ಸೆಟ್ ಆಗಿದ್ದ ಅಭಿಷೇಕ್ ಶರ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಮೊದಲಿನ ಎರಡು ಬಾಲ್‌ಗಳಲ್ಲಿ 2 ಸಿಕ್ಸರ್ ಚಚ್ಚಿದ ಅವರು, ಮೂರನೇ ಬಾಲ್‌ನಲ್ಲಿ ಬೌಂಡರಿ ಬಾರಿಸಿದರು. ನಾಲ್ಕನೇ ಬಾಲ್‌ನಲ್ಲಿ ಕಿಶನ್ ರನ್‌ಔಟ್ ಆದರು. ಕೊನೆಯ ಬಾಲ್‌ನಲ್ಲಿ ಮತ್ತೊಂದು ಸಿಕ್ಸರ್ ಬಾರಿಸಿದರು. ಅಭಿಷೇಕ್ ಡೆತ್ ಓವರ್‌ಗೆ ನುಗ್ಗಿದರು. ಅಲ್ಲಿಗೆ ಮಧ್ಯಮ ಓವರ್ ಮುಕ್ತಾಯಗೊಂಡವು, ಹೈದರಾಬಾದ್ 122 ರನ್ ಬಾರಿಸಿತು. ಇದರಲ್ಲಿ ಅಭಿಷೇಕ್ 80ಕ್ಕೂ ಹೆಚ್ಚು ರನ್ ಮಾಡಿದರು.

ಕ್ಲಾಸೆನ್ ಆರ್ಭಟ: ಡೆತ್ ಓವರ್‌ನಲ್ಲಿ ಕ್ಲಾಸೆನ್ ಅಬ್ಬರ ಶುರುವಾಯಿತು. ಕಿಶನ್ ಔಟಾದ ನಂತರ ಬ್ಯಾಟಿಂಗ್‌ಗಿಳಿದ ಅವರು, 13 ಬಾಲ್‌ಗಳಲ್ಲಿ ಔಟಾಗದೆ 37 ರನ್ ಗಳಿಸಿದರು. ಇತ್ತ ಅಭಿಷೇಕ್ ಕೂಡ ಬೌಂಡರಿಗಳನ್ನು ಬಾರಿಸಿ ಅಜೇಯರಾಗಿ ಉಳಿದರು. ಹೈದರಾಬಾದ್ ಡೆತ್ ಓವರ್‌ನಲ್ಲಿ 53 ರನ್ ಗಳಿಸಿತು.

ಅಭಿಷೇಕ್‌ಗೆ ಎರಡನೇ ಶತಕ

ಅಭಿಷೇಕ್ ಶರ್ಮ ಎರಡನೇ ಐಪಿಎಲ್ ಶತಕ ಬಾರಿಸಿದರು. 2025ರಲ್ಲಿ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಐಪಿಎಲ್‌ನಲ್ಲಿ ಮೊದಲ ಶತಕ ಬಾರಿಸಿದ್ದ ಅವರು, ದಿಲ್ಲಿ ವಿರುದ್ಧ ಎರಡನೇ ಶತಕ ಬಾರಿಸಿದರು.

ಐದನೇ ಅತಿ ಹೆಚ್ಚು ರನ್

135* ರನ್ ಬಾರಿಸಿರುವ ಅಭಿಷೇಕ್ ಶರ್ಮ ಐಪಿಎಲ್‌ನ ಐದನೇ ಅತಿ ಹೆಚ್ಚು ವೈಯಕ್ತಿಕ ಹೆಚ್ಚು ರನ್ ಬಾರಿಸಿದರು. 144 ರನ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿರುವ ಅವರು, ದಿಲ್ಲಿ ವಿರುದ್ಧ 135*ರನ್‌ಗಳೊಂದಿಗೆ ಆರ್‌ಸಿಬಿಯ ಎಬಿಡಿ 133 ರನ್‌ಗಳ ಸ್ಕೋರ್ ಅನ್ನು ದಾಟಿದರು. ಇದು ನಾಲ್ಕನೇ ಅತಿ ಹೆಚ್ಚು ಸ್ಕೋರ್ ಆಗಿದೆ. ಮತ್ತು ತಮ್ಮ 2ನೇ ಅತಿ ಗರಿಷ್ಠ ಸ್ಕೋರ್ ಆಗಿದೆ.

100 ಸಿಕ್ಸರ್

ಅಭಿಷೇಕ್ ಶರ್ಮ ಹೈದರಾಬಾದ್ ಪರ ನೂರು ಸಿಕ್ಸರ್‌ಗಳನ್ನು ಬಾರಿಸಿದರು. 2017ರಲ್ಲಿ ಐಪಿಎಲ್ ಪದಾರ್ಪಣೆ ಮಾಡಿದ ಅವರು, ಡೆಲ್ಲಿ ಡೇರ್ ಡೆವಿಲ್ಸ್ ಪರ ಆಡುತ್ತಿದ್ದರು. 2019ರಿಂದ ಅಭಿಷೇಕ್ ಶರ್ಮ ಹೈದರಾಬಾದ್ ಪರ ಆಡುತ್ತಿದ್ದಾರೆ. ಅವರು ಇಲ್ಲಿಯವರೆಗೂ ಒಟ್ಟು 100 ಸಿಕ್ಸರ್‌ಗಳನ್ನು ಹೈದರಾಬಾದ್ ಪರ ಬಾರಿಸಿದ್ದಾರೆ.

ಬೌಂಡರಿಯಿಂದಲೇ 100 ರನ್

135 ರನ್‌ಗಳಲ್ಲಿ ಅಭಿಷೇಕ್ ಶರ್ಮ ಬೌಂಡರಿಯಿಂದಲೇ 100 ರನ್ ಬಾರಿಸಿದರು. ಒಟ್ಟು 68 ಎಸೆತ ಎದುರಿಸಿ, 10 ಬೌಂಡರಿ, 10 ಸಿಕ್ಸರ್ ಬಾರಿಸಿದರು.

ಕಿರುಸುದ್ದಿ

ಗಾಯದ ಸಮಸ್ಯೆ: ಫ್ರೆಂಚ್ ಓಪನ್‌ಗೆ ಅಲ್ಕರಾಜ್ ಅನುಮಾನ

ಹೊಸದಿಲ್ಲಿ: ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ತಮ್ಮ ಕೈಮಣಿಯ ಗಂಭೀರ ಗಾಯದ ಹಿನ್ನೆಲೆ, ಈ ಬಾರಿ ರೋಲಾಂ ಗ್ಯಾರೋಸ್(ಫ್ರೆಂಚ್ ಓಪನ್) ಪಂದ್ಯಾವಳಿಯಿಂದ ಹೊರಗುಳಿಯುವ ಸಾಧ್ಯತೆ ಇದೆ. 22 ವರ್ಷದ ಅಲ್ಕರಾಜ್ ಕಳೆದ ವಾರ ಬಾರ್ಸಿಲೋನಾ ಮಣ್ಣಿನ ಕೋರ್ಟ್ ಟೂರ್ನಿಯಿಂದ ಹಿಂದೆ ಸರಿದಿದ್ದರು. ಪಂದ್ಯದಲ್ಲಿ ರಿಟರ್ನ್ ಹೊಡೆಯುವಾಗ ಕೈಮಣಿ ಸಮಸ್ಯೆ ಉಂಟಾದ ಕಾರಣ, ನಂತರ ಅದು ನಿರೀಕ್ಷೆಗಿಂತ ಹೆಚ್ಚು ಗಂಭೀರ ಗಾಯ ಎಂದು ತಿಳಿಸಿದ್ದಾರೆ.



ಈಗಾಗಲೇ ಮ್ಯಾಡ್ರಿಡ್ ಓಪನ್‌ನಿಂದಲೂ ಹೊರಗುಳಿದಿರುವ, ಮೇ 18ರಿಂದ ಆರಂಭವಾಗುವ ಪ್ಯಾರಿಸ್ ಟೂರ್ನಿಯಲ್ಲಿ ಭಾಗವಹಿಸುವ ಬಗ್ಗೆ ಅನುಮಾನಗಳು ಹೆಚ್ಚಾಗಿವೆ. ಈ ಬಗ್ಗೆ ಮಾಧ್ಯಮವೊಂದರಲ್ಲಿ ಮಾತನಾಡಿರುವ ಅವರು, ವೇಗವಾಗಿ ಮರಳುವುದಕ್ಕಿಂತ, ಸ್ವಲ್ಪ ಸಮಯ ತೆಗೆದುಕೊಂಡು ಸಂಪೂರ್ಣ ಚೇತರಿಸಿಕೊಂಡು ಬರಲು ಇಷ್ಟಪಡುತ್ತೇನೆ, ಎಂದು ಅಲ್ಕರಾಜ್ ಹೇಳಿದ್ದಾರೆ. ನನ್ನ ಮುಂದಿನ ವೃತ್ತಿಜೀವನ ಇನ್ನೂ ದೀರ್ಘವಾಗಿದೆ. ಈಗ ಅತಿಯಾಗಿ ಒತ್ತಡ ಹಾಕಿಕೊಂಡರೆ ಮುಂದಿನ ಟೂರ್ನಿಗಳ ಮೇಲೆ ಪರಿಣಾಮ ಬೀರುತ್ತದೆ, ಎಂದು ಅವರು ತಿಳಿಸಿದ್ದಾರೆ. ಇತ್ತೀಚೆಗೆ ಮಾಂಟೆ ಕಾರ್ಲೋ ಮಾಸ್ಟರ್ಸ್ ಫೈನಲ್‌ನಲ್ಲಿ ಜಾನಿಕ್ ಸಿನ್ನರ್ ವಿರುದ್ಧ ಸೋತ ನಂತರ ಅಲ್ಕರಾಜ್ ವಿಶ್ವ ನಂ.1 ಸ್ಥಾನವನ್ನು ಕಳೆದುಕೊಂಡಿದ್ದರು.

ಏಷ್ಯನ್ ಗೇಮ್ಸ್ ಸೋನಿಯಲ್ಲಿ ಪ್ರಸಾರ

ಹೊಸದಿಲ್ಲಿ: ಜಪಾನ್‌ನಲ್ಲಿ ನಡೆಯಲಿರುವ 20ನೇ ಏಷ್ಯನ್ ಗೇಮ್ಸ್ ಪ್ರಸಾರದ ಅಧಿಕಾರವನ್ನು ಸೋನಿ ಪಿಕ್ಚರ್ಸ್ ನೆಟ್ವರ್ಕ್ ಗೆದ್ದುಕೊಂಡಿದೆ. ಜಪಾನ್‌ನ ಐಚಿ-ನಾಗೋಯಾದಲ್ಲಿ ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರವರೆಗೆ ಮಹಾಕೂಟ ನಡೆಯಲು ಸಜ್ಜಾಗಿದೆ. ಬುಧವಾರ ಬ್ರಾಡ್ ಕಾಸ್ಟಿಂಗ್ ಬಿಡ್ ಮುಕ್ತಾಯಗೊಂಡಿತು. ಏಷ್ಯಾದ ಅತಿ ದೊಡ್ಡ ಬ್ರಾಡ್ ಕಾಸ್ಟಿಂಗ್ ಸಂಸ್ಥೆಗಳಲ್ಲಿ ಒಂದಾದ ಸೋನಿ ಗೆದ್ದುಕೊಂಡಿದೆ ಎಂದು ಏಷ್ಯನ್ ಗೇಮ್ಸ್ ಆಯೋಜಕರು ಘೋಷಿಸಿದ್ದಾರೆ. ಈ ಒಪ್ಪಂದದ ಪ್ರಕಾರ ಕೂಟವನ್ನು ಏಷ್ಯಾದ್ಯಂತ ಸ್ಟಾರ್ ಸ್ಪೋರ್ಟ್ಸ್ ನೆಟ್ವರ್ಕ್‌ನಲ್ಲಿ ಪ್ರಸಾರ ಮಾಡಲಾಗುತ್ತದೆ. ಸ್ಟ್ರೀಮಿಂಗ್ ಅಧಿಕಾರವನ್ನು ಸೋನಿ ಲೀವ್ ಹೊಂದಲಿದೆ. ಏಷ್ಯನ್ ಗೇಮ್ಸ್ ಅನ್ನು ಸತತ ಮೂರನೇ ಬಾರಿಗೆ ಪ್ರಸಾರ ಮಾಡಲು ಸಿದ್ಧವಾಗಿರುವ ಸೋನಿ, ಇದು ನಮಗೆ ಹೆಮ್ಮೆ ಎಂದಿದೆ.

10ಕೆ ಬೆಂಗಳೂರು: 5ಕೋಟಿ ರೂ. ನಿಧಿ ಸಂಗ್ರಹ

ಬೆಂಗಳೂರು: ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 18ನೇ ಆವೃತ್ತಿಗಾಗಿ ಸಜ್ಜಾಗುತ್ತಿದ್ದು, ದಿನಗಣನೆ ಶುರುವಾಗಿವೆ. ಈ ನಡುವೆ, ಸಾಮಾಜಿಕ ಅಭಿವೃದ್ಧಿಗಾಗಿ ಎನ್‌ಜಿಒಗಳಿಗೆ ನೀಡಲು ಸಂಗ್ರಹಿಸಲಾಗುವ ಮೊತ್ತದ ದಾಖಲೆಯನ್ನು ಮಂಗಳವಾರದಂದು ಬಿಡುಗಡೆ ಮಾಡಲಾಯಿತು.ಕಾರ್ಪೊರೇಟ್‌ಗಳು, ವ್ಯಕ್ತಿಗಳು ಮತ್ತು ಓಟಗಾರರ ಬೆಂಬಲದೊಂದಿಗೆ ಯುನೈಟೆಡ್ ವೇ ಬೆಂಗಳೂರು ನಡೆಸುತ್ತಿರುವ ಕೂಟದ ಲೋಕೋಪಕಾರಿ ಸ್ತಂಭವು ಈ ವರ್ಷ ಈಗಾಗಲೇ 5 ಕೋಟಿ ರೂ.ಗಳನ್ನು ಸಂಗ್ರಹಿಸಿದೆ, ಇದು 16 ಕಾರಣಗಳಲ್ಲಿ 94ಕ್ಕೂ ಹೆಚ್ಚು ಎನ್‌ಜಿಒಗಳಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಆಯೋಜಕರು ತಿಳಿಸಿದರು. ವರ್ಷಗಳಲ್ಲಿ, ಈ ವೇದಿಕೆಯು ಅಸಾಧಾರಣವಾಗಿ ಬೆಳೆದಿದೆ, 260 ಕ್ಕೂ ಹೆಚ್ಚು ಎನ್‌ಜಿಒಗಳಿಗೆ 59.20 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಲೋಕೋಪಕಾರಕ್ಕಾಗಿ ದಕ್ಷಿಣ ಭಾರತದ ಅತಿದೊಡ್ಡ ಕ್ರೀಡಾ ವೇದಿಕೆಯಾಗಿ ವಿಕಸನಗೊಂಡಿದೆ. ಈ ವರ್ಷದಲ್ಲಿ, 43ಕ್ಕೂ ಹೆಚ್ಚು ಕಂಪನಿಗಳು ಮತ್ತು 215ಕ್ಕೂ ಹೆಚ್ಚು ವೈಯಕ್ತಿಕ ನಿಧಿಸಂಗ್ರಹಕಾರರು ಒಟ್ಟಿಗೆ ಸೇರಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಚೆನ್ನೈಗೆ ಭಾರೀ ಹೊಡೆತ | ಗಾಯದಿಂದ ಹೊರಬಿದ್ದ ಬ್ಯಾಟರ್

ಆಯುಷ್ ಮಾಥ್ರೆ ಹೊರಕ್ಕೆ

ಚೆನ್ನೈ: ಚೆನ್ನೈನ ಪ್ರತಿ ಪಂದ್ಯದಲ್ಲೂ ಉತ್ತಮ ಬ್ಯಾಟಿಂಗ್ ಮಾಡಿ ತಂಡಕ್ಕೆ ಆಸರೆಯಾಗುತ್ತಿದ್ದ ಯುವ ಬ್ಯಾಟರ್ ಆಯುಷ್ ಮಾಥ್ರೆ ಐಪಿಎಲ್‌ನಿಂದಲೇ ಹೊರಬಿದ್ದರು.

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದ ವೇಳೆ ಕಾಲಿಗೆ ಗಾಯ ಮಾಡಿಕೊಂಡ ಅವರು, ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಅವರಿಗೆ ಸುಮಾರು 12 ವಾರಗಳ ರಿಹ್ಯಾಬ್ ಅವಶ್ಯಕತೆ ಇದೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ಪ್ರಕಟಣೆಯಲ್ಲಿ ತಿಳಿಸಿದೆ. ಎರಡು ಪಂದ್ಯಗಳಲ್ಲಿ ಗೆದ್ದ ನಂತರ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಮತ್ತೆ ಹಿನ್ನಡೆ ಅನುಭವಿಸಿರುವ ಚೆನ್ನೈ ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿದೆ. ಮೊದಲೇ ಹಿನ್ನಡೆ ಅನುಭವಿಸಿರುವ ಫ್ರಾಂಚೈಸಿಗೆ ಗಾಯ ದೊಡ್ಡ ಹೊಡೆತ ನೀಡಿದೆ.

ವಾಸ್ತವವಾಗಿ ಚೆನ್ನೈ ತಂಡ ಉತ್ತಮ ಬ್ಯಾಟಿಂಗ್ ಪಡೆ ಹೊಂದಿದ್ದರೂ ಯಾರೊಬ್ಬರೂ ಲಯದಲ್ಲಿಲ್ಲ. ಸಂಜು ಸ್ಯಾಮ್ಸನ್ ಒಂದು ಪಂದ್ಯದಲ್ಲಿ ಶತಕ ಬಾರಿಸಿದ್ದಾದರೂ, ಹೈದರಾಬಾದ್ ವಿರುದ್ಧ ನಿರಾಸೆ ಮೂಡಿಸಿದರು. ಇತ್ತ ಗಾಯಕ್ವಾಡ್ ಲಯಕ್ಕಾಗಿ ಪರದಾಟ ನಡೆಸುತ್ತಿದ್ದಾರೆ. ಚೆನ್ನೈನ ಟಾಪ್ ಆರ್ಡರ್‌ನಲ್ಲಿ ಲಯದಲ್ಲಿದ್ದವರೆಂದರೆ ಅವರು ಆಯುಷ್ ಮಾಥ್ರೆ. ಇದೀಗ ಅವರೇ ಪಂದ್ಯಾವಳಿಯಿಂದ ಹೊರಬಿದ್ದಿರುವುದು ಚೆನ್ನೈ ತಂಡಕ್ಕೆ ದೊಡ್ಡ ಆಘಾತ ಎದುರಾಗಿದೆ. ಇನ್ನೂವರೆಗೂ ಚೆನ್ನೈ ಯಾವುದೇ ಬದಲಿ ಆಟಗಾರರನ್ನು ಘೋಷಿಸಿಲ್ಲ.



ತಂಡದಲ್ಲಿ ಅವರನ್ನು ಬಿಟ್ಟರೆ, ಕಾರ್ತಿಕ್ ಶರ್ಮ, ಪ್ರಶಾಂತ್ ವೀರ್, ಉರ್ವಿಲ್ ಪಟೇಲ್ ಕೂಡ ಇದ್ದಾರೆ.

ರಿಹ್ಯಾಬ್ ಸೆಂಟರ್ ಆದ ಸಿಎಸ್‌ಕೆ: ಒಂದು ಸಮಯದಲ್ಲಿ ಚಾಂಪಿಯನ್ ತಂಡ ಅನ್ನಿಸಿಕೊಳ್ಳುತ್ತಿದ್ದ ಚೆನ್ನೈ ಸೂಪರ್ ಕಿಂಗ್ಸ್ ಇದೀಗ ರಿಹ್ಯಾಬ್ ಸೆಂಟರ್ ಆಗಿದೆ. ಪಂದ್ಯಾವಳಿ ಶುರುವಿಗೂ ಮುನ್ನವೇ ಚೆನ್ನೈಗೆ ಗಾಯದ ಸಮಸ್ಯೆಗಳು ಶುರವಾಗಿವೆ. ಆಸ್ಟ್ರೇಲಿಯಾ ವೇಗಿ ನಾಥನ್ ಎಲ್ಲಿಸ್ ಗಾಯದಿಂದ ಹೊರನಡೆದರು. ಮುಂದೆ ಬಂದಂತೆ ತಂಡದ ಪ್ರಮುಖ ಆಟಗಾರರಾದ ಮಹೇಂದ್ರ ಸಿಂಗ್ ಧೋನಿ ಕೂಡ ಅರ್ಧದಷ್ಟು ಐಪಿಎಲ್ ಆಡುತ್ತಿಲ್ಲ, ಇತ್ತೀಚಿಗಷ್ಟೇ ವೇಗಿ ಖಲೀಲ್ ಅಹ್ಮದ್ ಹೊರಬಿದ್ದರು. ಈಗ ಆಯುಷ್ ಮಾಥ್ರೆ ಕೂಡ ಐಪಿಎಲ್‌ನಿಂದ ಹೊರಬಿದ್ದಿದ್ದು, ಚೆನ್ನೈ ಸಂಕಷ್ಟದಲ್ಲಿ ಸಿಲುಕಿಕೊಂಡಿದೆ.

ಜಿಟಿ 100 ರನ್‌ಗೆ ಆಲೌಟ್ | ಅಶ್ವಿನಿ ಕುಮಾರ್ 4 ವಿಕೆಟ್

ಮುಂಬೈಗೆ ಭರ್ಜರಿ ಜಯ

ಅಹಮದಾಬಾದ್: ಬಲಿಷ್ಠ ಗುಜರಾತ್ ಟೈಟಾನ್ಸ್ ತಂಡವನ್ನು 100 ರನ್‌ಗಳಿಗೆ ಆಲೌಟ್ ಮಾಡಿರುವ ಮುಂಬೈ ಇಂಡಿಯನ್ಸ್ ಸತತ ಸೋಲುಗಳ ನಂತರ ಕೊನೆಗೂ ಗೆಲುವಿನ ನಗೆ ಬೀರಿತು. ತಿಲಕ್ ವರ್ಮಾ ಅವರ ಶತಕದ ಬ್ಯಾಟಿಂಗ್ ನಂತರ ತಂಡದ ಸಾಂಘಿಕ ಬೌಲಿಂಗ್ ದಾಳಿಯ ನೆರವಿನಿಂದ ಮುಂಬೈ ಇಂಡಿಯನ್ಸ್ ಗೆಲುವು ಸಾಧಿಸಿತು. ಇದರೊಂದಿಗೆ ಸತತ ಮೂರು ಸೋಲುಗಳ ಸರಪಳಿ ಮುರಿದುಕೊಂಡಿತು.

ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದು ತಿಲಕ್ ಅವರ ಆಸರೆ ಪಡೆಯಿತು. ಆರಂಭದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡರೂ, ನಂತರದಲ್ಲಿ ತಿಲಕ್ ಅವರ ಆಟದಿಂದ ಮಿಂಚಿತು. ಅವರಿಗೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಸಾಥ್ ಕೊಟ್ಟ ನಂತರ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. ವರ್ಮಾ (101*, 45ಎ, 8ಬೌ, 7ಸಿ) ರನ್ ಬಾರಿಸಿದರು. ನಮನ್ (45, 32ಎ, 6 ಬೌ, 1ಸಿ) ಗಳಿಸಿದರು. ಗುಜರಾತ್ ಪರ ರಬಾಡ (4-0-33-3) ಮಿಂಚಿದರು. ಗುರಿ ಬೆನ್ನತ್ತಿದ ಗುಜರಾತ್ 100 ರನ್‌ಗಳಿಗೆ ಉರುಳಿತು. ಮುಂಬೈ ಪರ ಅಶ್ವಿನಿ ಕುಮಾರ್ (4-0-24-4) ಮಿಂಚಿದರು. ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದರು.

ಪವರ್ ಆಟ: ಒಂದು ಹಂತದಲ್ಲಿ ಮುಂಬೈ ಭಾರೀ ಆಘಾತ ಎದುರಿಸಿತು. ಶುರುವಿನಲ್ಲಿ ದಾನೀಶ್, ಡಿಕಾಕ್ ಬೇಗನೇ ಹೊರ ನಡೆದರು. ನಿಧಾನಗತಿ ಬ್ಯಾಟಿಂಗ್ ಮಾಡಿದ ನಮನ್ ಧಿರ್, ಸೂರ್ಯ ಕೊಂಚ ಹೊತ್ತು ಮಿಂಚಿದರು. ಆದರೆ ಸೂರ್ಯನ ಆಟ 15ರ ಮೇಲೆ ನಿಲ್ಲಲಿಲ್ಲ, ಪವರ್‌ಪ್ಲೇ ಮುಗಿಯಿತು. ಮುಂಬೈ 46 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.



ಸಂಕ್ಷಿಪ್ತ ಸ್ಕೋರ್

ಮುಂಬೈ 20 ಓವರ್‌ಗಳಲ್ಲಿ 199/5: ತಿಲಕ್ 101*, ನಮನ್ 45; ರಬಾಡ 33/3

ಗುಜರಾತ್ 15.5 ಓವರ್‌ಗಳಲ್ಲಿ 100/10: ವಾಷಿಂಗ್ಟನ್ 26, ಶಾರುಖ್ 17; ಅಶ್ವಿನಿ 24/4

ಮಧ್ಯಮ ಓವರ್ಸ್: ಗುಜರಾತ್ ಇದೇ ಓವರ್‌ಗಳಲೇ ಪಂದ್ಯ ಸೋತಿತು. ಸೀಸನ್‌ನಲ್ಲಿ ಮೊದಲ ಬಾರಿಗೆ ಆಡಿದ ಅಶ್ವಿನಿ ಕುಮಾರ್(4-0-24-4) ಕರಾರುವಾಕ್ ದಾಳಿಯೊಂದಿಗೆ ಅಬ್ಬರಿಸಿದರು. ಇದೇ ಹೊಡೆತಕ್ಕೆ ತತ್ತರಿಸಿದ ಗುಜರಾತ್ ಯಾವುದೇ ಬ್ಯಾಟರ್ ಆಸರೆ ಪಡೆಯಲಿಲ್ಲ. ಸುಂದರ್ ಗಳಿಸಿದ್ದ 26 ರನ್ ತಂಡದಲ್ಲಿ ಆಟಗಾರ ಗಳಿಸಿದ ಅತಿ ಹೆಚ್ಚು ಸ್ಕೋರ್ ಆಗಿತ್ತು. ಅಶ್ವಿನ್ ಬಿಟ್ಟರೆ ಫಾಜ್ಹೀಫರ್, ಸ್ಯಾಂಟ್ನರ್ ಕೂಡ ತಲಾ 2 ವಿಕೆಟ್ ಕಿತ್ತರು. ಬೂಮ್ರಾ 15 ರನ್‌ಗೆ 1 ವಿಕೆಟ್ ಪಡೆದರು.

2027ರ ಚಾಂಪಿಯನ್‌ಶಿಪ್‌ಗೆ ಉಜ್ಬೇಕಿಸ್ತಾನ ಆತಿಥ್ಯ

ತಾಷ್ಕೆಂಟ್‌ನಲ್ಲಿ ಪ್ಯಾರಾ ಅಥ್ಲೆಟಿಕ್ಸ್

ಹೊಸದಿಲ್ಲಿ: ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಅನ್ನು ಉಜ್ಬೇಕಿಸ್ತಾನದ ತಾಷ್ಕೆಂಟ್‌ನಲ್ಲಿ ನಡೆಯಲಿದೆ ಎಂದು ಆಯೋಜಕರು ಘೋಷಿಸಿದ್ದಾರೆ. ವಿಶ್ವದ ಅತಿದೊಡ್ಡ ಪ್ಯಾರಾ ಕ್ರೀಡಾಕೂಟವು ಜೂನ್ 2027 ರಲ್ಲಿ ಒಲಿಂಪಿಕ್ ಸಿಟಿ ಮೇನ್ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಈ ಘೋಷಣೆ ಮಾಡಿದೆ.

ತಾಷ್ಕೆಂಟ್ 2027 ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 13 ನೇ ಆವೃತ್ತಿಯಾಗಿದ್ದು, ದೋಹಾ 2015, ದುಬೈ 2019, ಕೋಬೆ 2024 ಮತ್ತು ನವದೆಹಲಿ 2025 ರ ನಂತರ ಏಷ್ಯಾದಲ್ಲಿ ಐದನೇ ಬಾರಿಗೆ ಈ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ. 100 ಕ್ಕೂ ಹೆಚ್ಚು ರಾಷ್ಟ್ರಗಳಿಂದ ಸುಮಾರು 1,300 ಕ್ರೀಡಾಪಟುಗಳ ಭಾಗವಹಿಸುವಿಕೆಯ ನಿರೀಕ್ಷೆಯೊಂದಿಗೆ, ಚಾಂಪಿಯನ್‌ಶಿಪ್‌ಗಳು ದೇಶದಲ್ಲಿ ಇದುವರೆಗೆ ಆಯೋಜಿಸಲಾದ ಅತಿದೊಡ್ಡ ಅಂತಾರಾಷ್ಟ್ರೀಯ ಪ್ಯಾರಾ ಕ್ರೀಡಾಕೂಟವಾಗಲಿವೆ. ಈವೆಂಟ್‌ಗಳ ಅಂತಿಮ ಸಂಖ್ಯೆಯನ್ನು ಇನ್ನೂ ದೃಢೀಕರಿಸಲಾಗಿಲ್ಲವಾದರೂ, ಈ ಕಾರ್ಯಕ್ರಮವು ಕನಿಷ್ಠ 164 ಕ್ರೀಡಾಕೂಟಗಳನ್ನು ಒಳಗೊಂಡಿರುತ್ತದೆ, ಹೆಚ್ಚುವರಿ ಕಾರ್ಯಕ್ರಮಗಳ ಸಾಧ್ಯತೆಯೊಂದಿಗೆ. ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಮುಖ್ಯಸ್ಥ ಪಾಲ್ ಫಿಟ್ಜ್‌ಗೆರಾಲ್ಡ್ ಈ ಘೋಷಣೆಯನ್ನು ಸ್ವಾಗತಿಸಿದ್ದು, ರಾಷ್ಟ್ರ ಮತ್ತು ಪ್ರದೇಶ ಎರಡಕ್ಕೂ ಈ ಕಾರ್ಯಕ್ರಮದ ಮಹತ್ವವನ್ನು ಎತ್ತಿ ತೋರಿಸಿದರು. 2027 ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಳು ಉಜ್ಬೇಕಿಸ್ತಾನ್‌ನ ತಾಷ್ಕೆಂಟ್‌ನಲ್ಲಿ ನಡೆಯಲಿವೆ ಎಂದು ಘೋಷಿಸಲು ನಾವು ಸಂತೋಷಪಡುತ್ತೇವೆ. ಇದು ದೇಶದಲ್ಲಿ ಇದುವರೆಗೆ ನಡೆಯುವ ಅತಿ ದೊಡ್ಡ ಅಂತಾರಾಷ್ಟ್ರೀಯ ಪ್ಯಾರಾ ಸ್ಪೋರ್ಟ್ಸ್ ಇವೆಂಟ್ ಆಗಿದ್ದು, ನಮ್ಮ ಕ್ರೀಡೆ, ನಮ್ಮ ಅಭಿಮಾ ನಿಗಳ ನೆಲೆಯನ್ನು ಬೆಳೆಸಲು ಬೃಹತ್ ಅವಕಾಶಗಳನ್ನು ತೆರೆಯುತ್ತದೆ ಎಂದು ಅವರು ಹೇಳಿದರು.



ಸೋಲಿನಿಂದ ಹೊರಬಂದೀತೇ ಲಖನೌ?

ಲಖನೌ: ಸೋಲಿನಿಂದ ಕಂಗೆಟ್ಟಿರುವ ಲಖನೌ ಸೂಪರ್ ಜೇಂಟ್ಸ್ ಬುಧವಾರದ ಪಂದ್ಯದಲ್ಲಿ ಗೆದ್ದು ಪಂದ್ಯಾವಳಿಯಲ್ಲಿ ಕಂಬ್ಯಾಕ್ ಮಾಡುವ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.

ಬುಧವಾರದಂದು ಇಲ್ಲಿನ ಏಕಾನಾ ಕ್ರೀಡಾಂಗಣದಲ್ಲಿ ರಾಜಸ್ಥಾನ ತಂಡವನ್ನು ಎದುರಿಸಲಿರುವ ಲಖನೌ ತವರಲ್ಲಾದರೂ ಮಿಂಚುವ ತವಕದಲ್ಲಿದೆ. ಪಂದ್ಯಾವಳಿಯಲ್ಲಿ ಮೊದಲಿನ ಪಂದ್ಯಗಳಲ್ಲಿ ಸೋತಿದ್ದ ಲಖನೌ ಸತತ ಎರಡು ಗೆಲುವಿನೊಂದಿಗೆ ಕಂಬ್ಯಾಕ್ ಮಾಡಿತ್ತು. ಆದರೆ ಸತತ ಎರಡು ಸೋಲುಗಳಿಂದ ಮತ್ತೆ ಹಿನ್ನಡೆ ಅನುಭವಿಸಿದೆ. ಇತ್ತ ರಾಜಸ್ಥಾನ ಕೂಡ ಕಳೆದ ಎರಡು ಪಂದ್ಯಗಳಲ್ಲಿ ಸೋಲನುಭವಿಸಿದೆ. ವೈಭವ್ ಸೂರ್ಯವಂಶಿ ಹಾಗೂ ಜೈಸ್ವಾಲ್ ಅವರ ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿದ್ದ ರಾಜಸ್ಥಾನ ಅಂಕಪಟ್ಟಿಯಲ್ಲಿ ಕೆಳಗಿಳಿದಿದೆ.

ಲಯಕ್ಕೆ ಮರಳುವುದೇ ಪಂತ್ ಪಡೆ?: ತಂಡದಲ್ಲಿರುವ ಟಿ20ಯ ಬೆಸ್ಟ್ ಬ್ಯಾಟರ್ಸ್ ಲಯಕ್ಕಾಗಿ ಪರದಾಟ ನಡೆಸುತ್ತಿದ್ದಾರೆ. ಕಳೆದ ಸೀಸನಿನಲ್ಲಿ ಮಿಂಚಿದ್ದ ಆರಂಭಿಕ ಜೋಡಿ ಈ ಬಾರಿ ರನ್ ಮಾಡುವುದಕ್ಕೆ ಪರದಾಡುತ್ತಿದೆ. ರಿಷಭ್ ಪಂತ್ ಕಳೆದ ಪಂದ್ಯದಲ್ಲಿ ಸಿಕ್ಸರ್‌ಗಳೊಂದಿಗೆ ಮಿಂಚಿದರೂ ತಮ್ಮ ಅಸಲು ಆಟದ ಹುಡುಕಾಟದಲ್ಲಿದ್ದಾರೆ. ಮುಖ್ಯವಾಗಿ ತಂಡಕ್ಕೆ ಬಲ ತರುತ್ತಿದ್ದ ನಿಕೋಲಸ್ ಪೂರಣ್ ಒಂದೊಂದು ರನ್‌ಗಾಗಿ ಪರದಾಟ ನಡೆಸುತ್ತಿರುವುದು ದೊಡ್ಡ ಹಿನ್ನಡೆಯಾಗಿದೆ. ಮಧ್ಯಮ ಕ್ರಮಾಂಕದಲ್ಲಿ ಆಯುಷ್ ಬದೋನಿ ಮಿಂಚಿದ್ದಾರೆ. ಯುವ ಬ್ಯಾಟರ್ ಮುಕುಲ್ ಚೌಧರಿ ಒಂದೇ ಪಂದ್ಯದಲ್ಲಿ ಅಬ್ಬರಿಸಿದ್ದಾರೆ. ಅಬ್ದುಲ್ ಸಮದ್ ಮಿಂಚಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪ್ರಿನ್ಸ್ ಯಾದವ್ ಕಳೆದ ಪಂದ್ಯಗಳಲ್ಲಿ ತಂಡದ ಕೀ ಬೌಲರ್ ಆಗಿ ಕಾಣಿಸಿಕೊಂಡಿದ್ದಾರೆ. ಅನುಭವಿ ಮೊಹಮ್ಮದ್ ಶಮಿ ಕೂಡ ಮಿಂಚಿದ್ದಾರೆ. ಸ್ಪಿನ್ನರ್‌ಗಳಲ್ಲಿ ಸಿದ್ಧಾರ್ಥ್ ಹಾಗೂ ದಿಗ್ವೇಶ್ ಅಲ್ಪ ಹಿನ್ನಡೆ ಅನುಭವಿಸಿದ್ದಾರೆ.



ಪಿಚ್: ಲಖನೌನ ಏಕಾನಾ ಕ್ರೀಡಾಂಗಣ ಬ್ಯಾಟರ್‌ಗಳಿಗೆ ಅಲ್ಪ ಕಾಟ ಕೊಡಬಹುದು. ವೇಗಿ ಮತ್ತು ಸ್ಪಿನ್ನರ್‌ಗಳಿಗೆ ಸ್ವಲ್ಪ ಅನುವು ಮಾಡಿಕೊಡಲಿದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ತಪ್ಪಿದ್ದಲ್ಲ. ಪರಿಣಾಮ ಮೊದಲು ಬೌಲಿಂಗ್ ಮಾಡಿದ ತಂಡವು ಲಾಭ ಪಡೆಯುತ್ತದೆ.

ಪಂದ್ಯದ ವಿವರ

ಯಾವಾಗ: ಬುಧವಾರ, ಎಲ್ಲಿ: ಏಕಾನಾ, ಲಖನೌ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ರಾಜಸ್ಥಾನಕ್ಕೆ ಪುಟಿದೇಳುವ ತವಕ: ಇತ್ತ ರಾಜಸ್ಥಾನ ಮೊದಲಿನ ಪಂದ್ಯಗಳಲ್ಲಿ ಬೆಸ್ಟ್ ತಂಡದಂತೆ ಆಡಿದ್ದರೂ ಕಳೆದೆರಡು ಪಂದ್ಯಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಆರಂಭಿಕರಿಬ್ಬರೂ ವಿಕೆಟ್ ಒಪ್ಪಿಸಿದರೆ ಮುಂದೆ ಯಾರೊಬ್ಬರೂ ನಿಲ್ಲುತ್ತಿಲ್ಲ. ಹೆಟ್ಮೇರ್ ಲಯದ ಹುಡುಕಾಟದಲ್ಲಿದ್ದಾರೆ. ರಿಯಾನ್ ಪರಾಗ್ ರನ್ ಮಾಡುತ್ತಿಲ್ಲ. ಬೌಲಿಂಗ್ ವಿಚಾರಕ್ಕೆಬಂದರೆಆರ್ಚರ್,ರವಿಬಿಷ್ಣೋಯ್ ಮಿಂಚಿದ್ದಾರೆ. ಆದಾಗ್ಯೂ ಉಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ.

3 ವರ್ಷ ಬಳಿಕ ಬಂದ ಶಿವಾ ನರ್ವಾಲ್‌ಗೆ ಚಿನ್ನ | ಪನಾಹ್‌ಗೂ ರಜತ

ಜೂ. ಆರ್ಚರಿ: ಭಾರತಕ್ಕೆ ಚಿನ್ನದ ಪದಕ

ಹೊಸದಿಲ್ಲಿ: ಮೂರು ವರ್ಷಗಳಿಂದ ಮೈದಾನಕ್ಕಿಳಿಯದ ಮಾಜಿ ಮಿಶ್ರ ತಂಡದ ಚಾಂಪಿಯನ್ ಶಿವಾ ನರ್ವಾಲ್ 10ಮೀ. ಏರ್ ಪಿಸ್ತೂಲ್ ಜೂನಿಯರ್ ಕೂಟದಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಆರ್ಚರಿಗೆ ಮರಳಿದರು. ಇಜಿಪ್ಟ್‌ನ ಕ್ಯಾರಿಯೊದಲ್ಲಿ ನಡೆದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಪಂದ್ಯಾವಳಿ ನಡೆಯುತ್ತಿದ್ದು ಅಲ್ಲಿ ಶಿವಾ ಉತ್ತಮ ಪ್ರದರ್ಶನ ನೀಡಿದರು.

ಇಷ್ಟಕ್ಕೆ ನಿಲ್ಲದೆ, ಚಿರಾಗ್ ಶರ್ಮ ನರ್ವಾಲ್ ಅವರೊಂದಿಗೆ ಜೊತೆಗೂಡಿ ಕಂಚಿನ ಪದಕ ಗೆದ್ದರೆ, ಮಹಿಳೆಯರ ವಿಭಾಗದಲ್ಲಿ ಪನಾಹ್ ಭುಗ್ರಾ, 10 ಮೀ. ಏರ್ ರೈಫಲ್‌ನಲ್ಲಿ ಬೆಳ್ಳಿ ಗೆದ್ದರು.

ಬುಧವಾರದ ಸ್ಪರ್ಧೆಯಲ್ಲಿ ಶಿವಾ ಆರಂಭದಿಂದಲೂ ಉತ್ತಮ ಪ್ರದರ್ಶನ ನೀಡಿದರು. ಅರ್ಹತಾ ಸುತ್ತಿನಲ್ಲಿ 576-19 ಅಂಕದೊಂದಿಗೆ ಅಗ್ರಸ್ಥಾನ ಪಡೆದರು. ಭಾರತದ ಮತ್ತೋರ್ವ ಅಭಿನವ್ 576-16 ಅಂಕದೊಂದಿಗೆ ಎರಡನೇ ಸ್ಥಾನದಲ್ಲಿ ಕಾಣಿಸಿಕೊಂಡರೆ, ಚಿರಾಗ್,



ಹಿಮಾಂಶು, ಅಭಯ್ ಕೂಡ ಫೈನಲ್‌ಗೇರಿದರು.


ಪ್ರಶಸ್ತಿ ಸುತ್ತಿನಲ್ಲಿ ಶಿವಾ ನರ್ವಾಲ್ 241.8 ಅಂಕ ಗಳಿಸಿ ಉಜ್ಬೇಕಿಸ್ತಾನದ ಸೋದಿಕಜೊನ್ ಅಬ್ದುಲ್ಲೆವ್ ಅವರನ್ನು ಹಿಂದಿಕ್ಕಿದರು. ಭಾರತದ ಮತ್ತೋರ್ವ ಚೀರಾಗ್ 218.9 ಅಂಕಗಳೊಂದಿಗೆ ಪೋಡಿಯಂ ಫಿನಿಶ್ ಮಾಡಿದರು. ಅಭಿನವ್ ದೇಶ್ವಾಲ್ ಕೂಡ ಏಳನೇ ಸ್ಥಾನ ಪಡೆದರು.

ಮಹಿಳಾ ವಿಭಾಗ: ಮಹಿಳೆಯರ ಜೂನಿಯರ್ 10ಮೀ. ಏರ್ ರೈಫಲ್‌ನಲ್ಲಿ ಪನಾಹ್, ಅರ್ಹತಾ ಸುತ್ತಿನಲ್ಲಿ 629.4 ಅಂಕಗಳಿಸಿದರು. ಅರ್ಹತಾ ಸುತ್ತಿನಲ್ಲೇ ಅಗ್ರ ಮೂರರಲ್ಲಿ ಕಾಣಿಸಿಕೊಂಡ ಅವರು, ಫೈನಲ್‌ನಲ್ಲಿ 250.6 ಅಂಕಗಳಿಸಿ ಬೆಳ್ಳಿ ಪದಕ ಗೆದ್ದರು. ಫ್ರೆಂಚ್‌ನ ಅಂಕೆಲೈನ್ 252.0 ಅಂಕದೊಂದಿಗೆ ಚಿನ್ನ ಗೆದ್ದರೆ ಅಲ್ಲಿನವರೇ ಆದ ಹೆಲೆನಾ ಈಕೆಲ್ 228.6 ಅಂಕದೊಂದಿಗೆ ಕಂಚಿನ ಪದಕ ಗೆದ್ದರು.

ಜೂನಿಯರ್‌ಗಳ ಮೊದಲ ಇವೆಂಟ್‌ನಲ್ಲಿ 25 ಮೀ ಪಿಸ್ತೂಲ್ ಪುರುಷ ಮತ್ತು ಮಹಿಳಾ ನಿಖರತೆಯ ಸುತ್ತಿನ ಜೊತೆಗೆ ಸ್ಕೀಟ್ ಪುರುಷರು ಮತ್ತು ಮಹಿಳೆಯರ ಮೊದಲ 75 ಗುರಿಗಳು ಸಹ ಪ್ರಾರಂಭವಾಗಿವೆ. 25 ಮೀ ಪಿಸ್ತೂಲ್ ಮಹಿಳೆಯರು ಮತ್ತು 50 ಮೀ. ಸ್ಕೀಟ್ ಹಂತ ಮತ್ತು ಫೈನಲ್‌ಗಳು ಮತ್ತು ಸ್ಕೀಟ್ ಪುರುಷರು ಮತ್ತು ಮಹಿಳೆಯರ ಫೈನಲ್‌ಗಳು ಬುಧವಾರ ನಡೆಯಲಿವೆ. ಪುರುಷರು ಮತ್ತು ಮಹಿಳೆಯರಿಗಾಗಿ 25 ಮೀ ಪಿಸ್ತೂಲ್ ಪುರುಷರು ಮತ್ತು 50 ಮೀ ರೈಫಲ್ ಪ್ರೋನ್‌ನ ಪದಕಗಳನ್ನು ಬುಧವಾರ ಅರ್ಹತಾ ಸುತ್ತಿನಿಂದ ನಿರ್ಧರಿಸಲಾಗುತ್ತದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5961

5960 ಉತ್ತರ

ಎಡದಿಂದ ಬಲಕ್ಕೆ:
2.ರಾಧಾರಮಣ 6.ಕಸ
8.ಬನ 9.ಕಾವಲು
10.ತಬಲ 11.ಭಾರ
12.ನಗ 14.ಮನಸು
16.ಶತಾವರಿ 12.ಭವಪಾಶ

ಮೇಲಿನಿಂದ ಕೆಳಕ್ಕೆ :
1.ಅಡಕ 3.ಧಾರೆವಟ್ಟಲು
4.ಮಲಯಾಚಲ 5.ಕುಜನ
7.ಸರಕಾರ 8.ಬಡತನ
11.ಭಾವಾವೇಶ
13.ಗಣಾಧೀಶ
14.ಮಜೂರಿ 15.ಸುಲಭ

ಎಡದಿಂದ ಬಲಕ್ಕೆ
1.ಗದುಗಿನ ನಾರಾಣಪ್ಪನವರ ಕಾವ್ಯನಾಮ (5)
5.ಮರದ ನಡುವೆ ಪುರಸಭೆಯಡಗಿದೆ (5)
8.ಗತಕಾಲದ ಕಂದಾಯ ಅಧಿಕಾರಿ (3)
9.ಕಬ್ಬು-ಬಿದಿರುಗಳ ಗಂಟು (2)
10.ಗೆಲ್ಲುವುದು-ಪಡೆದ ಯಶಸ್ಸು (2)
11.ಮದುವೆಗೆ ಸಿದ್ಧನಾದ ಹುಡುಗ (2)
12.ಲೋಹದ ಸಣ್ಣ ನಾಣ್ಯ (2)
14.ಗಟ್ಟಿಯಾದ ಒಣಧಾನ್ಯ-ಕಾಳುಗಳು (3)
15.ಪಾದರಸ ಬಳಿದ ಗೋಲಾಕಾರದ ಗುಂಡು (5)
17.ಮನುಷ್ಯನನ್ನು ವಾಹವಾಗಿ ಉಳ್ಳ ಕುಬೇರ (5)

ಮೇಲಿನಿಂದ ಕೆಳಕ್ಕೆ
2.ಅಮಲೇರಿಸುವ ಪಾನೀಯ (5)
3.ಸರಿಸಮಾನ-ಮಟ್ಟಸವಾದುದು (2)
4.ಬಹಳ ಶ್ರೇಷ್ಠನಾದವನು-ಈಶ್ವರ (5)
6.ನಾವು ಹಾಗೆ ಹೇಳಿದ್ದು ಈ ಮರದ ಮೆಟ್ಟಿನ ಬಗ್ಗೆ (3)
7.ಚಲಿಸುವಂಥಾದ್ದು-ಜೀವಂತವಾಗಿರುವಂಥಾದ್ದು (2)
10.ಈ ಆಲಸಿಯ ಕಡೆಯಲ್ಲಿ ರಾಮಸಹೋದರನಿದ್ದಾನೆ (5)
11.ಪ್ರವಾಸಿಗರ ತಾತ್ಕಾಲಿಕ ತಂಗುದಾಣ (5)
13.ಹೆಚ್ಚುಕಡಮೆ-ಅಂದಾಜು ಎಂಬರ್ಥದ ಶಬ್ದ (3)
14.ನದಿ-ಸಮುದ್ರದ ಪಕ್ಕದ ನೆಲದ ಭಾಗ (2)
16.ಚಲಿಸುವಿಕೆಯಿಲ್ಲಿ ತಲೆಕೆಳಗಾಗಿದೆ (2)

ಕಿರುಸುದ್ದಿ

ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ



ಗದಗ: ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣೆ ಇದೇ ವರ್ಷ ನಡೆಯಲಿದ್ದು, ಬಿಜೆಪಿಯಿಂದ ಟಿಕೆಟ್ ಸಿಗದ ಕಾರಣ ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲುತ್ತಿದ್ದೇನೆ ಎಂದು ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಸುಧೀಂದ್ರ ದೇಶಪಾಂಡೆ ಹೇಳಿದರು. ನಗರದ ಪತ್ರಿಕಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2022ರಲ್ಲಿ ನಡೆದ ಪಶ್ಚಿಮ ಶಿಕ್ಷಕರ ಮತಕ್ಷೇತ್ರಕ್ಕೆ ಬಿಜೆಪಿಯಿಂದ ಪ್ರಬಲ ಆಕಾಂಕ್ಷಿಯಾಗಿದ್ದೆ. ಪಕ್ಷ ಅಂತಿಮಗೊಳಿಸಿದ್ದ ಮೂವರು ವ್ಯಕ್ತಿಗಳಲ್ಲಿ ನನ್ನ ಹೆಸರು ಕೂಡ ಇತ್ತು. ಆದರೆ ಬಸವರಾಜ ಹೊರಟ್ಟಿ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದರಿಂದ ಅವಕಾಶ ಕೈ ತಪ್ಪಿತು. ಈ ಬಾರಿ ಪಶ್ಚಿಮ ಪದವೀಧರರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಆದರೆ, ಪಕ್ಷ ಈ ಬಾರಿಯೂ ಎಸ್.ವಿ.ಸಂಕನೂರ ಅವರಿಗೆ ಟಿಕೆಟ್ ನೀಡಿದ್ದರಿಂದ ನಾನು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ ಬಯಸಿದ್ದೇನೆ ಎಂದರು. ಪಶ್ಚಿಮ ಪದವೀಧರರ ಕ್ಷೇತ್ರದ ಆಕಾಂಕ್ಷಿಯಾಗಿ ಕಳೆದ ನಾಲ್ಕು ವರ್ಷಗಳಿಂದಲೇ ಕೆಲಸ ಆರಂಭಿಸಿದ್ದೆ. ನಾಲ್ಕು ಜಿಲ್ಲೆಗಳಿಂದ ಈವರೆಗೆ 25 ಸಾವಿರಕ್ಕೂ ಅಧಿಕ ಮಂದಿ ಪದವೀಧರರನ್ನು ಮತದಾರರ ಪಟ್ಟಿಗೆ ನೋಂದಣಿ ಮಾಡಿಸಿದ್ದೇನೆ. ಚುನಾವಣೆ ಸ್ಪರ್ಧೆಗೂ ಮುನ್ನ ನಾಲ್ಕು ಜಿಲ್ಲೆಗಳನ್ನು ಅಡ್ಡಾಡಿ ಅಲ್ಲಿರುವ ಪದವೀಧರರ ಸಮಸ್ಯೆಗಳ ಕುರಿತು ಅಧ್ಯಯನ ಮಾಡಿದ್ದೇನೆ ಎಂದರು. ವಿ.ಪಿ.ಗಾಯಿ, ಈರಣ್ಣ ಮಡಿವಾಳರ, ಪಿ.ಆರ್.ಇನಾಂದಾರ ಇದ್ದರು.

ಮಾಸಿಕ ಸಮಾರಂಭ ಇಂದು

ಗದಗ: ನಗರದ ನಿವೃತ್ತ ನೌಕರರ ಸಭಾಭವನದಲ್ಲಿ ಏ.22 ರಂದು ಬೆಳಗ್ಗೆ 11ಕ್ಕೆ ಪ್ರೊಬಸ್ ಕ್ಲಬಿನ ಮಾಸಿಕ ಸಮಾರಂಭದಲ್ಲಿ ಬಸವಜಯಂತಿ ಹಮ್ಮಿಕೊಂಡಿದೆ. ಬಸವತತ್ವ ಚಿಂತಕಿ ಗೌರಕ್ಕ ಬಡಿಗಣ್ಣವರ ಕ್ರಾಂತಿಕಾರಿ ಬಸವಣ್ಣ ಕುರಿತು ಉಪನ್ಯಾಸ ನೀಡುವರು. ಸಾಹಿತಿ ಬಸವರಾಜ ಗಣಪ್ಪನವರ ರಚಿಸಿದ ಯಕ್ಕಾ ಹಂಚು ಎಂಬ ಕಿರು ಹಾಸ್ಯ ನಾಟಕವನ್ನು ಸಮಾರಂಭದಲ್ಲಿ ಪ್ರದರ್ಶಿಸಲಾಗುವುದು. ಕ್ಲಬ್ ಅಧ್ಯಕ್ಷ ಬಿ.ಎಸ್. ಗೌಡರ ಅಧ್ಯಕ್ಷತೆ ವಹಿಸುವರು ಎಂದು ಕ್ಲಬ್ ವಾರ್ತಾಧಿಕಾರಿ ಬಸವರಾಜ ಗಣಪ್ಪನವರ ತಿಳಿಸಿದ್ದಾರೆ.

ಅವಮಾನ: ಗುಳಗುಳಿ

ಗದಗ: ಬಾಗಲಕೋಟೆ ಉಪಚುನಾವಣಾ ವೇಳೆ ವೀರಶೈವ ಒಳಪಂಗಡಗಳ ಒಕ್ಕೂಟದ ಸಭೆಯಲ್ಲಿ ಅಲ್ಪಸಂಖ್ಯಾತರು ಹಾಗೂ ಕುರುಬ ಸಮುದಾಯ ಅವಮಾನಿಸಿದ್ದು ಖಂಡನೀಯ ಎಂದು ಹಾಲುಮತ ಮಹಾಸಭಾ ರಾಜ್ಯಾಧ್ಯಕ್ಷ ರುದ್ರಣ್ಣ ಗುಳಗುಳಿ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಶೇ.10 ಕುರುಬ ಸಮುದಾಯವಿದೆ. ಆದರೆ ಪ್ರತಿಯೊಂದು ಸರ್ಕಾರಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಕುರುಬ ಸಮುದಾಯಕ್ಕೆ ಅನ್ಯಾಯ ಮಾಡಿವೆ. ಶೇ.10 ಇರುವ ಈ ಸಮುದಾಯಕ್ಕೆ ರಾಜಕೀಯದಲ್ಲಿ ಕೇವಲ ಶೇ.0.2 ಮಾತ್ರ ಅವಕಾಶ ನೀಡಲಾಗಿದೆ. ಹಿಂದಿನ ಬಿಜೆಪಿ ಸರ್ಕಾರ ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಆದರೆ ಈಗ ಅದೇ ಪಕ್ಷದ ಶಾಸಕ ಸಿ.ಸಿ. ಪಾಟೀಲ ಕುರುಬರನ್ನು ದೂರ ಇಡಬೇಕು ಎಂದು ಹೇಳುವ ಮೂಲಕ ಅಖಂಡ ಕುರುಬ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿದರು. ಸಿ.ಸಿ. ಪಾಟೀಲ ಅವರು ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಆದರೆ ಸಿ.ಸಿ. ಪಾಟೀಲ ಅವರು ಹಲವು ಬಾರಿ ಕುರುಬ ಸಮುದಾಯ ಅವಮಾನಿಸಿದ್ದಾರೆ. ಕೂಡಲೇ ಶಾಸಕ ಸ್ಥಾನದಿಂದ ವಜಾಗೊಳಿಸಬೇಕು. ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ರಾಜ್ಯಾಧ್ಯಕ್ಷರು ಕೂಡಲೇ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು. ಹಾಲು ಮತ ಮಹಾಸಭಾ ಜಿಲ್ಲಾಧ್ಯಕ್ಷ ಬಸವರಾಜ ನೀಲಗಾರ, ರಾಮಣ್ಣ ಹೂವಣ್ಣನವರ, ಮಹಿಳಾ ಸಂಘಟನಾ ಕಾರ್ಯದರ್ಶಿ ಉಮಾ ದ್ಯಾವನೂರ, ರಘು, ಸೋಮನಗೌಡ ಪಾಟೀಲ, ನಾಗರಾಜ ಮೇಣಸಗಿ, ಶಿವರಾಜ ಕೌಜಗೇರಿ, ಬಸವರಾಜ ಕುರಿ, ಮುತ್ತಣ್ಣ ಜಡಿ, ಮಂಜು ಜಡಿ, ಸೋಮು ಮೇಟಿ ಇದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಅಜವಾನ	8609-9819
ಗೆಜ್ಜಿ ಶೇಂಗಾ	4710-6840
ಅಲಸಂದಿ	3939-6196
ಕಡಲೆ	1577-5472
ಉದ್ದು	4814-5210
ಹವೀಜ	8569-8569
ಹೆಸರು	699-9769
ಹುರಳಿ	3879-4374
ಜೋಳ	1344-4437
ಗೋವಿನಜೋಳ	1702-1730
ಮಡಕಿ	9505-9505
ಸಾಸಿವಿ	4069-4319
ಕುಸುಬಿ	4713-5750
ಸೂರ್ಯಕಾಂತಿ	5369-6152
ತೊಗರಿ	4214-4429
ಗೋಧಿ	1611-4814
ಸಜ್ಜೆ	2550-2550
ಹತ್ತಿ	7200-7200
ಬೆಲ್ಲ	4948-4948



ನರಗುಂದ: ತಾಲೂಕು ಛಾಯಾಗ್ರಾಹಕ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಗಜ್ಯೋತಿ ಬಸವೇಶ್ವರ ವೃತ್ತದಲ್ಲಿ ಜಯಂತಿಯನ್ನು ಆಚರಿಸಲಾಯಿತು. ತಾಲೂಕು ಛಾಯಾಗ್ರಹಕರ ಅಧ್ಯಕ್ಷ ಮಹೇಶ ಬಡಿಗೇರ, ಮಾಜಿ ಅಧ್ಯಕ್ಷ ಸುನೀಲ ನಾಗಠಾಣ, ಕಾರ್ಯದರ್ಶಿ ನಜೀರ ರೋಣದ, ಶಿವು ಕಲ್ಲಾಪುರ, ಸಿದ್ದು ನಂದಿ, ಸಂಗಯ್ಯ ಚರಂತಿಮಠ, ವಿಶ್ವನಾಥ ಮಠಪತಿ, ಗಿರೀಶ ಬೆಳವಟಗಿ ಹಾಗೂ ಇತರರಿದ್ದರು.

ಏ.24 ರಂದು ಡಾ.ರಾಜ್‌ಕುಮಾರ್ ಜನ್ಮದಿನಾಚರಣೆ

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಏ.24 ರಂದು ಬೆಳಗ್ಗೆ 11ಕ್ಕೆ ಡಾ.ರಾಜ್‌ಕುಮಾರ್ ಜನ್ಮದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಶಾಸಕ ಸಲೀಂ ಅಹ್ಮದ್, ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ.ಗದ್ದಿಗೌಡರ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಆಗಮಿಸಲಿದ್ದಾರೆ. ಅಖಿಲ ಕರ್ನಾಟಕ ಡಾ.ರಾಜಕುಮಾರ ಅಭಿಮಾನಿಗಳ ಸಂಘಗಳ ಒಕ್ಕೂಟದ ಗೌರವಾಧ್ಯಕ್ಷ ಬಸವರಾಜ ಮನಗುಂಡಿ ಉಪನ್ಯಾಸ ನೀಡಲಿದ್ದಾರೆ. ಕಲಾವಿದ ಗೌಡಪ್ಪ ಬೊಮ್ಮಪ್ಪನವರ ಮತ್ತು ಕಲಾ ತಂಡದವರಿಂದ ಡಾ.ರಾಜಕುಮಾರ್ ಚಿತ್ರಗೀತೆಗಳ ಗಾಯನ ಜರುಗಲಿದೆ. ಜಿಲ್ಲಾಧಿಕಾರಿ ಹಾಗೂ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ ಭಾಗವಹಿಸುವರು.



ನರಗುಂದ: ಸಮೀಪದ ಯಾವಗಲ್ಲ ಗ್ರಾಮದಲ್ಲಿ ಬಸವ ಜಯಂತಿ ದಿನದಂದು ಹೇಮಲಿಂಗೇಶ್ವರ ದೇವಸ್ಥಾನದ ಮಹಾ ರಥೋತ್ಸವವು ಸಕಲ ವಾದ್ಯಮೇಳದೊಂದಿಗೆ ಸಂಭ್ರಮದಿಂದ ಜರುಗಿತು.

ರಸ್ತೆ ದುರಸ್ತಿಗೆ ಕಾದು ಕುಳಿತ ಲಕ್ಷ್ಮೇಶ್ವರ ಜನತೆ | ಅನುದಾನಕ್ಕೆ ಆಗ್ರಹ

ಧೂಳುಮಯ ರಸ್ತೆಗೆ ಜನ ಹೈರಾಣ

▸ಶಿವಲಿಂಗಯ್ಯ ಹೊತಗಿಮಠ

ದಿಗಂತ ವಿಶೇಷ

ಲಕ್ಷ್ಮೇಶ್ವರ: ಪಟ್ಟಣ ಐತಿಹಾಸಿಕ ಕ್ಷೇತ್ರ. ಇಲ್ಲಿ ಇತಿಹಾಸ ಪ್ರಸಿದ್ಧ ಸೋಮೇಶ್ವರ ದೇವಸ್ಥಾನ, ದೂದ ನಾನಾ ದರ್ಗಾ, ಜೈನ ಬಸ್ತಿಗಳು, ಎಂಜಿನಿಯರಿಂಗ್, ಪದವಿಪೂರ್ವ, ಪದವಿ ಕಾಲೇಜು ಇವೆ. ಎಪಿಎಂಸಿ, ಬಜಾರ್ ಮಾರ್ಕೆಟ್, ಆಸ್ಪತ್ರೆಗಳು, ಸರ್ಕಾರಿ ಕಚೇರಿಗಳು ಇವೆ. ನಿತ್ಯ ಸಾವಿರಾರು ಜನರು ಈ ಊರಿಗೆ ಬರುತ್ತಾರೆ. ಆದರೆ ಬಂದು ಇಳಿದರೆ ಸಾಕು ಇಲ್ಲಿನ ರಸ್ತೆಗಳು ನೋಡಿ ಬೇಸರ ವ್ಯಕ್ತಪಡಿಸುತ್ತಿದ್ದು, ತಾಲೂಕು ಕೇಂದ್ರವಾಗಿ 8ವರ್ಷ ಕಳೆದರೂ ಇಲ್ಲಿ ಸರಿಯಾದ ರಸ್ತೆಗಳು ಇಲ್ಲದಿರುವುದೆ ವಿಪರ್ಯಾಸವೇ ಸರಿ ಎನ್ನುತ್ತಿದ್ದಾರೆ ಸಾರ್ವಜನಿಕರು.

ಪೇಟೆ ಹಾವಳಿ ಆಂಜನೇಯ ದೇವಸ್ಥಾನದಿಂದ ವಿದ್ಯಾರಣ್ಯವೃತ್ತ, ಅಲ್ಲಿಂದ ಪಂಪವೃತ್ತ , ಇತ್ತ ಮಾನ್ವಿ ಪೆಟ್ರೋಲ್ ಬಂಕ್, ಪಂಪವೃತ್ತದಿಂದ ತಹಶೀಲ್ದಾರ್ ಕಚೇರಿ, ಹಳೆ ಬಸ್ ನಿಲ್ದಾಣದಿಂದ ಜಯದೇವ ವೃತ್ತ, ಹೀಗೆ ಅನೇಕ ಪ್ರಮುಖ ರಸ್ತೆಗಳು ಗುಂಡಿಗಳಿಂದ ಕೂಡಿವೆ. ಇದಲ್ಲದೇ ಆಶ್ರಯ ಪ್ಲಾಟ್‌ಗಳಾದ ಕರೆಗೋರಿ, ರಂಭಾಪುರಿನಗರ, ರಂಗಾಚಾರಿ ಪ್ಲಾಟ್, ಇನ್ನೂ ಕೆಲವು ಆಶ್ರಯ ಪ್ಲಾಟ್‌ಗಳಲ್ಲಿ ದಶಕಗಳಿಂದ ರಸ್ತೆಕಂಡಿಲ್ಲ, ಮಳೆಗಾಲ ಬಂತು ಎಂದರೆ ಸಾಕು ಕೆಸರು ಗದ್ದೆಗಳಾಗಿ ಮಾರ್ಪಾಡು ಆಗುತ್ತವೆ ಎಂದು ಜನರು ಆರೋಪಿಸುತ್ತಿದ್ದಾರೆ.

ಲಕ್ಷ್ಮಿನಗರ, ಈಶ್ವರ ನಗರ, ಮುಖಬಸವೇಶ್ವರ ನಗರ, ಮಲ್ಲಾಡದ ಕಾಲೋನಿ, ಉಪನಾಳ ನಗರ, ಅನೇಕ ಬಡಾವಣೆಗಳಲ್ಲಿ ರಸ್ತೆಗಳು ಮರೀಚಿಕೆಯಾಗಿವೆ.

ಸ್ಥಳೀಯವಾಗಿ ಶಾಸಕರು ಹಿಂದೆ ಇದ್ದ ಪುರಸಭೆ ಸದಸ್ಯರು, ಅಧಿಕಾರಿಗಳು ಈ ಬಗ್ಗೆ ಕಾಳಜಿ ವಹಿಸಬೇಕಿತ್ತು. ಆದರೆ 23 ವಾರ್ಡ್‌ಗಳಲ್ಲಿ ಇದೇ ಪರಸ್ಥಿತಿ ನಿರ್ಮಾಣವಾಗಿದೆ. ಲಕ್ಷ್ಮೇಶ್ವರ ಜನತೆಗೆ ಧೂಳನಿಲ್ಲಿ ಸಾಗಬೇಕಾದ ಅನಿವಾರ್ಯತೆ ಬಂದಿದ್ದು, ತೆಗ್ಗುಗಳಿಂದ ಕೂಡಿದ ಇಂತಹ ರಸ್ತೆಗಳಲ್ಲಿ ಅಡ್ಡಾಡುವ ವಾಹನ ಸವಾರರ ಪರಸ್ಥಿತಿ ಹೇಳತೀರದಾಗಿದೆ. ರಸ್ತೆ ನಿರ್ಮಿಸಲು ನೂರಾರು ಕೋಟಿ ಅನುದಾನ ಬೇಕು. ಅನುದಾನ ತರಲು ಇಚ್ಛಾಶಕ್ತಿ ಬೇಕು, ಈ ಬಗ್ಗೆ ಗಮನ ಹರಿಸಿ ಐತಿಹಾಸಿಕ ಪಟ್ಟಣವನ್ನು ಸುಂದರ ಪಟ್ಟಣವಾಗಿಸಲು ಸಂಬಂಧ ಪಟ್ಟವರು ಅನುದಾನ ತಂದು ಕೆಲಸ ಮಾಡಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.



» ರಸ್ತೆಗಳ ಕಾಮಗಾರಿಗೆ ದಶಕಗಳಿಂದ ವಿವಿಧ ಸಂಘಟನೆ ಹಾಗೂ ಸಾರ್ವಜನಿಕರು ನೂರಾರು ಬಾರಿ ಮನವಿ ಕೊಟ್ಟರೂ ಕ್ಯಾರೇ ಅನ್ನದ ಪುರಸಭೆ ಅಧಿಕಾರಿಗಳು

» ಪೌರಾಡಳಿತ ಸಚಿವ ರಹೀಮ್ ಖಾನ್ ಈ ಹಿಂದೆ ಲಕ್ಷ್ಮೇಶ್ವರಕ್ಕೆ ಭೇಟಿ ನೀಡಿದಾಗ ಹದಗೆಟ್ಟ ರಸ್ತೆಗಳನ್ನು ಕಣ್ಣಾರೆ ಕಂಡಿದ್ದು ಇಲ್ಲಿ ಗಮನಿಸಬಹುದು ಇಷ್ಟಾದರೂ ಸಚಿವರು ಇತ್ತ ಕಡೆ ಗಮನ ಹರಿಸಿ ವಿಶೇಷ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂಬುದು ನಾಗರಿಕರ ಒತ್ತಾಯ

ಪಟ್ಟಣದ ರಸ್ತೆಗಳು ತೆಗ್ಗು ಗುಂಡಿಗಳಿಂದ ಕೂಡಿದ್ದು ಜನರಿಗೆ ಅಡ್ಡಾಡಲು ತೊಂದರೆ ಆಗಿದೆ. ಸರ್ಕಾರದಿಂದ ಅನುದಾನ ಬರುವ ತನಕ ಆದರೂ ಪುರಸಭೆಯವರು ತೆಗ್ಗು ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲವಾದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ.
■ ಶರಣು ಗೋಡಿ , ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ

ಸರ್ಕಾರಕ್ಕೆ ಸಮಸ್ಯೆಗಳ ಬಗ್ಗೆ ಗಮನಕ್ಕೆ ತರುತ್ತೇವೆ. ಅಲ್ಲಿಂದ ಅನುದಾನ ಬಿಡುಗಡೆಗೊಂಡರೆ ಪಟ್ಟಣದ ರಸ್ತೆ ಕಾಮಗಾರಿಗಳನ್ನು ಆದಷ್ಟು ಬೇಗನೆ ಪ್ರಾರಂಭಿಸಲಾಗುವುದು.
■ ಪರಶುರಾಮ ಕೆ. ಗುಡದಾರಿ, ಪುರಸಭೆ ಮುಖ್ಯಾಧಿಕಾರಿ

ದಂಡಿನ ದುರ್ಗಮ್ಮ ದೇವಿ ಜಾತ್ರೆ ಸಂಭ್ರಮ



ಗದಗ: ಇಲ್ಲಿನ ಬೆಟಗೇರಿ ಹೊರವಲಯದಲ್ಲಿ ಮಂಗಳವಾರ ದಂಡಿನ ದುರ್ಗಮ್ಮ ದೇವಿ ಜಾತ್ರೆ ಪ್ರತಿ ವರ್ಷದಂತೆ ಸಂಭ್ರಮದಿಂದ ನಡೆಯಿತು.

ವಿವಿಧ ವಯೋಮಾನದ ಭಕ್ತರು ದೀಡ್ ನಮಸ್ಕಾರ ಹಾಕಿ ಹರಕೆ ತೀರಿಸಿದರು. ದೇವಿ ಆಶೀರ್ವಾದಕ್ಕಾಗಿ ಭಕ್ತರು ಜಾತ್ರೆಯಲ್ಲಿ ಹಲವು ಆಚರಣೆ, ಸಂಪ್ರದಾಯದಂತೆ ದೇವಿಗೆ ಭಕ್ತಿ ಸಮರ್ಪಿಸಿದರು. ಹರಣ ಶಿಕಾರಿ ಜನಾಂಗದವರೊಂದಿಗೆ ಇತರೆ ಸಮುದಾಯದ ಭಕ್ತರು ಹೂವು, ಹಣ್ಣು, ತೆಂಗಿನಕಾಯಿಗಳನ್ನು ಅರ್ಪಿಸಿ, ದೇವಿಗೆ ಪೂಜೆ ಸಲ್ಲಿಸಿ ಕೃತಾರ್ಥರಾದರು. ಭಕ್ತರ ಕುಡಿಯುವ ನೀರಿಗಾಗಿ ಟ್ರ್ಯಾಕ್ಟರ್ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಆರೋಗ್ಯ ಇಲಾಖೆಯು ಭಕ್ತರ ಸೇವೆಗಾಗಿ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದಿತ್ತು.

ಹರಣ ಶಿಕಾರಿ ಜನಾಂಗದ ಜನರ ಆದಿ ದೇವತೆ ಎಂದೇ ಕರೆಯಿಸಿಕೊಳ್ಳುವ ದಂಡಿನ ದುರ್ಗಮ್ಮ ಜಾತ್ರೆ ತನ್ನದೇಯಾದ ವಿಶೇಷತೆ ಹೊಂದಿದೆ. ಈ ಜನಾಂಗದ ಜನತೆ ದೇಶದ ಯಾವುದೇ ಭಾಗದಲ್ಲಿ ನೆಲೆಸಿದ್ದರೂ ಪ್ರತಿವರ್ಷ ಜಾತ್ರೆ ಸಂದರ್ಭ ನಗರಕ್ಕೆ ಆಗಮಿಸಿ ಶಕ್ತಿ ದೇವತೆ ದರ್ಶನ ಪಡೆಯುವುದು ವಾಡಿಕೆ. ತಾವು ಕೈಗೊಳ್ಳುವ ಎಲ್ಲ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲಿ ಎಂದು ಬೇಡಿಕೆ ಹೊತ್ತು, ತಮ್ಮ ಹರಕೆ ತೀರಿಸುವ ಪದ್ಧತಿ ಈ ಜನಾಂಗದವರು ನಡೆಸಿಕೊಂಡು ಬಂದಿದ್ದಾರೆ. ಜಾತ್ರೆ ಆರಂಭವಾಗುವ ಮೊದಲೇ ದೂರದ ಊರಿನಿಂದ ವಿವಿಧ ವಾಹನಗಳಲ್ಲಿ ದೇವಿ ಭಕ್ತರು ಗದಗನತ್ತ ಆಗಮಿಸಿದ್ದರು. ನಾಗಸಮುದ್ರದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ದೇವಸ್ಥಾನದ ಆಸುಪಾಸು ಹಾಗೂ ರಸ್ತೆ ಇಕ್ಕೆಲಗಳಲ್ಲಿ ಟೆಂಟ್ ಹೊಡೆದು ವಸತಿ ಹೂಡಿದ್ದರು. ಜಾತ್ರೆ ಮುನ್ನಾದಿನ ನಗರದ ಮಾರುಕಟ್ಟೆಯಲ್ಲಿ ಜಾತ್ರೆ ಅಡುಗೆ ಸಿದ್ಧಪಡಿಸಲು ಬೇಕಾದ ದವಸ, ಧಾನ್ಯ, ಪಾತ್ರೆ, ಪಗಡೆಗಳನ್ನು ಖರೀದಿಸಿದ್ದರು. ವಸತಿ ಮಾಡಿದ್ದ ಟೆಂಟ್‌ನಲ್ಲಿಯೇ ಮಂಗಳವಾರ ಅಡುಗೆ ಮಾಡಿಕೊಂಡು ಜಾತ್ರೆಯ ಭರ್ಜರಿ ಊಟ ಸವಿದರು. ಕೆಲವರು ಸಂಜೆಯೇ ಸ್ವಗ್ರಾಮದತ್ತ ಹೆಜ್ಜೆ ಹಾಕಿದರು. ತಾಯಿ ದುರ್ಗಮ್ಮಗೆ ಜಲ, ಕ್ಷೀರಾಭಿಷೇಕ ನೆರವೇರಿಸಿದರು. ಬಳಿಕ ಹೂವಿನ ಅಲಂಕಾರ ಮಾಡಿ, ವಿಶೇಷ ಪೂಜೆ ನೆರವೇರಿಸಲಾಯಿತು. ದೇಶದ ವಿವಿಧ ಭಾಗದಲ್ಲಿ ಹಂಚಿಹೋಗುವ ಭಕ್ತರು ಪ್ರತಿ ವರ್ಷ ದೇವಿ ಜಾತ್ರೆಗೆ ಒಂದೆಡೆ ಸೇರುವುದು ವಿಶೇಷ.

ಮಕ್ಕಳಿಗೆ ನಿತ್ಯ ಬಸವಣ್ಣನವರ ವಚನ ರೂಢಿಸಿ: ಸಿಸಿಪಾ

ನರಗುಂದ: ಆಧುನಿಕ ದಿನಮಾನದಲ್ಲಿ ಮಕ್ಕಳು ಮೊಬೈಲ್, ಟಿವಿ ಅತೀಯಾಗಿ ನೋಡುತ್ತಾ ಸಂಸ್ಕಾರ, ಸಂಸ್ಕೃತಿ ಮರೆಯುವಂತಾಗಿದೆ. ಮಕ್ಕಳಿಗೆ ನಿತ್ಯ ಬಸವಣ್ಣನವರ ವಚನ ರೂಢಿಸಿ ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಪಟ್ಟಣದ ಬಸವೇಶ್ವರಸಮುದಾಯ ಭವನದಲ್ಲಿ ತಾಲೂಕು ಆಡಳಿತ ಹಾಗೂ ಬಸವಕೇಂದ್ರದ ಆಶ್ರಯದಲ್ಲಿ ನಡೆದ ಬಸವ ಜಯಂತಿ ಆಚರಣೆಯಲ್ಲಿ ಮಾತನಾಡಿ, ಬಸವಣ್ಣನವರು ಲಿಂಗಾಯತ ಧರ್ಮದ ಮೂಲಕ ಸಮಾಜದಲ್ಲಿ ಸಮಾನತೆ ಸಾರಿದರು. ಅವರ ಪ್ರತಿಯೊಂದು ವಚನವೂ ವೈಯಕ್ತಿಕ, ಸಮಾಜ ಸುಧಾರಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದರು. ಯುದ್ಧ ಬಿಟ್ಟು ಶಾಂತಿ ನೆಲೆಸಬೇಕಿದೆ. ಶಾಂತಿ, ನೆಮ್ಮದಿ ಜೀವನಕ್ಕೆ ಬಸವತತ್ವದ ತಳಹದಿಯಲ್ಲಿ ಜೀವನ ನಡೆಸಲು ಮುಂದಾಗಬೇಕು. ಜಯಂತಿ ಆಚರಣೆಗಳು ಕಾಟಾಚಾರಕ್ಕೆ ನಡೆಯದೇ ಇನ್ನಷ್ಟು ಅರ್ಥಪೂರ್ಣವಾಗಿ ಆಚರಿಸಬೇಕು. ಎಲ್ಲರೂ ಬಸವ ತತ್ವ ಪಾಲಿಸುವಂತೆ ಹೇಳಿದರು.

ಶಿರೋಳ ಬಿಸಿಎಂ ವಸತಿ ನಿಲಯದ ಮೇಲ್ವಿಚಾರಕ ಪ್ರಭಾಕರ ಉಳ್ಳಾಗಡ್ಡಿ ಮಾತನಾಡಿ, ಬಸವಣ್ಣನವರು ವಿಶ್ವಕಂಡ ಶ್ರೇಷ್ಠ ದಾರ್ಶನಿಕ. ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ತಹಶೀಲ್ದಾರ್ ಶ್ರೀಶೈಲ ತಳವಾರ ಮಾತನಾಡಿ, ಬಸವಣ್ಣನವರ ವಚನಗಳನ್ನು ಎಲ್ಲರೂ ಅರಿತು ಸಾರ್ಥಕ ಜೀವನ ನಡೆಸಬೇಕು ಎಂದರು. ಬಸವಕೇಂದ್ರದ ಚನ್ನಬಸಪ್ಪ ಕಂಠಿ, ವಿ.ಎನ್. ಕೊಳ್ಳಿಯವರ, ಎಸ್.ಆರ್.ಪಾಟೀಲ ಹಾಗೂ ತಾಲೂಕಿನ ವಿವಿಧ ಇಲಾಖೆ ಅಧಿಕಾರಿಗಳು, ಬಸವಕೇಂದ್ರದ ಪದಾಧಿಕಾರಿಗಳು, ಶರಣ ಸಾಹಿತ್ಯ ಪರಿಷತ್ತಿನ ಹಾಗೂ ಕದಳಿ ಮಹಿಳಾ ವೇದಿಕೆಯ ಸದಸ್ಯರು ಇದ್ದರು. ಶರಣ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ವಚನ ಕಂಠಪಾಠ ಸ್ಪರ್ಧೆ ವಿಜೇತರಾದ ಪ್ರಾಥಮಿಕ ವಿಭಾಗದ ಶ್ರಾವಣಿ ನವಲಗುಂದ, ಪ್ರಣಮ್ಯ ಗುಜಮಾಗಡಿ, ಶಾಂತಾ ಸುರಕೋಡ, ಪ್ರೌಢ ವಿಭಾಗದ ಲಕ್ಷ್ಮವ್ವ ಸುಬ್ರ, ಮಾಲಾ ಕುರಿ, ಮಧುಶ್ರೀ ಮಠಪತಿ, ನಿವೇದಿತಾ ಯಾವಗಲ್ಲ ಅವರಿಗೆ ಶಾಸಕ ಸಿ.ಸಿ.ಪಾಟೀಲ ಬಹುಮಾನ ವಿತರಿಸಿದರು. ಬಸವೇಶ್ವರ ವೃತ್ತದಿಂದ ಆರಂಭವಾದ ಬಸವಣ್ಣ ನವರ ಭಾವಚಿತ್ರದ ಮೆರವಣಿಗೆ ಸಕಲ ವಾದ್ಯಮೇಳದೊಂದಿಗೆ ಸಂಭ್ರಮದಿಂದ ನಡೆಯಿತು.



ನಾರೀಶಕ್ತಿ ಕಾಯ್ದೆಗೆ ಕಾಂಗ್ರೆಸ್ ವಿರೋಧ: ಶಾಸಕ ಸಿಸಿ ಪಾಟೀಲ



ಗದಗ: ಲೋಕಸಭೆಯಲ್ಲಿ ಮಂಡನೆಯಾದ ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಬಿಲ್ಲನ್ನು ಸೋಲಿಸಿದ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ವಿರುದ್ಧ ದೇಶದ ಮಹಿಳೆಯರು ತೀವ್ರ ಆಕ್ರೋಶ ಹೊಂದಿದ್ದು, ಅವರಿಗೆ ಮಹಿಳೆಯರ ಶಾಪ ತಟ್ಟಲಿದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಮಂಗಳವಾರ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಜಾರಿಯಾಗುವುದರಿಂದ ದಶಕಗಳ ಕಾಲದಿಂದಲೂ ಕೇಳಿಬರುತ್ತಿದ್ದ ಮಹಿಳೆಯರ ಬೇಡಿಕೆ ಈಡೇರಲಿದೆ. ಲೋಕಸಭೆಯಲ್ಲಿ ಮಹಿಳೆಯರ ಧ್ವನಿ ಮತ್ತಷ್ಟು ಬಲವಾಗಲು ಇದು ಮಹತ್ವದ ಹೆಜ್ಜೆಯಾಗಲಿದೆ. ಇಂತಹ ಮಹತ್ವದ ಬಿಲ್ಲನ್ನು ಇಂಡಿ ಮೈತ್ರಿಕೂಟ ವಿರೋಧಿಸಿ ಸೋಲಿಸಿ ಸಂಭ್ರಮಾಚರಣೆ ಮಾಡಿರುವುದನ್ನು ದೇಶದ ಮಹಿಳೆಯರು ಗಮನಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಜಾರಿಗೊಂಡಿರುವ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಕಾಂಗ್ರೆಸ್ ವಿರೋಧಿಸುತ್ತಲೇ ಬಂದಿದೆ. ಹಾಗೆಯೇ ಸಂವಿಧಾನದ ಆರ್ಟಿಕಲ್ 370 ರದ್ದತಿಯನ್ನು ಸಹ ವಿರೋಧಿಸಿತು. ಆದರೆ 370 ರದ್ದತಿಯ ನಂತರ ಕಾಶ್ಮೀರದಲ್ಲಿ ಪ್ರವಾಸೋದ್ಯಮವು ಹೆಚ್ಚಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ವಿಷಯವನ್ನು ಪ್ರತ್ಯೇಕವಾಗಿ ಪರಿಗಣಿಸಲು ಸಾಧ್ಯವಿಲ್ಲ, ಬಿಲ್ಲು ಸೋಲಿಸುವ ಮೂಲಕ ಮಹಿಳೆಯರ ಜೊತೆಗೆ ವಿವಿಧ ರಾಜ್ಯಗಳ ಜನರಿಗೂ ಅನ್ಯಾಯವಾಗಿದೆ. ಆದರೆ ಬಿಜೆಪಿ ಮುಂದಿನ ದಿನಗಳಲ್ಲಿ ಇನ್ನಷ್ಟು ಬಲವಾಗಿ ಮಹಿಳಾ ಮೀಸಲಾತಿ ಬಿಲ್ಲನ್ನು ಜಾರಿಗೆ ತರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಉಷಾ ದಾಸರ, ನಿರ್ಮಲಾ ಕೊಳ್ಳಿ, ವಿದ್ಯಾವತಿ ಗಡಗಿ, ವಿಜಯಲಕ್ಷ್ಮೀ ಮಾನ್ವಿ, ಪ್ರಶಾಂತ ನಾಯಕ, ಶಶಿಧರ ದಿಂಡೂರ ಸೇರಿದಂತೆ ಬಿಜೆಪಿ ನಾಯಕಿರು, ನಾಯಕರು ಇದ್ದರು.

ಗೋಶಾಲೆಯ ಸಂರಕ್ಷಿತ ದನಕರುಗಳ ಆರೋಗ್ಯ ತಪಾಸಣೆ: ಜಾಗೃತಿ

ಗದಗ: ಹಿರಿಯ ಪಶು ವೈದ್ಯರುಗಳಿಂದ ಗೋವುಗಳ ಆರೋಗ್ಯ ತಪಾಸಣೆ, ಗೋಶಾಲಾದಲ್ಲಿಪೋಷಣೆಗೊಳ್ಳುತ್ತಿರುವಸಂರಕ್ಷಿತದನಕರುಗಳನ್ನುನಿರ್ವಹಿಸುವ,ಕಾಳಜಿ ವಹಿಸುವ ಬಗೆ, ಗೋವುಗಳ ಮಹತ್ವ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕ ಹಮ್ಮಿಕೊಳ್ಳುವ ಮೂಲಕ ಬಸವ ಜಯಂತಿ ಹಾಗೂ ರೇಣುಕಾಚಾರ್ಯ ಜಯಂತಿಯನ್ನು ವೈಚಾರಿಕ ಮತ್ತು ವಿನೂತನ ರೀತಿಯಲ್ಲಿ ಆಚರಿಸಿತು.

ಬಸವ ಜಯಂತಿಯನ್ನು ಎಲ್ಲೆಡೆಯೂ ಸಂಭ್ರಮದಿಂದ ಆಚರಿಸಲಾಯಿತು. ಪಾಂಜರಪೋಳದ ಮಹಾವೀರ ಗೋಶಾಲಾದಲ್ಲಿ ಏರ್ಪಡಿಸಿದ್ದ ಸರಳ ಸಾಂಕೇತಿಕ ಕಾರ್ಯಕ್ರಮದಲ್ಲಿ ಹಿರಿಯ ಪಶು ವೈದ್ಯರಾದ ಡಾ.ಪ್ರಕಾಶ ಜಟ್ಟೆಣ್ಣವರ, ಡಾ.ಎಸ್.ಎಸ್.ಜಿನಗಾ, ಡಾ.ಆರ್.ವೈ. ಗುರಿಕಾರ ಅವರು ಗೋವುಗಳ ಆರೋಗ್ಯ, ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ, ಪಶು ಆಹಾರ ಕುರಿತು ಮಾತನಾಡಿದರಲ್ಲದೆ. ಕೋವಿಡ್ ಸಂದರ್ಭದಲ್ಲಿ ಪಶು ಪ್ರಾಣಿಗಳು ಅದರಲ್ಲೂ ಬಿಡಾಡಿ ದನಕರುಗಳು ಆಹಾರ, ನೀರು, ನೆರಳಿಗಾಗಿ ಪರಿತಪಿಸುವಂತಾಗಿದ್ದನ್ನು ವಿವರಿಸಿ ಸಕಲ ಪ್ರಾಣಿ ಪಶುಗಳಿಗೆ ದಯೆ ತೋರಿಸಬೇಕೆಂದರು. ಗೋಶಾಲೆಯಲ್ಲಿರುವ ದನಕರುಗಳ ಆರೋಗ್ಯ ತಪಾಸಣೆ ನಡೆಸಿದರು. ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಶರಣಬಸಪ್ಪ ಗುಡಿಮನಿ, ಪತ್ರಕರ್ತ ಬಸವರಾಜ ದಂಡಿನ ಮಾತನಾಡಿದರು. ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷೆ ಲತಾ ಮುತ್ತಿನಪೆಂಡಿಮಠ, ಗೋ ಸೇವಾ ಸಮಿತಿಯ ಉಪಾಧ್ಯಕ್ಷ ಪ್ರಕಾಶ ಬಂಡಾ, ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ, ಶೈಲೇಶ್ ಬಾಗಮಾರ, ಮಹೇಶ ಕೋಟಿ ಎಸ್.ಜಿ.ಹಿರೇಮಠ, ಶೇಡುಸಿಂಗ್ ಜಮಾದಾರ, ವೀರಣ್ಣ ಮಾನೇದ, ಶಿವಕುಮಾರ ಬೇವಿನಮರದ, ಪ್ರಭು ಕಾಬಳ್ಳಿ, ಮೋಹನ ದೊಡ್ಡಕುಂಡಿ, ಶೋಭಾ ಗುಗ್ಗರಿ, ಸಾವಿತ್ರಿ ಹೂಗಾರ, ಸುರೇಶ ಚಿತ್ತರಗಿ, ವಿಜಯಕುಮಾರ ಹಿರೇಮಠ, ರಮೇಶ ಪಿಳ್ಳೆ ಇದ್ದರು.



ಶಂಕರಾಚಾರ್ಯರ ಜಯಂತಿ ಆಚರಣೆ



ಗಜೇಂದ್ರಗಡ: ನಗರದ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿಯನ್ನು ಭಾವಚಿತ್ರಕ್ಕೆ ಪುಷ್ಪ ಅರ್ಪಣೆ ಮಾಡಿ ಆಚರಿಸಲಾಯಿತು.

ಶಾಲೆಯ ಮುಖ್ಯ ಶಿಕ್ಷಕ ಶರಣಪ್ಪ ಬಡಿಗೇರ ಮಾತನಾಡಿ, ಯುವ ಪೀಳಿಗೆಯ ವಿದ್ಯಾರ್ಥಿಗಳು ಅವರ ಜ್ಞಾನ ಮತ್ತು ಶಿಸ್ತಿನ ಬದುಕು ಅತ್ಯಂತ ಮಾದರಿಯಾಗಿದೆ ಹಾಗೂ ತತ್ವಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದರು.

ಬಸವರಾಜ ಹಿರೇಮಠ ಮಾತನಾಡಿ, ಶಂಕರಾಚಾರ್ಯರು ಕೇವಲ ಧಾರ್ಮಿಕ ಗುರುಗಳಲ್ಲ, ಅವರು ಅಖಂಡ ಭಾರತವನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸಿದ ಮಹಾನ್ ಚೇತನ, ಲೋಕಕಲ್ಯಾಣಾರ್ಥವಾಗಿ ಜನ್ಮತಳೆದು ಅತೀ ಕಡಿಮೆ ವಯಸ್ಸಿನಲ್ಲಿ ಮಹತ್ತರವಾದುದ್ದನ್ನು ಸಾಧಿಸಿ ಸನಾತನ ಧರ್ಮವನ್ನು ಸಂರಕ್ಷಿಸಿ ಜಗತ್ತಿಗೆ ಜ್ಞಾನ, ಭಕ್ತಿ ಮತ್ತು ಆಧ್ಯಾತ್ಮಿಕತೆಯ ಚಿಂತನೆಯಿಂದ ಸಮಾಜ ಸುಧಾರಣೆ ಮಾಡಿದ್ದಾರೆ ಎಂದರು.

ಮಂಜುನಾಥ ಕಮ್ಮಾರ, ಡಿ.ಎಂ. ಬಡಿಗೇರ, ಸಿ.ಕೆ.ಹಾರೋಗೇರಿ, ವಿ.ಡಿ.ಕರ್ಣೆ, ಟಿ.ಜಿ.ಸೋನಾರ, ಐ.ವಿ..ಕರ್ಣೆ, ಕೆ.ಎಚ್.ಕೊತಬಾಳ, ಎಸ್.ಎಚ್. ಬಾಗವಾನ, ಶಿವರುದ್ರಮ್ಮ, ಶಾರಾದಾ ಹೊನಕೇರಿ ಸೇರಿದಂತೆ ಇತರರಿದ್ದರು.

ಬಸವಣ್ಣನವರಿಂದ ಸಾಮಾಜಿಕ ಪರಿವರ್ತನೆ

ಮುಂಡರಗಿ: ಬುದ್ಧ, ಬಸವ, ಅಂಬೇಡ್ಕರ್ ಅವರು ಸಮಾಜ ಸುಧಾರಣೆಗೆ, ಜಾತಿ ಪದ್ಧತಿ ನಿರ್ಮೂಲನೆಗೆ ಸದಾ ಶ್ರಮಿಸಿದ ಮಹಾನ್ ಚೇತನರು. 12ನೇ ಶತಮಾನದಲ್ಲಿ ಬಸವಣ್ಣನವರು ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದರು ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಾರ್ಯಾಲಯ ಸಭಾಭವನದಲ್ಲಿ ತಾಲೂಕು ಆಡಳಿತದ ವತಿಯಿಂದ ಜರುಗಿದ ಬಸವೇಶ್ವರರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಸವಣ್ಣನವರು ಬೇಧ-ಭಾವ, ಮೇಲು-ಕೀಳು ಎಂಬ ಅನಿಷ್ಟ ಪದ್ಧತಿ ಹೋಗಲಾಡಿಸಿದರು. ಅನುಭವ ಮಂಟಪದ ಮೂಲಕ ಎಲ್ಲರಿಗೂ ಸಮಾನ ಸ್ಥಾನಮಾನ ನೀಡಿದರು. ಕೆಳವರ್ಗದವರನ್ನು ಮೇಲೆತ್ತುವ ಕಾರ್ಯ ಮಾಡಿದರು ಎಂದರು.

ಉದಯಕುಮಾರ ಯಲಿವಾಳ, ಪ್ರಹ್ಲಾದ ಹೊಸಮನಿ, ನಾಗರಾಜ ಹೊಂಬಳಗಟ್ಟಿ, ರಾಜಾಭಕ್ಷಿ ಬೆಟಗೇರಿ, ಪ್ರಮುಖರಾದ ವಿ.ಎಸ್.ಗಟ್ಟಿ, ಚಂದ್ರಶೇಖರ ಪೂಜಾರ, ಅಶ್ವಿನಿ ಗೌಡರ, ರವಿ ಪಾಟೀಲ, ನಬಿಸಾಬ ಕೆಲೂರ ಮತ್ತಿತರರು ಮಾತನಾಡಿದರು. ತಾಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ರಾಮಣ್ಣ ಕೋಳಿ, ಯಲ್ಲಪ್ಪ ಹೊಂಬಳಗಟ್ಟಿ, ಧ್ರುವಕುಮಾರ ಹೂಗಾರ, ನಿಂಗಪ್ಪ ಭಂಡಾರಿ, ಮಲ್ಲೇಶ ಹರಿಜನ, ಗೌರಿಶಂಕರ ಸಜ್ಜನರ, ಐ.ಎಸ್.ದೊಡ್ಡಮನಿ, ಶ್ರೀಕಾಂತ ತಳವಾರ ಇತರರಿದ್ದರು. ಉಪತಹಶೀಲ್ದಾರ್ ಸಿ.ಕೆ.ಬಳೂಟಗಿ ನಿರೂಪಿಸಿದರು.



ಅನ್ಯೋನ್ಯತೆಯಿಂದ ಜೀವನ ಸಾಗಿಸಿ



ಶಿರಹಟ್ಟಿ: ವಿವಾಹ ಎಂಬುದು ಎರಡು ಹೃದಯಗಳನ್ನು ಬೆಸೆಯುವಂತಹ ಒಂದು ಪವಿತ್ರ ಬಂಧನವಾಗಿದ್ದು, ದಾಂಪತ್ಯ ಜೀವನದಲ್ಲಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಅನ್ಯೋನ್ಯತೆಯಿಂದ ಜೀವನ ಸಾಗಿಸಿದಾಗ ಇಬ್ಬರ ಜೀವನವು ಸುಖಕರವಾಗಿರುತ್ತದೆ ಎಂದು ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಹೇಳಿದರು.

ಸ್ಥಳೀಯ ಬೀರೇಶ್ವರ ದೇವಸ್ಥಾನದಲ್ಲಿ ಶ್ರೀ ಬೀರೇಶ್ವರ ಸೇವಾ ಸಮಿತಿ ವತಿಯಿಂದ ಜಗಜ್ಯೋತಿ ಬಸವಣ್ಣನವರ ಜಯಂತ್ಯುತ್ಸವ ಪ್ರಯುಕ್ತ 20ನೇ ವರ್ಷದ ಸರ್ವ ಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಸಮಾಜದಲ್ಲಿ ಇಂತಹ ಸಾಮೂಹಿಕ ವಿವಾಹಗಳು ನಡೆಯುವುದರಿಂದ ದುಂದುವೆಚ್ಚಕ್ಕೆ ಕಡಿವಾಣ ಹಾಕುವುದಲ್ಲದೆ ಸಮಾಜದಲ್ಲಿ ಸಾಮರಸ್ಯದ ವಾತಾವರಣ ಮೂಡುತ್ತದೆ ಎಂದರು.

ಕುರುಬ ಸಮಾಜದ ಮುಖಂಡ ಮಂಜುನಾಥ ಗಂಟಿ ಮಾತನಾಡಿ, ಬಸವಣ್ಣನವರ ತತ್ವ ಸಿದ್ಧಾಂತ ಪಾಲಿಸುವ ಸದುದ್ದೇಶದಿಂದ ಸರ್ವಧರ್ಮದ ಸಾಮೂಹಿಕ ವಿವಾಹ ಮಾಡುತ್ತಿದ್ದು, ಜನರು ಜಾತಿ ಮತ ಪಂಥ ಎಂಬ ಭೇದಬಾವ ಮಾಡದೆ ಸಮಾಜದಲ್ಲಿ ಸಾಮರಸ್ಯದಿಂದ ಬದುಕಬೇಕು ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಡಿ. ಮಾಗಡಿ, ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್ಐ ಈರಪ್ಪ ರಿತ್ತಿ, ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ಸಮಾಜದ ಮುಖಂಡರಾದ ದೇವಪ್ಪ ಬಟ್ಟೂರ, ಮಂಜುನಾಥ ಹಮ್ಮಿಗಿ, ರಾಮಣ್ಣ ಕಟ್ಟೇಕಾರ, ದೇವಪ್ಪ ಮಾಗಡಿ, ಪಕ್ಕಣ್ಣ ಹಮ್ಮಿಗಿ, ದೇವಸ್ಥಾನದ ಅರ್ಚಕ ಮುದುಕಪ್ಪ ಪೂಜಾರ, ಕಾಶಪ್ಪ ಮೀಶಿ ಸೇರಿದಂತೆ ಇತರರಿದ್ದರು.

ಬಸವೇಶ್ವರ ಜಾತ್ರಾ ಮಹೋತ್ಸವ

ಲಕ್ಷ್ಮೇಶ್ವರ: ಸಮೀಪದ ಗೋಜನೂರ ಗ್ರಾಮದಲ್ಲಿ ಬಸವಣ್ಣನ ರಥೋತ್ಸವವು ಅದ್ದೂರಿಯಾಗಿ ಜರುಗಿತು.

ಬಸವಣ್ಣನ ದೇವಸ್ಥಾನದಿಂದ ಆರಂಭವಾದ ರಥೋತ್ಸವವು ಶಿಭಾರ ಗಟ್ಟಿಯ ಮೂಲಕ ಸಾಗಿ ಸರ್ಕಾರಿ ಪ್ರಾಥಮಿಕ ಶಾಲೆಯ ಹತ್ತಿರ ಇರುವ ಪಾದಗಟ್ಟಿಯ ತಲುಪಿತು.

ಜಾತ್ರಾ ಮಹೋತ್ಸವದಲ್ಲಿ ಡೊಳ್ಳಿನ ಹಾಗೂ ಜಾಂಜ್ ಮೇಳದೊಂದಿಗೆ ನಂದಿಕೋಲು ಕುಣಿತದ ದೃಶ್ಯ ಮನಮೋಹಕವಾಗಿದ್ದು ಕಂಡು ಬಂದಿತು. ಭಕ್ತರು ರಥಕ್ಕೆ ಉತ್ತತ್ತಿ, ಬಾಳೆ ಹಣ್ಣು, ಮಾವಿನ ಹಣ್ಣು ಎಸೆದು ಸಂಭ್ರಮಿಸಿದರು. ಬಸವೇಶ್ವರ ಮಹಾರಾಜ್ ಕೀ ಜೇ ಎನ್ನುವ ಜಯ ಘೋಷಣೆ ಕೂಗುತ್ತ ರಥವನ್ನು ಎಳೆದು ಸಂಭ್ರಮಿಸಿದರು. ಗ್ರಾಮದ ಶಿಭಾರ ಗಟ್ಟಿಯ ಹತ್ತಿರ ರಾತ್ರಿ ರಸಮಂಜರಿ ಕಾರ್ಯಕ್ರಮ ಹಾಗೂ ಹಾಸ್ಯ ಸಂಜೆ ಕಾರ್ಯಕ್ರಮ ಅದ್ದೂರಿಯಾಗಿ ಕಂಡು ಬಂದಿತು. ಈ ವೇಳೆ ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಸಮಾರಂಭ ನಡೆಯಿತು.



'ನಾನೂ ಕಾಫಿರ' ಪುಸ್ತಕ ಬಿಡುಗಡೆ | ಮಾದಾರ ಚೆನ್ನಯ್ಯ ಸ್ವಾಮೀಜಿ ಅಭಿಮತ

ಪ್ರತಿರೋಧದ ಮಧ್ಯೆಯೂ ಸತ್ಯ ತಿಳಿಸಿ



ಹುಬ್ಬಳ್ಳಿ: ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತಾಗಿ ಸಾಕಷ್ಟು ಮಾಹಿತಿಯೂ ನಾನೂ ಕಾಫಿರ ಪುಸ್ತಕದಲ್ಲಿ ಇವೆ. ಪುಸ್ತಕದಲ್ಲಿರುವ ಸತ್ಯ ಸಂಗತಿಗೆ ಎಷ್ಟೇ ಪ್ರತಿರೋಧ ಬಂದರೂ, ಸಮುದಾಯಕ್ಕೆ ತಿಳಿಸಿಕೊಡುವ ಪ್ರಯತ್ನವಾಗಬೇಕು ಎಂದು ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ ತಿಳಿಸಿದರು.

ಮಂಗಳವಾರ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಲೋಕಹಿತ ಟ್ರಸ್ಟ್ ಮತ್ತು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ 'ನಾನೂ ಕಾಫಿರ' ಪುಸ್ತಕ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಶೋಷಿತ ವರ್ಗಕ್ಕೆ ಸೌಲಭ್ಯ ಸಿಗಬೇಕು ಎಂದು ಮೀಸಲಾತಿ ಪರಿಕಲ್ಪನೆ ಜಾರಿಗೆ ತಂದಿದ್ದರು. ಕೆಲವರು ಅವರನ್ನು ತಮ್ಮ ಸ್ವತ್ತು ಎಂದು ಭಾವಿಸಿ, ತಮ್ಮ ವರ್ಗಕ್ಕೆ ಸೀಮಿತವಾಗಿಸಿಕೊಂಡಿದ್ದರು ಎಂದರು.

ಅಂಬೇಡ್ಕರ್ ಅವರ ಚಿಂತನೆ, ಆದರ್ಶಗಳು ಇತ್ತೀಚೆಗೆ ಬೆಳಕಿಗೆ ಬರುತ್ತಿವೆ. ಎಲ್ಲ ವರ್ಗದವರೂ ಅವರನ್ನು ಅಪ್ಪಿಕೊಳ್ಳುತ್ತಿದ್ದಾರೆ. ಸತ್ಯ ಅರಗಿಸಿಕೊಳ್ಳಲು ಸಹ ಧೈರ್ಯ ಬೇಕು. ಅಂಬೇಡ್ಕರ್ ಅವರು ಶಂಕರಾಚಾರ್ಯರ ಬುದ್ಧಿ, ಬುದ್ಧರ ಕರುಣೆ ಇತ್ತು. ಅವೆರಡರ ಸಮಾಗಮದಿಂದ ಅವರು ದೇಶದ ಮಹಾನ್ ಚಿಂತಕರಾಗಿ ಸಂವಿಧಾನ ಶಿಲ್ಪಿಯಾಗಿ ರೂಪುಗೊಂಡಿದ್ದರು ಎಂದು ಹೇಳಿದರು.

ಲೇಖಕ ಸುಧಾಕರ ಹೊಸಳ್ಳಿ ಮಾತನಾಡಿ, ಜಾತ್ಯತೀತತೆ ಸೋಗಿನಲ್ಲಿ ಯೋಚಿಸಿ, ಯೋಜಿಸಿ ಹಿಂದುಗಳನ್ನು ಹತ್ತಿಕ್ಕುವುದೇ ಕಾಫಿರ ಚಿಂತನೆಯಾಗಿದೆ. ಹಿಂದು ದೇವರನ್ನು ಪೂಜಿಸಬಾರದು ಎನ್ನುವ ಮನೋಧರ್ಮ ಕಾಫಿರರದ್ದಾಗಿದೆ. ಈ ಮನಸ್ಥಿತಿಯವರು ಬಾಬಾ ಸಾಹೇಬ ಅಂಬೇಡ್ಕರ್ ಅವರನ್ನು ಅರ್ಧ ಸತ್ಯದ ಮೂಲಕ ತೋರಿಸಿದ್ದರು. ಅಂಬೇಡ್ಕರ್ ಎಂದೂ ಹಿಂದು ವಿರೋಧಿಯಾಗಿರಲಿಲ್ಲ, ಅವರು ಹಿಂದು ಧರ್ಮ ಗುರು ಆಗಿದ್ದರು ಎಂದು ತಿಳಿಸಿದರು.

ನಾನೂ ಕಾಫಿರ ಪುಸ್ತಕ ಎಂಟನೇ ಬಾರಿ ಬಿಡುಗಡೆಯಾಗುತ್ತಿದ್ದು, ಇನ್ನೂ ಕೆಲವೆಡೆ ಬಿಡುಗಡೆ ಸಮಾರಂಭ ಇಟ್ಟುಕೊಂಡಿದ್ದೇವೆ. ಪೆಹಲ್ಗಾಂವ್‌ನಲ್ಲಿ ನಡೆದ ಘಟನೆಯ ನೈಜ್ಯತೆಯನ್ನು ಇದು ಸಾಬೀತು ಮಾಡುತ್ತಿದೆ ಎಂದರು.

ಲೋಕಹಿತ ಟ್ರಸ್ಟ್ ಕಾರ್ಯದರ್ಶಿ ಶ್ರೀಧರ ನಾಡಿಗೀರ, ಜನಮೇಜಯ ಉಮರ್ಜಿ ಇದ್ದರು.

ಮಹಿಳಾ ಮೀಸಲಾತಿ ವಿರೋಧ

1937ರಲ್ಲಿ ನಡೆದ ಪೂನಾ ಒಪ್ಪಂದ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿ ಅವರು ಶೋಷಿತರಿಗೆ ಮೀಸಲಾತಿ ಸಿಗಬಾರದು ಎಂದು ಪಟ್ಟು ಹಿಡಿದಿದ್ದರು. ಮಹಿಳೆಯರಿಗೆ ಮೀಸಲಾತಿ ಸಿಗಬಾರದು ಎಂದು ಈಗಿನ ಗಾಂಧಿಗಳು ಹೇಳುತ್ತಿದ್ದಾರೆ. ಸತ್ಯ ಹೊರ ತರುವ ಕೆಲಸ ಮಾಡಬೇಕಿದೆ ಎಂದು ಮಾದಾರ ಚೆನ್ನಯ್ಯ ಸ್ವಾಮೀಜಿ ಹೇಳಿದರು.

> **ಮೂರು ದಶಕದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಒಂದು ಸುಳ್ಳು ಹೇಳುತ್ತ ಬಂದಿದೆ. ಅದನ್ನು ಮತ್ತೊಂದು ವರ್ಗ ಓದದೆ ಸುಮ್ಮನಾಗಿ ಬಿಟ್ಟಿದೆ. ಆದ್ದರಿಂದ ಅಂಬೇಡ್ಕರ್ ಅವರ ಬಗ್ಗೆ ಪ್ರತಿಯೊಬ್ಬರೂ ಓದಿ ಅರ್ಥ ಮಾಡಿಕೊಳ್ಳಬೇಕು.**
> ■ **ಚಕ್ರವರ್ತಿ ಸೂಲಿಬೆಲೆ, ಖ್ಯಾತ ಚಿಂತಕ**

ಬಿಜೆಪಿಗೆ ದೇಶ ಮುಖ್ಯ: ಸಚಿವ ಜೋಶಿ

ಹುಬ್ಬಳ್ಳಿ: ಬಿಜೆಪಿ ಕಾರ್ಯಕರ್ತರಿಗೆ ದೇಶ ಮೊದಲು, ಬಳಿಕ ಪಕ್ಷ ಹಾಗೂ ವ್ಯಕ್ತಿ. ಬಿಜೆಪಿ ಶಿಸ್ತಿನ ಪಕ್ಷವಾಗಿದ್ದು, ಇಲ್ಲಿ ಪಕ್ಷ ಮುಖ್ಯ ವ್ಯಕ್ತಿ ಅಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ಇಲ್ಲಿಯ ಗೋಕುಲ ರಸ್ತೆ ರಾಜೇಶ್ವರಿ ಸಭಾಭವನದಲ್ಲಿ ಬಿಜೆಪಿ ಹು-ಧಾ ಸೆಂಟ್ರಲ್ ಕ್ಷೇತ್ರದ ವತಿಯಿಂದ ಏರ್ಪಡಿಸಿದ್ದ ಪ್ರಶಿಕ್ಷಣ ವರ್ಗಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದಲ್ಲಿ ಶಿಸ್ತಿನ ಪಕ್ಷ ಯಾವುದಾದರೂ ಇದ್ದರೆ ಅದು ಬಿಜೆಪಿ ಎಂದರು.

ಪ್ರಶಿಕ್ಷಣ ವರ್ಗದ ವ್ಯವಸ್ಥೆ ಬಿಜೆಪಿ ಪಕ್ಷದಲ್ಲಿ ಮಾತ್ರವಿದೆ. ಉಳಿದ ಪಕ್ಷಗಳಿಗೆ ಇದರ ಬಗ್ಗೆ ಅರ್ಥವು ಸಹ ಆಗುವುದಿಲ್ಲ. ಈ ಪ್ರಶಿಕ್ಷಣ ವರ್ಗದಲ್ಲಿ ಬೂತ್ ಮಟ್ಟದಿಂದ ಹಿಡಿದು ರಾಜ್ಯಮಟ್ಟದ ಪದಾಧಿಕಾರಿಗಳು ಭಾಗವಹಿಸಿ, ರಾಜಕೀಯ ಸಂಬಂಧಿಸಿದ ಹೊಸ ಹೊಸ ವಿಷಯಗಳನ್ನು ಕುರಿತು ತರಬೇತಿ ಪಡೆಯುತ್ತಾರೆ ಎಂದು ತಿಳಿಸಿದರು.

ರಾಷ್ಟ್ರೀಯ ಅಧ್ಯಕ್ಷರ ಬದಲಾವಣೆ ನಂತರ ಎಲ್ಲ ವಿಭಾಗಗಳಲ್ಲಿ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರಿಗೆ ಎರಡು ದಿನ ಪ್ರಶಿಕ್ಷಣ ಅಭ್ಯಾಸ ನಡೆಯಲಿದೆ. 21 ಪ್ರಶಿಕ್ಷಣ ಅವಧಿಗಳು ವಿಭಾಗಗಳ ಪರಿಣಿತರಿಂದ ಬೋಧನೆ ಮಾಡಲಾಗುತ್ತದೆ ಎಂದು ಹೇಳಿದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಬಿಜೆಪಿ ಪ್ರಶಿಕ್ಷಣ ವರ್ಗದಲ್ಲಿ ದೇಶ ಭಕ್ತಿ, ಸಾಮಾಜಿಕ ವಿಷಯಗಳ ಕುರಿತು ತಜ್ಞರಿಂದ ತರಬೇತಿ ನೀಡಲಾಗುವುದು. ಪಕ್ಷದಲ್ಲಿ ಶಿಸ್ತು ಬೋಧನೆಯ ಜೊತೆಗೆ ಪಕ್ಷದ ಕಾರ್ಯ ಪದ್ಧತಿಯನ್ನು ತಿಳಿಸಲಾಗುತ್ತಿದೆ ಎಂದು ಹೇಳಿದರು.

ಹಿಂದೆ ನಮ್ಮ ಸರ್ಕಾರ ಮಾಡಿದ ಸಾಧನೆಗಳನ್ನು ಜನರಿಗೆ ತಿಳಿಸುವ ಕೆಲಸ ಕಾರ್ಯಕರ್ತರು ಮಾಡಬೇಕಿದೆ. ಅನೇಕ ವಿಷಯಗಳ ಕುರಿತು ಕಾರ್ಯಕರ್ತರಿಗೆ ತಯಾರು ಮಾಡಿ ಬಿಡಲಾಗುವುದು ಎಂದು ತಿಳಿಸಿದರು.

ಪ್ರಶಿಕ್ಷಣ ವರ್ಗದ ವೇದಿಕೆಯಲ್ಲಿ ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ, ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ಜಗದೀಶ ಹಿರೇಮನಿ, ಮಹೇಂದ್ರ ಕೌತಾಳ, ಸಂಜಯ ಕಪಟಕರ, ಶಿವು ಮೆಣಸಿನಕಾಯಿ, ಸೆಂಟ್ರಲ್ ಕ್ಷೇತ್ರದ ಅಧ್ಯಕ್ಷ ರಾಜು ಕಾಳೆ, ಪ್ರಧಾನ ಕಾರ್ಯದರ್ಶಿ ರಾಮನಗೌಡ ಶೆಟ್ಟನಗೌಡರ, ಪ್ರವೀಣ ಪವಾರ, ಸಿದ್ದು ಮೊಗಲಿ ಶೆಟ್ಟರ್ ಇದ್ದರು.



ನವಲಗುಂದಲ್ಲಿ ಪ್ರಶಿಕ್ಷಣ ಅಭಿಯಾನ

ಹುಬ್ಬಳ್ಳಿ: ತಾಲೂಕಿನ ಕುಸುಗಲ್ ಗ್ರಾಮದಲ್ಲಿರುವ ಶನ್ವೈ ಗಾರ್ಡ್‌ನಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದ ವತಿಯಿಂದ ಪಂಡಿತ್ ದೀನದಯಾಳ್ ಉಪಾಧ್ಯಯ ಪ್ರಶಿಕ್ಷಣ ಅಭಿಯಾನ -2026 ಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಚಾಲನೆ ನೀಡಿದರು.

ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರು ಸಮಾರಂಭದ ನೇತೃತ್ವ ವಹಿಸಿದ್ದರು. ಪಕ್ಷದ ಸಂಘಟನೆ ಬಲವರ್ಧನೆ, ಕಾರ್ಯಕರ್ತರ ಸಾಮರ್ಥ್ಯ ವೃದ್ಧಿ ಹಾಗೂ ಮುಂದಿನ ದಿನಗಳ ಕಾರ್ಯಯೋಜನೆಗಳ ಕುರಿತು ಈ ಸಂದರ್ಭದಲ್ಲಿ ಸವಿಸ್ತಾರವಾಗಿ ಚರ್ಚಿಸಲಾಯಿತು.

ಧಾರವಾಡ ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ, ಮಂಡಳ ಅಧ್ಯಕ್ಷ ಗಂಗಪ್ಪ ಮನಮಿ, ಮಂಜುನಾಥ ಗಣಿ, ಷಣ್ಮುಖ ಗುರಿಕಾರ, ಲಿಂಗರಾಜ ಪಾಟೀಲ, ಶ್ರೀಪತಿ ಎಡಾಡಿ, ಅಂದಾನಯ್ಯ ಹಿರೇಮಠ, ಅಡಿವೆಪ್ಪ ಮನಮಿ, ಸುರೇಶ ಗಾಣಿಗೇರ, ಸಿದ್ದನಗೌಡ ಪಾಟೀಲ, ಶಾಂತಕ್ಕ ನಿಡವಣಿ, ಚೈತ್ರಾ ಶಿರೂರ, ಈರಣ್ಣ ಜಡಿ, ರಾಜಶೇಖರ ಕಂಪ್ಲಿ ಇದ್ದರು.

ಕಿರುಸುದ್ದಿ

ಏ.26ರಂದು ರಾಜ್ಯಮಟ್ಟದ ವಿಚಾರ ಸಂಕಿರಣ

ಹುಬ್ಬಳ್ಳಿ: ಅಹಿಂದ 25 ಹೋರಾಟ ಸಾಧನೆ ಸಂಕಲ್ಪ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಗೋಕುಲ ರಸ್ತೆಯ ರಾಯಲ್ ರಿಟ್ಜ್ ಹೋಟೆಲ್‌ನಲ್ಲಿ ಏ.26ರಂದು ಬೆಳಗ್ಗೆ 10 ರಂದು ಆಯೋಜಿಸಲಾಗಿದೆ ಎಂದು ವಿವಿಧ ದಲಿತ ಸಂಘ ಸಂಸ್ಥೆಗಳ ಮಹಾಮಂಡಳದ ಮುಖ್ಯಸ್ಥ ಗುರುನಾಥ ಉಳ್ಳಿಕಾಶಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಾಗಾರದಲ್ಲಿ ಸಂಘಟನೆ, ನಾಯಕತ್ವ ಗುಣಗಳನ್ನು ಬೆಳೆಸುವುದು ಸೇರಿದಂತೆ ವಿವಿಧ ವಿಷಯಗಳ ಕುರಿತಾಗಿ ತರಬೇತಿ ನೀಡಲಾಗುವುದು ಎಂದರು. ಹುಬ್ಬಳ್ಳಿಯಲ್ಲಿ 25 ವರ್ಷಗಳ ಹಿಂದೆ ಪ್ರಥಮ ಅಹಿಂದ ಸಮಾವೇಶ ಆಗಿತ್ತು. ಅದರ ಸವಿ ನೆನಪಿಗಾಗಿ ಎಲ್ಲ ಅಹಿಂದ ಸಂಘಟನೆಗಳ ಸಹಯೋಗದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಚಿಂತಕರಾದ ನಾಗಮೋಹನದಾಸ್, ರವಿವರ್ಮ, ಬಂದೇ ನವಾಜ್ ಸೇರಿದಂತೆ ಮುಂತಾದವರು ಭಾಗವಹಿಸಲಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ಅಹಿಂದ ಸಂಘಟನೆಗಳ 1500ಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಸಚಿವರಾದ ಸತೀಶ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ವಿಪ ಸದಸ್ಯ ಸಲೀಂ ಅಹ್ಮದ್, ಶಾಸಕ ಪ್ರಸಾದ್ ಅಬ್ಬಯ್ಯ ಭಾಗವಹಿಸಲಿದ್ದಾರೆ ಎಂದು ಹೇಳಿದರು. ದಾನಪ್ಪ ಕಬ್ಬೇರ, ಚಂದ್ರಶೇಖರ್ ಜುಟ್ಟಲ, ಅನ್ವರ್ ಮುಧೋಳ, ಶಿವಾನಂದ ಮುತ್ತಣ್ಣವರ ಸೇರಿದಂತೆ ಮುಂತಾದವರು ಇದ್ದರು.

ಅಪಘಾತ: ಓರ್ವ ಸಾವು

ಹುಬ್ಬಳ್ಳಿ: ತಾಲೂಕಿನ ಕುಂದಗೋಳ ರಸ್ತೆಯ ಶೆರೆವಾಡ ಬಳಿ ತಾಂತ್ರಿಕ ಕಾರಣದಿಂದ ರಸ್ತೆ ಬದಿ ಕೆಟ್ಟು ನಿಂತಿದ್ದ ಜೆಸಿಬಿಯನ್ನು ಅದರ ಆಪರೇಟರ್ ಪರಿಶೀಲನೆ ನಡೆಸುತ್ತಿದ್ದ ಸಂದರ್ಭದಲ್ಲಿ ವೇಗವಾಗಿ ಬಂದ ಕಾರು ಅವರಿಗೆ ಡಿಕ್ಕಿ ಹೊಡೆದ ಪರಿಣಾಮ ರುಂಡ ಕತ್ತರಿಸಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಶೆರೆವಾಡ ಗ್ರಾಮದ ಸದಾನಂದ ಕಟೇಗಾರ(32) ಮೃತಪಟ್ಟ ವ್ಯಕ್ತಿ, ಸೋಮವಾರ ಮಧ್ಯಾಹ್ನ ಅಪಘಾತ ನಡೆದಿದೆ. ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಆಪರೇಟರ್ ಸದಾನಂದ ಅವರ ತಲೆ ಭಾಗ ದೇಹದಿಂದ ಬೇರ್ಪಟ್ಟಿದೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಐವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿರುಗಾಳಿ ಸಹಿತ ಧಾರಾಕಾರ ಮಳೆ

ಕಲಬುರಗಿ: ಜಿಲ್ಲೆಯಾದ್ಯಂತ ಕಳೆದ ಕೆಲವು ದಿನಗಳಿಂದ ಸುಡುತ್ತಿದ್ದ ಬಿರು ಬಿಸಿಲಿನ ತಾಪಕ್ಕೆ ವರುಣದೇವ ತಂಪು ಎರೆದಿದ್ದಾನೆ. ಮಂಗಳವಾರ ಮಧ್ಯಾಹ್ನ ಜಿಲ್ಲೆಯ ಕಲಬುರಗಿ ನಗರ, ಚಿತ್ತಾಪುರ ಹಾಗೂ ಕಾಳಗಿ ತಾಲೂಕಿನ ವಿವಿಧೆಡೆ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿದಿದೆ.

ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಚಿತ್ತಾಪುರ ತಾಲೂಕಿನಾದ್ಯಂತ ಹವಾಮಾನ ಬದಲಾಗಿ ಭಾರೀ ಮಳೆ ಸುರಿಯಿತು. ಗುಂಡಗುರ್ತಿ, ಮುಗಟಾ ಹಾಗೂ ಮಾಡಬೂಳವ್ಯಾಪ್ತಿಯಲ್ಲಿ ಅರ್ಧ ಗಂಟೆಗೂ ಅಧಿಕ ಕಾಲ ಸುರಿದ ಮಳೆಯಿಂದಾಗಿ ರಸ್ತೆಗಳೆಲ್ಲ ಜಲಾವೃತಗೊಂಡವು. ಮರಗೋಳ, ದಂಡೋತಿ, ಇವಣಿ ಗ್ರಾಮಗಳಲ್ಲಿ ತುಂತುರು ಮಳೆಯಾಗಿದ್ದು, ಬಿಸಿಲ ಬೇಗೆಯಿಂದ ಹೈರಾಣಾಗಿದ್ದ ಜನತೆಗೆ ಮಳೆ ನೆಮ್ಮದಿ ತಂದಿದೆ.

ಕಲಬುರಗಿ ನಗರದಲ್ಲಿ ಸತತ ಮೂರು ಗಂಟೆಗಳ ಕಾಲ ಸುರಿದ ಪರಿಣಾಮ ಲಾಲಾಗೇರಿ, ಬಸ್ ನಿಲ್ದಾಣ, ತಿಮ್ಮಾಪುರ, ಸೂಪರ್ ಮಾರ್ಕೆಟ್ ಸೇರಿ ಹಲವಡೆ ಸಂಚಾರಕ್ಕೆ ಅಡಚಣೆ ಉಂಟಾಗಿ ಕೇಲಹೊತ್ತು ಮಳೆಯಿಂದಾಗಿ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ಇನ್ನು, ಭಾರಿ ಗಾಳಿಯ ವೇಗಕ್ಕೆ ಮರಗಳು ಧರೆಗುರುಳಿದ್ದು, ಮಾಡಬೂಳ ಮತ್ತು ಕಾಳಗಿ ನಡುವಿನ ರಸ್ತೆ ಸಂಪರ್ಕ ಕಡಿತಗೊಂಡಿತು.

ಕಾಳಗಿ ತಾಲೂಕಿನ ತೆಂಗಳಿ ಗ್ರಾಮದಲ್ಲಿ ಮಳೆಯ ಅಬ್ಬರದ ನಡುವೆ ಸಂಭವಿಸಿದ ಸಿಡಿಲು ಬಡ ರೈತ ಅಜೀಮ್ ಕುಕ್ಕುಂದ ಎಂಬುವವರ ಎತ್ತನ್ನು ಬಲಿ ಪಡೆದಿದೆ. ಬೇರೆಯವರ ಹೊಲವನ್ನು ಪಾಲಿಗೆ ಮಾಡುತ್ತಿದ್ದ ಬಡ ರೈತನಿಗೆ ತನ್ನ ಎತ್ತಿನ ಸಾವು ತುಂಬಲಾರದ ನಷ್ಟವನ್ನುಂಟು ಮಾಡಿದೆ. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಮಳೆಯ ಆರ್ಭಟದಿಂದ ಹಲವೆಡೆ ಜನಜೀವನ ಅಸ್ತವ್ಯಸ್ತ ಮಾಡಿತು.

ಗುಡುಗು ಸಹಿತ ಭಾರೀ ಮಳೆ

ಬಾಗಲಕೋಟೆ: ಕಳೆದ ಹದಿನೈದು ದಿನಗಳಿಂದ ಉರು ಬಿಸಿಲಿಗೆ ನಲುಗಿದ್ದ ಜನಕ್ಕೆ ಮಂಗಳವಾರ ಸಂಜೆ ಜಿಲ್ಲೆಯ ಹುನಗುಂದದಲ್ಲಿ ಸುರಿದ ಭಾರೀ ಗುಡುಗು-ಸಹಿತ ಭಾರೀ ಮಳೆಗೆ ವಿದ್ಯುತ್ ಕಂಬಗಳು, ರಸ್ತೆಗೆ ಬಿದ್ದ ಘಟನೆ ನಡೆದಿದೆ.

ಸಾಯಂಕಾಲ ಮೊದಲು ಬಾರೀ ಬಿರುಗಾಳಿ ಆರಂಭವಾಗುತ್ತಿದ್ದಂತೆ ಗುಡುಗು-ಮಿಂಚು ಬರುತ್ತಿದ್ದಂತೆ ಮಳೆಯು ಜೋರಾಗಿ ಸುರಿಯಿತು. ಜೋರಾಗಿ ಗಾಳಿ ಬೀಸುತ್ತಿದ್ದಂತೆ ರಸ್ತೆಯ ಪಕ್ಕದಲ್ಲಿನ ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿದ್ದು ವಿದ್ಯುತ್ ವೈರ್ ಕೂಡ ನಿಂತಿದ್ದ ವಾಹನಗಳ ಮೇಲೆ ಬಿದ್ದಿದೆ. ಇನ್ನೂ ಅಂಗಡಿಗಳ ಮುಂದೆ ಹಾಕಲಾಗಿದ್ದ ಪತ್ರಾಸ್ ಕೂಡ ಗಾಳಿಗೆ ಹಾರಿ ರಸ್ತೆಗೆ ಬಂದು ಬಿದ್ದಿವೆ.

ತಪ್ಪಿದ ಅನಾಹುತ: ಭಾರೀ ಗಾಳಿ, ಮಳೆಯಾಗಿದ್ದರಿಂದ ರಸ್ತೆಯಲ್ಲಿ ನಿಂತಿದ್ದ ವಾಹನಗಳ ಮೇಲೆ ವಿದ್ಯುತ್ ತಂತಿ ಬಿದ್ದಿದ್ದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಇನ್ನೂ ಭಾರೀ ಗುಡುಗು-ಸಹಿತ ಮಳೆಯಾಗಿದ್ದರಿಂದ ರಸ್ತೆಯಲ್ಲಿ ನೀರು ಹರಿಯುತ್ತಿರುವ ದೃಶ್ಯ ಕಂಡುಬಂದಿತು.



ಜಿಲ್ಲೆಯ ಕೆಲವೊಂದು ಕಡೆ ಸಂಜೆ ಭಾರೀ ಬಿರುಗಾಳಿ ಬೀಸಿದ್ದು ಬೆಳಗ್ಗೆಯಿಂದ ಸಾಯಂಕಾಲದವರೆಗೆ ಉರಿ ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಸಂಜೆ ಬೀಸಿದ ಗಾಳಿಯಿಂದ ತಂಪಾದ ವಾತಾವರಣ ಸೃಷ್ಟಿಯಾಯಿತು.

ಶರಣಬಸವೇಶ್ವರ ವಸತಿ ಸಂಯುಕ್ತ ಪದವಿಪೂರ್ವ ಕಾಲೇಜು


ಜೆಇಇ ಮೇನ್ಸ್-2ರಲ್ಲಿ ಅಮೋಘ ಸಾಧನೆ

ಕಲಬುರಗಿ: ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು 2026ನೇ ಸಾಲಿನ ಜೆಇಇ ಮೇನ್ ಹಂತ-2ರ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಂಡು ಸಾಧನೆ ಮಾಡಿದ್ದಾರೆ.

ಮಲ್ಲಿಕಾರ್ಜುನ ಸೂರ್ಯಕಾಂತ ಉಡಗಿ ಪರ್ಸೆಂಟೈಲ್ 99.3191 ಪ್ರಥಮ, ಅರ್ಪಿತ್ ಮಹಾಂತೇಶ ಪರ್ಸೆಂಟೈಲ್ 99.2957 ದ್ವಿತೀಯ, ಚನ್ನಬಸವ ಧರ್ಮರಾಯ ಕೊರಳ್ಳಿ ಪರ್ಸೆಂಟೈಲ್ 99.2324 ತೃತೀಯ, ಸಮರ್ಥ ಸಂಗಣ್ಣ ಕಡಣಿ ಪರ್ಸೆಂಟೈಲ್ 99.1324 ಚತುರ್ಥ, ವೆಂಕಟೇಶ ರವಿಕುಮಾರ ಕುಲಕರ್ಣಿ ಪರ್ಸೆಂಟೈಲ್ 99.1214 ಐದನೇ ಸ್ಥಾನ ಪಡೆದುಕೊಂಡಿದ್ದಾರೆ.

ಜೆಇಇ ಮೇನ್ ಪರೀಕ್ಷೆಯು 2 ಹಂತಗಳಲ್ಲಿ ನಡೆಯುತ್ತಿದ್ದು, ಎರಡೂ ಹಂತಗಳಲ್ಲಿನ ಅತೀ ಹೆಚ್ಚಿನ ಶೇಕಡಾವಾರು ಪರಿಗಣಿಸಿ ಜೆ.ಇ.ಇ ಅಡ್ವಾನ್ಸಡ್ ಪರೀಕ್ಷೆ ಬರೆಯಲು ಅರ್ಹತೆ ನೀಡಲಾಗುತ್ತದೆ ಹಾಗೂ ದೇಶದ ಪ್ರತಿಷ್ಠಿತ ಎನ್.ಐ.ಟಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆಯುತ್ತಾರೆ.

1ಹಾಗೂ 2ನೇ ಹಂತದ ಜೆ.ಇ.ಇ.ಮೇನ್ ಫಲಿತಾಂಶ ಗಮನದಲ್ಲಿಟ್ಟು ಈ ವರ್ಷ 250ಕ್ಕೂ ಅಧಿಕ ವಿದ್ಯಾರ್ಥಿಗಳು ದೇಶದ ಪ್ರತಿಷ್ಠಿತ ಎನ್.ಐ.ಟಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯಲಿದ್ದಾರೆ. ಜೆ.ಇ.ಇ ಅಡ್ವಾನ್ಸ್ಡ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಎನ್.ಎಸ್. ದೇವರಕಲ್ ತಿಳಿಸಿದ್ದಾರೆ.



> **ಎಸ್.ಬಿ.ಆರ್ ಕಾಲೇಜಿನಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಪರಿಣಾಮಕಾರಿ ಪಾಠಬೋಧನೆ ಮಾಡಲಾಗುತ್ತಿದೆ. ವೀಕ್ಲಿ ಟೆಸ್ಟ್, ಕ್ಯುಮಿಲೇಟಿವ್ ಟೆಸ್ಟ್, ಗ್ರ್ಯಾಂಡ್ ಟೆಸ್ಟ್ ಜೊತೆಗೆ ಎನ್.ಟಿ.ಎ ಮಾದರಿ ಸತತವಾಗಿ ಕಂಪ್ಯೂಟರ್ ಆಧಾರಿತ ಟೆಸ್ಟ್ (ಸಿ.ಬಿ.ಟಿ)ಗಳನ್ನು ನಡೆಸಲಾಗುತ್ತದೆ. ಅದರ ಪರಿಣಾಮ ಜೆಇಇ ಮೇನ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳು ಸತತ ಅಭ್ಯಾಸ ಮಾಡಿ ಉತ್ತಮ ಫಲಿತಾಂಶ ಪಡೆದು ಸಂಸ್ಥೆಯ ಗೌರವ ಹೆಚ್ಚಿಸಿದ್ದಾರೆ.**
> ■ **ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾ ಅಧ್ಯಕ್ಷೆ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ**

ಪರ್ಸೆಂಟೈಲ್ 99ಕ್ಕಿಂತ ಅಧಿಕ 5, ಪರ್ಸೆಂಟೈಲ್ 98ಕ್ಕಿಂತ ಅಧಿಕ 12, ಪರ್ಸೆಂಟೈಲ್ 97ಕ್ಕಿಂತ ಅಧಿಕ 11, ಪರ್ಸೆಂಟೈಲ್ 96ಕ್ಕಿಂತ ಅಧಿಕ 6, ಪರ್ಸೆಂಟೈಲ್ 95ಕ್ಕಿಂತ ಅಧಿಕ 18, ಪರ್ಸೆಂಟೈಲ್ 94ಕ್ಕಿಂತ ಅಧಿಕ 22, ಪರ್ಸೆಂಟೈಲ್ 93ಕ್ಕಿಂತ ಅಧಿಕ 16, ಪರ್ಸೆಂಟೈಲ್ 92ಕ್ಕಿಂತ ಅಧಿಕ 20, ಪರ್ಸೆಂಟೈಲ್ 91ಕ್ಕಿಂತ ಅಧಿಕ 14, ಪರ್ಸೆಂಟೈಲ್ 90ಕ್ಕಿಂತ ಅಧಿಕ 16 ವಿದ್ಯಾರ್ಥಿಗಳು ಸೇರಿ ಒಟ್ಟು 140 ವಿದ್ಯಾರ್ಥಿಗಳು ಪರ್ಸೆಂಟೈಲ್ 90ಕ್ಕಿಂತ ಅಧಿಕ ಪಡೆದುಕೊಂಡಿದ್ದಾರೆ.

> **ಎಸ್.ಬಿ.ಆರ್ ಕಾಲೇಜಿನ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಇಇ ಫೇಸ್-2ರ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವುದು ಕಾಲೇಜಿನ ಗುಣಮಟ್ಟದ ಶಿಕ್ಷಣಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲೇ ಎಸ್.ಬಿ.ಆರ್ ಕಾಲೇಜು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿ ಮೂಡಿಸುತ್ತಿದೆ. ಪ್ರಾಚಾರ್ಯರ ಉತ್ತಮ ಮಾರ್ಗದರ್ಶನ, ಉಪನ್ಯಾಸಕರ ಪರಿಶ್ರಮ ಹಾಗೂ ವಿದ್ಯಾರ್ಥಿಗಳ ನಿರಂತರ ಅಭ್ಯಾಸದಿಂದ ಈ ಫಲಿತಾಂಶ ಬಂದಿದೆ.**
> ■ **ಬಸವರಾಜ ದೇಶಮುಖ, ಕಾರ್ಯದರ್ಶಿ ಶರಣಬಸವೇಶ್ವರ ವಿವಿ ಸಂಘ, ಕಲಬುರಗಿ**

ಸಿದ್ದಿಯವರ ನಿಸ್ವಾರ್ಥ ಸೇವೆಗೆ ಸಂದ ಗೌರವ: ಸಂಸದ ಕಾಗೇರಿ



ಯಲ್ಲಾಪುರ: ವಿಧಾನ ಪರಿಷತ್ ಸದಸ್ಯ ಶಾಂತರಾಮ್ ಸಿದ್ದಿ ಅವರು ಭಾರತೀಯ ಜನತಾ ಪಾರ್ಟಿಯ ಎಸ್‌ಟಿ ಮೋರ್ಚಾದ ರಾಷ್ಟ್ರೀಯ ಕಾರ್ಯನಿರ್ವಾಹಕ ಸದಸ್ಯರಾಗಿ ನೇಮಕಗೊಂಡಿರುವುದು ಅತ್ಯಂತ ಸಂತಸದ ವಿಷಯವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ. ಅಡವಿ ಮಕ್ಕಳ ಧ್ವನಿಯಾಗಿ, ಸರಳತೆಯ ಸಾಕಾರ ಮೂರ್ತಿಯಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಏಳಿಗೆಗಾಗಿ ಅವರು ಕೈಗೊಂಡ ನಿಸ್ವಾರ್ಥ ಸೇವೆಗೆ ಸಂದಿರುವ ಅತ್ಯಂತ ಅರ್ಹವಾದ ಗೌರವವಿದು. ಪಕ್ಷದ ಸಿದ್ಧಾಂತದ ಮೇಲೆ ಅಚಲ ನಂಬಿಕೆಯನ್ನಿಟ್ಟು, ಅಧಿಕಾರವನ್ನು ಕೇವಲ ಸೇವೆಯ ಸಾಧನವನ್ನಾಗಿ ಬಳಸಿಕೊಂಡ ಅವರ ನಡೆ ಎಲ್ಲರಿಗೂ ಆದರ್ಶಪ್ರಾಯವಾಗಿದೆ. ತಳಮಟ್ಟದ ಜನರ ನೋವಿಗೆ ಮಿಡಿಯುತ್ತಾ, ಸಂಘಟನಾ ಚತುರತೆಯ ಮೂಲಕ ಪಕ್ಷವನ್ನು ಬಲಪಡಿಸಿದ ಅವರ ಶ್ರಮಕ್ಕೆ ಇಂದು ರಾಷ್ಟ್ರೀಯ ಮಟ್ಟದ ಮನ್ನಣೆ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ. ಅವರ ಸಮರ್ಥ ನೇತೃತ್ವದಲ್ಲಿ ಪಕ್ಷವು ರಾಷ್ಟ್ರಮಟ್ಟದಲ್ಲಿ ಮತ್ತಷ್ಟು ಸದೃಢವಾಗಿ ಬೆಳೆಯಲಿ ಹಾಗೂ ಮುಂಬರುವ ದಿನಗಳಲ್ಲಿ ಅವರು ಇನ್ನೂ ಉನ್ನತ ಜವಾಬ್ದಾರಿಗಳನ್ನು ಅಲಂಕರಿಸುವಂತಾಗಲಿ. ಜನಪರ ಕಾಳಜಿಯ ಅವರ ಈ ಯಶಸ್ವಿ ಪಯಣ ನಿರಂತರವಾಗಿ ಸಾಗಲಿ ಎಂದು ಸಂಸದ ಕಾಗೇರಿ ಸಂತಸ ವ್ಯಕ್ತಪಡಿಸಿದ್ದಾರೆ.

ಸಂಭ್ರಮದ ಮರಳುಸಿದ್ದೇಶ್ವರ ಮಹಾರಥೋತ್ಸವ

ಕೊಟ್ಟೂರು: ಭಾವೈಕ್ಯತೆ, ಸಹಿಷ್ಣುತೆ, ಸೌಹಾರ್ದ ಸಾರುವ ಮಹತ್ತರ ಕಾಯಕವೇ ಉಜ್ಜಯನಿ ಸ್ವಾಮಿಯ ಮಹಾ ರಥೋತ್ಸವವಾಗಿದೆ. ಏ.21ರಂದು ಸಂಜೆ 5 ಗಂಟೆ ನಂತರ ಲಕ್ಷಾಂತರ ಭಕ್ತರ ಭಾಗವಹಿಸುವಿಕೆಯಲ್ಲಿ ವಿವಿಧ ಕಲಾ ಮೇಳಗಳೊಂದಿಗೆ 50ಕ್ಕೂ ಹೆಚ್ಚು ಅಡಿ ಎತ್ತರದ ವರ್ಣರಂಜಿತ ಭವ್ಯ ಮಹಾ ರಥೋತ್ಸವ ನೆರವೇರತು.

ನಾಡಿನೆಲ್ಲೆಡೆಯಿಂದ ಭಕ್ತರು ಈಗಾಗಲೇ ಉಜ್ಜಯನಿ ಗ್ರಾಮದತ್ತ ಪಾದಯಾತ್ರೆ, ವಾಹನಗಳಲ್ಲಿ ಬರ ತೊಡಗಿದ್ದಾರೆ. ರಥೋತ್ಸವದ 2ನೇ ದಿನ ಏ.22ರಂದು ಈ ವಿಶಿಷ್ಟಾಚರಣೆಯ ಸ್ವಾಮಿಯ ಶಿಖರ ತೈಲಾಭಿಷೇಕ ನಡೆಯಲಿದೆ. ಒಟ್ಟಾರೆಯಾಗಿ ಸದ್ಧರ್ಮ ಪೀಠದ ಈ ಮಹೋತ್ತಮ ಕಾರ್ಯಕ್ರಮಕ್ಕೆ ಆಗಮಿಸುವ ಭಕ್ತರಿಗೆಂದೇ ಪೀಠದಿಂದ ಪ್ರಸಾದ ಸೇವೆಗೆ 25ಕ್ಕೂ ಹೆಚ್ಚು ಕೌಂಟರ್ ಗ್ರಾಮದಲ್ಲಿನ ಹೈಸ್ಕೂಲ್ ಮೈದಾನದಲ್ಲಿ ತೆರೆಯಲಾಗಿದೆ.

ಮಹಾರಥೋತ್ಸವ ಮತ್ತು ಶಿಖರ ತೈಲಾಭಿಷೇಕ ಕಾರ್ಯಕ್ರಮಕ್ಕೆ ಲಕ್ಷಾಂತರ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಭಾರೀ ಪ್ರಮಾಣದ ಪೊಲೀಸ್ ಬಂದೋಬಸ್ತ್ ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ. ಇಬ್ಬರು ಡಿವೈಎಸ್ಪಿ, 10 ಸಿಪಿಐ, 20 ಪಿಎಸ್ಐ, 300ಕ್ಕೂ ಹೆಚ್ಚು ಪೇದೆಗಳು, 200ಕ್ಕೂ ಹೆಚ್ಚು ಹೋಂಗಾರ್ಡ್ಸ್ ಸಿಬ್ಬಂದಿ ನಿಯೋಜಿಸಲು ಈಗಾಗಲೇ ಕೊಟ್ಟೂರು ಪಿಎಸ್ಐ ಗೀತಾಂಜಲಿ ಸಿಂಧೆ ಕ್ರಮ ಕೈಗೊಂಡಿದ್ದಾರೆ. ಉಜ್ಜಯನಿ ಸದ್ಧರ್ಮ ಪೀಠದಲ್ಲಿ ಈ ಜಾತ್ರೆ ಮಹೋತ್ಸವ ನೂರಾರು ಧರ್ಮ ಚಿಂತನೆಗಳನ್ನು ಇಟ್ಟುಕೊಂಡು ಸಮಾಜ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಲವು ಮಂತ್ರಿ ಮಹೋದಯರು, ಗಣ್ಯಮಾನ್ಯರು ಉಪಸ್ಥಿತರಿರುತ್ತಾರೆ. ಇದಕ್ಕೆಂದೇ ಸದ್ಧರ್ಮ ಪೀಠ ಎಲ್ಲ ಬಗೆಯ ಸಿದ್ಧತೆಗಳನ್ನು ಕೈಗೊಂಡಿದೆ ಎನ್ನುತ್ತಾರೆ ಉಜ್ಜಯನಿ ಪೀಠ ಜಗದ್ಗುರು ಸಿದ್ದಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ. ಉಜ್ಜಯನಿ ಜಾತ್ರಾ ಮಹೋತ್ಸವಕ್ಕೆ ಲಕ್ಷಾಂತರ ಭಕ್ತರು ಆಗಮಿಸಲಿದ್ದು, ಇದಕ್ಕೆ ಅನುಗುಣವಾಗಿ ಭಾರೀ ಪ್ರಮಾಣದ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ ಎಂದು ಉಜ್ಜಿನಿ ಶ್ರೀಗಳು ಹೇಳಿದರು.




ಪ್ರಸಾದ ಸೇವನೆ ಕಾರ್ಯ ಮಂಗಳವಾರ ಬೆಳಗ್ಗೆ 9 ಗಂಟೆಯಿಂದ ಆರಂಭಗೊಂಡು ನಿರಂತರವಾಗಿ ನಡೆಯಲಿದೆ. ಪ್ರಸಾದದಲ್ಲಿ ಬೂಂದಿ ಲಾಡು, ರೊಟ್ಟಿ, ವಿವಿಧ ಬಗೆಯ ಪಲ್ಯ, ಚಟ್ನಿಗಳ ಸಿದ್ಧತೆ ಮಾಡಿಕೊಳ್ಳಲಾಗಿದೆ. ಹರಪನಹಳ್ಳಿ ಭಕ್ತರು ತೆಗ್ಗಿನಮಠದ ವರಸದ್ಯೋಜಾತ ಮಹಾಸ್ವಾಮೀಜಿ ನೇತೃತ್ವದಲ್ಲಿ 1 ಟನ್ ಬೂಂದಿ ಲಾಡನ್ನು ಭಕ್ತರಿಗೆ ಉಣ ಬಡಿಸಲು ಉಜ್ಜಯನಿ ಪೀಠಕ್ಕೆ ಸಲ್ಲಿಸಿದ್ದಾರೆ.

25 ಸಾವಿರಕ್ಕೂ ಹೆಚ್ಚು ಖಡಕ್ ರೊಟ್ಟಿಗಳನ್ನು ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರು ಸಿದ್ಧಗೊಳಿಸಿ ಶೇಂಗಾ, ಗುರೆಳ್ಳು ಪುಡಿಯನ್ನು ಪೀಠಕ್ಕೆ ಅರ್ಪಿಸಿದ್ದಾರೆ.

ಜೆ.ಇ.ಇ ಫಲಿತಾಂಶದಲ್ಲಿ ವಿದ್ಯಾನಿಕೇತನ ಕಾಲೇಜಿನ ಅದ್ವಿತೀಯ ಸಾಧನೆ

ಹುಬ್ಬಳ್ಳಿ: ರಾಷ್ಟ್ರೀಯ ಪರೀಕ್ಷೆ ಮಂಡಳಿಯು ಇತ್ತೀಚೆಗೆ ನಡೆದ ದೇಶದ ಪ್ರತಿಷ್ಠಿತ ಜೆ.ಇ.ಇ ಮುಖ್ಯ ಪರೀಕ್ಷೆಯ ಫಲಿತಾಂಶದಲ್ಲಿ ಚೌಗಲಾ ಶಿಕ್ಷಣ ಸಂಸ್ಥೆಯ, ವಿದ್ಯಾನಿಕೇತನ ಪದವಿ ಪೂರ್ವವಿಜ್ಞಾನ ಮಹಾವಿದ್ಯಾಲಯ ಗಮನಾರ್ಹ ಸಾಧನೆಗೈದು ತನ್ನ ಹೆಗ್ಗಳಿಕೆಯನ್ನು ಮತ್ತೊಮ್ಮೆ ಮರು ಸ್ಥಾಪಿಸಿಕೊಂಡಿದೆ.

2025-26 ನೇ ಸಾಲಿನಲ್ಲಿ ಕಾಲೇಜಿನ ಒಟ್ಟು 201 ವಿದ್ಯಾರ್ಥಿಗಳು ಜೆ.ಇ.ಇ ಐಐಟಿ ಎಡ್ವಾನ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಇದರಿಂದಾಗಿ ಕಾಲೇಜಿನ ಯಶೋಗಾಥೆಗೆ ಹೊಸ ಗರಿ ಸೇರಿಸಿದ್ದಾರೆ. ವರ್ಗವಾರು ಶ್ರೇಣಿಯಲ್ಲಿ 3000 ದೊಳಗಿನ ಸಾಧಕರ ಹೆಸರುಗಳು ಇಂತಿವೆ. ಮನೋಜ ಭೋವಿ 13ನೇ ರ್‍ಯಾಂಕ್, ಪ್ರೀತಮ್ ವಡ್ಡರ 562ನೇ ರ್‍ಯಾಂಕ್, ಮುತ್ತುರಾಜ ಶಿರಹಟ್ಟಿ 1132ನೇ ರ್‍ಯಾಂಕ್, ಆರ್ಯನ್ ಹುಂಜಿ 2489ನೇ ರ್‍ಯಾಂಕ್, ಶ್ರೀನಿವಾಸ್ ನಾಯಕ್ 2738ನೇ ರ್‍ಯಾಂಕ್, ಹರ್ಷ ಪಾಟೀಲ್ 2769ನೇ ರ್‍ಯಾಂಕ್ ಹಾಗೂ ಅಭಿಷೇಕ ಟಕ್ಕಳಕಿ 2776ನೇ ರ್‍ಯಾಂಕ್ ಗಳಿಸಿರುತ್ತಾರೆ.



98ಕ್ಕಿಂತ ಹೆಚ್ಚು ಪಡೆದ ವಿದ್ಯಾರ್ಥಿಗಳ ಹೆಸರು: ಅಭೀಷೇಕ ಟಕ್ಕಳಕಿ ಶೇ.99.44, ಅಭಿಷೇಕ ಚನ್ನಗೊಂಡ ಶೇ.99.33, ಅಮೋಘ ಮೋಟಗಿ ಶೇ.99.26, ಅಮೃತ ಉಮಚಗಿ ಶೇ.99.15, ನಂದೀಶ ದ್ಯಾಮಣ್ಣವರ ಶೇ.99.06, ಸ್ವರೂಪ ಪಾಟೀಲ್ ಶೇ.98.99, ಹೃದಯ ಮಹಾಜನ್ 98.97, ವಿಶ್ವೇಶ್ವರಕುಂಬಾರ ಶೇ.98.97, ಸ್ತವನ ಇನಾಮದಾರ ಶೇ.98.96, ಕೀರ್ತಿರೊಟ್ಟಿ ಶೇ.98.91, ನಿತೀನ್ ಭಂಡಾರಕವಟೆ ಶೇ.98.88, ಪ್ರೀತಮ್ ವಡ್ಡರ್ ಶೇ.98.76, ಪಾರ್ಥ ಪಾಟೀಲ್ ಶೇ.98.74, ಸಾಯಿ ನಾಗೇಶ ಶೇ.98.68, ಪ್ರೀತಮಮಾರಾ ಶೇ.98.54, ಪೃಥ್ವಿರಾಜ್ ಚೌಗಲೆ ಶೇ.98.54, ಪ್ರೀತಮ್ ಕಂಬಳಿ ಶೇ.98.2, ಕೇದರವಿವಿಷ್ಣು ಎಸ್.ಟಿ. ಶೇ.98.13, ಜೆ.ಪ್ರಸನ್ನಕುಮಾರ ಶೇ.98.1 ಗಳಿಸಿರುತ್ತಾರೆ.

ಶೇ.99ರಿಂದ 100 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 5. ಶೇ.98ರಿಂದ 99 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 14, ಶೇ.97ರಿಂದ 98 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 8, ಶೇ.96ರಿಂದ 97 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 9, ಶೇ.95ರಿಂದ 96 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 13, ಶೇ.94ರಿಂದ 95 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 8, ಶೇ.93ರಿಂದ 94 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 20. ಈ ವಿದ್ಯಾರ್ಥಿಗಳ ಮಹತ್ಸಾಧನೆಗೆ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿ ಹಾಗೂ ಪ್ರಾಧ್ಯಾಪಕ-ಪ್ರಾಧ್ಯಾಪಕೇತರ ಸಿಬ್ಬಂದಿಯವರು ಮನದುಂಬಿ ಅಭಿನಂದನೆ ಸಲ್ಲಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastem part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕುಮಟಾ ಉಪ ವಿಭಾಗದ ವ್ಯಾಪ್ತಿಯ 33ಕೆ.ವಿ ಗೋಕರ್ಣ ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಗೋಕರ್ಣ ಶಾಖೆ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲಿ ಏ.22ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹಾಗೂ ಗ್ರಾಮೀಣ ಶಾಖೆಯ 11ಕೆ.ವಿ ಬಾಡಾ ಮತ್ತು 11ಕೆ.ವಿ ಮಾಸೂರ ಮಾರ್ಗದಲ್ಲಿ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಮತ್ತು ಮಿರ್ಜಾನ ವ್ಯಾಪ್ತಿಯ ನಾಗೂರ ಹಾಗೂ ಖಂಡಗಾರ ಭಾಗಗಳಲ್ಲಿ ಹೊಸ 11ಕೆ.ವಿ ಮಾರ್ಗದ ರಚನೆ ಕಾಮಗಾರಿ ಇರುವುದರಿಂದ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕುಮಟಾ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಡಿಐಟಿ ಪ್ರಾಜೆಕ್ಟ್‌ಗೆ ಧನ ಸಹಾಯ





ಹಳಿಯಾಳ: ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗದ ಥರ್ಮಲ್ ಪವರ್ ಸ್ನಾತಕೋತ್ತರ ಪದವಿ ವಿದ್ಯಾರ್ಥಿ ವೆಂಕಟೇಶ ಗೌಡ ಕೈಗೊಂಡ ಸಂಶೋಧನಾ ಪ್ರಸ್ತಾವನೆಗೆ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಇಂಡಿಯಾ (ಐ ಇ ಐ) ಧನ ಸಹಾಯ ನೀಡಿದೆ. ಡಾ. ಶಂಕರ್ ಬಡಿಗೇರ್ ಹಾಗೂ ಪ್ರೊ. ನವೀನ್ ಹಿರೇಮಠ ಮಾರ್ಗದರ್ಶನದಲ್ಲಿ ಅನಲೈಸಿಸ್ ಆಫ್ ಹೀಟ್ ಟ್ರಾನ್ಸಫ್‌ರ್ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಏರ್ ಜೆಟ್ ಇಂಪಿಂಜ್ಮೆಂಟ್ ಎನ್ನುವ ಸಂಶೋಧನಾ ಪ್ರಸ್ತಾವನೆಗೆ ಸಲ್ಲಿಸಲಾಗಿತ್ತು. ತಜ್ಞರ ಸಮಿತಿ ವಿವಿಧ ಪ್ರಸ್ತಾವನೆಗಳನ್ನು ಪರಿಶೀಲಿಸಿ ವಿ ಡಿ ಐ ಟಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಅನುಮೋದಿಸಿ ಧನ ಸಹಾಯಕ್ಕೆ ಶಿಫಾರಸು ಮಾಡಲಾಗಿದೆ.ರಾಜ್ಯದ ಕೇವಲ ನಾಲ್ಕು ತಾಂತ್ರಿಕ ಮಹಾವಿದ್ಯಾಲಯಗಳಿಗೆ ಈ ಧನ ಸಹಾಯ ದೊರೆತಿದ್ದು, ಇದರಲ್ಲಿ ವಿಡಿಐಟಿ ಒಂದಾಗಿದೆ. ಮಹಾವಿದ್ಯಾಲಯದ ವಿದ್ಯಾರ್ಥಿಯ ಸಂಶೋಧನಾ ಪ್ರಾಜೆಕ್ಟ್‌ಗೆ ಐಇಐ ಧನ ಸಹಾಯ ನೀಡಿರುವುದು ಸಂತಸ ತಂದಿದೆ ಎಂದು ಆಡಳಿತ ಮಂಡಳಿ ಅಧ್ಯಕ್ಷ ಪ್ರಶಾಂತ ಕುಲಕರ್ಣಿ ಮತ್ತು ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ಹೇಳಿದ್ದಾರೆ. ಮೆಕಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಕೆ ಎಸ್ ಪೂಜಾರ್ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಮಾರ್ಗದರ್ಶಕರಿಗೆ ಹಾಗೂ ವಿದ್ಯಾರ್ಥಿಗೆ ಅಭಿನಂದಿಸಿದ್ದಾರೆ.



ದಾಂಡೇಲಿ: ನಗರದ ಟೌನಶಿಪ್‌ನಲ್ಲಿರುವ ಮಹಾಗಣಪತಿ ದೇವಸ್ಥಾನದಲ್ಲಿ 3 ನೇ ವರ್ಷದ ಪ್ರತಿಷ್ಠಾಪನಾ ಮಹೋತ್ಸವವು ಸಂಭ್ರಮ, ಸಡಗರದಿಂದ ಮಂಗಳವಾರ ಸಂಪನ್ನಗೊಂಡಿತು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60889	69099
ಬಿಳಿಗೋಟು	26599	38600
ಕೆಂಪುಗೋಟು	31099	37300
ಬೆಟ್ಟೆ	42501	51819
ರಾಶಿ	50569	54099
ಚಾಲಿ	44150	48699
ಬಿ.ಕಾಳುಮೆಣಸು	80000	92500
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ಅಪಿ	58096	65299
ರಾಶಿ	49700	58000
ಬೆಟ್ಟೆ	37419	52119
ಕೆಂಪುಗೋಟು	22009	39899
ಬಿಳಿಗೋಟು	16109	42461
ಚಾಲಿ	38299	49100
ಕೋಕಾ	15601	35412
ಕಾಳುಮೆಣಸು	55995	67500



ಮುಂಡಗೋಡ: ಶಿರಸಿ ತೋಟಗಾರಿಕೆ ಜಂಟಿ ನಿರ್ದೇಶಕ ಬಿ. ಪಿ.ಸತೀಶ ಇವರನ್ನು ಪರಿಶಿಷ್ಟ ಪಂಗಡದ ಪಟ್ಟಾ ಭೂಮಿಯನ್ನು ಹೊಂದಿದ ರೈತರು ಪಟ್ಟಣದ ಪರಿವೀಕ್ಷಣಾ ಮಂದಿರದಲ್ಲಿ ಮಂಗಳವಾರ ಸನ್ಮಾನಿಸಿದರು. ವಾಲ್ಮೀಕಿ ಸಮಾಜದ ತಾಲೂಕು ಘಟಕದ ಅಧ್ಯಕ್ಷ ಸುರೇಶ ಕಲ್ಲೊಳ್ಳಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಕೃಷ್ಣಾ ಕುಳ್ಳೂರ, ಶಿರಸಿ ಸಹಾಯಕ ತೋಟಗಾರಿಕೆ ನಿರ್ದೇಶಕ ಪ್ರಸನ್ನ ಹೆಗಡೆ, ಸಹಾಯಕ ತೋಟಗಾರಿಕೆ ಅಧಿಕಾರಿ ರಮೇಶ ಜಮಖಂಡಿ ಮತ್ತು ತಾಲೂಕಿನ ಪರಿಶಿಷ್ಟ ಪಂಗಡದ ರೈತ ಮುಖಂಡರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ ಮಹಿಳೆಯರಿಗೆ ಅವಮಾನ: ಸಂಸದ ಕಾಗೇರಿ

ಶಿರಸಿ: ದೇಶದ ನಾರಿಶಕ್ತಿಯನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರ ಮಂಡಿಸಿರುವ ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಅಡ್ಡಗಾಲು ಹಾಕುವ ಮೂಲಕ ಮಹಿಳೆಯರಿಗೆ ಅವಮಾನ ಮಾಡಿವೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆರೋಪಿಸಿದರು.ನಗರದ ದೀನದಯಾಳ ಸಭಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ನಾರಿಶಕ್ತಿ ಅಧಿನಿಯಮದಡಿ ಶೇ. 33 ಮೀಸಲಾತಿ ನೀಡುವ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ. ಆದರೆ, ಇಂಡಿ ಒಕ್ಕೂಟದ ಪಕ್ಷಗಳು ಅನಗತ್ಯ ಆಕ್ಷೇಪಣೆಗಳನ್ನು ಮುಂದಿಟ್ಟು ಷಡ್ಯಂತ್ರ ರೂಪಿಸಿವೆ. ಒಂದು ಕಡೆ ಸಮಾನತೆಯ ಬಗ್ಗೆ ಮಾತನಾಡಿ, ಮತ್ತೊಂದೆಡೆ ಅನುಷ್ಠಾನದ ಹಂತದಲ್ಲಿ ವಿರೋಧಿಸುವುದು ಕಾಂಗ್ರೆಸ್‌ನ ದ್ವಿಮುಖ ನೀತಿಯನ್ನು ಪ್ರದರ್ಶಿಸುತ್ತದೆ ಎಂದು ವಾಗ್ದಾಳಿ ನಡೆಸಿದರು.ಬಿಜೆಪಿಯು ಮಹಿಳೆಯರಿಗೆ ಮೀಸಲಾತಿ ನೀಡಲು ಮೊದಲಿನಿಂದಲೂ ಬದ್ಧವಾಗಿದೆ. 2029ರೊಳಗೆ ಇದನ್ನು ಜಾರಿಗೆ ತರುವ ನಿಟ್ಟಿನಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಸದಸ್ಯರ ಸಂಖ್ಯೆಯನ್ನು 850ಕ್ಕೆ ಹೆಚ್ಚಿಸುವ ಪ್ರಕ್ರಿಯೆಗೆ ಒತ್ತು ನೀಡಲಾಗುವುದು. ಕಾಂಗ್ರೆಸ್ ಭ್ರಮೆ ಸೃಷ್ಟಿಸುತ್ತಿರುವಂತೆ ದಕ್ಷಿಣ ಭಾರತದ ಸ್ಥಾನಗಳು ಕಡಿಮೆಯಾಗುವುದಿಲ್ಲ, ಬದಲಾಗಿ ಜನಗಣತಿ ಆಧಾರದಲ್ಲಿ ಹೆಚ್ಚಾಗಲಿವೆ ಎಂಬ ವಾಸ್ತವವನ್ನು ಅವರು ಸ್ಪಷ್ಟಪಡಿಸಿದರು. ರೇಖಾ ಹೆಗಡೆ ಕಂಪ್ಲಿ, ಪ್ರಭಾವತಿ ಹೆಗಡೆ, ಲೈಸಾ ಮುಂಡಗೋಡ, ಸ್ವಾತಿ ಕಾನಡೆ, ಉಷಾ ಹೆಗಡೆ, ಶಿಲ್ಪಾ ಭಾಸ್ಕರ, ಅನುಸೂಯಾ ಹೆಗಡೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



ಶಿರಸಿ:ನಗರದ ದೀನದಯಾಳ ಸಭಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ನಾರಿಶಕ್ತಿ ಕುರಿತು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿದರು. ಈ ವೇಳೆ ರೇಖಾ ಹೆಗಡೆ ಕಂಪ್ಲಿ, ಪ್ರಭಾವತಿ ಹೆಗಡೆ, ಲೈಸಾ ಮುಂಡಗೋಡ, ಸ್ವಾತಿ ಕಾನಡೆ, ಉಷಾ ಹೆಗಡೆ, ಶಿಲ್ಪಾ ಭಾಸ್ಕರ, ಅನುಸೂಯಾ ಹೆಗಡೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಕಳಪೆ ಕಾಮಗಾರಿಗೆ ಬಲಿ ಆಯ್ತೇ ಕಾಳಿ ನದಿ ಏತ ನೀರಾವರಿ ಯೋಜನೆ

ಸಂಜು ಕೋಳೂರು

ದಿಗಂತ ವಿಶೇಷ

ಹಳಿಯಾಳ: ತಾಲೂಕಿನ ಸರ್ವ ರೈತರ ಕನಸಾಗಿದ್ದ ಕಾಳಿ ನದಿ ಏತ ನೀರಾವರಿ ಯೋಜನೆಯಿಂದ ಹಲವಾರು ಗ್ರಾಮಗಳ ಕೆರೆ, ಬಾಂದಾರುಗಳ ಒಡಲು ತುಂಬ ಬೇಕಾಗಿತ್ತು. ಆದರೆ, ಇದುವರೆಗೂ ಯೋಜನೆ ಅನುಷ್ಠಾನವಾಗದೇ ಎಲ್ಲರ ಭರವಸೆಗಳು ಆಕಾಶದ ನಕ್ಷತ್ರ ಕೈಯಲ್ಲಿಡುವೆ ಎನ್ನುವಂತಹ ಹುಸಿ ಭರವಸೆಯಾಗಿ ಉಳಿದಿದೆ.

ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿ ಪಕ್ಷಾತೀತ ರೈತ ಮುಖಂಡರುಗಳು ಸೇರಿ ಮಾ. 16ರಂದು ಹಳಿಯಾಳ ಬಂದ್ ಕೂಡ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿಗಳ ಹುಸಿ ಭರವಸೆಯನ್ನು ನಂಬಿ ಹಳಿಯಾಳ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿಯವರು ಏ.2ರಂದು ನೀರು ಹರಿಸುತ್ತೇವೆ ಎಂದು ವಾಗ್ದಾನ ಮಾಡಿ ಬಂದ್ ಹಿಂಪಡೆಯುವಂತೆ ರೈತರ ಮನವೊಲಿಸಿದ್ದರು.

ಅದರಂತೆ ರೈತ ಮುಖಂಡರುಗಳು ಕೂಡ ಬಂದ್ ಹಿಂಪಡೆದು ಅಧಿಕಾರಿಗಳ ಕರ್ಮಕಾಂಡ ಸಾರ್ವಜನಿಕರಿಗೆಎತ್ತಿತೋರಿಸುತ್ತೇವೆಎಂದುಸ್ಥಳದಲ್ಲೇ ನಿಶ್ಚಯಿಸಿ ಆಗಿತ್ತು. ಅದಕ್ಕೆ ಕಾರಣ ಏತ ನೀರಾವರಿ ಯೋಜನೆಗೆ ಸಂಬಂಧಿಸಿ ರೈತ ಮುಖಂಡರುಗಳು ಸೂಕ್ಷ್ಮ ಅವಲೋಕನ ಹಾಗೂ ಪ್ರತೀ ಕಾಮಗಾರಿಯ ಅಧ್ಯಯನ ಈ ಮೊದಲೇ ಮಾಡಿಯಾಗಿತ್ತು. ಹಾಗಾಗಿ ತಪ್ಪು ಹಾಗೂ ಕಳಪೆ ಕಾಮಗಾರಿಯ ಜ್ವಲಂತ ನಿದರ್ಶನವನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸುವ ಉದ್ದೇಶದಿಂದಲೇ ಏ.13 ರವರೆಗೆ ಸುಮ್ಮನಿದ್ದು, ಆ ನಂತರ ತಹಶೀಲ್ದಾರರನ್ನು ತರಾಟೆಗೆ ತೆಗೆದುಕೊಳ್ಳಲು ಪ್ರಾರಂಭಿಸಿದ್ದು.



> **2019 ಕ್ಕೆ ಪ್ರಾರಂಭವಾಗ ಬೇಕಾಗಿದ್ದ ಕಾಮಗಾರಿ ಎಂಟು ವರ್ಷದ ವಿಳಂಬದಿಂದಾಗಿ ಕಾಮಗಾರಿಯ ಗುತ್ತಿಗೆದಾರ ಆತೀಯಾದ ಕಳಪೆ ಮಟ್ಟದ ಪೈಪ್ ಗಳನ್ನು ಸ್ಥಳೀಯವಾಗಿ ಉತ್ಪಾದಿಸಿ ನಾಲ್ಕು ಮೋಟರ್ಗಳ ಒತ್ತಡ ತಡೆದುಕೊಳ್ಳಬೇಕಾದ ಸಾಮರ್ಥ್ಯದ ಬದಲು ಒಂದೇ ಮೋಟರ್ ನ ಒತ್ತಡಕ್ಕೆ ಪತರುಗುಟ್ಟುತ್ತಿದೆ.**
>
> ■ **ಸಂದೀಪ ಕುಮಾರ ಬೊಬಾಟಿ, ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ**

ಬಹಿರಂಗ ಪಡಿಸಿ

ಹಳಿಯಾಳ ತಾಲೂಕಿನ ಕಾಳಿ ನದಿ ಏತ ನೀರಾವರಿ ಯೋಜನೆ ಸಂಪೂರ್ಣ ಕಾಮಗಾರಿ ಕಳಪೆಯಿಂದ ಕೂಡಿದೆ. ಯೋಜನೆ ವಿಫಲವಾಗಿ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಉತ್ತಮ ಉದಾಹರಣೆ. ಶಾಸಕರು ಅಂತಹ ಅಧಿಕಾರಿಗಳ ವಿರುದ್ಧ ತೆಗೆದು ಕೊಂಡ ಕ್ರಮಗಳಾದರೂ ಏನು? ಎನ್ನುವದನ್ನಾದರೂ ಬಹಿರಂಗ ಪಡಿಸಲಿ ಎಂದು ಹಿರಿಯ ರೈತ ಮುಖಂಡ ನಾಗೇಂದ್ರ, ಜಿವೋಜಿ ಸವಾಲೆಸೆದಿದ್ದಾರೆ.

ಬಹು ಕೋಟಿ ರೂಪಾಯಿಗಳ ಯೋಜನೆಯ ಸಂಪೂರ್ಣ ಕಾಮಗಾರಿಯು ಹಳ್ಳಹಿಡಿದಿದ್ದು, ಯೋಜನೆಗಾಗಿಅಳವಡಿಸಿರುವಪೈಪಗಳುಪ್ರಾಥಮಿಕ ಹಂತದ ಒಂದೇ ಮೋಟಾರಿನ ರಭಸಕ್ಕೆ ಒಡೆದು ಹೋಗುತ್ತಿದ್ದು ಕಂಡ ಕಂಡಲ್ಲಿ ಎದ್ದು ಕಾಣುತ್ತಿದೆ. ಅದೇ ರೀತಿ ಈಗ ಎರಡನೇ ಬಾರಿ ಮತ್ತೊಂದು ಸ್ಥಳದಲ್ಲಿ ಪೈಪ್ ಲೈನ್ ಒಡೆದು ಆಗಸದೆತ್ತರಕ್ಕೆ ನೀರು ಚಿಮ್ಮಿ ಪೈಪು ಹಾದು ಹೋಗಿರುವ ಜಮೀನಿನ ರೈತನ ಹೊಲವೂ ಸಂಪೂರ್ಣ ನೀರಿನಿಂದ ತುಂಬಿ ಹೊಲದ ಫಲವತ್ತತೆಯು ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ.ಈ ಕೂಡಲೇ ಹಿರಿಯ ಶಾಸಕರು ಸ್ವತಃ ಮುತುವರ್ಜಿ ವಹಿಸಿ ಗುತ್ತಿಗೆದಾರ ಹಾಗೂ ಯೋಜನಾ ಅನುಷ್ಠಾನಾಧಿಕಾರಿಯ ಮಾತನ್ನು ನಂಬದೇ ಕೂಡಲೇ ತರಾಟೆಗೆ ತೆಗೆದುಕೊಂಡು ದಂಡ ವಿಧಿಸಲು ಮುಂದಾಗ ಬೇಕಾಗಿದೆ.

ಹೆಣ್ಣು ಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ರಕ್ಷಿಸಿ

ಕಾರವಾರ: ಮಹಿಳೆಯರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಗರ್ಭಕಂಠದ ಕ್ಯಾನ್ಸರ್‌ನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ 14-15 ವಯಸ್ಸಿನ ಹೆಣ್ಣು ಮಕ್ಕಳಿಗೆ ಹೆಚ್.ಪಿ.ವಿ. ಲಸಿಕೆ ನೀಡುವ ಮೂಲಕ ಅವರನ್ನು ಈ ಕ್ಯಾನ್ಸರ್‌ನಿಂದ ರಕ್ಷಿಸಬಹುದಾಗಿದ್ದು, ಜಿಲ್ಲೆಯ ಅರ್ಹ ಎಲ್ಲಾ ಹೆಣ್ಣುಮಕ್ಕಳಿಗೆ ಈ ಲಸಿಕೆಯನ್ನು ನೀಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚನೆ ನೀಡಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲೆಯಲ್ಲಿ ಹೆಚ್.ಪಿ.ವಿ ಲಸಿಕಾ ಕಾರ್ಯಕ್ರಮದ ಪ್ರಗತಿ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗರ್ಭಕಂಠದ ಕ್ಯಾನ್ಸರ್ ಭಾರತದಲ್ಲಿ ಮಹಿಳೆಯರಲ್ಲಿ ಕಂಡು ಬರುವ ಎರಡನೇ ಅತ್ಯಂತ ಸಾಮಾನ್ಯವಾದ ಕ್ಯಾನ್ಸರ್ ಎಂದು ಪರಿಗಣಿಸಲಾಗಿದ್ದು, ಗರ್ಭಕಂಠದ ಕ್ಯಾನ್ಸರ್‌ಗೆ ಒಳಗಾಗುವುದನ್ನು ತಡೆಗಟ್ಟಲು ಆರೋಗ್ಯ ಇಲಾಖೆ ವತಿಯಿದ ಜಿಲ್ಲೆಯ 14 ರಿಂದ 15 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತವಾಗಿ ಹೆಚ್.ಪಿ.ವಿ. ಲಸಿಕೆ ನೀಡುವಂತೆ ತಿಳಿಸಿದರು.

ಶಿಕ್ಷಣ ಇಲಾಖೆಯ ಮೂಲಕ ಜಿಲ್ಲೆಯ ಅರ್ಹ ಹೆಣ್ಣು ಮಕ್ಕಳ ಪೋಷಕರಿಗೆ ತಮ್ಮ ಮಕ್ಕಳಿಗೆ ಹೆಚ್.ಪಿ.ವಿ. ಲಸಿಕೆ ನೀಡುವ ಕುರಿತು ಮಾಹಿತಿ ನೀಡುವಂತೆ ತಿಳಿಸಿದ ಅವರು, ಲಸಿಕೆಯ ಕುರಿತ ಅರಿವು ಮತ್ತು ಜಾಗೃತಿ ಮೂಡಿಸುವ ಮಾಹಿತಿಯನ್ನು ಪೋಷಕರಿಗೆ ತಲುಪಿಸುವಂತೆ ಮತ್ತು ಜಿಲ್ಲೆಯ ಎಲ್ಲಾ ಗ್ರಾಮಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಚ್ಛತಾ ವಾಹನಗಳ ಮೂಲಕ ಲಸಿಕೆಯ ಮಹತ್ವದ ಕುರಿತು ವ್ಯಾಪಕ ಅರಿವು ಮೂಡಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಅಭಿಯಾನ ರೂಪದಲ್ಲಿ ಲಸಿಕೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತ್‌ನ ಅಧಿಕಾರಿಗಳು ಆರೋಗ್ಯ ಇಲಾಖೆಗೆ ಎಲ್ಲಾ ರೀತಿಯ ಅಗತ್ಯವಿರುವ ಸಹಕಾರವನ್ನು ನೀಡುವುದರ ಮೂಲಕ ಜಿಲ್ಲೆಯ ಅರ್ಹ ಎಲ್ಲಾ ಹೆಣ್ಣು ಮಕ್ಕಳಿಗೆ ಲಸಿಕೆ ನೀಡಿ ಶೇ.100 ಪ್ರಗತಿ ಸಾಧಿಸಬೇಕು ಮತ್ತು ಲಸಿಕೆಯಿಂದ ಯಾರೂ ವಂಚಿತರಾಗದಂತೆ ಎಚ್ಚರವಹಿಸಿ ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ನಟರಾಜ್, ಡಾ.ಕ್ಯಾ.ರಮೇಶ್ ರಾವ್, ಡಾ.ಹರ್ಷಾ ಹಾಗೂ ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲೆಯ ಎಲ್ಲಾ ತಾಲೂಕು ವೈದ್ಯಾಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು ಇದ್ದರು.



ಬಸವಣ್ಣನವರ ತತ್ವಾದರ್ಶ ಮೈಗೂಡಿಸಿಕೊಳ್ಳಿ



ಯಲ್ಲಾಪುರ: ಸರ್ಕಾರ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿ ಪ್ರತಿಯೊಂದು ಕಚೇರಿಯಲ್ಲಿ ಅವರ ಫೋಟೋ ಹಾಕುವದು ಕಡ್ಡಾಯಗೊಳಿಸಿದ್ದಾರೆ ಅದರಡಿ ಕಾರ್ಯ ನಿರ್ವಹಿಸುವ ಎಲ್ಲ ಅಧಿಕಾರಿಗಳು , ಸಿಬ್ಬಂದಿ ಕಾಯಕವೇ ಕೈಲಾಸವೆಂದು ಸಾರಿದ ಬಸವಣ್ಣನವರ ಆದರ್ಶವನ್ನು ಪಾಲಿಸುವಂತಾಗಬೇಕು ಎಂದು ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ಅಲ್ಲಯ್ಯನವರಮಠ ಹೇಳಿದರು.

ಅವರು ಮಂಗಳವಾರ ತಾಲೂಕಡಳಿತ ಸೌಧದ ಸಭಾಭವನದಲ್ಲಿ ತಾಲೂಕಡಳಿತ ಪಪಂ ವೀರಶೈವ ಲಿಂಗಾಯತ ಸಂಘಟನೆ ಹಾಗೂವಿವಿಧ ಇಲಾಖೆಗಳಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಪತ್ರಕರ್ತೆ ಪ್ರಭಾವತಿ ಗೋವಿ ಮಾತನಾಡಿ, ಇಂದು ಸಂಸತ್‌ನಲ್ಲಿ ಮಹಿಳಾ ಮೀಸಲಾತಿ ನೀಡಲು ಮೀನ ಮೇಷ ಎನಿಸುತ್ತಿರುವದನ್ನು ನಾವು ಕಾಣಬಹುದಾಗಿದೆ. ಆದರೆ ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿಯೇ ಪ್ರಥಮ ಸಂಸತ್ ಅನುಭವ ಮಂಟಪ ಸ್ಥಾಪಿಸಿದ್ದಲ್ಲದೆ ಅಲ್ಲಿ ಅಕ್ಕಮಹಾದೇವಿ ಮುಕ್ತಾಯಕ್ಕ ನಂತಹ ಅನೇಕ ಮಹಿಳೆಯರಿಗೆ ಅಭಿಪ್ರಾಯ ವ್ಯಕ್ತ ಪಡಿಸಲು ಅವಕಾಶ ನೀಡಿ ಸಮಾನತೆಯಿಂದ ಕಾಣುವ ಮೂಲಕ ಮಹಿಳೆಯರ ಕೀರ್ತಿ ಗೌರವ ಹೆಚ್ಚಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ ಎಂದರು.

ಸಂಘಟನೆ ಪ್ರಮುಖ ಸಿದ್ಧಾರ್ಥ ನಂದೊಳ್ಳಿ ಮಠ ಬಸವೇಶ್ವರ ಕುರಿತು ಉಪನ್ಯಾಸ ನೀಡಿದರು.

ವೀರಶೈವ ಲಿಂಗಾಯತ ಸಮುದಾಯದ ಸಾಧಕಿ ಪತ್ರಕರ್ತೆ ಪ್ರಭಾವತಿ ಗೋವಿ ಅವರನ್ನು ತಾಲೂಕಡಳಿತದಿಂದ ಸನ್ಮಾನಿಸಿ ಗೌರವಿಸಿದರು.ಉಪತಹಶೀಲ್ದಾರ್ ಕೆ.ಎಚ್ .ಫರ್ನಾಂಡಿಸ್, ಕ್ಷೇತ್ರ ಶಿಕ್ಷಣಾಧಿಕಾರಿ ರೇಖಾ ನಾಯ್ಕ, ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಸಂಜೀವ ಕುಮಾರ ಹೊಸ್ಕೆರಿ,ಅಭಾವೀ ಮಹಾಸಭಾದ ಪ್ರಮುಖರಾದ ಮಹೇಶಗೌಳಿ, ಗುರುಪಾದಯ್ಯ ನಂದೊಳ್ಳಿಮಠ, ಜಯರಾಜ್, ಅಧಿಕಾರಿಗಳಾದ ಗೀತಾ ಜಾಧವ, ನಾಗೇಶ ಮಲಮೇತ್ರಿ, ಎಫ್. ಎಚ್.ಬಾಸುರ ಇದ್ದರು.ಲೆಕ್ಕಧಿಕಾರಿ ಶ್ರೀಧರ ಮಡಿವಾಳ ನಿರ್ವಹಿಸಿದರು.

ಭೂನ್ಯಾಯ ಮಂಡಳಿ ವಿಚಾರಣೆ ಮುಂದೂಡಿಕೆ

ಅಂಕೋಲಾ: ತಾಲೂಕಿನ ಬೊಬ್ರವಾಡದ ರೈತರ ಹಕ್ಕಿನ ಜಮೀನಿಗೆ ಸಂಬಂಧಿಸಿದಂತೆ ಉಪ ವಿಭಾಗಾಧಿಕಾರಿ ನ್ಯಾಯಾಲಯದ ಭೂನ್ಯಾಯ ಮಂಡಳಿ ವಿಚಾರಣೆ ಏ.28 ಕ್ಕೆ ಮುಂದೂಡಲಾಗಿದೆ.

ಬೊಬ್ರವಾಡದ ಗೇರುಕೊಪ್ಪ ಬಳಿಯ 5 ಎಕರೆ ಜಮೀನು ರೈತರ ಹಕ್ಕಿನದಾಗಿದ್ದು ಸ್ಥಳೀಯ ಅಂಜುಮನ ಇಸ್ಲಾಂ ಸಂಸ್ಥೆಯವರು ಎರಡು ಎಕರೆ ಜಮೀನು ಅತಿಕ್ರಮಣ ಮಾಡಿ ಕಬರಸ್ತಾನ್ ಆಗಿ ಉಪಯೋಗಿಸುತ್ತಿದ್ದಾರೆ ಎಂದು ರೈತರ ಕುಟುಂಬದವರು ಮತ್ತು ಹಿಂದೂ ಸಂಘಟನೆಗಳು ಆರೋಪಿಸಿದ್ದವು.

ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ್ ಅವರು ಅಂಕೋಲಾಕ್ಕೆ ಆಗಮಿಸಿ ಸ್ಥಳಕ್ಕೆ ಭೇಟಿ ನೀಡಿ ಹಿಂದೂ ಸಮಾಜದ ರೈತರ ಹಕ್ಕಿನ ಜಮೀನಿನಲ್ಲಿ ಯಾವುದೇ ಘೋರಿ ಕಟ್ಟಲು ಅವಕಾಶವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಮುತಾಲಿಕ್ ಭೇಟಿ ನೀಡಿದ ಮರುದಿನವೇ ಅನ್ಯ ಸಮುದಾಯದ ವ್ಯಕ್ತಿಯೋರ್ವರು ಮೃತ ಪಟ್ಟ ಸಂದರ್ಭದಲ್ಲಿ ಅದೇ ಸ್ಥಳದಲ್ಲಿ ಶವ ದಫನ್ ನಡೆಸುವ ತಯಾರಿ ನಡೆದಾಗ ರೈತ ಕುಟುಂಬದಿಂದ ಮತ್ತು ಹಿಂದೂ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದರಿಂದ ಪೊಲೀಸ್ ಬಂದೋಬಸ್ತಿನಲ್ಲಿ ದಫನ್ ಕಾರ್ಯ ಮಾಡಲಾಗಿತ್ತು.

ನಂತರ ಹಿಂದೂ ಸಂಘಟನೆಗಳ ಪ್ರಮುಖರು ಅಂಕೋಲಾ ಪೊಲೀಸ್ ಠಾಣೆಗೆ ಭೇಟಿನೀಡಿ ಉಪವಿಭಾಗಾಽಕಾರಿಗಳ ನ್ಯಾಯಾಲಯದ ತೀರ್ಪು ಬರುವ ವರೆಗೆ ರೈತರ ಹಕ್ಕಿನ ಜಮೀನಿನಲ್ಲಿ ಅನ್ಯ ಸಮುದಾಯದ ಯಾವುದೇ ಕಾರ್ಯಗಳಿಗೆ ಅವಕಾಶ ನೀಡಬಾರದು ತೀರ್ಪು ಅವರ ಪರವಾಗಿ ಬಂದರೆ ಅವರು ಜಮೀನನ್ನು ಉಪಯೋಗಿಸಲಿ ಆದರೆ ತೀರ್ಪು ರೈತರ ಪರ ಬಂದರೆ ಜಮೀನಿಗೆ ಬೇಲಿ ಹಾಕುವುದಾಗಿ ಹೇಳಿದ್ದರು.

ಏ. 21ರಂದು ವಿಚಾರಣೆ ಇದ್ದರಿಂದ ತೀರ್ಪು ಬರಬಹುದು ಎಂದು ನಿರೀಕ್ಷೆ ಮಾಡಲಾಗಿತ್ತು ಆದರೆ ಉಪವಿಭಾಗಾಽಕಾರಿಗಳು ವಿಚಾರಣೆಯನ್ನು ಏ.28ಕ್ಕೆ ಮುಂದೂಡಿದ್ದು ಅಂದು ತೀರ್ಪು ಬರಬಹುದೇ ಎಂದು ಕಾಯುವಂತಾಗಿದೆ.

ಕಾರವಾರ: ಜಿಲ್ಲಾಡಳಿತ, ಜಿಪಂ ಕನ್ನಡ ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶೃಂಗೇರಿ ಶಂಕರ ಮಠದಲ್ಲಿ ಶಂಕರಾಚಾರ್ಯ ಜಯಂತಿ ಆಚರಿಸಲಾಯಿತು.



ಶಿವಾಜಿ ಮಹಾರಾಜರ ಜಯಂತಿ ಆಚರಣೆ



ಹಳಿಯಾಳ: ಹಿಂದವೀ ಸ್ವರಾಜ್ಯ ಸಂಸ್ಥಾಪಕರಾದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯ ಪ್ರಯುಕ್ತ ಮಾಜಿ ಶಾಸಕ ಸುನೀಲ್ ಹೆಗಡೆರವರು ಹಳಿಯಾಳ ನಗರದ ಶಿವಾಜಿ ವೃತ್ತ, ಗೌಳಿ ಗಲ್ಲಿ, ತಾನಾಜಿ ಗಲ್ಲಿ, ಗುತ್ತಿಗೇರಿ ಗಲ್ಲಿ ಹಾಗೂ ಕಿಲ್ಲೆ ಹತ್ತಿರದ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷರಾದ ವಿಠ್ಠಲ ಸಿದ್ದನ್ನವರ, ಮಂಡಲ ಪ್ರಧಾನ ಕಾರ್ಯದರ್ಶಿ ಸಂತೋಷ್ ಘಟಕಾಂಬಳೆ, ರೈತ ಮೋರ್ಚಾ ಅಧ್ಯಕ್ಷ ಸೊನಪ್ಪಾ ಸುಣಕಾರ, ಚೂಡಪ್ಪಾ ಬೊಬಾಟಿ, ಪ್ರಕಾಶ್ ಕೊರವರ, ಉಮೇಶ್ ದೇಶಪಾಂಡೆ, ಉದಯ ಜಾಧವ, ಹರಿದಾಸ ಬೊಬ್ಲಿ, ಸುಭಾಷ್ ಪಾಟೀಲ್, ಚಂದ್ರಕಾಂತ ಕಮ್ಮಾರ, ನಾರಾಯಣ ನಾಯ್ಕ, ನಿತೀನ್ ಪಾವಳ, ಸುರೇಶ ಧಾರವಾಡಕರ, ಮಂಜುನಾಥ ಗೌಳಿ, ರೇಮಾಣಿ ವಾಲೇಕರ, ಜೈವಂತ ಚಾವಳೆಕರ, ಮಾರುತಿ ಜುವೇಕರ, ಜಯಲಕ್ಷ್ಮಿ ಚೌವ್ಹಾಣ್, ಶಾಂತಾ ಹಿರೇಕರ, ಮಾಲಾ ಹುಂಡೇಕರ ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಹೊನ್ನಾವರ ಉಪ-ವಿಭಾಗದ 11 ಕೆ.ವಿ ವಿದ್ಯುತ್ ಉಪ ಕೇಂದ್ರದಲ್ಲಿ ವಿದ್ಯುತ್ ಪರಿವರ್ತಕ-1 ಇದರ ತುರ್ತು ನಿರ್ವಹಣಾ ಕೆಸಲದ ನಿಮ್ಮಿತ್ತ ಮಾವಿನಕುರ್ವಾ, ಸಾಲ್ಕೊಂಡ, ಕಡ್ಲೆ, ಹಡಿನಬಾಳ ಮತ್ತು ಸುಬ್ರಮಣ್ಯ ಫೀಡರುಗಳ ವ್ಯಾಪ್ತಿಯಲ್ಲಿ ಏ.22ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೊನ್ನಾ ಉಪ- ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬತ್ತುತ್ತಿರುವ ವರದಾ ನದಿ: ನೀರಿಗಾಗಿ ಪರದಾಟ

ಸುಧೀರ್ ನಾಯರ್

ದಿಗಂತ ವಿಶೇಷ



ಬನವಾಸಿ: ದಿನದಿಂದ ದಿನಕ್ಕೆ ಏರುತ್ತಿರುವ ತಾಪಮಾನದ ಪರಿಣಾಮ ಎಲ್ಲೆಡೆ ನೀರಿಗಾಗಿ ಹಾಹಾಕಾರ ಎದ್ದಿದೆ. ಬಿಸಿಲ ಬೇಗೆಯಿಂದ ಇದೀಗ ಬಹುತೇಕ ಭಾಗದಲ್ಲಿ ನದಿ, ಕೆರೆ ಬಾವಿಗಳು ಬತ್ತುತ್ತಿದ್ದರೆ, ಇತ್ತ ಮಲೆನಾಡು ಮತ್ತು ಬಯಲು ಸೀಮೆ ಪ್ರದೇಶವಾದ ಬನವಾಸಿಯಲ್ಲಿಯೂ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ. ಶೀಘ್ರವಾಗಿ ಮಳೆ ಸುರಿಯದಿದ್ದರೆಜಲಮೂಲಗಳೆಲ್ಲ ಬತ್ತಿ ಬರಡಾಗುವ ಭೀತಿ ಆವರಿಸಿದೆ.

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಅತ್ಯಧಿಕ ತಾಪಮಾನ ಏರಿಕೆಯಾಗಿದೆ. ಇದರ ಪರಿಣಾಮವಾಗಿ ಬಹುಬೇಗನೇ ನದಿ, ಕೆರೆ, ಬಾವಿಗಳು ಬತ್ತಿ ಹೋಗಿ ನೀರಿನ ಸಮಸ್ಯೆ ಎದುರಾಗಿದೆ.

ಬನವಾಸಿ ಪಟ್ಟಣ ವ್ಯಾಪ್ತಿಗೆ ಕುಡಿಯುವ ನೀರು ಪೂರೈಕೆಯಾಗುವ ವರದಾ ನದಿಯ ನೀರು ಸಂಪೂರ್ಣ ಬತ್ತಿಹೋಗಿದ್ದು, ಪಟ್ಟಣದಲ್ಲಿ ನೀರು ಪೂರೈಕೆಗೆ ಸಮಸ್ಯೆ ಎದುರಾಗಲಿದೆ. ಅಲ್ಲದೇ ಸಾವಿರಾರು ಎಕರೆ ಕೃಷಿಭೂಮಿಗೆ ವರದಾನವಾಗಿರುವ ವರದಾ ನದಿಯು ಸಂಪೂರ್ಣ ಬತ್ತಿರುವುದರಿಂದ ನದಿ ನೀರು ಅವಲಂಬಿಸಿರುವ ಈ ಭಾಗದ ರೈತರಲ್ಲಿ ಆತಂಕ ಎದುರಾಗಿದೆ.

ವರದಾ ನದಿಗೆ 3-4 ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದ್ದು, ಎಲ್ಲ ಕಡೆ ನೀರಿನ ಕೊರತೆಯುಂಟಾಗಿದೆ. ಸಂಪೂರ್ಣ ಬತ್ತಿದ ಪರಿಣಾಮ ನೀರಿನ ಸಮಸ್ಯೆ ಅನ್ನದಾತರನ್ನು ಕಾಡುತ್ತಿದೆ. ನದಿ ನೀರು ಬತ್ತಿರುವುದರ ಜೊತೆಯಲ್ಲಿ ಕೆರೆ, ಬಾವಿಯ ಜಲಮಟ್ಟವು ಕಡಿಮೆಯಾಗುತ್ತಿದೆ.

ನದಿ, ಕೆರೆ, ಕೊಳವೆ ಬಾವಿ ಹಾಗೂ ಬಾವಿಗಳನ್ನು ನಂಬಿಕೊಂಡು ಬದುಕುತಿದ್ದ ಕೃಷಿಕರು ಈ ಬಾರಿ ಕಂಗಾಲಾಗಿದ್ದಾರೆ. ಕುಡಿಯುವ ನೀರಿಗಾಗಿ ಪರಿತಪಿಸುವ ಹೊತ್ತಿನಲ್ಲಿ ಕೃಷಿಗೆ ನೀರು ಉಣಿಸಲು ಕೃಷಿಕರು ಪರದಾಡುತಿದ್ದಾರೆ. ನದಿಯನ್ನು ನಂಬಿದ ಕೃಷಿಕರ ಅಡಿಕೆ, ಫೈನಾಪಲ್, ಶುಂಠಿ, ಬಾಳೆ,ಜೋಳ ಸೇರಿದಂತೆ ಬಹುತೇಕ ಬೆಳೆಗಳು ಬಾಡಿ ಹೋಗುತ್ತಿವೆ. ನದಿಯಲ್ಲಿ ಅಲ್ಲಲ್ಲಿ ಗುಂಡಿಗಳಲ್ಲಿ ನಿಂತಿರುವ ಅಲ್ಪಸ್ವಲ್ಪ ನೀರನ್ನು ಕೃಷಿಕರು ಕೃಷಿ ಭೂಮಿಗಾಗಿ ಬಳಸುತ್ತಿದ್ದಾರೆ. ಹೀಗೆ ಒಂದೆರಡು ವಾರ ಕಳೆದರೆ ನದಿಯೂ ಸಂಪೂರ್ಣ ಬತ್ತಿ ಹೋಗಿ ಕೃಷಿ ಚಟುವಟಿಕೆಗೆ ನೀರಿಲ್ಲದೆ ರೈತರು ಪರದಾಡುವ ಪರಿಸ್ಥಿತಿ ಎದುರಾಗಲಿದೆ.

> **ಈ ಬಾರಿ ಏರುತ್ತಿರುವ ತಾಪಮಾನದಿಂದ ನದಿ, ಕೆರೆ, ಬಾವಿ, ಕೊಳವೆ ಬಾವಿಗಳು ಬತ್ತಿ ಹೋಗುತ್ತಿದೆ. ಇನ್ನೂ ಒಂದು ವಾರದಲ್ಲಿ ಮಳೆ ಬರದೇ ಇದ್ದರೆ ಜನ, ಜಾನುವಾರುಗಳಿಗೆ ನೀರಿಗಾಗಿ ಹಾಹಾಕಾರ ಉಂಟಾಗಲಿದೆ.**
>
> ■ **ಗಜಾನನ ಗೌಡ್ರು, ಅಧ್ಯಕ್ಷರು ವ್ಯವಸಾಯ ಸೇವಾ ಸಹಕಾರಿ ಸಂಘ ಬನವಾಸಿ**

> **ಬನವಾಸಿ ಪಟ್ಟಣದಲ್ಲಿ ಈವರೆಗೆ ಕುಡಿಯುವ ನೀರಿನ ಸಮಸ್ಯೆ ಆಗಿಲ್ಲ. ಪೂರೈಕೆ ಮಾಡುವ ಬಾವಿಯಲ್ಲಿ ಸಧ್ಯ ನೀರಿದ್ದು, ಒಂದು ಸಾರ್ವಜನಿಕ ಬೋರ್ ವೆಲ್ ಸಹ ದುರಸ್ತಿ ಮಾಡಲಾಗಿದೆ. ಏರುತ್ತಿರುವ ತಾಪಮಾನದಿಂದ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು. ಸಾರ್ವಜನಿಕರು ನೀರನ್ನು ಮಿತವಾಗಿ ಬಳಕೆ ಮಾಡಬೇಕು.**
>
> ■ **ಬಸವರಾಜ ಬಳ್ಳಾರಿ,ಆಡಳಿತ ಅಧಿಕಾರಿ ಬನವಾಸಿ ಗ್ರಾ.ಪಂ**

ಇಂದಿನಿಂದ ಯಕ್ಷಿದೇವಿ,ಚೌಡೇಶ್ವರಿ ದೇವಿ ಪುನರ್ ಪ್ರತಿಷ್ಠಾಪನೆ

ಅಂಕೋಲಾ: ಪರಶುರಾಮ ಸೃಷ್ಟಿ ದಕ್ಷಿಣ ಕಾಶಿ ಗೋಕರ್ಣ ಕ್ಷೇತ್ರದ ಸಮೀಪದ ಪರಿಸರದಲ್ಲಿರುವ ತಾಲೂಕಿನ ಅಡಿಗೋಣದ ಶಕ್ತಿ ಪೀಠ ಜಾಗೃತ ಸ್ಥಾನ ಎನಿಸಿರುವ ಅಡಿಗೋಣದಲ್ಲಿ ಶತಮಾನಗಳ ಹಿಂದೆ ಭಕ್ತರ ಅರಿವಿನ ಕೊರತೆಯಿಂದ ವಿಸರ್ಜನೆ ಮಾಡಲಾಗಿರುವ ಶ್ರೀಯಕ್ಷಿದೇವಿ ಹಾಗೂ ಶ್ರೀಚೌಡೇಶ್ವರಿ ದೇವಿಯ ಪುನರ್ ಪ್ರತಿಷ್ಠಾಪನಾ ಏ. 23 ಮತ್ತು 24ರಂದು ವಿಜೃಂಭಣೆಯಿಂದ ನಡೆಯಲಿದೆ ಎಂದು ಅಡಿಗೋಣದ ಶ್ರೀಗಣೇಶ, ಬಾಗಿಲುಜಟಕ, ನಾಗದೇವತಾ ಸಮಿತಿಯ ಅಧ್ಯಕ್ಷ ನಾಗರಾಜ ನಾಯಕ ಅಡಿಗೋಣ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಅಡಿಗೋಣದ ದೇವರ ಸನ್ನಿಧಿ ಐತಿಹಾಸಿಕ ಮಹತ್ವ ಹೊಂದಿದ್ದು ಭಕ್ತರು ಬೇಡಿಕೊಂಡಂತೆ ಕೆಲಸಗಳು ನಡೆಯುತ್ತದೆ ಎಂಬ ನಂಬಿಕೆಯಿದೆಯಲ್ಲದೇ ದೇವರ ಸನ್ನಿಧಿ ಪೌರಾಣಿಕ ಮಹತ್ವವನ್ನು ಹೊಂದಿದೆ ಎಂದು ತಿಳಿಸಿದರು.

ಅಡಿಗೋಣದಲ್ಲಿ ಪೂಜಿಸಲ್ಪಡುವ ದೇವರುಗಳ ಸನ್ನಿಧಿಯಲ್ಲಿ ಅನಾದಿಕಾಲದಿಂದ ನೆಲೆನಿಂತು ಭಕ್ತರ ಪೊರೆಯುತ್ತಿದ್ದ ಶ್ರೀಯಕ್ಷಿದೇವಿ ಮತ್ತು ಚೌಡೇಶ್ವರಿ ದೇವಿಯ ವಿಗ್ರಹಗಳು ವಿಸರ್ಜನೆಗೊಂಡಿರುವ ವಿಷಯ ಊರಿನ ಭಕ್ತರು ಇತರ ದೇವಾಲಯಗಳ ಸನ್ನಿಧಿಗಳಿಗೆ ಭೇಟಿ ನೀಡಿದಾಗ ಕಾರಣಿಕ ನುಡಿಗಳಿಂದ ತಿಳಿದು ಬಂದಿರುತ್ತದೆ. ಬ್ರಾಹ್ಮಣರ ಮೂಲಕ ಆರೂಡ ಹಾಕಿದಾಗಲೂ ಅವರ ನುಡಿಯಿಂದ ವಿಷಯ ಸ್ಪಷ್ಟಗೊಂಡಿದೆ ಆದ್ದರಿಂದ ಊರಿನ ಮತ್ತು ಸಕಲ ಭಕ್ತ ಜನರ ಹಿತದೃಷ್ಟಿಯಿಂದ ವಿಸರ್ಜಿತ ದೇವರ ಪ್ರತಿಷ್ಠಾಪನೆ ಮಾಡಲು ನಿರ್ಧರಿಸಲಾಗಿದ್ದು ಆ ಸಂಬಂಧಿತ ಪೂರ್ವಭಾವಿ ಧಾರ್ಮಿಕ ಪೂಜಾ ವಿಧಿ ವಿಧಾನಗಳನ್ನು ಪೂರೈಸಲಾಗಿದೆ ಎಂದ ಅವರು ಊರಿನ ಜನರು ನಿರೀಕ್ಷೆಗೆ ಮೀರಿ ಸಹಕಾರ ನೀಡುವುದರೊಂದಿಗೆ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.



ಆಗಮಶಾಸ್ತ್ರ ಪರಿಣಿತ ಸಾಂಬಾ ಭಟ್ಟ ಷಡಕ್ಷರಿ ಅವರ ನೇತೃತ್ವದಲ್ಲಿ ಏ. 23ರಂದು ಸಂಜೆ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ಏ. 24ರಂದು ಬೆಳಗ್ಗೆ 8.54 ಗಂಟೆಯ ಶುಭ ಮೂಹೂರ್ತದಲ್ಲಿ ದೇವರ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯಲಿದೆ ನಂತರ ದೇವರ ಸನ್ನಿಧಿಯಲ್ಲಿ ತತ್ವಕಲಾಹವನ, ದುರ್ಗಾಹವನ, ಪೂರ್ಣಾಹುತಿ, ಮಹಾಪೂಜೆ ಅನ್ನಸಂತರ್ಪಣೆ ನಡೆಯಲಿದೆ.

ಸಂಜೆ 8.30 ರಿಂದ ಊರಿನ ಬಾಲ ಕಲಾವಿದರಿಂದ ಲವ ಕುಶ ಯಕ್ಷಗಾನ ನಂತರ ಊರಿನ ಹವ್ಯಾಸಿ ಕಲಾವಿದರಿಂದ ಕಂಸವಧೆ ಯಕ್ಷಗಾನ ಪ್ರದರ್ಶನ ನಡೆಯಲಿದೆ.ಉತ್ಸವದಂತೆ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೆ ಸರ್ವರೂ ಆಗಮಿಸಿ ಸಹಕಾರ ನೀಡುವಂತೆ ನಾಗರಾಜ ನಾಯಕ ಮನವಿ ಮಾಡಿದರು.ದೇವರ ಸೇವಾ ಸಮಿತಿಯ ಪದಾಧಿಕಾರಿಗಳು, ಗೌರವ ಸದಸ್ಯರು ಉಪಸ್ಥಿತರಿದ್ದರು.



ರಾಣೇಬೆನ್ನೂರ: ನಗರದ ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕಾ ಆಡಳಿತದ ವತಿಯಿಂದ ಬಸವೇಶ್ವರ ಜಯಂತಿ ಆಚರಿಸಲಾಯಿತು. ತಹಶೀಲ್ದಾರ ಆರ್.ಎಚ್. ಭಗವಾನ, ಕೊಟ್ರೇಶಪ್ಪ ಎಮ್ಮಿ, ವಿ.ವಿ. ಹರಪನಹಳ್ಳಿ, ಶಿವಪ್ಪ ಗುರಿಕಾರ ಹಾಗೂ ಸಿಬ್ಬಂದಿ ಇದ್ದರು.

ಬಸವಣ್ಣನವರ ವಿಚಾರಗಳು ಸಾರ್ವಕಾಲಿಕ

ಬ್ಯಾಡಗಿ: ಬಸವಣ್ಣನವರು ಸಮಾಜದಲ್ಲಿ ಅನ್ಯಾಯ ವಿರುದ್ಧ ಹೋರಾಟ ಮಾಡಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನತೆ ಇದೆಯೆಂದು ಪ್ರತಿಪಾದಿಸಿದ್ದರು. ಆದರೆ, ಸಮಾಜದಲ್ಲಿ ಅಸಮಾನತೆ ಮುಂದುವರಿದಿದೆ. ಎಲ್ಲರೂ ಒಂದಾಗಿ ಅಸಮಾನತೆಯನ್ನು ಹೋಗಲಾಡಿಸಬೇಕಿದೆ ಎಂದು ರಾಜ್ಯ ಗ್ಯಾರಂಟಿ ಅಧ್ಯಕ್ಷ ಎಸ್.ಆರ್.ಪಾಟೀಲ ಹೇಳಿದರು.ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಇರುವ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡಿ ನಂತರ ಮಾತನಾಡಿದ ಅವರು,ನಾವು ಬಸವಣ್ಣನವರ ತತ್ವ ಹಾಗೂ ಆದರ್ಶಗಳನ್ನು ಮೊದಲು ಅಚ್ಚುಕಟ್ಟಾಗಿ ಪಾಲಿಸಬೇಕಿದೆ. ಅಂದಾಗ ಮಾತ್ರ ನಮ್ಮ ಬದುಕಿಗೆ ಅರ್ಥ ಸಿಗುತ್ತದೆ ಎಂದು ಹೇಳಿದರು.ಪುರಸಭೆಯ ಮಾಜಿ ಅಧ್ಯಕ್ಷ ಮುಖಂಡ ಮುರಿಗೆಪ್ಪ ಶೆಟ್ಟರ್ ಮಾತನಾಡಿ, ಬಸವಣ್ಣನವರು12ನೇಶತಮಾನದಲ್ಲಿ ವಚನಗಳಮೂಲಕ ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಕ್ಕೆ ಹೋರಾಟ ಮಾಡಿದರು ಎಂದರು. ತಹಶೀಲ್ದಾರ್ ಶಿವಶಂಕರ ನಾಯಕ್ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಧರ್ಮಗಳ ನಡುವೆ ಅಶಾಂತಿ ಸೃಷ್ಟಿಯಾಗುತ್ತಿದೆ. ದಯವೇ ಧರ್ಮದ ಮೂಲವಯ್ಯ ಎಂಬ ಬಸವಣ್ಣನವರ ತತ್ವ ಪಾಲಿಸಿದರೆ ಸಾಮರಸ್ಯ ಮೂಡುತ್ತದೆ ಎಂದು ತಿಳಿಸಿದರು.ಪುರಸಭೆ ಮುಖ್ಯ ಅಧಿಕಾರಿ ವಿನಯ್ ಕುಮಾರ ಹೊಳೆಯಪ್ಪ ಗೋಳ ಮಾತನಾಡಿ, ಬಸವಣ್ಣನವರ ಸಂದೇಶ ನೆನಪು ಮಾಡಿಕೊಳ್ಳಬೇಕು. ಯುವ ಪೀಳಿಗೆಗೆ ತಿಳಿಸುವಂತಹ ಕೆಲಸ ಮಾಡಬೇಕು. ಸಂವಿಧಾನದ ಮುನ್ನಡೆ ನೋಡಿದಾಗ ಬಸವಣ್ಣನವರು ನೆನಪಿಗೆ ಬರುತ್ತಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗುಡ್ಡಪ್ಪ ಆಡಿನವರ್, ಶಶಿಧರ ಗೊಲ್ಲರಹಳ್ಳಿ ಮಠ, ಮಜೀದ್ ಮುಲ್ಲಾ, ಶಿವಯೋಗಿ ಗಡಾದ, ಗಿರೀಶ್ ಇಂಡಿಮಠ ಉಪಸ್ಥಿತರಿದ್ದರು.



ಬ್ಯಾಡಗಿ: ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಮೂರ್ತಿಗೆ ರಾಜ್ಯ ಗ್ಯಾರಂಟಿ ಅಧ್ಯಕ್ಷ ಎಸ್.ಆರ್.ಪಾಟೀಲ ಮಾಲಾರ್ಪಣೆ ಮಾಡಿ ಬಸವ ಜಯಂತಿ ಆಚರಿಸಿದರು.ಈ ವೇಳೆ ಗುಡ್ಡಪ್ಪ ಆಡಿನವರ್, ಶಶಿಧರ ಗೊಲ್ಲರಹಳ್ಳಿ ಮಠ, ಮಜೀದ್ ಮುಲ್ಲಾ, ಶಿವಯೋಗಿ ಗಡಾದ, ಗಿರೀಶ್ ಇಂಡಿಮಠ ಇದ್ದರು.

ಕಿರುಸುದ್ದಿ

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಹಾವೇರಿ : ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಇದೇ ಏಪ್ರಿಲ್ 23 ಹಾಗೂ 24ರಂದು ಹಾವೇರಿ ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ಅವ್ಯವಹಾರಗಳ ತಡೆಗೆ ಹಾಗೂ ಶಾಂತಿ ಪಾಲನೆ, ಕಾನೂನು ಸುವ್ಯವಸ್ಥೆ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ. ನಿರ್ಬಂಧಿತ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳ ಪ್ರವೇಶ ನಿಷೇಧಿಸಲಾಗಿದೆ. ಈ ಪ್ರದೇಶದಲ್ಲಿ ಬರುವ ಝರಾಕ್ಸ್ ಸೆಂಟರ್, ಟೈಪಿಂಗ್ ಸೆಂಟರ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ. ಮೊಬೈಲ್, ಸೆಲ್ಯೂಲರ್ ಫೋನ್, ಟ್ಯಾಬ್ಲೆಟ್, ಪೆನ್‌ಡ್ರೈವ್, ಬ್ಲೂಟೂತ್ ಡಿವೈಸ್ ಸ್ಮಾರ್ಟ್ ವಾಚ್, ಕ್ಯಾಲ್ಕ್ಯುಲೇಟರ್, ರೆಕಾರ್ಡಿಂಗ್ ಹಾಗೂ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ನಿಷೇಧಿಸಲಾಗಿದೆ.

ವ್ಯಕ್ತಿ ಆತ್ಮಹತ್ಯೆ

ಹಾವೇರಿ: ಇಲ್ಲಿಯ ಕೆರಿಮತ್ತಿಹಳ್ಳಿ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆ ಸಮೀಪ ಅನಾಮಧೇಯ ವ್ಯಕ್ತಿ ನೇಣು ಬಿಗಿದ ಸ್ಥಿತಿಯಲ್ಲಿ ಮೃತಪಟ್ಟಿರುವ ಘಟನೆ ನಡೆದಿದೆ. ಸುಮಾರು 35 ರಿಂದ 40 ವರ್ಷ ವಯಸ್ಸಿನ ಅನಾಮಧೇಯ ಗಂಡಸಿನ ಮೃತ ದೇಹ ಪತ್ತೆಯಾಗಿದೆ. 2026 ಮಾ.21ರ ರಾತ್ರಿಯಿಂದ ಏ.20ರ ಮಧ್ಯಾಹ್ನ 2 ಗಂಟೆ ನಡುವಿನ ಅವಧಿಯಲ್ಲಿ ಖಾಸಗಿ ಆಸ್ಪತ್ರೆ ಬಳಿ ಇರುವ ನಗರಸಭೆ ಖುಲ್ಲಾ ಜಾಗೆಯ ಪಕ್ಕದಲ್ಲಿ ಔಡಲ ಗಿಡಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ವ್ಯಕ್ತಿ ಮೃತಪಟ್ಟಿದ್ದಾರೆ. ಮೃತನ ಸಾವಿನಲ್ಲಿ ಸಂಶಯ ಇದ್ದು, ತನಿಖೆ ನಡೆಸುವಂತೆ ನಗರಸಭೆ ಪೌರ ಕಾರ್ಮಿಕ ನೀಲಪ್ಪ ದೇವಸೂರ ಪೊಲೀಸರಿಗೆ ನೀಡಿದ ದೂರಿನಲ್ಲಿ ಒತ್ತಾಯಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿವಿಎ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾವೇರಿ: ಮೈಸೂರು ನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜ (ಕಾವಾ)ನಲ್ಲಿ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿ.ವಿ.ಎ) (ನಾಲ್ಕು ವರ್ಷದ ಎಂಟು ಸೆಮಿಸ್ಟರ್ ಎನ್.ಇ.ಪಿ. ಪದ್ದತಿ) ದೃಶ್ಯಕಲೆಯಲ್ಲಿ 2026-27 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ.ಪದವಿ ಪ್ರವೇಶಾತಿಗಾಗಿ ಆನ್‌ಲೈನ್ (ಖಿಖಿಇಖಖ) ಅರ್ಜಿ ಆಹ್ವಾನಿಸಲಾಗಿದೆ. ಈ ಪದವಿಯಲ್ಲಿ ಮೂರನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ.ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ htts://uucms.karnataka.gov.in ಅಥವಾ https://www.cavamysore.kamataka.gov.in ಅಂತರ್ಜಾಲದ ಮೂಲಕ ಮೇ 30ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆಯ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಾರ್ಯಾಲಯದ ಸಹಾಯವಾಣಿಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಬೆಟ್ಟಿಂಗ್ : ದೂರು ದಾಖಲು

ಹಾವೇರಿ: ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿಕೊಂಡಿದ್ದ ಇಬ್ಬರು ಯುವಕರ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ರಾಣೇಬೆನ್ನೂರು ದೊಡ್ಡಪೇಟೆ ನಿವಾಸಿಗಳಾದ ಬಸವರಾಜ ಕೊಳೂರ, ಪ್ರವೀಣ ಕನ್ನಪ್ಪಳವರ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆರೋಪಿತರು ರಾಣೇಬೆನ್ನೂರು ಎಪಿಎಂಸಿ ಯಾರ್ಡ್‌ನಲ್ಲಿ ನಿಂತುಕೊಂಡು ಐಪಿಎಲ್ ಬೆಟ್ಟಿಂಗ್ ಆಡುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿ ಕಾಲಕ್ಕೆ ಆರೋಪಿಗಳು ಸಿಕ್ಕಿ ಬಿದ್ದಿದ್ದು, ತನಿಖೆ ಕೈಗೊಂಡಿದ್ದಾರೆ. ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರೂಪಾಕ್ಷಪ್ಪ ನಿಧನ

ಬ್ಯಾಡಗಿ: ತಾಲೂಕಿನ ಬನ್ನಿಹಟ್ಟಿ ಗ್ರಾಮದ ವಿರೂಪಾಕ್ಷಪ್ಪ. ಬಿ.ಬಳ್ಳಾರಿ (76) ಜ್ಯೋತಿ ಹೋಟೆಲ್ ಮಾಲೀಕರು ಬ್ಯಾಡಗಿ ನಿಧನರಾದರು. ಮೃತರಿಗೆ ಪತ್ನಿ, ನಾಲ್ಕು ಜನ ಸಹೋದರರು, ಒಬ್ಬ ಸಹೋದರಿ ಹಾಗೂ ಮೂವರು ಪುತ್ರರು ಅಪಾರ ಬಂಧು ಬಳಗವಿದೆ.



ಸಂತಾಪ: ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕ ಸುರೇಶ್ ಗೌಡ ಪಾಟೀಲ್, ಶಾಸಕ ಬಸವರಾಜ್ ಶಿವಣ್ಣನವರ, ರಾಜ್ಯ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ ಹಾಗೂ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಪೂರ್ವ ಸಿದ್ಧತಾ ಸಭೆ | ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ

ಸಿಇಟಿ ಪರೀಕ್ಷೆ ಪಾರದರ್ಶಕವಾಗಿರಲಿ

ಹಾವೇರಿ : ಇಂಜನಿಯರಿಂಗ್, ಕೃಷಿ, ಪಶುಸಂಗೋಪನೆ ಪದವಿ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳಿಗೆ ಪ್ರವೇಶಾವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಏ.23 ಹಾಗೂ 24ರಂದು ಹಾವೇರಿ ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಯಾವುದೇ ಲೋಪವಾಗದಂತೆ ಪಾರದರ್ಶಕವಾಗಿ ಹಾಗೂ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಬೇಕು ಎಂದು ಪರೀಕ್ಷಾ ನಿಯೋಜಿತ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಾಮಾನ್ಯ ಪ್ರವೇಶ ಪರೀಕ್ಷೆ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರೀಕ್ಷಾ ಪ್ರಾಧಿಕಾರ ನಿಗದಿಪಡಿಸಿದ ವಸ್ತ್ರ ಸಂಹಿತೆ (ಡ್ರೆಸ್ ಕೋಡ್)ನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕು. ಉದ್ದ ತೋಳಿನ ಹಾಗೂ ತಲೆ ಮುಚ್ಚುವ ಉಡುಪು ಧರಿಸುವಂತಿಲ್ಲ, ಬೆಲ್ಟ್, ಟೋಪಿ ಹಾಗೂ ಯಾವುದೇ ಆಭರಣ ಧರಿಸುವಂತಿಲ್ಲ (ಮಂಗಳಸೂತ್ರ ಹೊರತುಪಡಿಸಿ). ಸಾಧಾ ಚಪ್ಪಲಿಗಳನ್ನು ಧರಿಸಿರಬೇಕು ಎಂದು ತಿಳಿಸಿದರು.

ಎಡಿಸಿ ಡಾ.ನಾಗರಾಜ್ ಮಾತನಾಡಿ, ಪರೀಕ್ಷೆಗೆ ನಿಯೋಜಿತ ಅಧಿಕಾರಿ ಹಾಗೂ ಸಿಬ್ಬಂದಿಗಳ ಮಕ್ಕಳು ಪರೀಕ್ಷೆ ಬರೆಯುತ್ತಿರಬಾರದು, ಈ ಬಗ್ಗೆ ಪರಿಶೀಲಿಸಿ.ಪರೀಕ್ಷೆಗೆ ನಿಯೋಜಿತ ಮೇಲ್ವಿಚಾರಕರು ನಿಗಧಿತ ಸಮಯಕ್ಕಿಂತ ಮೊದಲೆ ಹಾಜರಾಗಬೇಕು. ವಿಜ್ಞಾನ ವಿಷಯದ ಉಪನ್ಯಾಕರನ್ನು ಪರೀಕ್ಷಾ ಕಾರ್ಯಕ್ಕೆ ಬಳಸಿಕೊಳ್ಳುವಂತಿಲ್ಲ, ಪರೀಕ್ಷಾ ಕಾರ್ಯಕ್ಕೆ ನಿಯೋಜಿತ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆಯವರಿಗೆ ಪರೀಕ್ಷಾ ಕೇಂದ್ರಗಳಲ್ಲಿ ಪ್ರವೇಶವಿಲ್ಲ ಎಂದು ತಿಳಿಸಿದ ಅವರು, ಪ್ರಶ್ನೆ ಪತ್ರಿಕೆ ತೆರೆಯುವಾಗ ಹಾಗೂ ಉತ್ತರ ಪತ್ರಿಕೆ ಬಂಡಲ್ ಮಾಡುವಾಗ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ಕೈಗೊಳ್ಳುವಂತೆ ಸೂಚಿಸಿದರು.



4,651 ವಿದ್ಯಾರ್ಥಿಗಳ ನೋಂದಣಿ

ಹಾವೇರಿ ನಗರದಲ್ಲಿ 11 ಕೇಂದ್ರಗಳನ್ನು ತೆರೆಯಲಾಗಿದೆ. 4651 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿ ಕೊಂಡಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ಪತ್ರ, ಐಡಿ ಕಾರ್ಡ್ ಹಾಗೂ ಬಾಲ್‌ಪೆನ್ ಮಾತ್ರ ತರಬೇಕು. ಏ.23ರ ಗುರುವಾರ ಬೆಳಿಗ್ಗೆ 10.30ರಿಂದ 11.50ರವರೆಗೆ ಭೌತಶಾಸ್ತ್ರ ಹಾಗೂ ಮಧ್ಯಾಹ್ನ 2.30ರಿಂದ 3.50ರವರೆಗೆ ರಸಾಯನಶಾಸ್ತ್ರ, ಏ.24ರ ಶುಕ್ರವಾರ 10.30ರಿಂದ 11.50ರವರೆಗೆ ಗಣಿತಶಾಸ್ತ್ರ ಹಾಗೂ ಮಧ್ಯಾಹ್ನ 2.30ರಿಂದ 3.50ರವರೆಗೆ ಜೀವಶಾಸ್ತ್ರ ವಿಷಯ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷಾ ಕೇಂದ್ರಗಳು

ಹಾವೇರಿ ನಗರದ ಗುದ್ಲೆಪ್ಪ ಹಳ್ಳಿಕೇರಿ ಪಿಯು ಕಾಲೇಜು, ಎಸ್.ಎಂ.ಎಸ್. ಪಿಯು ಕಾಲೇಜು, ಎಸ್‌ಜೆ.ಎಂ. ಪಿಯು ಕಾಲೇಜು, ಸರ್ಕಾರಿ ಪಿಯು ಕಾಲೇಜು, ಬಾಲಕಿಯರ ಸರ್ಕಾರಿ ಪಿಯು ಕಾಲೇಜು, ಲಯನ್ಸ್ ಪಿಯು ಕಾಲೇಜು, ಎಂ.ಆರ್.ಎಂ. ಪಿಯು ಕಾಲೇಜು, ಎಸ್.ಜಿ.ಎಸ್.ಎಲ್‌ಪಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸೇಂಟ ಆನ್ಸ್ ಪಿಯು ಕಾಲೇಜು, ರಾಚೋಟೇಶ್ವರ ಪಿಯು ಕಾಮರ್ಸ್ ಕಾಲೇಜು, ಎಸ್.ಎಸ್.ಮಹಿಳಾ ಡಿಗ್ರಿ ಕಾಲೇಜ್‌ನಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಫ್ರಿಸ್ಕಿಂಗ್ : ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್, ಫೇಸ್ ರೆಕಗ್ನಿಶನ್ ಮಾಡಲಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮೊದಲು ಅವರ ತಪಾಸಣೆ ನಡೆಸಬೇಕು. ಒಂದು ವೇಳೆ ಬೇರೆ ಪರೀಕ್ಷಾ ಕೇಂದ್ರ ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಕೇಂದ್ರಗಳಿಗೆ ಬಂದರೆ ಅವರಿಗೆ ಸರಿಯಾಗಿ ಮಾರ್ಗದರ್ಶನ ನೀಡಿ ಅವರ ಪರೀಕ್ಷಾ ಕೇಂದ್ರದ ವಿಳಾಸ ತಿಳಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಎಎಸ್ಪಿ ಲಕ್ಷ್ಮಣ ಶಿರಕೋಳ, ಜಿ.ಪಂ. ಯೋಜನಾ ನಿರ್ದೇಶಕ ಎಂ.ವೈ.ಮೀಶೆ, ಜಿಲ್ಲಾಮಟ್ಟದ ಅಧಿಕಾರಿಗಳುಇ, ತಹಶೀಲ್ದಾರರು, ಬಿಇಒಗಳು, ತಾ.ಪಂ. ಇಒಗಳು, ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ಪ್ರಾಚಾರ್ಯರು ಉಪಸ್ಥಿತರಿದ್ದರು.

ಕಾಮಗಾರಿಗೆ ಶಾಸಕ ಭೂಮಿಪೂಜೆ

ಬ್ಯಾಡಗಿ: ಗ್ರಾಮೀಣ ಭಾಗದಲ್ಲಿ ರಸ್ತೆ ಅಭಿವೃದ್ಧಿ, ದೇವಸ್ಥಾನಗಳ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗಿದ್ದು, ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಯೇ ನನ್ನ ಬದ್ಧತೆ. ಗ್ರಾಮಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ತಾಲೂಕಿನ ಬನ್ನಿಹಟ್ಟಿ ಗ್ರಾಪಂ ವ್ಯಾಪ್ತಿಯ ರಾಮ ಗುಂಡೆನಹಳ್ಳಿ ಗ್ರಾಮದಲ್ಲಿ ಮಾನ್ಯ ಮುಖ್ಯಮಂತ್ರಿ ಮೂಲ ಸೌಕರ್ಯ ಯೋಜನೆಯಡಿ ಬ್ಯಾಡಗಿ ರಸ್ತೆಯಿಂದ ಬೀರನಗೌಡ ಪಾಟೀಲ ಇವರ ಮನೆಯಿಂದ ಬೈಲ ಬಸವೇಶ್ವರ ದೇವಸ್ಥಾನದವರೆಗೆ ಮೆಟಲಿಂಗ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಮತ್ತು ದುರ್ಗಾದೇವಿ ದೇವಸ್ಥಾನ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿಗೆ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿ 30 ಲಕ್ಷ ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ನಿಡಲಾಗಿದ್ದು, ಮೊದಲ ಹಂತದಲ್ಲಿ ದೇವಸ್ಥಾನಕ್ಕೆ 15 ಬಿಡುಗಡೆ ಮಾಡಿದೆ ಇನ್ನೂ 10,ಲಕ್ಷ ಬಿಡುಗಡೆ ಮಾಡಲಾಗುವುದು. ಎಲ್ಲ ಕಾಮಗಾರಿಗಳು ನಿಗದಿತ ಸಮಯದಲ್ಲಿ ಮುಗಿಯಬೇಕು ಕಾಮಗಾರಿ ಗುಣಮಟ್ಟದ್ದಾಗಿರಬೇಕು ಎಂದರು.

ಈ ವೇಳೆ ಉಮೇಶ್ ಕರಿಗಾರ್ ಮಾತನಾಡಿ, ದೇವಸ್ಥಾನದ ಅಭಿವೃದ್ಧಿಗಾಗಿ ನನ್ನ ಸ್ವಂತ ಹಣದಲ್ಲಿ 10 ಲಕ್ಷ ರೂಪಾಯಿಯನ್ನು ಹಂತ ಹಂತವಾಗಿ ನೀಡುತ್ತೇನೆ ಎಂದರು ಮತ್ತು ಈಗಾಗಲೇ ಜಿಲ್ಲೆಯಲ್ಲಿ ಹಲವಾರು ನೂರಾರು ದೇವಸ್ಥಾನಗಳಿಗೆ ಅನುದಾನವನ್ನು ನನ್ನ ದುಡಿಮೆಯಿಂದಲೇ ನೀಡಲಾಗಿದೆ ಎಂದು ಹೇಳಿದರು.

ತಾಲೂಕು ಅಧ್ಯಕ್ಷ ದಾನಪ್ಪ ಚೂರಿ, ಚನ್ನಬಸಪ್ಪ ಹುಲ್ಲತ್ತಿ, ಚಿಕ್ಕಪ್ಪ ಹಾದಿಮನಿ, ಡಿ.ಎಚ್.ಬುದ್ದನಗೌಡ, ಗುತ್ತಿಗೆದಾರದ ನಾಗರಾಜ, ಶಿವರಾಜ್ ಹಾಗೂ ಗ್ರಾಮದ ಎಲ್ಲ ಹಿರಿಯರು ಉಪಸ್ಥಿತರಿದ್ದರು.



ಶಂಕರಾಚಾರ್ಯರ ಜಯಂತಿ ಆಚರಣೆ

ಹಾನಗಲ್ಲ: ಅದ್ವೈತ ಸಿದ್ಧಾಂತದ ಪ್ರತಿಪಾದಕ, ಶ್ರೇಷ್ಠ ದಾರ್ಶನಿಕ ಆದಿ ಶಂಕರಾಚಾರ್ಯರು ಧಾರ್ಮಿಕ ಪರಂಪರೆಯ ಧ್ರುವತಾರೆ. ಅಜ್ಞಾನವೇ ದುಃಖದ ಮೂಲ, ಜ್ಞಾನವೇ ಮುಕ್ತಿಯ ಮಾರ್ಗ ಎಂದು ಸಾರಿದ ಮಹಾನ್ ಪುರುಷ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.

ಮಂಗಳವಾರ ಇಲ್ಲಿನ ತಮ್ಮ ಜನಸಂಪರ್ಕ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಶಂಕರಾಚಾರ್ಯ ಜಯಂತಿಯಲ್ಲಿ ಭಾಗವಹಿಸಿ, ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಸರ್ವರಲ್ಲಿಯೂ ಏಕತೆ ಬಲಪಡಿಸುವಲ್ಲಿ ಶಂಕರಾಚಾರ್ಯರು ಶ್ರಮ ವಹಿಸಿದರು. ಸರಳ ಜೀವನ, ಉನ್ನತ ಚಿಂತನೆ, ಭಕ್ತಿ ಮತ್ತು ಜ್ಞಾನದ ಮಹತ್ವ ಸಾರಿದರು. ಶಂಕರಾಚಾರ್ಯರ ಆದರ್ಶ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜ್ಞಾನ ಮತ್ತು ಧರ್ಮದ ಮಾರ್ಗದಲ್ಲಿ ನಡೆದು ಸಮಾಜ ಉತ್ತಮಗೊಳಿಸಲು ಸಂಕಲ್ಪಿಸಿದರೆ ಜಯಂತಿಗೆ ಅರ್ಥ ಬರಲಿದೆ ಎಂದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಪ್ರಮುಖರಾದ ರವಿ ದೇಶಪಾಂಡೆ, ಗೀತಾ ಪೂಜಾರ, ಅನಿತಾ ಶಿವೂರ,ಜಯಮ್ಮಮಳೆಣ್ಣನವರ,ಶಂಶಿಯಾ ಬಾಳೂರ, ಮುಟ್ಟಕ್ಕ ತಳವಾರ, ಪುಟ್ಟಪ್ಪ ನರೇಗಲ್, ಪಾಂಡುರಂಗ ಪಾರಗಾಂವಕರ, ಅನಂತಗೌಡ ಪಾಟೀಲ, ರವಿ ಪುರೋಹಿತ, ಬಾಬಾಜಾನ ಕೊಂಡವಾಡಿ, ವಿರುಪಾಕ್ಷಪ್ಪ ತಳವಾರ, ಬಸವಣ್ಣೆಪ್ಪ, ನಾಗರಾಜ ಗಾಜಿಪುರ, ಹನುಮಂತ ಹುರುಳಿಕುಪ್ಪಿ, ಸಂಜಯ ಬೇಂದ್ರೆ, ಈರಣಗೌಡ ಪಾಟೀಲ, ಇರ್ಫಾನ್ ಮಿಠಾಯಿಗಾರ, ನೀಲವ್ವ ಹರಿಜನ, ಪ್ರೇಮಾ ಪೂಜಾರ, ಪ್ರೇಮಾ ಹರಿಜನ, ಶಕುಂತಲಾ ತಳವಾರ, ಮಮತಾ ಲಮಾಣಿ, ಮಂಜುಳಾ ಈಳಿಗೇರ, ರೇಣುಕಾ ಕುರುಬರ, ಸರಸ್ವತಿ ಪಾಟೀಲ, ಲಕ್ಷ್ಮೀ ಕಲಾಲ, ರೇಣುಕಾ ಚಾಕಾಪೂರ, ಅಫ್ರೋಜಾ ಕನವಳ್ಳಿ ಇತರರಿದ್ದರು.



ನಾಡು ಕಂಡ ಅಪ್ರತಿಮ ಅಧ್ಯಾತ್ಮ ಪ್ರಬೋಧಕ ಶಂಕರಾಚಾರ್ಯ

ಹಾನಗಲ್ಲ: ಜಗತ್ತಿಗೆ ಧರ್ಮ ಶಾಸ್ತ್ರದ ಮೂಲಕ ಅತ್ಯುತ್ತಮ ಜೀವನ ಸಂದೇಶಗಳನ್ನು ಸಾರಿದ ಆದಿ ಶಂಕರಾಚಾರ್ಯರು ನಾಡು ಕಂಡ ಅಪ್ರತಿಮ ಅಧ್ಯಾತ್ಮ ಪ್ರಬೋಧಕರು ಎಂದು ತಾಲೂಕು ತಹಶೀಲ್ದಾರ್ ಎಸ್.ರೇಣುಕಾ ಹೇಳಿದರು.

ಮಂಗಳವಾರ ಇಲ್ಲಿನ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಆಯೋಜಿಸಿದ ಆದಿ ಶಂಕರಾಚಾರ್ಯರ ಜಯಂತಿಗೆ ಚಾಲನೆ ನೀಡಿ ಮಾತನಾಡಿದ ಅವರು, ಜಗತ್ತಿಗೆ ಮೌಲ್ಯಗಳನ್ನು ಸಾರಿದ ವೇದೋಪನಿಷತ್ತುಗಳು ಸಾರ್ವಕಾಲಿಕ ಸತ್ಯಗಳು. ಮೂಲ ವೇದಗಳ ಸಾರ ಜಗತ್ತಿಗೆ ಪರಿಚಯವಾಗಬೇಕಾಗಿದೆ. ಇದನ್ನೇ ಆಧರಿಸಿದ ಸ್ವಾಮಿ ವಿವೇಕಾನಂದರ ಭಾಷಣ ಚಿಕ್ಯಾಗೋ ಪಟ್ಟಣದಲ್ಲಿ ಇಡೀ ಜಗತ್ತಿನ ಗಮನ ಸೆಳೆದಿದೆ. ಬಹುತೇಕ ಮಹತ್ಮರು ಇಂತಹ ಧಾರ್ಮಿಕ ಸಂದೇಶಗಳ ಮೂಲಕ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ ಎಂದರು.

ವಿಪ್ರ ಸಮುದಾಯದ ಪ್ರಮುಖ ಘನಶ್ಯಾಮ ದೇಶಪಾಂಡೆ ಮಾತನಾಡಿ, ವಿಶ್ವಕ್ಕೆ ಅತ್ಯಂತ ಅಮೂಲ್ಯ ಸಂದೇಶಗಳನ್ನು ನೀಡಿದ ಆದಿ ಶಂಕರಾಚಾರ್ಯರು ಜಗಕೆ ನೆಮ್ಮದಿಯ ಬದುಕಿನ ಸೂತ್ರ ನೀಡಿದ್ದಾರೆ. ಸನಾತನ ಧರ್ಮ ಸಂದೇಶಗಳ ಉಳಿವಿಗೆ 4 ಪೀಠಗಳನ್ನು ಸ್ಥಾಪಿಸಿ ಧರ್ಮ ಪ್ರಚಾರಕ್ಕೆ ಅವಕಾಶ ಮಾಡಿಕೊಟ್ಟರು. ಮಹಾತ್ಮರ ದಿನಾಚರಣೆ ಅವರ ಆದರ್ಶಗಳನ್ನು ಪರಿಪಾಲಿಸಲು ಒಂದು ಚೇತನ ಶಕ್ತಿಯಾಗಬೇಕು ಎಂದರು.

ಪಂ.ಗಂಗಾಧರಶಾಸ್ತ್ರಿ ಕಾಶೀಕರ ಆಚಾರ್ಯ ಶಂಕರರ ಕುರಿತು ಉಪನ್ಯಾಸ ನೀಡಿದರು.

ವಿವಿಧ ಇಲಾಖೆಗಳ ಅಧಿಕಾರಿಗಳಾದ ಗಂಗಾ ಹಿರೇಮಠ, ವೀರಭದ್ರಸ್ವಾಮಿ, ಸಿ.ಎಂ. ರೂಢಗಿ, ಶಂಕರ ಸೇವಾ ಸಮಿತಿ ಅಧ್ಯಕ್ಷ ರವೀಂದ್ರ ದೇಶಪಾಂಡೆ, ಬ್ರಾಹ್ಮಣ ಮಹಾಸಭಾ ಕಾರ್ಯದರ್ಶಿ ರವಿ ಪೋತದಾರ, ವಿಪ್ರ ಸಮಾಜದ ಪ್ರಮುಖರಾದ ಪಿ.ಕೆ.ಪಾರಗಾವಂಕರ, ಮುರಳೀಧರ ಕಾಮನಹಳ್ಳಿ, ಮನೋಜ್ ಸರಾಫ್, ಗಿರೀಶ ದೇಶಪಾಂಡೆ, ಎಚ್.ವಿ.ದೇಸಾಯಿ, ಪಾರ್ವತಿಬಾಯಿ ಕಾಶೀಕರ, ವಿದ್ಯಾ ಕಾಶೀಕರ ಇದ್ದರು.



ಅಪರಿಚಿತ ಮಹಿಳೆ ಶವ ಪತ್ತೆ

ಹಾವೇರಿ: ಹುಬ್ಬಳ್ಳಿ ರೈಲು ನಿಲ್ದಾಣದ ವೇದಿಕೆ-8ರಲ್ಲಿ ರೈಲುಗಾಡಿ ಸಂಖ್ಯೆ 22697ರಲ್ಲಿ 60ರಿಂದ 95ವರ್ಷದ ಮಹಿಳೆಯ ಶವ ಪತ್ತೆಯಾಗಿದ್ದು, ಮೃತ ಮಹಿಳೆ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ, ಮೃತ ಮಹಿಳೆ 5.1 ಅಡಿ ಎತ್ತರ, ಗೋದಿ ಮೈಬಣ್ಣ ಹೊಂದಿದ್ದು, ಹಣೆ ಮೇಲೆ ಹಾಗೂ ಗದ್ದದ ಕೆಳಗೆ ಹಚ್ಚೆ ಗುರುತು ಇರುತ್ತದೆ. ಗಿಳಿ ಬಣ್ಣದ ಸೀರೆ, ನೀಲಿ ಬಿಳಿ ಬಣ್ಣದ ಶ್ವೆಟರ್, ಕೆಂಪು ಬಣ್ಣದ ಲಂಗಾ, ಬಂಗಾರ ಬಣ್ಣದ ಮೂಗುಬಟ್ಟು ಧರಿಸಿದ್ದಾಳೆ. ಮೃತ ಮಹಿಳೆಯ ವಾರಸುದಾರರು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಕಣ್ಮರೆ

ಹಾವೇರಿ: ವ್ಯಕ್ತಿಯೊಬ್ಬರು ಮನೆಯಿಂದ ಯಾರಿಗೂ ಹೇಳದೆ ಕೇಳದೆ ಹೋದವರು ಮನೆಗೆ ಹಿಂದಿರುಗದೇ ಕಾಣೆಯಾದ ಘಟನೆ ಶಿಗ್ಗಾವಿ ತಾಲೂಕು ನೀರಲಗಿ ಗ್ರಾಮದಲ್ಲಿ ನಡೆದಿದೆ. ಚನ್ನಬಸಪ್ಪ ಅರುಣ ಹುಲಿಗೆಮ್ಮನವರ (30) ಕಾಣೆಯಾದ ವ್ಯಕ್ತಿ. ಈತ ಚಾಲಕ ವೃತ್ತಿ ಮಾಡಿಕೊಂಡಿದ್ದು, ಮನೆಯಿಂದ ಯಾರಿಗೂ ಹೇಳದೆ ಕೇಳದೆ ಹೋದವರು ವಾಪಾಸ ಬಾರದೆ ಕಾಣೆಯಾಗಿದ್ದಾರೆ. ಕಾಣೆಯಾದ ವ್ಯಕ್ತಿ ಕನ್ನಡ, ಹಿಂದಿ ಭಾಷೆ ಮಾತನಾಡುತ್ತಾರೆ. 5.5 ಅಡಿ ಎತ್ತರ, ಸಾಧಾರಣ ಮೈಕಟ್ಟು ಹೊಂದಿದ್ದಾರೆ. ಕೋಲು ಮುಖ, ಗೋದಿಗೆಂಪು ಮೈಬಣ್ಣ ಹೊಂದಿದ್ದು, ಮನೆಯಿಂದ ಹೋಗುವಾಗ ಕಪ್ಪು ಹಸಿರು ಬಣ್ಣದ ಉದ್ದ ತೋಳಿನ ಶರ್ಟ್, ಬೂದು ಬಣ್ಣದ ಪ್ಯಾಂಟ್ ಧರಿಸಿದ್ದಾರೆ ಎಂದು ಆತನ ಪತ್ನಿ ಲಕ್ಷ್ಮೀ ಹುಲಿಗೆಮ್ಮನವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ತಡಸ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವಣ್ಣನವರ ಚಿಂತನೆ ಧರ್ಮದ ನಡೆಗೆ ಮುನ್ನುಡಿ

ಹಾನಗಲ್ಲ: ಜಾತಿ ಮತ ಪಂಥದ ಎಲ್ಲೆ ಮೀರಿದ ಕಾಯಕದ ಮೂಲಕ ಎಲ್ಲರನ್ನೂ ಒಂದಾಗಿಸಿದ ಬಸವಣ್ಣನವರ ಚಿಂತನೆಗಳು ಮನುಷ್ಯನಿಗೆ ಮೌಲ್ಯ ಧರ್ಮದ ನಡೆ ನುಡಿಯನ್ನು ಕಲಿಸಿವೆ ಎಂದು ಶಾಸಕ ಶ್ರೀನಿವಾಸ ಮಾನೆ ತಿಳಿಸಿದರು.

ಇಲ್ಲಿನ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಆಯೋಜಿಸಿದ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಅನುಭವ ಮಂಟಪ ವಿಶ್ವದಲ್ಲೇ ಆಡಳಿತ ವ್ಯವಸ್ಥೆಗೆ ಮಾದರಿಯಾದುದು. ಸಾಂಸ್ಕೃತಿಕ ನಾಯಕ ಬಸವಣ್ಣ ನೈತಿಕ ಸಮಾಜ ಕಟ್ಟಲು ಪಟ್ಟ ಕಷ್ಟದ ಅರಿವು ಎಲ್ಲರಿಗೂ ಬೇಕು. ಅವರ ವಿಚಾರ ಆಚಾರವಾಗಿ ಮನುಷ್ಯನಲ್ಲಿ ಜಾಗೃತವಾಗಬೇಕು ಎಂದರು.

ತಾಲೂಕು ತಹಶೀಲ್ದಾರ್ ಎಸ್. ರೇಣುಕಾ ಅಧ್ಯಕ್ಷತೆವಹಿಸಿ ಮಾತನಾಡಿ, ಸಮಾನತೆಗಾಗಿ ಎಲ್ಲ ಕಷ್ಟಗಳನ್ನು ತಡೆದು ಲೋಕ ಕಲ್ಯಾಣದ ಚಿಂತನೆಗಳನ್ನು ಕಾರ್ಯ ರೂಪಕ್ಕೆ ತಂದ ವಿಶ್ವಗುರು ಬಸವಣ್ಣನವರ ಜಾತ್ಯಾತೀತತೆಯನ್ನು ಪ್ರತಿಪಾದಿಸಿದರು ಮಾತ್ರವಲ್ಲ, ಅದನ್ನು ಎಲ್ಲರ ಮನದ ಬತ್ತಿ ಬೆಳೆದು ತಾವೂ ಕೂಡ ಪಾಲಿಸಿದರು ಎಂದರು.



ನ್ಯಾಯವಾದಿ ಎಸ್.ಎಂ.ಕೋತಂಬರಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಾರುತಿ ಶಿಡ್ಲಾಪೂರ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿಜಯಕುಮಾರ ದೊಡ್ಡಮನಿ, ಶಿವಕುಮಾರ ದೇಶಮುಖ, ಹೊನ್ನಪ್ಪ ಮಾತನಾಡಿದರು.

ಗಣ್ಯರಾದ ಬಸಣ್ಣ ಎಲಿ, ರವಿಕಿರಣ ಪಾಟೀಲ, ಎಸ್.ವಿ.ಹೊಸಮನಿ, ಜಗದೀಶ ಕೊಂಡೋಜಿ, ರಾಜಶೇಖರ ಹಲಸೂರ, ರಾಜು ಗುಡಿ, ಮಾಲತೇಶ ಸೊಪ್ಪಿನ, ಮಮತಾ ಆರೆಗೊಪ್ಪ, ಮತೀನ ಶಿರಬಡಗಿ, ಹನುಮಂತಪ್ಪ ಮರಗಡಿ, ಎಂ.ಎಂ. ಮೈದೂರ, ಟಾಕನಗೌಡ ಪಾಟೀಲ, ಉಮೇಶ ಗೌಳಿ, ಯಾಸಿರ್ ಅರಾಫತ್ ಮಕಾನದಾರ, ರಾಜು ಶಿರಪಂಥಿ ಪಾಲ್ಗೊಂಡಿದ್ದರು.

ಶ್ರೀ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ವಚನಗಳನ್ನು ಹಾಡಿದರು. ಸಿದ್ದು ಗೌರಣ್ಣನವರ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಇಲ್ಲಿನ ಶಾಸಕ ಶ್ರೀನಿವಾಸ ಮಾನೆ ಅವರ ಆಡಳಿತ ಕಚೇರಿಯಲ್ಲಿಯೂ ಜಗಜ್ಯೋತಿ ಬಸವಣ್ಣನವರ ಭಾವಚಿತ್ರಕ್ಕೆ ಶಾಸಕ ಶ್ರೀನಿವಾಸ ಮಾನೆ ಪೂಜೆ ಸಲ್ಲಿಸಿದರು.

ಇಂದಿನಿಂದ ಅಡವಿ ಶ್ರೀಗಳ ಜಾತ್ರಾ ಮಹೋತ್ಸವ

ಹಾನಗಲ್ಲ: ಬಾಳೂರು ಅಡವಿಸ್ವಾಮಿಮಠದ 12ನೇ ಪೀಠಾಧಿಕಾರಿಯಾಗಿ ಗುರುಪ್ರಸಾದ ದೇವರ ನಿರಂಜನ ಚರ ಪಟ್ಟಾಧಿಕಾರ ಹಾಗೂ ಅಡವಿ ಶ್ರೀಗಳ ಜಾತ್ರಾ ಮಹೋತ್ಸವ ಏ.23ರಿಂದ ಏ.30 ರವರೆಗೆ ನಡೆಯಲಿದೆ ಎಂದು ಅಕ್ಕಿಆಲೂರು ಚನ್ನವೀರೇಶ್ವರ ವಿರಕ್ತಮಠದ ಶಿವಬಸವ ಶ್ರೀಗಳು ಹೇಳಿದರು.

ಹಾನಗಲ್ಲ ತಾಲೂಕಿನ ಬಾಳೂರು ಅಡವಿಸ್ವಾಮಿ ಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ. 23ರಂದು ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಶ್ರೀಗಳು, ಶಿವಮೊಗ್ಗ ಜಿಲ್ಲೆ ಆನಂದಪುರ ಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಶ್ರೀಗಳು ಸಾನಿಧ್ಯದಲ್ಲಿ ಸಂಜೆ 7 ಗಂಟೆಗೆ ಆಧ್ಯಾತ್ಮ ಪ್ರವಚನ ಪ್ರಾರಂಭವಾಗುವುದು. ಡಾ.ಚನ್ನರುದ್ರಮುನಿ ಶಿವಾಚಾರ್ಯರಿಂದ ಪ್ರವಚನ ಮಾಡುವರು.

ಏ.27ರಂದು ಬೆಳಗ್ಗೆ 8 ಗಂಟೆಗೆ ಲಿಂಗದೀಕ್ಷೆ ಅಯ್ಯಾಚಾರ ಕಾರ್ಯಕ್ರಮಗಳು ಕೂಡಲದ ಗುರುನಂಜೇಶ್ವರ ಮಹಾಸ್ವಾಮಿಗಳ ನೇತೃತ್ವದಲ್ಲಿ ನಡೆಯುವವು. ಏ.29ರಂದು ಬೆಳಗ್ಗೆ 8 ಗಂಟೆಗೆ ತಾಯಂದಿರಿಗೆ ಉಡಿ ತುಂಬುವ ಕಾರ್ಯಕ್ರಮಗಳು ನಡೆಯುವವು. ಸಂಜೆ 6 ಗಂಟೆಗೆ ಶಿರಹಟ್ಟಿ ಫಕೀರೇಶ್ವರ ಸಂಸ್ಥಾನ ಮಠದ ಉತ್ತರಾಧಿಕಾರಿ ಜಗದ್ಗುರು ಫಕ್ಕೀರದಿಂಗಾಲೇಶ್ವರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಪ್ರವಚನ ಮಂಗಲ ನಡೆಯಲಿದೆ. ಪಟ್ಟಾಧಿಕಾರ ಮಹೋತ್ಸವ ಸಮಿತಿ ಅಧ್ಯಕ್ಷ ರಾಜಣ್ಣ ಅಂಕಸಖಾನಿ ಅವರು ಅಧ್ಯಕ್ಷತೆವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು.

ಏ.30ರಂದು ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಶ್ರೀಗಳ ಸಾನಿಧ್ಯದಲ್ಲಿ ಗುರುಪ್ರಸಾದ ದೇವರಿಗೆ ಷಟಸ್ಥಲ ಬ್ರಹ್ಮೋಪದೇಶ, ಚಿನ್ಮಯಾನುಗ್ರಹ ನಡೆದು ಶ್ರೀಗುರುಪ್ರಸಾದ ದೇಶಿಕರೆಂದು ಅಭಿಧಾನ, ಹಾವೇರಿ ಹುಕ್ಕೇರಿ ಮಠದ ಡಾ.ಸದಾಶಿವ ಶ್ರೀಗಳವರಿಂದ ಪ್ರಸಾದಿ ಸ್ಥಳ ದೀಕ್ಷೆ ನಡೆಯುವುದು. 10 ಗಂಟೆಗೆ ಶೂನ್ಯ ಸಂಹಾಸನಾರೋಹಣ, ಸಮಾಜ ಸೇವಾ ದೀಕ್ಷೆ ಕಾರ್ಯಕ್ರಮ ನಡೆಯಲಿದ್ದು, ಸವಣೂರು ಬಾಳೂರು ಮಠದ ಪೀಠಾಧಿಪತಿ ಕುಮಾರಮಹಾಸ್ವಾಮಿಗಳು ಅಧ್ಯಕ್ಷತೆವಹಿಸುವರು. ಜನಪ್ರತಿನಿಧಿಗಳು, ಗಣ್ಯರು, ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಳ್ಳುವರು. ಸಂಜೆ 4 ಗಂಟೆಗೆ ಶ್ರೀ ಅಡವಿಸ್ವಾಮಿಗಳ ಮಹಾರಥೋತ್ಸವ ಸಲಕ ವಾದ್ಯ ವೈಭವಗಳಿಂದ ನಡೆಯುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸವಣೂರು ಬಾಳೂರು ಮಠದ ಪೀಠಾಧಿಪತಿ ಕುಮಾರ ಶ್ರೀಗಳು, ಪಟ್ಟಾಧಿಕಾರ ಸಮಿತಿ ಅಧ್ಯಕ್ಷ ರಾಜಣ್ಣ ಅಂಕಸಖಾನಿ, ಕಾರ್ಯದರ್ಶಿ ಶಿವಕುಮಾರ ದೇಶಮುಖ, ರಾಜಪ್ಪ ಮಳಗಿ, ಸದಾನಂದ ಮೆಳ್ಳಳ್ಳಿ, ದೇವೇಂದ್ರಪ್ಪ ಬಕ್ಕಣ್ಣನವರ, ಉದಯ ವಿರುಪಣ್ಣನವರ ಇದ್ದರು.



ಕಿರುಸುದ್ದಿ

ಅಧ್ಯಕ್ಷರ ಜಿಲ್ಲಾ ಪ್ರವಾಸ

◆**ಬೆಳಗಾವಿ:** ರಾಜ್ಯ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ.ಎಲ್ ಅವರು ಏ.27 ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಸುವರ್ಣ ವಿಧಾನ ಸೌಧ ಕೊಠಡಿ ಸಂಖ್ಯೆ 354ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಘ ಸಂಸ್ಥೆ ಪದಾಧಿಕಾರಿಗಳೊಂದಿಗೆ ಸಭೆ ಜರುಗಿಸುವರು. ಮಧ್ಯಾಹ್ನ 2.15 ಗಂಟೆಗೆ ಪತ್ರಿಕಾಗೋಷ್ಠಿ ಜರುಗಿಸುವರು. ಮಧ್ಯಾಹ್ನ 3 ಗಂಟೆಯಿಂದ ಜಿಲ್ಲಾ ಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗೊಂದಿಗೆ ಪ್ರಗತಿ ಪರಿಶೀಲನಾ ಸಭೆ ಜರುಗಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಉಚಿತ ಬೇಸಿಗೆ ಕ್ರೀಡಾ ತರಬೇತಿ ಶಿಬಿರ

◆**ಬೆಳಗಾವಿ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಳಗಾವಿ ವತಿಯಿಂದ ಜಿಲ್ಲೆಯ ಬಾಲಕ/ಬಾಲಕಿಯರಿಗೆ ಕುಸ್ತಿ, ಜುಡೋ, ಬಾಕ್ಸಿಂಗ್, ಬಾಸ್ಕೆಟ್ ಬಾಲ್, ವಾಲಿಬಾಲ್, ವೇಟ್ಲಿಫ್ಟಿಂಗ್ ಹಾಗೂ ಅಥ್ಲೆಟಿಕ್ಸ್ ಕ್ರೀಡೆಗಳಿಗೆ ಉಚಿತ ಬೇಸಿಗೆ ಕ್ರೀಡಾ ತರಬೇತಿ ಶಿಬಿರ ಆಯೋಜಿಸಲಾಗಿದೆ.

ಆಸಕ್ತ ಬಾಲಕ, ಬಾಲಕಿಯರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕರ ಕಚೇರಿ ಜಿಲ್ಲಾ ಕ್ರೀಡಾಂಗಣ, ಬೆಳಗಾವಿ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಳ್ಳಬಹುದಾಗಿದೆ. ಬೆಳಗಾವಿ ಜಿಲ್ಲೆಯ ಆಸಕ್ತ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆಯುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.24ರಂದು ಡಾ.ರಾಜಕುಮಾರ ಜನ್ಮ ದಿನಾಚರಣೆ

◆**ಬೆಳಗಾವಿ:** ಜಿಲ್ಲಾಡಳಿತ, ಬೆಳಗಾವಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ಏ.24 ರಂದು ಬೆಳಗ್ಗೆ 10 ಗಂಟೆಗೆ ಬೆಳಗಾವಿ ವಾರ್ತಾ ಭವನದಲ್ಲಿ ಡಾ.ರಾಜ್ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಚಿವರಾದ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕ ಆಸೀಫ್ ಸೇಠ್ ಅಧ್ಯಕ್ಷತೆಯನ್ನು ವಹಿಸಲಿದ್ದು, ಅಶೋಕ ಪಟ್ಟಣ, ಪ್ರಕಾಶ ಹುಕ್ಕೇರಿ, ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ್ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಬೆಳಗಾವಿಯ ಹಿರಿಯ ನಾಟಕಕಾರರು ಹಾಗೂ ಸಾಹಿತಿಗಳಾದ ಡಿ. ಎಸ್. ಚೌಗಲೆ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಗೋಕಾಕ ಗಂಧರ್ವ ಲಹರಿ ಮೆಲೋಡಿಸ್ ಆರ್ಕೆಸ್ಟ್ರಾ ತಂಡದವರು ಡಾ. ರಾಜ ಕುಮಾರ್ ಗೀತೆಗಳನ್ನು ಪ್ರಸ್ತುತಿಸುವರು.

ಕೆ-ಸೆಟ್ ಮತ್ತು ಯುಜಿಸಿ-ನೆಟ್ ಪರೀಕ್ಷೆಗಳಿಗೆ ತರಬೇತಿ

◆**ಬೆಳಗಾವಿ** : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ರಾಜ್ಯಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ-ಸೆಟ್) ಹಾಗೂ ನವದೆಹಲಿಯ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ-ನೆಟ್) ಮತ್ತು ಕಿರಿಯ ಶಿಷ್ಯವೇತನ ಸಂಶೋಧನ ಸಹಾಯಕರ (ಜೆಆರ್ ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನೀಡಲು ನಿರ್ಧರಿಸಲಾಗಿರುತ್ತದೆ. ಆಸಕ್ತರು ಏ.24 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವ ಪ್ರೊ ನವೀನಕುಮಾರ್ ಎಸ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೇಸರಗಿ: ಸಮೀಪದ ಮತ್ತಿಕೊಪ್ಪ ಗ್ರಾಮದ ಬಸ್ ನಿಲ್ದಾಣದ ಹತ್ತಿರ ನಿರ್ಮಿಸಲಾಗಿರುವ ಜಗಜ್ಯೋತಿ ಶ್ರೀ ಬಸವೇಶ್ವರ ಮೂರ್ತಿಯನ್ನು ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಅವರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಗಿರಿಗೌಡ ಪಾಟೀಲ, ಸೋಮಪ್ಪ ತಕ್ಕುನವರ, ನಾಗರಾಜ್ ದೇಯಣ್ಣವರ, ಉದಯಗೌಡ ಪಾಟೀಲ,ಬಸವರಾಜ ಬ ದೇಯಣ್ಣವರ, ಬಸವಣ್ಣೆಪ್ಪ ಶಿಂತ್ರಿ, ಬಾಬು ಅಂತಣವರ ಪ್ರಕಾಶ ಮೋಹರೆ, ಸೋಮಪ್ಪ ದೇಯಣ್ಣವರ, ಶಶಿಧರ ಪಾಟೀಲ, ಅಡಿವಪ್ಪ ದೇಯನ್ನವರ, ಮಹಾಂತೇಶ ಪಾಟೀಲ ಸೇರಿದಂತೆ ಗ್ರಾಮದ ಮುಖಂಡರು, ಬಸವ ಅಭಿಮಾನಿಗಳು, ಗ್ರಾಮಸ್ಥರು ಭಾಗವಹಿಸಿದ್ದರು.

ಪ್ರಪಂಚದಾದ್ಯಂತ ಬಸವ ತತ್ವಗಳ ಪ್ರಸಾರ

◆**ಯರಗಟ್ಟಿ:** ಇಡೀ ಪ್ರಪಂಚದಲ್ಲಿ ಬಸವ ತತ್ವಗಳು ಪ್ರಸಾರವಾಗಿವೆ ಎಂಬುದಕ್ಕೆ ಇಂಗ್ಲೆಂಡ್‌ನ ಪಾರ್ಲಿಮೆಂಟ್ ಮುಂದೆ ಬಸವಣ್ಣನ ಪುತ್ಥಳಿ ಸ್ಥಾಪಿಸಿರುವುದೇ ಸಾಕ್ಷಿ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಸೊಪ್ಪಡ್ಲ ಗ್ರಾಮದಲ್ಲಿ ಬಸವೇಶ್ವರ ವೃತ್ತದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಶ್ವಾರೂಢ ಬಸವೇಶ್ವರ ಕಂಚಿನ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದರು.ಬೆಳಗಾವಿ ಮಾಜಿ ಸಂಸದ ಎ. ಕೆ. ಕೊಟ್ರಶೆಟ್ಟಿ ಮಾತನಾಡಿ, ಬಸವಣ್ಣನ ತತ್ವಗಳು ಸಮಾಜದಲ್ಲಿ ಸಮಾನತೆ ಸಾರುತ್ತವೆ. ನಿತ್ಯ ಜೀವನದಲ್ಲಿ ಅವುಗಳನ್ನು ಅನುಸರಿಸಿದರೆ 12ನೇ ಶತಮಾನದ ಶರಣ ಪರಂಪರೆ ಮರುಕಳಿಸುತ್ತದೆ ಎಂದು ಹೇಳಿದರು.

ಭೂ ನ್ಯಾಯ ಮಂಡಳಿ ಸದಸ್ಯ ಈರಣ್ಣಾ ಗೌಡರ ಮಾತನಾಡಿ, ಸೊಪ್ಪಡ್ಲ ಗ್ರಾಮದ ಜನ ದೊಡ್ಡ ಅಶ್ವಾರೂಢ ಬಸವೇಶ್ವರ ಮೂರ್ತಿ ಪ್ರತಿಷ್ಠಾಪಿಸಿ ದೇಶವೆ ಮೆಚ್ಚುವಂಥ ಕಾರ್ಯ ಮಾಡಿದ್ದಾರೆ ಎಂದು ಹೇಳಿದರು.

ಈ ವೇಳೆ ಮಾಜಿ ಜಿಪಂ ಸದಸ್ಯ ಶ್ರೀಶೈಲ ಕೊಟ್ರಶೆಟ್ಟಿ, ಪ್ರಕಾಶ ವಾಲಿ, ಮಹಾಂತೇಶ ಉರಬಿನ್ನವರ, ವೀರೇಶ ಬ್ಯಾಹಟ್ಟಿ, ಗೌಡಪ್ಪ ಕಮಗೌಡರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಶೇಖಪ್ಪ ಹರಳಿ, ಚಂದ್ರಶೇಖರ ಅಂಗಡಿ, ಗುರುಲಿಂಗಯ್ಯ ಹಿರೇಮಠ, ಐ. ಕೆ. ಗೌಡರ, ವಿಜಯ ಅಂಗಡಿ ಸೇರಿದಂತೆ ಅನೇಕರು ಇದ್ದರು.



ಯರಗಟ್ಟಿ: ಸಮೀಪದ ಸೊಪ್ಪಡ್ಲ ಗ್ರಾಮದಲ್ಲಿ ಬಸವೇಶ್ವರ ವೃತ್ತದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಶ್ವಾರೂಢ ಬಸವೇಶ್ವರ ಕಂಚಿನ ಪ್ರತಿಮೆಯನ್ನು ಶಾಸಕ ವಿಶ್ವಾಸ ವೈದ್ಯ ಅನಾವರಣಗೊಳಿಸಿ ಮಾತನಾಡಿದರು.

ಶ್ರೀ ಶಂಕರಾಚಾರ್ಯರ ಜಯಂತಿ | ವಿದ್ಯಾವತಿ ಭಜಂತ್ರಿ ಹೇಳಿಕೆ

ಶಂಕರಾಚಾರ್ಯರ ಕೊಡುಗೆ ಅಪಾರ

◆**ಬೆಳಗಾವಿ:** ಜೀವನದ ಅಲ್ಪಾವಧಿಯಲ್ಲಿ ಇಡೀ ದೇಶ ಸಂಚರಿಸಿ ಅದ್ವೈತ ಸಿದ್ಧಾಂತ ಪ್ರತಿಪಾದಿಸಿದ ಶಂಕರಾಚಾರ್ಯರ ಜೀವನ ಇಂದಿನ ಪೀಳಿಗೆಗೆ ಆದರ್ಶವಾಗಿದ್ದು, ಇಂದಿನ ಯುವ ಪೀಳಿಗೆ ನಮ್ಮ ಪರಂಪರೆ ಸಂಸ್ಕಾರ ಧಾರ್ಮಿಕ ಜ್ಞಾನವನ್ನು ಉಳಿಸಲು ಇಂತಹ ಕಾರ್ಯಕ್ರಮಗಳ ಪಾತ್ರ ಬಹು ಮುಖ್ಯವಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ ಅವರು ನುಡಿದರು.

» **ಅದ್ವೈತ ಸಿದ್ಧಾಂತದ ಮೂಲಕ ಸಮಾಜ ಸುಧಾರಣೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಮತ್ತು ಶಂಕರಾಚಾರ್ಯ ಸೇವಾ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಗುರುಪ್ರಸಾದ ನಗರದ ದತ್ತ ಮಂದಿರದಲ್ಲಿ ಜರುಗಿದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಶಂಕರಾಚಾರ್ಯರು ಕೇವಲ ಆಚಾರ್ಯರು ಮಹಾನ್ ವಿದ್ವಾಂಸರು, ಕವಿಗಳು ಹಾಗೂ ಸಂಗೀತಗಾರರೂ ಆಗಿದ್ದರು. ಆತ್ಮ ಮತ್ತು ಪರಮಾತ್ಮ ಒಂದೇ ಎಂಬ ಅದ್ವೈತ ತತ್ವದ ಮೂಲಕ ಭೇದಭಾವಗಳನ್ನು ಮೀರಿದ ಆಧ್ಯಾತ್ಮಿಕ ಅರಿವು ಮೂಡಿಸಿದರು.ಸರ್ಕಾರದ ವತಿಯಿಂದ ಇಂತಹ ಮಹಾಪುರುಷರ ಜಯಂತಿಗಳನ್ನು ಆಚರಿಸುವ ಉದ್ದೇಶ ಅವರ ಆದರ್ಶಗಳನ್ನು ಸಾರ್ವಜನಿಕರಿಗೆ ತಲುಪಿಸುವುದಾಗಿದೆ. ಶಂಕರಾಚಾರ್ಯರ ತತ್ವಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಇಂತಹ ಕಾರ್ಯಕ್ರಮಗಳು ಅರ್ಥಪೂರ್ಣವಾಗುತ್ತವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿದ್ದ ಚಿದಾನಂದ ಮುನವಳ್ಳಿ ಅವರು ಮಾತನಾಡಿ ಅನಂತ ಜ್ಞಾನಿಗಳಿಗೆ ಭಾರತಾಂಬೆ ಜನ್ಮ ನೀಡಿದ್ದಾಳೆ. ಶ್ರೀ ಶಂಕರರು 32 ವಯಸ್ಸಿನಲ್ಲಿಯೇ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಹೀಗೆ ನಾಲ್ಕು ದಿಕ್ಕಿನಲ್ಲಿ ಪೀಠ ಸ್ಥಾಪಿಸಿದರು. ಹೆಚ್ಚಿನ ಜ್ಞಾನಕ್ಕಾಗಿ ಗುರುಗಳನ್ನು ಹುಡುಕುತ್ತಾ ಹೊರಟ ಅವರು ಲೌಕಿಕ ಜ್ಞಾನದ ಕಡೆ ಹೆಚ್ಚಿನ ಒಲವು ತೋರಿದರು. ಶಂಕರಾಚಾರ್ಯರು ಕೇವಲ ಜ್ಞಾನಿಗಳಲ್ಲದೇ ಸಮಾಜ ಸುಧಾರಣೆಗಾಗಿ ಕ್ರಾಂತಿಕಾರಿಯೂ ಸಹ ಆಗಿದ್ದರು. ಕಾರ್ಯಕ್ರಮದಲ್ಲಿ ಆಕಾಶವಾಣಿ ದೂರದರ್ಶನ ಕಲಾವಿದರಾದ ಡಾ. ಶ್ರೀರಂಗ ಜೋಶಿ, ಸಮಾಜದ ಗಣ್ಯರುಗಳಾದ ಸತ್ಯ ನಾರಾಯಣ ಭಟ್, ರಾಕೇಶ ದೇಶಪಾಂಡೆ, ಅನಂತ ಚಿಂಚನಿ, ಮಾಲತೇಶ ಪಾಟೀಲ, ಕೆ ಜಿ. ಕುಲಕರ್ಣಿ, ಚಂದ್ರಶೇಖರ ಶಾಸ್ತ್ರಿ ಇನ್ನಿತರ ಗಣ್ಯರುಗಳು, ಸಾರ್ವಜನಿಕರು ಉಪಸ್ಥಿತರಿದ್ದರು.



ಸಾಂಸ್ಕೃತಿಕ ಏಕತೆ

ಇಂದಿನ ಕಾಲದಲ್ಲಿ 25-30 ವರ್ಷಕ್ಕೆ ನಮ್ಮ ಜೀವನದ ದಿಕ್ಕೇನು ಎಂಬ ಗೊಂದಲದಲ್ಲಿ ನಾವಿರುತ್ತೇವೆ. ಆದರೆ, ಶಂಕರಾಚಾರ್ಯರು ಆ ವಯಸ್ಸಿನಲ್ಲೇ ದೇಶದ ನಾಲ್ಕೂ ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ, ಸನಾತನ ಧರ್ಮದ ಪುನರುತ್ಥಾನಕ್ಕೆ ಶ್ರಮಿಸಿದರು. ಶೃಂಗೇರಿ, ಪುರಿ, ಬದರಿನಾಥ ಮತ್ತು ದ್ವಾರಕೆಯಲ್ಲಿ ಮಠಗಳನ್ನು ಸ್ಥಾಪಿಸುವ ಮೂಲಕ ಸಾಂಸ್ಕೃತಿಕ ಏಕತೆಯನ್ನು ತಂದರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ ಹೇಳಿದರು.

> **ಶ್ರೀ ಶಂಕರರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಹಂ ಬ್ರಹ್ಮಾಸ್ಮಿ ತತ್ವವನ್ನು ಸಾರುವ ಮೂಲಕ ಜೀವನದಲ್ಲಿ ಕಷ್ಟ-ಸುಖ, ಜನನ-ಮರಣ ಸಾಮಾನ್ಯವೆಂಬುವುದನ್ನು ಶಂಕರಾಚಾರ್ಯರು ಸಾರಿದ್ದಾರೆ.**
> ■ **ಚಿದಾನಂದ ಮುನವಳ್ಳಿ, ಉಪನ್ಯಾಸಕ**

ಬಸವೇಶ್ವರ ಜಯಂತಿ: ಪೂಜೆ

◆**ಗೋಕಾಕ:** ಮಹಾಮಾನವತಾವಾದಿ ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಜಯಂತಿ ನಿಮಿತ್ತ ಸೋಮವಾರ ನಗರದ ಕಿಲ್ಲಾದಲ್ಲಿರುವ ಬಸವೇಶ್ವರ ದೇವಸ್ಥಾನದಲ್ಲಿ ಇಲ್ಲಿಯ ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ಮುಪ್ಪಯ್ಯನ ಮಠದ

ಶ್ರೀ ರಾಚೋಟೇಶ್ವರ ಮಹಾಸ್ವಾಮಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಮುಂಜಾನೆ 7ಗಂಟೆಗೆ ಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ, 8.30ಕ್ಕೆ ಡಾ.ಅರುಣ ತುಪ್ಪದ ಇವರಿಂದ ಷಟಸ್ಥಲ ಧ್ವಜಾರೋಹಣ ಹಾಗೂ ಮಹಾಲಿಂಗೇಶ್ವರ ಭಜನಾ ಮಂಡಳಿಯವರಿಂದ ಭಜನಾ ಸೇವೆ ನಡೆದವು. 9.30ಕ್ಕೆ ಇಲ್ಲಿಯ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಷಟಸ್ಥಲ ಧ್ವಜಾರೋಹಣವನ್ನು ಪ್ರೊ.ಚಂದ್ರಶೇಖರ ಅಕ್ಕಿಯವರು ನೆರವೇರಿಸಿದರು. 10ಗಂಟೆಗೆ ಡಾ.ಸಂದೀಪ ಶಿರಹಟ್ಟಿ ವರು ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಬಸವೇಶರರ ನಾಮಕರಣ

ದೇವಸ್ಥಾನದಲ್ಲಿ ಅಕ್ಕನ ಬಳಗ ಮಾತೆಯರಿಂದ ಬಸವೇಶ್ವರರ ನಾಮಕರಣ ಮತ್ತು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಮಹಾಪ್ರಸಾದ ಜರುಗಿತು. 5ಗಂಟೆಗೆ ಸುಷನಾ ಮತ್ತು ಜಯಶೀಲ ಅಂಗಡಿ ದಂಪತಿಗಳಿಂದ ಪಲ್ಲಕ್ಕಿ ಪೂಜೆ ಹಾಗೂ ಹರ್ಷಾ ಮತ್ತು ಅಕ್ಷಯ ವರದಾಯಿ ದಂಪತಿ ಬಸವೇಶ್ವರರ ಭಾವಚಿತ್ರ ಪೂಜೆ ನೆರವೇರಿಸಲಾಯಿತು. ದೇವಸ್ಥಾನದಿಂದ ಸಕಲ ವಾದ್ಯಗಳೊಂದಿಗೆ ಬಸವೇಶ್ವರರ ಭಾವಚಿತ್ರದ ಮೆರವಣಿಗೆಗೆ ಮುರುಘರಾಜೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಮೀಟಿಯ ಎಸ್ ಬಿ ಮಗದುಮ, ಬಿ ಎಸ್ ಕುಂಬಾರ, ಎ ಕೆ ಹೆಗ್ಗಣ್ಣವರ, ಎಮ್ ಜಿ ತಾಂವಶಿ, ಎಮ್ ಜಿ ಪಾಟೀಲ, ಅಶೋಕ ಪೂಜಾರಿ, ಡಾ.ಮಹಾಂತೇಶ ಕಡಾಡಿ ಸೇರಿದಂತೆ ಅನೇಕರು ಇದ್ದರು.




ವಿಜೃಂಭಣೆಯ ಬಸವೇಶ್ವರ ಜಯಂತಿ ಆಚರಣೆ

◆**ಸಂಕೇಶ್ವರ:** ಕಾಯಕ ಹಾಗೂ ದಾಸೋಹದ ಮಹತ್ವವನ್ನು ಇಡೀ ಜಗತ್ತಿಗೆ ಸಾರಿದ ಬಸವಣ್ಣನವರ 893 ನೇ ಜಯಂತಿಯನ್ನು ಗಡಿ ಪಟ್ಟಣ ಸಂಕೇಶ್ವರದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ನಿಮಿತ್ತ ಪಟ್ಟಣ ಪುರಸಭೆಗೆ ಕೂಡಲ ಸಂಗಮದಿಂದ ಬಂದ ಜ್ಯೋತಿಯನ್ನು ಪಟ್ಟಣದ ವಿವಿಧ ಸಮುದಾಯದ ಧುರೀಣರಾದ ಸುನೀಲ ಪರ್ವತರಾವ, ಶಿವಾನಂದ ಮುಡಸಿ,ಚಿದಾನಂದ ಕರ್ದನ್ನವರ, ಅಮರ ನಲವಡೆ, ಶ್ರೀಕಾಂತ ಹತನೂರಿ,ಅವಿನಾಶ ನಲವಡೆ, ಗಜಾನನ ಕ್ವಳ್ಳಿ, ವಿಕ್ರಂ ಕರನಿಂಗ,ದಿಲೀಪ ಹೊಸಮನಿ ಹಾಗೂ ಪುರಸಭೆಯ ಮುಖ್ಯಾಧಿಕಾರಿ ಪ್ರಕಾಶ ಮಠದ ಮುಂತಾದವರು ಸ್ವಾಗತಿಸಿದರು. ನಂತರ ಜ್ಯೋತಿಯು ಪಟ್ಟಣದ ವಿವಿಧ ಮಾರ್ಗಗಳಲ್ಲಿ ಸಂಚರಿಸಿತು.

ಪಟ್ಟಣದ ಬಸ್ ನಿಲ್ದಾಣದ ಬಳಿ ಸಹಕಾರಿ ಧುರೀಣ ವಿನಯಗೌಡ ಪಾಟೀಲ ಅವರು ಬಸವೇಶ್ವರರ ಮೂರ್ತಿಗೆ ಹೂ ಹಾರ ಹಾಕಿ ನಮನ ಸಲ್ಲಿಸಿದರು. ಬಸವ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ಬಸವಣ್ಣನವ ಮೂರ್ತಿ ಸೇರಿದಂತೆ ಇತರೆ 8 ಶರಣರ ಮೂರ್ತಿಗಳಿಗೂ ಪೂಜೆ ಸಲ್ಲಿಸಲಾಯಿತು.

ವಾಯವ್ಯ ಸಾರಿಗೆ ಸಂಸ್ಥೆಯ ಸಂಕೇಶ್ವರ ಘಟಕದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಘಟಕ ವ್ಯವಸ್ಥಾಪಕ ವಿಜಯಕುಮಾರ ಕಾಗವಾಡೆ ಮಾತನಾಡಿ,ನಿಜವಾಗಿಯೂ ಬಸವಣ್ಣನವರ ಕಾಯಕ ತತ್ವವನ್ನು ಪಾಲಿಸುವವರು ಸಾರಿಗೆ ಸಂಸ್ಥೆಯ ಚಾಲಕರು ಮತ್ತು ನಿರ್ವಾಹಕರು.ಇವರಿರ್ವರು ದಿನದ 24 ತಾಸು ಸಹಿತ ಕಾಯಕ ಮಾಡಿ ಬಸವೇಶ್ವರ ತತ್ವವನ್ನು ತಮ್ಮ ಬದುಕಿನಲ್ಲಿ ಪಾಲಿಸುತಿದ್ದಾರೆ ಎಂದರು. ಸಮಾರಂಭದಲ್ಲಿ ಕೆ.ಆರ್.ಬಸ್ತವಾಡೆ, ಸುವರ್ಣಾ ಪಾಟೀಲ, ಶಾಂತಾದೇವಿ ಪಾಟೀಲ, ದಯಾನಂದ ಲಠ್ಠಿ, ಕಾಡೇಶ ಬಸ್ತವಾಡಿ, ನಂದಕುಮಾರ ನಡಗದಗಲ್ಲಿ ಮುಂತಾದವರು ಉಪಸ್ಥಿತರಿದ್ದರು.



ಎಪಿಎಂಸಿ ಸುಧಾರಣೆಗೆ ಅಗತ್ಯ ಕ್ರಮ



» **ಎಲೆಕ್ಟ್ರಾನಿಕ್ ತೂಕದ ಯಂತ್ರ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ**

◆**ನೇಸರಗಿ:** ಇಲ್ಲಿನ ರಾಜ್ಯ ಹೆದ್ದಾರಿ ಪಕ್ಕ ಬೃಹತ್ ಎಪಿಎಂಸಿ ಸುಧಾರಣೆ ಅಗತ್ಯ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲವಾಗುವ ಕೆಲಸ ಮಾಡುತ್ತೇನೆ ಎಂದು ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಅವರು ನೇಸರಗಿ ಗ್ರಾಮದ ಎಪಿಎಂಸಿ ಆವರಣದಲ್ಲಿ ಸೋಮವಾರ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಸುಮಾರು 77 ಲಕ್ಷ ರೂಪಾಯಿಗಳ ಅನುದಾನದ 80 ಎಮ್ ಟಿ ಸಾಮರ್ಥ್ಯದ ಎಲೆಕ್ಟ್ರಾನಿಕ್ ತೂಕದ ಯಂತ್ರ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಇಲ್ಲಿನ ಆವರಣದಲ್ಲಿ ಕೃಷಿ ಸಹಾಯಕ ಕಚೇರಿ, ಕಾಳು ಶೇಖರಣೆ ಗೋಡವನ್, ಕೃಷಿ ಸಲಕರಣೆ ಅಂಗಡಿ ಗಳು, ರೈತ ಬೆಳೆ ಖರೀದಿ ಕೇಂದ್ರ, ಜೋಳ, ಗೋದಿ ಮಾರುಕಟ್ಟೆ, ಇನ್ನೂ ಅನೇಕ ಕಚೇರಿಗಳು ಕಾರ್ಯ ನಿರ್ವಹಿಸುತ್ತಿದ್ದು ಮುಂದೆ ಇದರ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಈಸಂದರ್ಭದಲ್ಲಿಮುಖಂಡರಾದ ಅಡಿವಪ್ಪ ಮಾಳಣ್ಣವರ, ಬಾಳಪ್ಪ ಮಾಳಗಿ, ನಿಂಗಪ್ಪ ತಳವಾರ, ಯಮನಪ್ಪ ಪೂಜೇರಿ, ಚನಗೌಡ ಪಾಟೀಲ, ಬಸವರಾಜ ಚಿಕ್ಕನಗೌಡ್ರ, ಪ್ರಕಾಶ ತೋಟಗಿ, ಮಕಬುಲ್ ಬೇಪಾರಿ, ಅಜ್ಜಪ್ಪ ಸತ್ಯಣ್ಣವರ,ವೀರಣ್ಣ ಉಳವಿ, ಬೈಲಹೊಂಗಲ ಎಪಿಎಮಸಿ ಸಹ ಕಾರ್ಯದರ್ಶಿ ಸುನೀಲ ಗೊಡಬೋಲೆ, ಎಇಇ ರಾಘವೇಂದ್ರ ಕೊರತಿ, ಎಇ ಸಂಗಮೇಶ, ಈರಪ್ಪ ಕುಂಟಗಿ ಸೇರಿದಂತೆ ನೇಸರಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಶಿವಾಜಿಯವರ ಆದರ್ಶ ಯುವಜನತೆಗೆ ದಾರಿದೀಪ

◆**ರಾಯಬಾಗ:** ಛತ್ರಪತಿ ಶಿವಾಜಿ ಮಹಾರಾಜರು ಹಾಗೂ ಬಸವಣ್ಣನವರ ಮಹತ್ವದ ಚಿಂತನೆಗಳನ್ನು ಯುವಜನತೆ ಅಳವಡಿಸಿಕೊಂಡರೆ ಸಮಾಜದಲ್ಲಿ ನೈತಿಕತೆ, ಶಿಸ್ತು ಮತ್ತು ದೇಶಭಕ್ತಿ ಬೆಳೆಸಬಹುದು ಎಂದು ಬೆಳಗಾವಿ ಹಾಲು ಒಕ್ಕೂಟದ ನಿರ್ದೇಶಕ ವಿವೇಕರಾವ್ ಪಾಟೀಲ ಹೇಳಿದರು.

ಪಟ್ಟಣದ ಅಂಬಾಭವಾನಿ ಮಂದಿರದಲ್ಲಿ ಭಾನುವಾರ ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ಬಸವಣ್ಣನವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿವಾಜಿ ಮಹಾರಾಜರು ಶೌರ್ಯ ಮತ್ತು ಪ್ರಜಾಹಿತದ ಆಡಳಿತದ ಮೂಲಕ ಇತಿಹಾಸದಲ್ಲಿ ಅಜರಾಮರರಾಗಿದ್ದು, ಬಸವಣ್ಣನವರು ಸಮಾನತೆ, ಕಾಯಕ ಮತ್ತು ದಾಸೋಹದ ಸಂದೇಶಗಳ ಮೂಲಕ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದವರು ಎಂದು ಹೇಳಿದರು.

ಇಬ್ಬರ ಆದರ್ಶಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿದ್ದು, ಯುವಕರು ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡರೆ ಉತ್ತಮ ಹಾಗೂ ಸುವ್ಯವಸ್ಥಿತ ಸಮಾಜ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಅಶೋಕ ಅಂಗಡಿ, ಶ್ರೀರಾಮ ಸೇನೆಯ ಮುಖಂಡರಾದ ಶಿವಾನಂದ ಬಂತೆ, ಜೈದೀಪ್ ದೇಸಾಯಿ, ಅಮಿತ ಹೊಂಕಳೆ, ಗಂಗಾರಾಮ ಪವಾರ, ಅಪ್ಪು ಪವಾರ, ರಮೇಶ ಕುಂಬಾರ, ಸಣ್ಮತಿ ಶೆಟ್ಟಿ, ರವಿ ತರಾಳ, ಸಿದ್ದು ದೇಸಾಯಿ, ಶ್ರೀನಾಥ ಜಾಧವ,ಮೇಘರಾಜ ಮಾಳಗಿ ಸೇರಿದಂತೆ ಇತರರು ಇದ್ದರು.



ಕಲ್ಯಾಣ ಮಂಟಪಕ್ಕೆ 2 ಲಕ್ಷ ರೂ. ವಿತರಣೆ



◆**ಯಮಕನಮರಡಿ:** ಸಮೀಪದ ಜಿನರಾಳ ಗ್ರಾಮದ ಪಾಂಡುರಂಗ ವಿಠ್ಠಲ ದೇವಸ್ಥಾನದ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮಂಜೂರು ಮಾಡಿರುವ 2,00,000 ರೂ.ಗಳನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕರಾದ ವಿಠ್ಠಲ ಸಾಲ್ಯಾನ್ ಅವರು ಮಂಜೂರಾತಿ ಪತ್ರ ವಿತರಿಸಿದರು.

ಈ ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಶ್ರೀಕಾಂತ ನಾಯ್ಕ, ಮೇಲ್ವಿಚಾರಕ ಹನುಮಂತ್ ಮತ್ತು ದೇವಸ್ಥಾನ ಕಮಿಟಿಯವರು ಹಾಗೂ ಊರಿನ ಗಣ್ಯರು ಸೇವಾಪ್ರತಿನಿಧಿ ಸೀಮಾ ಇದ್ದರು.

ಬಸವಣ್ಣನವರ ಜಯಂತಿ ಆಚರಣೆ

◆**ಸವದತ್ತಿ:** ವಿಶ್ವಗುರು ಬಸವಣ್ಣನವರ ಜಯಂತಿ ಅಂಗವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಸವದತ್ತಿಯಲ್ಲಿ ಸರಳ ಹಾಗೂ ಸಾಂಪ್ರದಾಯಿಕ ರೀತಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಅವರು ಬಸವೇಶ್ವರರ ಜೀವನ, ಅವರ ಮಹತ್ವದ ಪಾತ್ರ ಹಾಗೂ ಸಮಾಜಕ್ಕೆ ನೀಡಿದ ಅಪಾರ ಕೊಡುಗೆಗಳ ಕುರಿತು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಕಚೇರಿಯ ಪತ್ರಾಂಕಿತ ವ್ಯವಸ್ಥಾಪಕರಾದ ಐ.ಎಂ. ಮಕಾನದಾರ, ಅಧೀಕ್ಷಕರಾದ ಸುರೇಶ ಬೆಟಗೇರಿ, ನದೀಮ್ ಮುಜಾವರ, ಪ್ರಭಾಕರ ಲಾಡ, ಬಾಬಾಜಾನ ಮಾಳಗಿ, ಸುಧೀಶ ವಾಘೇರಿ ಶಿ. ಸಂ ಅರ್ಜುನ್ ಕಾಮಣ್ಣವರ (ಶಿಸಂ), ವಿದ್ಯಾಶ್ರೀ ಗಾಣಗಿ, ಶ್ರೀರಾಮ ಪತ್ತಾರ, ದ್ಯಾಮಣ್ಣಾ ಮರಕುಂಬಿ, ರವಿ ನಲವಡೆ, ರಾಮಚಂದ್ರ, ಮಹಾಂತೇಶ ಬ್ಯಾಹಟ್ಟಿ, ರತ್ನಾ ಶೇತಸನದಿ,ಆಯಿಶಾ ಜಹಗೀರದಾರ, ರಾಜು ಹನಸಿ ಸೇರಿದಂತೆ ಶಿಕ್ಷಕರು ಉಪಸ್ಥಿತರಿದ್ದರು



ಬಸವ ಜಯಂತಿ: ಎತ್ತುಗಳ ಮೆರವಣಿಗೆ



◆**ಅಳಗವಾಡಿ:** ಬಸವ ಜಯಂತಿ ಅಂಗವಾಗಿ ಶ್ರೀ ರಾಮಲಿಂಗೇಶ್ವರ ದೇವರಿಗೆ ಪೂಜೆ ಅಭಿಷೇಕ ಮಾಡಲಾಯಿತು. ಬನಶಂಕರಿ ತೋಟದಿಂದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದವರೆಗೆ ಬಸವಣ್ಣವರ ಭಾವಚಿತ್ರ ಹಾಗೂ ಎತ್ತುಗಳ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ನಿಂಗಪ್ಪ ತೇರದಾಳೆ, ಶಿವಗೊಂಡ ಹಣಜೆ, ಹಣಮಂತ ಗುರವ, ತಮ್ಮಣ್ಣ ಅವಟೆ, ಮಲ್ಲಪ್ಪ ಹಣಜೆ, ಪ್ರಕಾಶ್ ಹಣಜೆ, ರಾಜು ತೇರದಾಳೆ, ಮಂಜು ತೇರದಾಳೆ, ಹಣಮಂತ ತೇರದಾಳೆ, ಮಾಣಿಕ ಹಂಜೆ , ದಶರಥ ಹಂಜೆ ,ಚಂದ್ರಕಾಂತ ಅವಟೆ, ತಮ್ಮಣ್ಣ ಹಣಜೆ, ಮಹಾದೇವ ಮಠದ ಮುಂತಾದವರು ಉಪಸ್ಥಿತರಿದ್ದರು.

ಬಸವ ಜಯಂತಿ ಆಚರಣೆ

◆**ರಾಯಬಾಗ:** ತಾಲೂಕಿನ ಮೇಖಳಿ ಗ್ರಾಮದ ಶ್ರೀ ಕೋಟೆಮ್ಮಾದೇವಿ ಆವರಣದಲ್ಲಿ ಭಾನುವಾರ ಶ್ರೀ ಬಸವೇಶ್ವರ ಭಾವಚಿತ್ರಕ್ಕೆ ಪರಮೇಶ್ವರ ಪಿಕೆಪಿಎಸ್ ಅಧ್ಯಕ್ಷರಾದ ಸಂಗಣ್ಣ ದತ್ತವಾಡೆ ಪೂಜೆ ನೇರವೇರಿಸಿದರು. ನಂತರ ತೋಟಪಟ್ಟಿಗಳಿಂದ ರೈತ ಬಾಂಧವರು ಎತ್ತು ಮತ್ತು ಹೋರಿಗಳನ್ನು ಶೃಂಗರಿಸಿ ಮೆರವಣಿಗೆ ಮಾಡಿದರು.

ಈ ಸಂದರ್ಭದಲ್ಲಿ ವಸಂತ ಕರಿಗಾರ,ಪುಂಡ್ಲಿಕ ಮುತಾರೆ, ಎಂ.ಎಸ್.ಕೋಟ್ರೆ,ವಿವೇಕ ಹಟ್ಟಿ ಕಾರ ಸುನಿಲ ಖಿಚಡೆ,ಮಹೇಶ ಮುತಾರೆ, ಶಂಕರಯ್ಯ ಹಿರೇಮಠ, ಭೀಮಾ ಮುತಾರೆ, ಸತ್ಯಪ್ಪ ಮುತಾರೆ,ಪಿಂಟು ಕರಿಗಾರ,ತಾತೋಬಾ ವಡೇರ, ಸಿದ್ದಪ್ಪ ಪಾಮದಿನ್ನಿ,ವಿಠ್ಠಲ ಮುತಾರೆ, ಸೇರಿದಂತೆ ಇತರರಿದ್ದರು.



ಕಿರುಸುದ್ದಿ

ನಾಳೆಯಿಂದ ಜಾತ್ರಾ ಮಹೋತ್ಸವ



◆ **ಯರಗಟ್ಟಿ:** ಪಟ್ಟಣದ ರಾಜರಾಜೇಶ್ವರಿ ಆಶ್ರಮದ 17ನೇ ವರ್ಷದ ಜಾತ್ರಾ ಮಹೋತ್ಸವನ್ನು ಏ.23, 24 ರಂದು ಹಮ್ಮಿಕೊಳ್ಳಲಾಗಿದೆ. ಏ.23ರಂದು ಬೆಳಿಗ್ಗೆ 5 ಗಂಟೆಗೆ ರಾಜರಾಜೇಶ್ವರಿ ದೇವಿಯ ಮಹಾ ಅಭಿಷೇಕ ನೆರವೇರಲಿದೆ. ಕೋ.ಶಿವಾಪೂರದ ಜಡೆತೆಲೆ ಮರಳಸಿದ್ಧ ಶಿವಾಚಾರ್ಯ ಸ್ವಾಮೀಜಿ ಅಮೃತ ಹಸ್ತದಿಂದ ಧ್ವಜಾರೋಹಣ ನೆರವೇರಲಿದೆ. ಸಂಜೆ 4ಗಂಟೆಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕರಡಿ ಸಂಬಾಳ ಶಹನಾಯಿ ಮಜಲು ಹಾಗೂ ಸಕಲ ವಾದ್ಯಗೋಷ್ಠಿಗಳೊಂದಿಗೆ ದೇವಿ ಪಲ್ಲಕ್ಕಿ ಉತ್ಸವ ನಂತರ ರಾತ್ರಿ 7ಗಂಟೆಗೆ ವೇದಾಂತ ವೇದಿಕೆ ಉದ್ಘಾಟನೆ ಹಾಗೂ ಮಹಾತ್ಮರಿಂದ ತತ್ವ ಚಿಂತನೆ ಕಾರ್ಯಕ್ರಮ ಜರುಗುವುದು. ಸಾನ್ನಿಧ್ಯವನ್ನು ಇಂಚಲ ಸಾಧು ಸಂಸ್ಥಾನ ಮಠ ಡಾ. ಜಗದ್ಗುರು ಶಿವಾನಂದ ಭಾರತಿ ಸ್ವಾಮೀಜಿ ವಹಿಸುವರು. ನೀಲಕಂಠ ಸ್ವಾಮೀಜಿ, ಬಸವಾನಂದ ಭಾರತಿ ಸ್ವಾಮೀಜಿ, ರೇಣುಕ ಶಿವಯೋಗಿ ಶಿವಾಚಾರ್ಯರು, ಮೃತ್ಯುಂಜಯ ಸ್ವಾಮೀಜಿ, ಮುದ್ದಮ್ಮತಾಯಿ ಸಾನಿಧ್ಯವನ್ನು ವಹಿಸುವರು.

ಏ.24 ರಂದು ಬೆಳಿಗ್ಗೆ 9ಗಂಟೆಗೆ ವೇದಾಂತ ವೇದಿಕೆ ಮಹ್ಮಾತರಿಂದ ತತ್ವ ಚಿಂತನೆ, ಸಾನ್ನಿಧ್ಯವನ್ನು ರಾಜನಹಳ್ಳಿ ವಾಲ್ಮೀಕಿ ಗುರುಪೀಠ ಜಗದ್ಗುರು ಪ್ರಸನ್ನಾನಂದ ಮಹಾಸ್ವಾಮಿಗಳು ವಹಿಸುವರು, ವಿದ್ಯಾನಂದ ಭಾರತಿ ಸ್ವಾಮೀಜಿ, ಮುರಘರಾಜೇಂದ್ರ ಸ್ವಾಮೀಜಿ, ಡಾ. ಅಮರಸಿದ್ದೇಶ್ವರ ಸ್ವಾಮೀಜಿ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಆಶ್ರಮದ ಪೀಠಾಧಿಪತಿ ಗಣಪತಿ ಮಹಾರಾಜರು ತಿಳಿಸಿದ್ದಾರೆ.

ಬಸವಣ್ಣನವರ ಮೂರ್ತಿ ಮೆರವಣಿಗೆ

◆ **ಅಥಣಿ :** ವಿಶ್ವಗುರು, ಸಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿ ಪ್ರಯುಕ್ತ ಅಥಣಿ ಪಟ್ಟಣದ ಬಸವೇಶ್ವರ ವೃತ್ತ ನಿರ್ಮಾಣ ಸೇವಾ ಸಮಿತಿ ಸದಸ್ಯರು, ಬಸವ ಭಕ್ತರು ಆಯೋಜಿಸಿದ್ದ ಮೂರ್ತಿ ಮೆರವಣಿಗೆ, ಬಸವೇಶ್ವರರ ಭಾವಚಿತ್ರದ ಪಲ್ಲಕ್ಕಿ ಮೆರವಣಿಗೆ ಹಾಗೂ ಜೋಡೆತ್ತುಗಳ ಮೆರವಣಿಗೆಗೆ ಪೂಜ್ಯರು ಮತ್ತು ಗಣ್ಯರು ಚಾಲನೆ ನೀಡಿದರು. ವಿವಿಧ ವಾದ್ಯ ಮೇಳಗಳೊಂದಿಗೆ ಆರಂಭವಾದ ಮೆರವಣಿಗೆ ಬಸವೇಶ್ವರ ವೃತ್ತದಿಂದ ಹಲ್ಯಾಳ (ಶಿವಯೋಗಿ) ವೃತ್ತ, ರಾಣಿ ಚೆನ್ನಮ್ಮ ವೃತ್ತ, ಅಂಬೇಡ್ಕರ್ ವೃತ್ತದ ಮಾರ್ಗವಾಗಿ ಮುಖ್ಯಬೀದಿಯಲ್ಲಿ ಹಾಯ್ದು ಬುಧವಾರ ಪೇಟ, ಹನುಮಾನ ಮಂದಿರ ಮಾರ್ಗವಾಗಿ ಮತ್ತೆ ಬಸವೇಶ್ವರ ವೃತ್ತದಲ್ಲಿ ಸಮಾರೋಪಗೊಂಡಿತು. ಮಧ್ಯಾಹ್ನ ಸಾವಿರಾರು ಸದ್ಭಕ್ತರು ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಯಿತು. ಸಾಯಂಕಾಲ ಬಸವೇಶ್ವರ ವೃತ್ತದಲ್ಲಿ ಮನೋರಂಜನೆಗಾಗಿ ಖ್ಯಾತ ಕಲಾವಿದರಿಂದ ವಚನ ಗಾಯನ, ಸಂಗೀತ ರಸಮಂಜರಿ ಕಾರ್ಯಕ್ರಮ ಜರುಗಿದವು.



ರಾಯಬಾಗ: ಪಟ್ಟಣದಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತೆ ಜಾತ್ರೆಯು ಮೇ 6 ರಿಂದ ಪ್ರಾರಂಭಗೊಳ್ಳಲಿದ್ದು, ಈ ಕಾರ್ಯಕ್ರಮಕ್ಕೆ ಕೊಲ್ಲಾಪುರದ ಕನ್ನೇರಿಮಠದ ಶ್ರೀ ಅದೃಶ್ಯ ಕಾಡ ಸಿದ್ದೇಶ್ವರ ಸ್ವಾಮೀಜಿಗಳಿಗೆ ಪ್ರಣಯ ಪಾಟೀಲ ನೇತೃತ್ವದಲ್ಲಿ ಶ್ರೀ ಮಹಾಲಕ್ಷ್ಮಿ ದೇವಿ ಕಮೀಟಿ ಎಲ್ಲ ಪದಾಧಿಕಾರಿಗಳು ಆಮಂತ್ರಣ ಪತ್ರಿಕೆಯನ್ನು ನೀಡಿ ಜಾತ್ರೆಗೆ ಆಗಮಿಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ರಾಯಬಾಗದ ಮಹಾಲಕ್ಷ್ಮಿ ದೇವಿ ಕಮಿಟಿಯ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

ಕುಡಿಯುವ ನೀರಿಗೆ ಸಹಾಯವಾಣಿ ಆರಂಭ

◆ **ಬೆಳಗಾವಿ :** ಜಿಲ್ಲೆಯ ಅಥಣಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮ ಪಂಚಾಯತಿಗಳು ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾದಲ್ಲಿ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ 08289251141 ಗೆ ದೂರು ಸಲ್ಲಿಸಬಹುದಾಗಿದೆ ಎಂದು ಅಥಣಿ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯರಗಟ್ಟಿ: ರೈತರ ಆರಾಧ್ಯ ದೈವ ಭಾವೈಕ್ಯದ ಸಂಕೇತವಾಗಿರುವ ಪಟ್ಟಣದ ಮರಡಿ ಬಸವೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಮಹಾರಥೋತ್ಸವವು ಸೋಮವಾರ ಸಂಜೆ ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ ವಿಜೃಂಭಣೆಯಿಂದ ಜರುಗಿತು. ಪಟ್ಟಣದಲ್ಲಿ ತೆಂಗು, ಬಾಳೆ, ಕಬ್ಬು, ತರಹೇವಾರಿ ಮಾಲೆಗಳಿಂದ ಅಲಂಕೃತವಾದ ರಥಕ್ಕೆ ಗಣ್ಯರು ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಬಸವೇಶ್ವರ ಜಯಂತಿ: ಅದ್ದೂರಿ ಮೆರವಣಿಗೆ

◆ **ಕುಡಚಿ:** ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಅಪಾರ ಭಕ್ತಿ, ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ಪಟ್ಟಣದ ಜೈನ ಗಲ್ಲಿಯ ಸಾರ್ವಜನಿಕ ಗಣೇಶ ಮಂಡಳಿ ಮಂಟಪದಲ್ಲಿ ಬಸವೇಶ್ವರರ ಕಂಚಿನ ಪ್ರತಿಮೆಗೆ ಮಹಾಲಿಂಗಯ್ಯ ಹಿರೇಮಠ ಸ್ವಾಮೀಜಿ ಹಾಗೂ ಹನುಮಾನ ಮಂದಿರದ ಅರ್ಚಕರಾದ ದಯಾನಂದ ಮಠಪತಿ ಅವರು ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಕುದುರೆ ಸಾರೋಟಿನಲ್ಲಿ ಸಕಲ ಮಂಗಳ ವಾದ್ಯಗಳೊಂದಿಗೆ ಭವ್ಯ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯುದ್ದಕ್ಕೂ ಯುವಕರು ಬಸವೇಶ್ವರ ಮಹಾರಾಜಕೀ ಜೈ ಎಂಬ ಜಯಘೋಷಗಳನ್ನು ಕೂಗಿ ಸಂಭ್ರಮಿಸಿದರು. ಕೇಸರಿ ಪೇಟಿ, ಕೇಸರಿ ಧ್ವಜಗಳು ಹಾಗೂ ಸಮಾಜದ ಮುಖಂಡರ ಸಾನ್ನಿಧ್ಯದಲ್ಲಿ ಮೆರವಣಿಗೆ ವಿಶೇಷ ಆಕರ್ಷಣೆಯಾಯಿತು. ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಾದ ದತ್ತಾ ಮಂದಿರ, ಕೆನರಾ ಬ್ಯಾಂಕ್, ಬೆಲ್ಲದ ಕಾರ್ನರ್ ಮಾರ್ಗವಾಗಿ ರೈಲು ನಿಲ್ದಾಣ ಕರ್ನಾಟಕ ವೃತ್ತದ ಮೂಲಕ ಅನುಭವ ಮಂಟಪ ತಲುಪಿತು. ಸಮಾಜದ ಯುವಕರು, ಮಹಿಳೆಯರು ಹಾಗೂ ಹಿರಿಯರು ಸೇರಿದಂತೆ ನೂರಾರು ಜನರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು. ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಲಕ್ಷ್ಮಟ್ಟಿ ತೇಲಿ, ಗಜಾನನ ಕಾಗೆ, ಅಶೋಕ್ ಖೋತ, ಮೋಹನ್ ಬುಸಗುಂಡೆ, ಶ್ರೀಶೈಲ ದರೂರೆ, ಮಹೇಶ್ ಪಟ್ಟಣಶೆಟ್ಟಿ, ವೀರೇಶ್ ರಾಜಮನೆ, ಶ್ರೀಶೈಲ ತೇಲಿ, ಅಶೋಕ್ ಹಡಪದ, ಸಂಜು ಪುಲಾರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕುಡಚಿ: ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಅಪಾರ ಭಕ್ತಿ, ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ಪಟ್ಟಣದ ಜೈನ ಗಲ್ಲಿಯ ಸಾರ್ವಜನಿಕ ಗಣೇಶ ಮಂಡಳಿ ಮಂಟಪದಲ್ಲಿ ಬಸವೇಶ್ವರರ ಕಂಚಿನ ಪ್ರತಿಮೆಗೆ ಮಹಾಲಿಂಗಯ್ಯ ಹಿರೇಮಠ ಸ್ವಾಮೀಜಿ ಹಾಗೂ ಹನುಮಾನ ಮಂದಿರದ ಅರ್ಚಕರಾದ ದಯಾನಂದ ಮಠಪತಿ ಅವರು ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಿವ- ಬಸವರ ತತ್ವ ಪಾಲಿಸೋಣ

» ಶಿವ-ಬಸವ ಜಯಂತಿ
» ಮಾಜಿ ಸಂಸದ ಜೊಲ್ಲೆ ಹೇಳಿಕೆ

◆ **ಚಿಕ್ಕೋಡಿ:** ಜಗಜ್ಯೋತಿ ಬಸವೇಶ್ವರರ ವಚನಗಳಲ್ಲಿ ಬದುಕಿಗೆ ಬೇಕಾದ ಎಲ್ಲ ಸಂದೇಶಗಳಿವೆ. ಅವುಗಳನ್ನು ನಮ್ಮ ಬದುಕಿನ ಆದರ್ಶವಾಗಿಸಿಕೊಂಡು ಜೀವನ ಸಾಗಿಸಲು ಮುಂದಾಗಬೇಕು. ಛತ್ರಪತಿ ಶಿವಾಜಿ ಮಹಾರಾಜರು ಸಮ ಸಮಾಜಕ್ಕಾಗಿ ಶ್ರದ್ಧೆ, ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ಶ್ರಮಿಸಿದ್ದು, ಅವರ ಶೌರ್ಯ, ಸಾಹಸ, ಪರಾಕ್ರಮ, ಕೆಚ್ಚೆದೆಯ ಹೋರಾಟಗಳು ಸರ್ವರಿಗೂ ಮಾದರಿ ಎಂದು ಬಿಡಿಸಿಸಿ ಅಧ್ಯಕ್ಷ, ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಹೇಳಿದರು.

ನಿಪ್ಪಾಣಿ ನಗರದ ಹೊರವಲಯದಲ್ಲಿರುವ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಶಿವ-ಬಸವ ಜಯಂತಿ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಸವಣ್ಣನವರ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಬಸವಣ್ಣನವರು ಸರ್ವಕಾಲಕ್ಕೂ ಸಲ್ಲುವ ಶ್ರೇಷ್ಠ ದಾರ್ಶನಿಕರಾಗಿದ್ದು, ಸಮಾಜದಲ್ಲಿದ್ದ ಎಲ್ಲ ತಾರತಮ್ಯಗಳನ್ನು ಹೋಗಲಾಡಿಸಿ ಮಹಿಳೆಯರನ್ನು ಪುರುಷರಿಗೆ ಸರಿ ಸಮನಾಗಿ ಕಾಣುವುದರ ಮೂಲಕ ಸ್ತ್ರೀ ಸ್ವಾತಂತ್ರವನ್ನು ಎತ್ತಿ ಹಿಡಿದು ಮಹಿಳೆಯರ ಆತ್ಮಗೌರವ ಹೆಚ್ಚಿಸಿದರು. ಕಾಯಕ ಹಾಗೂ ದಾಸೋಹದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. ಕಾಯಕದಲ್ಲಿ ಹಿರಿದು-ಕಿರಿದು ಎನ್ನುವುದಿಲ್ಲ, ಹೀಗಾಗಿ ಎಲ್ಲರ ಕಾಯಕವನ್ನು ಗೌರವಿಸಬೇಕು. ಶಿವಾಜಿ ಮಹಾರಾಜರ ತತ್ವಗಳನ್ನು ಪ್ರತಿಯೊಬ್ಬರೂ ಅನುಸರಿಸಬೇಕು. ಶಿವಾಜಿಯವರ ತತ್ವಗಳಿಂದ ಯುವಜನರು ಸ್ವಾಭಿಮಾನ, ಧೈರ್ಯ ಹಾಗೂ ರಾಷ್ಟ್ರಸೇವೆ ಮಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು. ಹಿಂದೂ ಸಾಮ್ರಾಜ್ಯವನ್ನು ಅತ್ಯುನ್ನತ ಸ್ಥಾನದಲ್ಲಿರುವಂತೆ ಹೋರಾಡಿದವರೇ ಛತ್ರಪತಿ ಶಿವಾಜಿಯವರು. ನೀತಿವಂತ, ವಿಚಾರಶೀಲ, ಧರ್ಮವಂತ, ಸುಶೀಲ, ಪರೋಪಕಾರಿ ರಾಜನಾಗಿದ್ದರು. ಇಂತಹ ಪುಣ್ಯ ಪುರುಷರ ಜಯಂತಿಗಳನ್ನು ಇನ್ನಷ್ಟು ಸಂಭ್ರಮದಿಂದ ಆಚರಿಸಬೇಕು ಎಂದರು.

ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ, ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ, ನಡೆ ನುಡಿಯಿಂದ ಮಾತ್ರ ಶ್ರೇಷ್ಠನಾಗಲು ಸಾಧ್ಯ ಎನ್ನುವುದಕ್ಕೆ ಸರ್ವರನ್ನೂ ಸಮಾನವಾಗಿ ಕಂಡ ಮಹಾಪುರುಷ ಬಸವೇಶ್ವರರು ಮತ್ತು ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಎತ್ತಿಹಿಡಿದ ಹಿಂದೂ ಹೃದಯ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರೇ ನಿದರ್ಶನವಾಗಿದ್ದಾರೆ. ಬಸವ ಧರ್ಮದಲ್ಲಿ ಹುಟ್ಟಿದ ನಾವೇ ಧನ್ಯರು ಎಂದರು.

ಈ ಸಂದರ್ಭದಲ್ಲಿ ಕಾರ್ಖಾನೆಯ ಅಧ್ಯಕ್ಷ ಮಲಗೊಂಡಾ ಪಾಟೀಲ, ಸಂಚಾಲಕ ಅವಿನಾಶ ಪಾಟೀಲ, ಪ್ರಕಾಶ ಶಿಂಧೆ, ಸಮಿತ ಸಾಸನೆ, ರಾವಸಾಹೇಬ ಫರಳೆ, ಜಯವಂತ ಭಾಟಲೆ, ರಮೇಶ ಪಾಟೀಲ, ಸುಹಾಸ ಗೂಗೆ, ರಾಮಗೊಂಡಾ ಚೌಗುಲೆ, ಭರತ ನಸಲಾಪೂರೆ, ಆನಂದ ಯಾದವ, ದೇವಪ್ಪ ದೇವಕತೆ, ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೇಬ ಶಿರಗಾವೆ, ಕಾರ್ಖಾನೆಯ ಸದಸ್ಯರು, ಸಿಬ್ಬಂದಿ, ರೈತರು ಉಪಸ್ಥಿತರಿದ್ದರು. ಸಂಚಾಲಕ ಶ್ರೀಕಾಂತ ಬನ್ನೆ ಸ್ವಾಗತಿಸಿದರು. ಗಜಾನನ ರಾಮನಕಟ್ಟಿ ನಿರೂಪಿಸಿದರು. ಪ್ರಧಾನ ವ್ಯವಸ್ಥಾಪಕ ಕೆ.ಎನ್. ಗಿಜವಣೆ ವಂದಿಸಿದರು.



ಇರ್ವರು ಸಮಾನತೆಗೆ ಹೋರಾಡಿದ ಮಹಾತ್ಮರು

ಮನ ಶುದ್ಧಿಗಾಗಿ ಶಿವಯೋಗ ತನು ಶುದ್ಧಿಗಾಗಿ ಕಾಯಕವನ್ನು ಪ್ರತಿಯೊಬ್ಬರೂ ಮಾಡಬೇಕು. ಛತ್ರಪತಿ ಶಿವಾಜಿ ಮಹಾರಾಜರ ವ್ಯಕ್ತಿತ್ವವು ಬಹಳ ದೊಡ್ಡದಾಗಿದೆ. ಶಿವಾಜಿ ಮಹಾರಾಜರು ಅನ್ಯಾಯದ ವಿರುದ್ಧ ಹೋರಾಟ ಮಾಡಿದ ಧೀಮಂತ ನಾಯಕರು. ಹಿಂದೂಗಳು ಹಾಗೂ ದಲಿತರಿಗೆ ಹಿಂಸೆ ಕೊಡುತ್ತಿದ್ದ ಪರಕೀಯರ ವಿರುದ್ಧ ಸಿಡಿದೆದ್ದು ಹೋರಾಡಿದರು. ಮಹಿಳೆಯರಿಗೆ ಪೂಜ್ಯ ಸ್ಥಾನ ಕೊಟ್ಟ ಶಿವಾಜಿಯವರು ಭಾವೈಕ್ಯತೆಗಾಗಿ ಹಾಗೂ ಸರ್ವಧರ್ಮ ಸಮನ್ವಯತೆಗಾಗಿ ಹೋರಾಡಿದ ಶೂರರು. ಶಿವ-ಬಸವ ಜಯಂತಿಯನ್ನು ಎಲ್ಲ ಸಮಾಜದ ಜನರು ಒಗ್ಗೂಡಿ ಅರ್ಥಪೂರ್ಣವಾಗಿ ಆಚರಿಸಬೇಕಾಗಿದೆ ಎಂದು ಶಾಸಕಿ ಶಶಿಕಲಾ ಜೊಲ್ಲೆ ಹೇಳಿದರು.

ಬಸವಣ್ಣವರ ತತ್ವ ಅಳವಡಿಸಿಕೊಳ್ಳಿ

◆ **ಮೂಡಲಗಿ:** ಸಮಾಜದಲ್ಲಿ ಬಸವಣ್ಣವರ ತತ್ವಗಳನ್ನು ಅಳವಡಿಸಿಕೊಂಡು ಈಗಿನ ಯುವಜನತೆಗೆ ಮಾದರಿಯಂತೆ ನಡೆದರೆ ಯಾವುದೇ ಅಪರಾಧಕ್ಕೆ ಅವಕಾಶ ಇರುವುದಿಲ್ಲ ಎಂದು ಶಶಿಕಾಂತ್ ಗುರೂಜಿ ಹೇಳಿದರು

ಕಲ್ಲೋಳಿಯ ಪಟ್ಟಣದಲ್ಲಿ ಬಸವ ಕಮಿಟಿ ವತಿಯಿಂದ ಉಚಿತ ಸಾಮೂಹಿಕ ಗುಗ್ಗಳ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿ ಮಾತನಾಡಿದರು.

ಈಗಿನ ಪ್ರಸ್ತುತ ಜೀವನದಲ್ಲಿ ಬಸವಣ್ಣವರ ತತ್ವಗಳು ಅನುಕರಣೀಯ ಆದರೆ ಇವುಗಳನ್ನು ಸಮಾಜದಲ್ಲಿ ಪಾಲಿಸುತ್ತಿಲ್ಲ ಎಂಬುದು ಕಳವಳಿಕಾರ ವಿಷಯವಾಗಿದೆ. ಕಲ್ಲೋಳಿ ಪಟ್ಟಣವು ಜಾತಿ ಮತ ಪಂಥ ಭೇದಭಾವವಿಲ್ಲದ ಈ ರೀತಿ ಬಸವಣ್ಣನವರ ಜಯಂತಿಯ ಹಾಗೂ ಉತ್ಸವಗಳು ನಡೆಯುತ್ತಿರುವುದು ನಾಡಿನ ಜನತೆಗೆ ಮಾದರಿಯಾಗಿದೆ. ಇದು ಕಲ್ಲೋಳಿಯ ಹಿರಿಮೆಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವ ಕಮಿಟಿಯ ಸಂಸ್ಥಾಪಕ ಅಧ್ಯಕ್ಷ ಈರಣ್ಣ ಬೆಳಕೂಡ ವಹಿಸಿದ್ದರು

ಅಧ್ಯಕ್ಷತೆಯನ್ನು ಬಸವ ಸಮಿತಿಯ ಅಧ್ಯಕ್ಷ ರಮೇಶ ಬೆಳಕೂಡ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಕಲ್ಲಪ್ಪ ಗುರುಸಿದ್ದಪ್ಪ ಕಡಾಡಿ, ಪ್ರಗತಿಪರ ರೈತ ಪರಪ್ಪ ಗುರುಸಿದ್ದಪ್ಪ ಕಡಾಡಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಈ ವರ್ಷ ಸಾಮೂಹಿಕ ಉಚಿತ ಗುಗ್ಗಳೋತ್ಸವದಲ್ಲಿ ಸುಮಾರು 20 ಗುಗ್ಗುಳ ತಂಡಗಳು ಭಾಗವಹಿಸಿದ್ದು, ಈ ಸಂದರ್ಭದಲ್ಲಿ ಸಾಧಕರನ್ನು ಫಲಪುಷ್ಪ ನೀಡಿ ಸನ್ಮಾನಿಸಲಾಯಿತು. ವೇದಿಕೆ ಮೇಲೆ ಬಸವ ಕಮಿಟಿಯ ಕಾರ್ಯದರ್ಶಿ ಮಲ್ಲಪ್ಪ ಕೆಂಚಪ್ಪ ಕಡಾಡಿ, ಖಜಾಂಜಿ ಕೃಷ್ಣಪ್ಪ ಮುಂಡಿ ಗನಾಳ, ಸದಸ್ಯರಾದ ಪರಪ್ಪ ಮಟ್ಟಿಗಾರ್, ಮಹದೇವ್ ಖಾನಾಪುರ್ ಉಪಸ್ಥಿತರಿದ್ದರು. ಈ ಎಲ್ಲಾ ಕಾರ್ಯಕ್ರಮಗಳ ಉಸ್ತುವಾರಿಯನ್ನು ಪ್ರಿಯದರ್ಶಿನಿ ಬ್ಯಾಂಕ್ ಶಾಖಾಧಿಕಾರಿ ಮಂಜು ಹಾಗೂ ಸಿಬ್ಬಂದಿ ವರ್ಗದವರು ವಹಿಸಿಕೊಂಡಿದ್ದರು

ಡಾ. ಭೋಜರಾಜ್ ಬೆಳಕೂಡ ಸ್ವಾಗತಿಸಿ, ಬಸವ ಕಮಿಟಿಯ ಸದಸ್ಯರಾದ ಗಿರಿಮಲ್ಲಪ್ಪ ಸವಸುದ್ದಿ ವರದಿ ವಾಚನ ಮಾಡಿದರು. ರಮೇಶ್ ಹೆಬ್ಬಾಳ್ ಕಾರ್ಯನಿರ್ವಹಿಸಿದರು. ಪ್ರಕಾಶ ಗರಗಟ್ಟಿ ವಂದಿಸಿದರು.



ಸಮ ಸಮಾಜದ ಹರಿಕಾರ ಬಸವಣ್ಣನವರು

◆ **ಅಥಣಿ :** ಕಾಯಕವೇ ಕೈಲಾಸ ಎಂಬ ತತ್ವದ ಮೂಲಕ ಜಗತ್ತಿಗೆ ಸಮಾನತೆಯ ಸಂದೇಶವನ್ನು ಸಾರಿದ ವಿಶ್ವಗುರು ಬಸವಣ್ಣನವರ ವಿಚಾರಧಾರೆಗಳು ಮತ್ತು ವಚನ ಸಾಹಿತ್ಯ ಇಂದಿಗೂ ಪ್ರಸ್ತುತವಾಗಿವೆ. ಅವರ ವಿಚಾರಧಾರೆಗಳನ್ನು ಮುಂದಿನ ಯುವ ಪೀಳಿಗೆಗೆ ತಿಳಿಸಿಕೊಡುವ ಮೂಲಕ ಜಾತಿ, ಮತ, ಲಿಂಗ ಭೇದವಿಲ್ಲದ ಸಮಸಮಾಜ ಕಟ್ಟುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬಸವ ಜಯಂತಿ ನಿಮಿತ್ತ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಬಸವಣ್ಣನವರ ವಿಚಾರಧಾರೆಗಳು ಮತ್ತು ವಚನ ಸಾಹಿತ್ಯ ಕೇವಲ ಭಾಷಣಗಳಿಗೆ ಸೀಮಿತವಾಗಬಾರದು, ಅವರು ಬೋಧಿಸಿದ ಮಾರ್ಗದಲ್ಲಿ ನಡೆದು ಸಮಾಜದ ಸುಧಾರಣೆಗೆ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದರು.

ಗಚ್ಚಿನ ಮಠದ ಶಿವಬಸವ ಸ್ವಾಮೀಜಿ, ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ, ಶೆಟ್ಟರ ಮಠದ ಮರುಳುಸಿದ್ದ ಸ್ವಾಮೀಜಿ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಶಹಜಹಾನ ಡೊಂಗರಗಾವ, ಪುರಸಭೆಯ ಅಧ್ಯಕ್ಷ ಶಿವಲೀಲಾ ಸದಾಶಿವ ಬುಟಾಳಿ, ಉಪಾಧ್ಯಕ್ಷ ಭುವನೇಶ್ವರಿ ಯಕ್ಕಂಚಿ, ಸ್ಥಾಯಿ ಸಮಿತಿ ಅಧ್ಯಕ್ಷ ದತ್ತ ವಾಸ್ಟರ್

ಮುಖಂಡರಾದ ಸದಾಶಿವ ಬುಟಾಳಿ, ರಾವಸಾಬ ಐಹೊಳೆ, ಶಿವರುದ್ರ ಗೂಳಪ್ಪನವರ, ಅರುಣ ಬಾಸಿಂಗಿ, ರಮೇಶ್ ಕಾಗಲೆ, ಶಿವಾನಂದ ಹುನ್ನೂರ, ಮಾರುತಿ ಐಗಳಿ, ಶಿವಾನಂದ ದಿವಾನಮಳ, ಅನಂತ ಬಸರಿಕೋಡಿ, ರವಿ ಬಡಕಂಬಿ, ಶ್ರೀಶೈಲ ನರೋಟಿ, ರಾಮು ಬಡಕಂಬಿ, ಕೇದಾರಿ ಬಾಷಿಂಗಿ, ಅಶೋಕ ಕಾಗಲೆ, ಶಿವಾನಂದ ಆಸಂಗಿ, ವೀರಣ್ಣ ವಾಲಿ, ಪ್ರವೀಣ ಹುಣಸಿಕಟ್ಟಿ, ಡಾ. ಬಸಗೌಡ ಕಾಗೆ, ಮಲ್ಲಿಕಾರ್ಜುನ ಮಗದುಮ್ಮ, ಅಣ್ಣಾಸಾಬ ತೆಲಸಟಗ, ರಾಜೇಶ ಅಲಬಾಳ, ಸ್ವಾಗತ ತೋರಿ, ರಾಜು ಹಿರೇಮಠ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.



ಛತ್ರಪತಿ ಶಾಹು ಮಹಾರಾಜ ಕೋ ಅಪ್ ಕ್ರೆಡಿಟ್ ಸೊಸೈಟಿ ಉದ್ಘಾಟನೆ

◆ **ಚಿಕ್ಕೋಡಿ:** ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕೂಡ ಸಾಲ ಸೌಲಭ್ಯ ದೊರೆಯುವ ಉದ್ದೇಶದಿಂದ ಪಟ್ಟಣದಲ್ಲಿ ಛತ್ರಪತಿ ಶಾಹು ಮಹಾರಾಜರ ಹೆಸರಿನಲ್ಲಿ ಸೊಸೈಟಿ ಸ್ಥಾಪಿಸಲಾಗಿದೆ. ಸೊಸೈಟಿ ಮೂಲಕ ಸಮಾಜಮುಖಿ ಕೆಲಸಗಳಲ್ಲೂ ಕೂಡ ಮಾಡಲಾಗುವುದು ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಮಹಾವೀರ ಮೋಹಿತೆ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದ ಎದುರುಗಡೆ ಸೋಮವಾರ ಛತ್ರಪತಿ ಶಾಹು ಮಹಾರಾಜ ಕೋ ಅಪ್ ಕ್ರೆಡಿಟ್ ಸೊಸೈಟಿ ಉದ್ಘಾಟಿಸಿ ಮಾತನಾಡಿದ ಅವರು, ಬ್ಯಾಂಕಿನ ವ್ಯವಹಾರವನ್ನು ಗ್ರಾಹಕರಿಗೆ ತಲುಪಿಸುವದರೊಂದಿಗೆ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲಾಗುವುದು. ಮುಂಬರುವ ದಿನಗಳಲ್ಲಿ ಜಿಲ್ಲೆಯಾದ್ಯಂತ ಸೊಸೈಟಿಯ ಶಾಖೆಗಳನ್ನು ತೆರೆಯುವ ಉದ್ದೇಶ ಹೊಂದಲಾಗಿದೆ ಎಂದರು.

ಮುಖಂಡ ರುದ್ರಪ್ಪ ಸಂಗಪ್ಪಗೋಳ ಮಾತನಾಡಿ, ಮಹಾವೀರ ಮೋಹಿತೆ ಅವರು ಕಳೆದ 2 ದಶಕಗಳಿಂದ ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿದ್ದು, ಇದೀಗ ಸಹಕಾರಿ ಕ್ಷೇತ್ರದಲ್ಲಿ ಅಡಿ ಇಟ್ಟಿದ್ದಾರೆ. ಈ ಮೂಲಕ ನೊಂದವರ ಧ್ವನಿಯಾಗಿ ಸಮಾಜಮುಖಿ ಕಾರ್ಯ ಮಾಡಲು ಮತ್ತಷ್ಟು ಬಲವನ್ನು ಮೋಹಿತೆ ಅವರಿಗೆ ತಂದುಕೊಡಲಿದೆ ಎಂದು ಹೆಮ್ಮೆಪಟ್ಟರು.



ಈ ಸಂದರ್ಭದಲ್ಲಿ ಅರ್ಜುನ ಬಂಡಗರ, ದಿಲೀಪ ಜಮಾದಾರ, ಲಗಮಣ್ಣಾ ನಾಗರಾಳೆ, ಗಣೇಶ ಮೋಹಿತೆ, ಉಪಾಧ್ಯಕ್ಷೆ ಜಯಶ್ರೀ ಮೋಹಿತೆ, ನಿರ್ದೇಶಕರಾದ ಸುರೇಶ ಖೋತ, ಕೃಷ್ಣಾ ಜಿಗಳೆ, ಅರುಣ ನರಗುಂದೆ, ಜಂಬು ಮೋಹಿತೆ, ಮಹ್ಮದ ಪಟೇಲ್, ಸಲೀಮ್ ಗೌಂಡಿ, ಲಕ್ಷ್ಮೀ ಇಟ್ನಾಳೆ, ಸದಾಶಿವ ಮುರಚೆಟ್ಟಿ, ಇಸಾಕ ಚಕ್ರಿ, ರೋಹಿತ ಮುಕುಂದ, ಕೃಷ್ಣಾ ಗಸ್ತಿ ಮುಂತಾದವರು ಇದ್ದರು.

ಸಂಘ ಮಾದರಿ ಕಾರ್ಯ ಮಾಡಲಿ

◆ **ಕಾಗವಾಡ:** ಜನಶಕ್ತಿ ಸೇವಾ ಸಂಘವು ದೇಶ ಹಾಗೂ ರಾಜ್ಯದಲ್ಲಿ ಮಾದರಿ ಸಂಘವಾಗಲಿ ಎಂದು ಉಗಾರ ಶುಗರ್ಸ್ ಕಾರ್ಖಾನೆಯ ಜನರಲ್ ಮ್ಯಾನೇಜರ್ ಅನಂತ ಸಿದ್ಧಾಂತಿ ಹೇಳಿದರು.

ಸಮೀಪದ ಉಗಾರ ಖುರ್ದ ಪಟ್ಟಣದ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದ ಜನಶಕ್ತಿ ಸೇವಾ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ನೊಂದ, ನಿರ್ಗತಿಕರಿಗೆ ಜನರಿಗೆ ಸಂಘ ಅನುಕೂಲವಾಗಲಿ ಹಾಗೂ ಕಾನೂನು ಚೌಕಟಿನಲ್ಲಿ ಈ ಸಂಘ ಸ್ಪಂದಿಸಲಿ ಎಂದರು.

ಅಥಣಿ ನ್ಯಾಯವಾದಿ ಶ್ರೀಶೈಲ ಮೇತ್ರಿ ಮಾತನಾಡಿದರು. ಈ ಸಂದರ್ಭದಲ್ಲಿ ನ್ಯಾಯವಾದಿ ವಿಜಯ ದೇಸಾಯಿ ರಾಘವೇಂದ್ರ ಹಳಿಂಗಳಿ, ಹಿರಿಯರಾದ ವಿರಭದ್ರ ಕಟಗೇರಿ, ವಿನಾಯಕ ಕಾಂಬಳೆ, ರಾಜು ಯಶವಾಡೆ, ದಾವಲಮಲಿಕ ಜಮುಖಾನೆ, ಹಾರೂಣ ಮುಲ್ಲಾ, ಶಾನೂರ ಜಮುಖಾನೆ ದಿಲಿಪ ಕಾಂಬಳೆ, ಹಾಜಿಸಾಬ ಶೇಖ, ತೋಪೇಲಹ್ಮದ ಮುಜಾವರ, ಮುಬಾರಕ ನದಾಪ, ಕುಮಾರ ಯಾದವ ಜೈನುದಿನ ಇನಾಮದಾರ, ಚಂದ್ರಕಾಂತ ಶೇಟ್ಟಿ, ರಾಮಾ ಕಾಂಬಳೆ ಹಾಗೂ ಪಟ್ಟಣದ ನಾಗರಿಕರು ಸೇರಿದಂತೆ ಇತರರು ಇದ್ದರು. ನ್ಯಾಯವಾದಿ ರಾಹುಲ ಕಟಗೇರಿ ನಿರೂಪಿಸಿ ವಂದಿಸಿದರು.



ಪುರುಷರ ಕಬಡ್ಡಿ ಪಂದ್ಯಾವಳಿ : ಬೆಳ್ಳುಬ್ಬಿ ಕಾಲೇಜ್‌ಗೆ ಗೆಲುವು

◆ **ಸವದತ್ತಿ:** ಕ್ರೀಡಾಪಟುಗಳು ಕ್ರೀಡೆ ಮತ್ತು ಅಧ್ಯಯನದಲ್ಲೂ ಪರಿಣತಿಯನ್ನು ಸಾಧಿಸಿದರೆ ಉನ್ನತವಾದ ಅವಕಾಶಗಳನ್ನು ಪಡೆಯಬಹುದು ಎಂದು ಬೆಳಗಾವಿ ಅಮೇಚೂರ್ ಕಬಡ್ಡಿ ಸಂಸ್ಥೆಯ ತೀರ್ಪುಗಾರರ ಮಂಡಳಿಯ ಕಾರ್ಯಾಧ್ಯಕ್ಷರಾದ ಬಿ.ಸಿ.ಹರ್ಲಾಪುರ ಹೇಳಿದರು.

ಇಲ್ಲಿನ ಕೆಎಲ್‌ಇ ಸಂಸ್ಥೆಯ ಎಸ್. ವಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದ ಕ್ರೀಡಾಂಗಣದಲ್ಲಿ ಜರುಗಿದ ಬೆಳಗಾವಿ ರಾಣಿಚನ್ನಮ್ಮ ವಿಶ್ವವಿದ್ಯಾಲಯ ಮತ್ತು ಕೆ. ಎಲ್. ಇ. ಸಂಸ್ಥೆಯ ಎಸ್. ವಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದ ಸಹಯೋಗದಲ್ಲಿ ಏರ್ಪಡಿಸಿದ್ದ 2025-26ನೆಯ ಸಾಲಿನ ಪ್ರಥಮ ವಲಯ ಪುರುಷರ ಕಬಡ್ಡಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಸ್ಪರ್ಧಾ ಮನೋಭಾವವನ್ನು ಹೊಂದುವುದು ಅತ್ಯಗತ್ಯ. ಆಗ ಮಾತ್ರ ಆರೋಗ್ಯಕರ ಸ್ಪರ್ಧೆಗಳು ನಡೆಯಲು ಸಾಧ್ಯ. ಸೋಲು ಗೆಲುವು ಒಂದು ತೀರ್ಪು ಮಾತ್ರ. ಸೋತವರು ಜೀವನದಲ್ಲಿ ಸೋತಂತೆ ಅಲ್ಲ, ಒಂದು ಸ್ಪರ್ಧೆಯಲ್ಲಿ ಮಾತ್ರ ಸೋತಂತೆ, ಕಠಿಣ ಪರಿಶ್ರಮ ವಹಿಸಿ ನಿಗದಿತ ಸಮಯದೊಳಗೆ ಸಾಧಿಸುವ ಗುರಿಯಿಟ್ಟುಕೊಂಡು ಶ್ರಮವಹಿಸಿದಲ್ಲಿ ಗೆಲುವನ್ನು ಪಡೆಯಬಹುದು ಎಂದರು.

ಪಟ್ಟಣದ ಕೆ. ಎಲ್. ಇ. ಸಂಸ್ಥೆಯ ಎಸ್. ವಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದ ಕಬಡ್ಡಿ ತಂಡ ಪ್ರಥಮ ಸ್ಥಾನ, ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯ ದ್ವಿತೀಯ ಹಾಗೂ ಬೆಳಗಾವಿಯ ಬಿ.ಕೆ.ಕಾಲೇಜು ತೃತೀಯ ಸ್ಥಾನ ಪಡೆದುಕೊಂಡವು.

ಈ ಪಂದ್ಯಾವಳಿಯಲ್ಲಿ ಬೆಸ್ಟ್ ರೈಡರ್ ಆಗಿ ಅಭಿಷೇಕ್ ಹಟ್ಟಿಹೊಳಿ, ಬೆಸ್ಟ್ ಡಿಫೆಂಡರ್ ಗಣೇಶ್ ಹೊನ್ನಿಕೊಳಿ ಮತ್ತು ಬೆಸ್ಟ್ ಆಲ್‌ರೌಂಡರ್ ಆಗಿ ಓಂಕಾರ ಶಿರಗಾಂವಕರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಎನ್.ಆರ್.ಸವತಿಕರ ವಹಿಸಿದ್ದರು. ಐಶ್ವರ್ಯ ಗುಡೆನವರ ಪ್ರಾರ್ಥಿಸಿದರು, ಪ್ರೊ. ಕೆ.ರಾಮರೆಡ್ಡಿ ಸ್ವಾಗತಿಸಿದರು, ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಶಿವಾನಂದ ಎಂ. ಹೊಳಿ ಪ್ರಾಸ್ತಾವಿಕ ನುಡಿಗಳನ್ನಾಡಿದರು, ವೇದಿಕೆ ಮೇಲೆ ಬೆಳಗಾವಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎಲ್.ಪಿ.ಬೂದನವರ ಉಪಸ್ಥಿತರಿದ್ದರು, ಪ್ರೊ.ಪಿ.ಎಫ್.ಹಾದಿಮನಿ ವಂದಿಸಿದರು, ಪ್ರೊ.ಎಂ.ಎನ್.ಸಂಗೊಳ್ಳಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಡಾ.ಎ.ಎಫ್.ಬದಾಮಿ, ಎಸ್.ವಿ.ಹಿರೇಮಠ, ಬಿ.ಬಿ.ಕಬಾಡಗಿ, ಆನಂದ ಯರಗೊಪ್ಪ, ಗಣೇಶ್ ನಾಯಕ, ಸಂಗಮೇಶ ಪೂಜಾರ, ನಾಗರಾಜ ಕರಿಕಟ್ಟಿ, ಮೋಹನ್.ಬಿ., ಎಂ.ಸಿ.ಹಾದಿಮನಿ, ಭಾಗ್ಯಶ್ರೀ ಪೊಲೇಶಿ, ಸ್ನೇಹಾ ಗಂಗಲ, ಕಿರಣ್ ಲಮಾಣಿ, ಕೆ.ಬಿ.ನರಗುಂದ, ಎಸ್.ಜೆ.ಮಜ್ಜಗಿ, ಎ.ಆರ್.ಪಮ್ಮಾರ, ಗೀತಾ ಮಲ್ಲಾಪುರ, ವಿವೇಕ ಸುಳೆಭಾವಿ, ಅಮೃತ ಹೂಗಾರ, ಹಳೆಯ ವಿದ್ಯಾರ್ಥಿ ಬಸವರಾಜ ಮಟ್ಟಿ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿವಿಧ ಕಾಲೇಜುಗಳಿಂದ ಆಗಮಿಸಿದ ಕ್ರೀಡಾ ಪಟುಗಳು, ಮಹಾವಿದ್ಯಾಲಯದ ಹಳೆಯ ಕ್ರೀಡಾಪಟುಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಸೋಮವಾರ ಪೇಟೆಯ ರಸ್ತೆ ಅಗಲೀಕರಣಕ್ಕೆ ಆದ್ಯತೆ ನೀಡಿ

◆ **ಚನ್ನಮ್ಮನ ಕಿತ್ತೂರು:** ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ಗೊಂಬಿ ಗುಡಿಯಿಂದ ಸೋಮವಾರಪೇಟೆ ಹಾಗೂ ಡೊಂಬರಕೊಪ್ಪ ಪ್ರವಾಸಿ ಮಂದಿರದವರೆಗೆ ರಸ್ತೆ ಅಗಲಿಕರಣ ಮಾಡಬೇಕೆಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಪ್ರವೀಣ ಸರದಾರ ಅವರು ಶಾಸಕ ಬಾಬಾಸಾಹೇಬ ಪಾಟೀಲ ಅವರನ್ನು ಆಗ್ರಹಪಡಿಸಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗುರುವಾರ ಪೇಠೆಯನ್ನು ಅಗಲೀಕರಣ ಮಾಡಿದಂತೆ ಸೋಮವಾರ ಪೇಠೆಯನ್ನು ಅಗಲೀಕರಣ ಮಾಡಬೇಕು. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂಬಂತಾಗದೇ ಐತಿಹಾಸಿಕ ಪಟ್ಟಣವು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಬೇಕಾಗಿದೆ ಪ್ರವಾಸಿಗರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಮುಖ್ಯವಾಗಿದ್ದ ಇಕ್ಕಟ್ಟಾದ ರಸ್ತೆಯಲ್ಲಿ ವಾಹನಗಳು, ಸಾರ್ವಜನಿಕರು ಸಂಚರಿಸುವದು ತುಂಬಾ ಕಠಿಣವಾಗಿದೆ, ರೈಲು ಮಾರ್ಗವು ಪ್ರಾರಂಭವಾಗುವ ಹಂತದಲ್ಲಿದ್ದು ಕೋಟೆಯ ಮುಂಭಾಗದಲ್ಲಿಯೇ ರೈಲು ನಿಲ್ದಾಣವಾಗುತ್ತದೆ ಆದರಿಂದ ಪ್ರವಾಸಿಗರ ಸಂಖ್ಯೆಯು ಅಧಿಕವಾಗಿ ವ್ಯಾಪಾರ ವಹಿವಾಟುಗಳು ಏರಿಕೆಯಾಗುತ್ತವೆ ಇದನ್ನೆಲ್ಲ ಗಮನದಲ್ಲಿರಿಸಿಕೊಂಡು ರಸ್ತೆ ಅಗಲೀಕರಣಕ್ಕೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಪಟ್ಟಣ ಪಂಚಾಯತಿಯಿಂದ ನಿವೇಶನ ರಹಿತ ಬಡ ಜನರಿಗೆ ಮನೆಗಳನ್ನು ಮಂಜೂರ ಮಾಡುತ್ತೇವೆಂದು ಅರ್ಜಿಯನ್ನು ಪಡೆದುಕೊಂಡು ಬಹಳ ದಿನಗಳಾಯಿತು. ಅವುಗಳ ಬಗ್ಗೆಯೂ ಗಮನ ಹರಿಸಬೇಕೆಂದರು.

ರಸ್ತೆ ಅಗಲೀಕರಣ ಕಾಮಗಾರಿಗೆ ಬೇಗನೆ ಕ್ರಮ ಜರುಗಿಸಬೇಕು ಇಲ್ಲದಿದ್ದರೆ ರೈತ ಸಂಘಟನೆಗಳಿಂದ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು.

ಕಿತ್ತೂರ ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ ಮಾತನಾಡಿ ಕಿತ್ತೂರಿನ ಗುರುವಾರ ಪೇಠೆ ಸೋಮವಾರ ಪೇಠೆಯಂದರೆ ಐತಿಹಾಸಿಕ ಪಟ್ಟಣಕ್ಕೆ ಇವರೆಡು ಮುಖ್ಯ ರಸ್ತೆಗಳಾಗಿದ್ದು ಈಗಾಗಲೇ ಗುರುವಾರ ಪೇಠೆಯ ಅಗಲೀಕರಣ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು ಅದರಂತೆ ಸೋಮವಾರ ಪೇಠೆಯನ್ನು ಅಗಲೀಕರಣ ಮಾಡಲು ಶಾಸಕರು ಕ್ರಮ ಜರುಗಿಸಬೇಕು ಐತಿಹಾಸಿಕ ಚನ್ನಮ್ಮಾಜಿಯ ಕಿತ್ತೂರಿನ ಸೌಂದರ್ಯವನ್ನು ಹೆಚ್ಚಿಸಲು ಸೋಮವಾರ ಪೇಟೆಯ ನಾಗರಿಕರು ಸಹಕರಿಸಿ ಅಭಿವೃದ್ಧಿಗೆ ಕೈ ಜೋಡಿಸಬೇಕೆಂದರು.

ವಿಶ್ವನಾಥ ಹಾಲ್ಮಠ, ಈರಣ್ಣ ಅಕ್ಕಿ, ಶಿವಾನಂದ ತೇಗೂರ ಮುಂತಾದವರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಬೀಳ್ಕೊಡುಗೆ ಸಮಾರಂಭ

ಬಾಗಲಕೋಟೆ: ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲದ ಬಿ.ಎ, ಬಿ.ಕಾಂ ವಿದ್ಯಾರ್ಥಿಗಳಿಗೆ ಬೀಳ್ಕೊಡುವ ಸಮಾರಂಭ ಏ.22ರಂದು ಮುಂಜಾನೆ 11 ಗಂಟೆಗೆ ಸರಳಾಬಾಯಿ ಭಾಗವತ ಸಭಾಭವನದಲ್ಲಿ ಜರುಗಲಿದೆ. ಸಂಸ್ಥೆಯ ಕಾರ್ಯಾಧ್ಯಕ್ಷತೆಯನ್ನು ಶ್ರೀಲತಾ ಹೆರಂಜಲ್ ಅಧ್ಯಕ್ಷತೆ ವಹಿಸುವರು. ಬಾದಾಮಿಯ ನಿವೃತ್ತ ಪ್ರಾಚಾರ್ಯ ಜಿ.ಬಿ.ಶೀಲವಂತ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಗೌರವ ಕಾರ್ಯದರ್ಶಿ ಡಾ. ಗಿರೀಶ ಮಸೂರಕರ ಹಾಗೂ ಕಾಲೇಜ ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಉಪಸ್ಥಿತರಿರುವರು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ತಿಳಿಸಿದ್ದಾರೆ.

ಇಂದು ತೆಗ್ಗಿ ಗ್ರಾಮದೇವತೆಗಳ ಜಾತ್ರೆ

ಗುಳೇದಗುಡ್ಡ: ತಾಲೂಕಿನ ತೆಗ್ಗಿ ಗ್ರಾಮದಲ್ಲಿ ಮೂರು ವರ್ಷಕ್ಕೊಮ್ಮೆ ನಡೆಯಲಿರುವ ಗ್ರಾಮದೇವತೆ ದ್ಯಾಮವ್ವ ದುರ್ಗವ್ವ ಜಾತ್ರಾ ಮಹೋತ್ಸವದ ಅಂಗವಾಗಿ ಏ.22ರಂದು ಮಧ್ಯಾಹ್ನ 12 ಗಂಟೆಗೆ ಮಹಾರಥೋತ್ಸವ ಜರುಗಲಿದೆ. ಅಂದು ಬೆಳಿಗ್ಗೆ 7 ಗಂಟೆಗೆ ಗ್ರಾಮದ ದೇವಸ್ಥಾನದಿಂದ ಡೊಳ್ಳು, ಶಹನಾಯಿ ಮುಂತಾದ ವಾದ್ಯಗಳೊಂದಿಗೆ ಬಾಬದಮನೆಯ ಕಳಸದವರು ಹಳ್ಳಕ್ಕೆ ಹೋಗಿ ಅಲ್ಲಿ ಗ್ರಾಮ ದೇವತೆಗಳ ಸೀರೆಯನ್ನು ಪೂಜೆ ಮಾಡಿಕೊಂಡು ಬರುತ್ತಾರೆ. ಅಲ್ಲಿಂದ ತಂದ ಸೀರೆಗಳನ್ನು ದೇವತೆಗಳಿಗೆ ಉಡಿಸಿದ ಬಳಿಕ ಗ್ರಾಮದ ಪ್ರತಿಯೊಂದು ಮನೆಯವರು ದೇವತೆಗಳಿಗೆ ಭಕ್ತಿಯಿಂದ ಉಡಿತುಂಬಿಸುತ್ತಾರೆ. ಅಲ್ಲದೆ ದೇವಿಗೆ ಹರಕೆಯನ್ನು ತೀರಿಸುತ್ತಾರೆ. ಬಳಿಕ ಗ್ರಾಮದಲ್ಲಿ ಕಳಸ ಹಾಗೂ ಹಗ್ಗದ ಮೆರವಣಿಗೆ ನಡೆದು, ಮಧ್ಯಾಹ್ನ 12 ಗಂಟೆಗೆ ಗ್ರಾಮದೇವತೆಗಳ ಮೂರ್ತಿಗಳನ್ನು ಇರಿಸಿದ ಮಹಾರಥೋತ್ಸವ ನಡೆಯಲಿದೆ. ರಥೋತ್ಸವದಲ್ಲಿ ತೆಗ್ಗಿ, ರಾಘಾಪೂರು, ತಿಮ್ಮಸಾಗರ, ಕೆಲವಡಿ, ತೋಗಣಸಿ, ಹಂಸನೂರು ಗ್ರಾಮಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಭಕ್ತರು ಹಾಗೂ ಗೋವಾ ರಾಜ್ಯದ ಭಕ್ತರು ಸೇರಿದಂತೆ ಸಾವಿರಾರು ಭಕ್ತರು ಪಾಲ್ಗೊಳ್ಳುವವರು.



ಗುಳೇದಗುಡ್ಡ: ಗ್ರಾಮದೇವತೆ ಮೂಕೇಶ್ವರಿ ದೇವಿಯ ಉಡಿತುಂಬವ ಕಡೆವಾರವಾದ ಮಂಗಳವಾರ ನಗರದ ಸಾವಿರಾರು ಭಕ್ತರು ದೇವಿಗೆ ನೈವೇದ್ಯ ಅರ್ಪಿಸಿದರು. ಹರಕೆ ಹೊತ್ತ ಭಕ್ತರು ದೀಡ್‌ನಮಸ್ಕಾರ ಹಾಕಿ, ದೇವಿಯ ಉಡಿ ತುಂಬಿದರು. ದುರ್ಗವ್ವ ದ್ಯಾಮವ್ವ ಸಂಕವ್ವ ಭರಮದೇವರಿಗೆ ಜನರು ಪೂಜೆ ಸಲ್ಲಿಸಿದರು.



ಹುನಗುಂದ: ನಗರದ ಅಖಿಲ ಕರ್ನಾಟಕ ವಿರಶೈವ ಪರಿಷತ್ ವತಿಯಿಂದ ಬಸವ ಜಯಂತಿ ಆಚರಿಸಲಾಯಿತು. ಶಿವಾನಂದ ಕಂಠಿ, ಸಂಗಣ್ಣ ಗಂಜಿಹಾಳ, ರಾಮನಗೌಡ ಬೆಳ್ಳಿಹಾಳ, ಸುರೇಶ ಪತ್ತಾರ, ರಾಜು ಭಯ್ಯಾಪೂರ, ಮಹಾಂತೇಶ ಹಳ್ಳೂರ, ಬಸಲಿಂಗಪ್ಪ ತಾರಿವಾಳ, ಮಹಾಂತೇಶ ಸುಂಕದ ಸೇರಿದಂತೆ ಇತರರು ಇದ್ದರು.

ರಾಜ್ಯಮಟ್ಟದ ಅತ್ಯುತ್ತಮ ಉಪನ್ಯಾಸಕ ಪ್ರಶಸ್ತಿ

ಕಲಾದಗಿ: ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಕೋರವಾರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಾಗರ ಜೀ ಬಣ(ರಿ), ಕೋರವಾರ ಶಾಖೆ ವತಿಯಿಂದ ಭಾನುವಾರ ನಡೆದ ಡಾ.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಅತ್ಯುತ್ತಮ ಉಪನ್ಯಾಸಕ ಪ್ರಶಸ್ತಿಯನ್ನು ಕಲಾದಗಿಯ ಗ್ರಾಮದ ಗುರುಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಸಿದ್ದು ಮೂಲಿಮನಿ ಅವರಿಗೆ ನೀಡಲಾಗಿದ್ದು ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಅವರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.





ಹುನಗುಂದ: ತಾಲೂಕಿನ ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ವತಿಯಿಂದ 893ನೇ ಬಸವ ಜಯಂತಿ ಪ್ರಯುಕ್ತ ಐಕ್ಯ ಮಂಟಪ ಹೊರ ಆವರಣದಲ್ಲಿ ಬಸವ ಪುತ್ಥಳಿ ಮೆರವಣಿಗೆಗೆ ಪೂಜೆ ಸಲ್ಲಿಸಿ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವಣ್ಣನವರ ಭಾವಚಿತ್ರದ ಮೆರವಣಿಗೆಗೆ ಮಂಡಳಿಯ ಆಯುಕ್ತ ವಿಜಯಕುಮಾರ ಆಜೂರ ಚಾಲನೆ ನೀಡಿದರು. ಮುಖಂಡರಾದ ಗಂಗಾಧರ ದೊಡಮನಿ, ಮಹಾಂತೇಶ ಲಗಮ್ಮನವರ, ಶ್ರೀಕಾಂತ ಹಿರೇಮಠ, ಶಿವಯ್ಯ ಹಿರೇಮಠ, ಮಹಾಂತೇಶ ಕೊಪ್ಪದ, ಮಂಡಳಿಯ ಸಿಬ್ಬಂದಿಗಳಾದ ಹುಲ್ಲಪ್ಪ ಹಿಂದಿನಮನಿ, ವಿಜಯಕುಮಾರ ಕೊಟ್ಟೂರ ಸೇರಿದಂತೆ ಅನೇಕರು ಇದ್ದರು.

ಶಂಕರಾಚಾರ್ಯರ ಜಯಂತಿ ಆಚರಣೆ

ಬಾಗಲಕೋಟೆ: ಭಾರತ ಆದ್ಯ ದಾರ್ಶನಿಕರಲ್ಲಿ ಪ್ರಮುಖರಾದ ಆದಿ ಶಂಕರಾಚಾರ್ಯರ ಜಯಂತಿಯನ್ನು ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ನೀತಿ ಸಂಹಿತೆ ಹಿನ್ನಲೆಯಲ್ಲಿ ಜಿಲ್ಲಾಡಳಿತ ವತಿಯಿಂದ ಮಂಗಳವಾರ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಸೇರಿದಂತೆ ಇತರೆ ಅಧಿಕಾರಿಗಳು ಪುಷ್ಪಾರ್ಪಣೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಂಕರಾಚಾರ್ಯರ ಜೀವನ, ತತ್ವ ಮತ್ತು ಭಾರತೀಯ ಸಂಸ್ಕೃತಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ, ಆಯುಷ ಇಲಾಖೆಯ ಅಧಿಕಾರಿ ಹಿರೇಮಠ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಮೇಶ ಸೂಳಿಕೇರಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಬಾಗಲಕೋಟೆ: ಭಾರತ ಆದ್ಯ ದಾರ್ಶನಿಕರಲ್ಲಿ ಪ್ರಮುಖರಾದ ಆದಿ ಶಂಕರಾಚಾರ್ಯರ ಜಯಂತಿಯನ್ನು ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ನೀತಿ ಸಂಹಿತೆ ಹಿನ್ನಲೆಯಲ್ಲಿ ಜಿಲ್ಲಾಡಳಿತ ವತಿಯಿಂದ ಮಂಗಳವಾರ ಸರಳವಾಗಿ ಆಚರಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಪುಂಡಲೀಕ ಕಾಂಬಳೆ,

ಜೆಮ್ ಸಕ್ಕರೆ ಕಾರ್ಖಾನೆ ಎದುರು ಕಬ್ಬು ಬೆಳೆಗಾರರಿಂದ ಹೋರಾಟ

ರೈತರ ಖಾತೆಗೆ ಹಣ ಪಾವತಿಸಿ

ಬೀಳಗಿ: ತಾಲೂಕಿನ ಕುಂದರಗಿ ಗ್ರಾಮದ ಜೆಮ್ ಸಕ್ಕರೆ ಕಾರ್ಖಾನೆ ಮುಖ್ಯದ್ವಾರದ ಮುಂದೆ ಜೆಮ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡ ಹೋರಾಟದಲ್ಲಿ ಕಬ್ಬು ಬೆಳೆಗಾರರು ಮತ್ತು ಕಾರ್ಖಾನೆಯ ಅಧಿಕಾರಿಗಳ ನಡುವೆ ಹಗ್ಗ ಜಗ್ಗಾಟದ ನಂತರ ಸಂಧಾನ ಯಶಸ್ವಿಗೊಂಡು ಹೋರಾಟ ಸುಖಾಂತ್ಯವಾಯಿತು.

ಕಬ್ಬು ಬೆಳೆಗಾರರು ಮಾತನಾಡಿ, ಕಾರ್ಖಾನೆಯ ಹಿರಿಯ ಅಧಿಕಾರಿಯೋರ್ವರು ಊರೂರು ಸಭೆ ಮಾಡಿ ಕಬ್ಬು ಕಳುಹಿಸಿದ 15 ದಿವಸದಲ್ಲಿ ರೈತರ ಖಾತೆಗೆ ಹಣ ಸಂದಾಯ ಮಾಡುತ್ತೇವೆ ಎಂದು ಭರವಸೆ ನೀಡಿದ್ದರಿಂದ ನಾವು ಕಾರ್ಖಾನೆಗೆ ಕಬ್ಬು ಕಳಿಸಿದ್ದೇವೆ. ಮೂರ್ನಾಲ್ಕು ತಿಂಗಳು ಗತಿಸಿದರೂ ಬಿಲ್ ಕೊಡುತ್ತಿಲ್ಲ ಏಕೆ? ಕಾರ್ಖಾನೆ ಕಬ್ಬು ನುರಿಸುವ ಹಂಗಾಮಿನ ಕೊನೆಯಲ್ಲಿ ಟೇಬಲ್ ಕ್ಯಾಶ್ ಕೊಟ್ಟಿದ್ದೀರಿ. ನಾವು ಕಬ್ಬು ಕಳುಹಿಸಿ ಮೂರ್ನಾಲ್ಕು ತಿಂಗಳು ಗತಿಸಿದರೂ ನಮಗೆ ಹಣ ಕೊಡುತ್ತಿಲ್ಲ, ಆ ರೈತರಿಗೊಂದುನ್ಯಾಯ,ನಮಗೊಂದುನ್ಯಾಯವೇ? ಈ ತಾರತಮ್ಯ ನೀತಿ ಏಕೆ ಎಂದು ಪ್ರಶ್ನಿಸಿದರು.

ಕಬ್ಬು ಕಳಿಸಿದ 15 ದಿನಗಳಲ್ಲಿ ಬಿಲ್ಲ ಕೊಡದ ಕಾರಣ ಕಾನೂನಿನಂತೆ ಶೇ.18ರಷ್ಟು ಬಡ್ಡಿ ಸಮೇತ ರೈತರ ಖಾತೆಗೆ ಹಣ ಪಾವತಿಸಬೇಕು. ಕಬ್ಬು ಕಳುಹಿಸಿದ ರೈತರ ಖಾತೆಗೆ ಹಣ ಸಂದಾಯ ಮಾಡುವ ವರೆಗೆ ಇಲ್ಲಿಂದ ಕದಲುವದಿಲ್ಲವೆಂದು ಹೇಳಿದ ಹೋರಾಟಗಾರರು, ಕಾರ್ಖಾನೆ ಮುಖ್ಯದ್ವಾರ ಬಂದ್ ಮಾಡಿ ವಾಹನ ಸಂಚಾರವನ್ನು ತಡೆದರಲ್ಲದೇ, ಕಾರ್ಖಾನೆ ಸಿಬ್ಬಂದಿ ಒಳಬಿಡಲಿಲ್ಲ.

ಉರಿ ಬಿಸಿಲಿನಲ್ಲಿಯೇ ಅಧಿಕಾರಿಗಳು ಮತ್ತು ಕಬ್ಬು ಬೆಳೆಗಾರರ ನಿಂತುಕೊಂಡೇ ಕೆಲ ಹೊತ್ತು ಚರ್ಚಿಸಿದರೂ ರೈತರು ಒಪ್ಪಿಗೆ ಸೂಚಿಸದೇ ಹೋರಾಟ ಮುಂದುವರೆಸಿ, ತಾವು ಹೇಳಿದಂತೆ ರೈತರ ಖಾತೆಗೆ ಬಿಲ್ ಹಾಕಬೇಕು. ಇಲ್ಲದಿದ್ದರೆ ಇಲ್ಲಿಂದ ಕದಲುವದಿಲ್ಲವೆಂದು ರೈತರು ಒಮ್ಮತದಿಂದ ಪಟ್ಟು ಹಿಡಿದರು. ಕೊನೆಗೆ ಕಾರ್ಖಾನೆ ಆಡಳಿತ ಮಂಡಳಿಯ ಪರವಾಗಿ ಕಾರ್ಖಾನೆಯ ವಿಪಿ ಎಸ್. ಮೋಹನರಾಜ್ ಮಾತನಾಡಿ, ಬರುವ ಮೇ.10 ರೊಳಗಾಗಿ 2025-26ನೇ ಸಾಲಿನ ಹಂಗಾಮಿನಲ್ಲಿ ಕಾರ್ಖಾನೆಗೆ ಕಬ್ಬು ಸಾಗಿಸಿದ ಎಲ್ಲ ರೈತರ ಖಾತೆಗೆ ಹಣ ಪಾವತಿಸುವದಾಗಿ ಭರವಸೆ ನೀಡಿದ್ದರಿಂದ ರೈತರು ಹೋರಾಟ ಕೈಬಿಟ್ಟರು.

ಕಬ್ಬು ಬೆಳೆಗಾರ ಸಂಘದ ಕಾರ್ಯದರ್ಶಿ ಶಿವು ಕೆರಕಲಮಟ್ಟಿ, ಬೀರಪ್ಪ ಪೂಜಾರಿ, ರೈತ ಸಂಘದ ಅಧ್ಯಕ್ಷ ಶಿವನಗೌಡ ಪಾಟೀಲ, ಸದಾಶಿವ ಆಗೋಜಿ, ಮಲ್ಲಪ್ಪ ತೋಳಮಟ್ಟಿ, ಗಡ್ಡೆಪ್ಪ ಬಿಸನಾಳ, ನಿಂಗಪ್ಪ ಕೊಕ್ಕನ್ನವರ, ಸಿದ್ರಾಮಯ್ಯ ಮಠಪತಿ, ಸಿದ್ದಪ್ಪ ಬಳಗಾನೂರ ಮಾತನಾಡಿದರು. ಕಬ್ಬು ಬೆಳೆಗಾರರಾದ ನಿಂಗಪ್ಪ ಅರಕೇರಿ, ಮಲ್ಲಪ್ಪ ಮೇಟಿ, ಮಲ್ಲಪ್ಪ ಗಾಣಗೇರ, ಈರಪ್ಪ ಹಲಕಿ, ಸಿ.ಆರ್. ಸುಳ್ಳದ, ಸಿದ್ದು ದುಲಾರಿ, ಸಿದ್ದಪ್ಪ ಚಂಡಕಿ, ಸಂಗಪ್ಪ ಕೆರಕಲಮಟ್ಟಿ, ಈರಣ್ಣ ತೋಳಮಟ್ಟಿ, ಶ್ರೀಶೈಲ ಕುಂದರಗಿ, ಜಿ.ಎಂ.ಕೇನ್ ರಾಜಶೇಖರ ಬಿರಾದಾರ, ಎಜಿಎಂ ಗಣಪತಿ ಸುಬ್ರಹ್ಮಣ್ಯಂ ಮತ್ತಿತರರು ಪಾಲ್ಗೊಂಡಿದ್ದರು. ಪಿಎಸ್‌ಐ ದಡ್ಡಿಮನಿ ನೇತೃತ್ವದ ಪೊಲೀಸ್ ತಂಡ ಸೂಕ್ತ ಬಂದೋಬಸ್ತಿ ಏರ್ಪಡಿಸಿದ್ದರು. ರಾಜ್ಯಗುಪ್ತಚರ ಸಿಪಿಐ ಝುಡ್. ಎನ್. ಮೊಖಾಶಿ ಉಪಸ್ಥಿತರಿದ್ದರು.



> ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ 15 ದಿನದಲ್ಲಿ ರೈತರಿಗೆ ಹಣ ಪಾವತಿಸದ ಕಾರ್ಖಾನೆ ಮಾಲೀಕರ ಶರ್ಟಿನ ಕಾಲರ್ ಹಿಡಿದು ಬಿಲ್ ಕೇಳುವಷ್ಟು ರೈತರು ಜಾಗೃತರಾಗಬೇಕು. ಚುನಾವಣೆಯಲ್ಲಿ ಹಣ ಪಡೆದು ಭ್ರಷ್ಟರನ್ನು ಗೆಲ್ಲಿಸದೇ ಪ್ರಾಮಾಣಿಕರನ್ನು, ಸೇವಾ ಮನೋಭಾವನೆ ಹೊಂದಿದವರನ್ನು ಗೆಲ್ಲಿಸುವಂತಾಗಬೇಕು.
> ■ ಶಿವನಗೌಡ ಪಾಟೀಲ, ಅಧ್ಯಕ್ಷರು, ರೈತ ಸಂಘ ಬೀಳಗಿ

ಮೇ 15ರಿಂದ ನಂದಿಕೇಶ್ವರ ಉತ್ಸವ: ಜೋಗಿನ

ಬಾದಾಮಿ: ಸಮೃದ್ಧ ಭಾರತ ವರ್ಷ ನವದೆಹಲಿ, ಜಿಲ್ಲಾಡಳಿತ, ಅಗಸ್ತ್ಯ ಬಾದಾಮಿ, ಗ್ರಾಮೀಣ ಪ್ರವಾಸೋದ್ಯಮ ಪ್ರಸ್ತಾವಿತ ಪೈಲಟ್ ಯೋಜನೆ ನಂದಿಕೇಶ್ವರ ಉತ್ಸವ-2026 ಕಾರ್ಯಕ್ರಮ ಮೇ 15ರಿಂದ18 ರವರೆಗೆ ತಾಲೂಕಿನ ನಂದಿಕೇಶ್ವರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮೃದ್ಧ ಭಾರತ ವರ್ಷ ಯೋಜನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಡಿ.ಜೋಗಿನ ತಿಳಿಸಿದರು.

ಮಂಗಳವಾರ ತಾಲೂಕಿನ ನಂದಿಕೇಶ್ವರ ಗ್ರಾಮದ ಕುಮಾರೇಶ್ವರ ಅನುಭಾವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ವಿನೂತನ ಕಾರ್ಯಕ್ರಮದಿಂದ ಪ್ರವಾಸೋದ್ಯಮ ಬೆಳವಣಿಗೆ, ಸಂಶೋಧನೆ, ಉದ್ಯೋಗಸೃಷ್ಟಿ ಸೇರಿದಂತೆ ಮಹತ್ವದ ಯೋಜನೆ ಇದಾಗಿದೆ ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಹೇಳಿದರು.

ಶಿವಯೋಗಮಂದಿರದ ಮದ್ವೀರಶೈವ ಸಂಸ್ಥೆಯ ಧರ್ಮದರ್ಶಿ ಎಂ.ಬಿ.ಹಂಗರಗಿ ಮಾತನಾಡಿ, ಈ ಯೋಜನೆಯಡಿ ಮೇ 15ರಂದು ತಾಲೂಕು ಡೊಳ್ಳು ಕುಣಿತ, ಮೇ 16ರಂದು ಸ್ಥಳೀಯ ಜಾನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಮೇ 17ರಂದು ರಾಜ್ಯಮಟ್ಟದ ಡೊಳ್ಳು ಕುಣಿತ ಸ್ಪರ್ಧೆಗಳು, ಮೇ 18ರಂದು ವಿಶೇಷ ಭಜನಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲ ವಿಭಾಗಗಳಲ್ಲಿಯೂ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ನಗದು ಬಹುಮಾನ ನೀಡಲಾಗುತ್ತಿದೆ ಎಂದು ಹೇಳಿದರು.

ನಮ್ಮ ಬಾದಾಮಿ ನಮ್ಮ ಹೆಮ್ಮೆ ಯೋಜನೆಯ ಅಧ್ಯಕ್ಷ ಅಪ್ಪಣ್ಣ ಬೋಪರ್ಡೇಕರ, ಕಾರ್ಯದರ್ಶಿ ಪವಿತ್ರ ಜಕ್ಕಪ್ಪನ್ನವರ, ಖಜಾಂಚಿ ಭೀಮನಗೌಡ ಬಜನ್ನವರ, ನಂದಿಕೇಶ್ವರ ಗ್ರಾಮದ ಹಿರಿಯರಾದ ಗಂಗಯ್ಯ ಮುಚಖಂಡಿ, ಲಕ್ಷ್ಮಣ ಕೊಚಲ, ಶಿವಪ್ಪ ಹುಲ್ಲಿಕೇರಿ, ಶಿವಪುತ್ರಯ್ಯ ಹಿರೇಸಿದ್ದನ್ನವರ, ಮಂಜು ತೋಟದ, ಮಾನಗೌಡ ಜನಾಲಿ, ಮಾಗುಂಡಪ್ಪ ಬೂದಿಹಾಳ, ಮಲ್ಲಪ್ಪ ಬಾರಕೇರ, ರಂಗಪ್ಪ ಖ್ಯಾಡದ, ಮಾಗುಂಡಪ್ಪ ಕೆರಿಹೊಲದ, ಮಲ್ಲಯ್ಯ ಮುಪ್ಪಿನವರ ಸೇರಿದಂತೆ ಗ್ರಾಮದ ಹಿರಿಯರು, ಯುವಕರು ಭಾಗವಹಿಸಿದ್ದರು.



ವಿವಿಧೆಡೆ ಬಸವ ಜಯಂತಿ ಆಚರಣೆ

ಸಿಂದಗಿ: ಇಷ್ಟಲಿಂಗ ಎಷ್ಟು ಮಹತ್ವ ಹೊಂದಿದೆಯೋ ವಚನ ಸಾಹಿತ್ಯವೂ ಅಷ್ಟೇ ಮಹತ್ವ ಹೊಂದಿದೆ. ಬಸವ ತತ್ವ ಬರೀ ಬಸವಣ್ಣನವರದ್ದಷ್ಟೇ ಅಲ್ಲ, ಅದು ಸಕಲ ಶರಣರ ವಚನಗಳ ಸಾರವಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಹೇಳಿದರು.

ನಗರದ ನಾಗೂರ ಬಡಾವಣೆಯಲ್ಲಿರುವ ಎಸ್‌ಎಸ್‌ವಿವಿವಿ ಸಂಸ್ಥೆಯ ವಿದ್ಯಾನಿಕೇತನ ಪ್ರಾಥಮಿಕ ಶಾಲೆ ಹಾಗೂ ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಿ ಮಾತನಾಡಿದ ಅವರು, ಲಿಂಗಧಾರಣೆ ಹಾಗೂ ಇಷ್ಟಲಿಂಗ ಪೂಜೆಯು ವೈಜ್ಞಾನಿಕವಾದದ್ದು, ಇದರಿಂದ ಮನಸಿಗೆ ಶಾಂತಿ, ನೆಮ್ಮದಿ ಸಿಗುತ್ತದೆ. ಇಷ್ಟಲಿಂಗ ಪೂಜೆಯಿಂದ ಮನುಷ್ಯನ ವೈಚಾರಿಕತೆ ಹೆಚ್ಚಿಸಲು ಸಾಧ್ಯ ಎಂದರು.

ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ವಿದ್ಯಾನಿಕೇತನ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಪ್ರೇರಣಾ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಎಮ್.ಪಿ.ಬುಕ್ಕಾ ಶಿಕ್ಷಕರಾದ ಸತೀಶ ಕುಲಕರ್ಣಿ, ಅಲ್ತಾಫ್ ತಾಂಬೋಳಿ, ಕುಮಾರ ಕಿರಣ ಕುಲಕರ್ಣಿ, ಸಂತೋಷ ಕುಂಟೋಜಿ, ಅಕ್ಷಯ ಯಲಗಟ್ಟಿ, ಶ್ರೀಕಾಂತ ಹೂನಳ್ಳಿ, ಬಿ.ಎಸ್.ಪಾಟೀಲ, ಎಸ್.ವಿ.ಕಡಣಿ, ಎಮ್.ಎಮ್.ಜುಮನಾಳ, ಎಮ್.ಜಿ.ಧ್ಯಾಮಗೊಂಡ, ವಿ.ಎ.ನಾಯಕ, ಎಂ.ಜಿ.ಬಳಗಾನೂರ, ಶಿಲ್ಪಾ ಎಸ್.ಪಾಟೀಲ, ವಿ.ಎ.ನಾಯಕ, ಆರ್.ಎಮ್.ಫಕೀರಪೂರ, ವಿಜಯಲಕ್ಷ್ಮೀ ಆಲಾಳಮಠ, ರೂಪಾ ಶಿವಸಿಂಪಿಗೇರ, ಸಾವಿತ್ರಿ ವಿರಾಪೂರ, ಆರ್.ಎಂ.ಪಕೀರಪುರ ಸೇರಿದಂತೆ ಸಿಬ್ಬಂದಿ, ಮಕ್ಕಳು ಇದ್ದರು. ವಿದ್ಯಾರ್ಥಿಗಳಾದ ದರ್ಶಿನಿ ಆಲಾಳಮಠ, ಅಭಿನವ ನಾಯ್ಕೋಡಿ, ಶಾಲಿನಿ ಬಿರಾದಾರ, ಸಾಹಿತ್ಯ ಹಿರೇಮಠ ಹಾಗೂ ಸಂಗಡಿಗರಿಂದ ವಚನ ಗಾಯನದೊಂದಿಗೆ ಪುಷ್ಪಾರ್ಪಣೆ ಸಲ್ಲಿಸಲಾಯಿತು.

ಪಟ್ಟಣದ ಪದ್ಮರಾಜ ಮಹಿಳಾ ಪಪೂ ಕಾಲೇಜಿನಲ್ಲಿ ಬಸವಣ್ಣನವರ 893ನೇ ಜಯಂತಿ ಆಚರಿಸಲಾಯಿತು. ಪದವಿ ಕಾಲೇಜಿನ ಪ್ರಾಚಾರ್ಯ ವಿ.ಡಿ.ಪಾಟೀಲ, ಉಪನ್ಯಾಸಕರಾದ ಯು.ಸಿ.ಪೂಜೇರಿ, ಮಮತಾ ಹರನಾಳ, ಹೇಮಾ ಕಾಸರ, ವಿಜಯಲಕ್ಷ್ಮೀ ಭಜಂತ್ರಿ ಶಿವಶಂಕರ ಕುಂಬಾರ ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ಇದ್ದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಡಿಯಲ್ಲಿ ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ ನಡೆಸುವ ಮಹಿಳಾ ವಸತಿ ನಿಲಯದಲ್ಲಿ ಬಸವಣ್ಣನವರ 893ನೇ ಜಯಂತಿ ಆಚರಿಸಲಾಯಿತು. ಮಹಿಳಾ ಸಾಂತ್ವನ ಸಹಾಯವಾಣಿ ಕೇಂದ್ರದ ಸಿಬ್ಬಂದಿ ರಶ್ಮಿ ನೂಲಾನವರ, ವಿದ್ಯಾವತಿ ದೇಸಾಯಿ ಇದ್ದರು.



ಜವಾಬ್ದಾರಿ ಮರೆತ ಕೂಡಲಸಂಗಮ ಅಭಿವೃದ್ಧಿ ಮಂಡಳಿ: ಶ್ರೀ

ಹುನಗುಂದ: ಬಸವಣ್ಣನವರ ತತ್ವ ಪ್ರಸಾರಕ್ಕಾಗಿ ಆರಂಭವಾದ ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಸದ್ಯ ತತ್ವ ಪ್ರಸಾರ ಜವಾಬ್ದಾರಿ ಕಾರ್ಯ ಮರೆತಿದೆ ಎಂದು ಕೂಡಲಸಂಗಮ ಬಸವ ಧರ್ಮ ಪೀಠದ ಮಹಾದೇಶ್ವರ ಸ್ವಾಮೀಜಿ ಮಂಡಳಿಯ ಬೇಜವಾಬ್ದಾರಿ ಕಾರ್ಯಕ್ಕೆ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಕೂಡಲಸಂಗಮ ಬಸವ ಧರ್ಮ ಪೀಠದ ಶರಣ ಲೋಕದ ಧ್ಯಾನ ಮಂಟಪದಲ್ಲಿ ಸೋಮವಾರ ಬಸವಣ್ಣನವರ 893ನೇ ಬಸವ ಜಯಂತಿ ತೊಟ್ಟಿಲು ಕಾರ್ಯಕ್ರಮ ನೆರವೇರಿಸಿ ಮಾತನಾಡಿದ ಅವರು, ರಾಜಪ್ರಭುತ್ವದ ಸಮಯದಲ್ಲಿಯೇ ವಿಶ್ವಗುರು ಬಸವಣ್ಣ ಸಾಮಾಜಿಕ ಸಮಾನತೆ ತಂದಿದ್ದರು. ಸರ್ವ ಸಮುದಾಯಗಳ ಒಗ್ಗೂಡಿಸಿ ಸಮಸಮಾಜ ನಿರ್ಮಾಣ ಮಾಡಿದ್ದರೇ ಇಂದು ಪ್ರಜಾಪ್ರಭುತ್ವದಲ್ಲಿ ಸಾಮಾಜಿಕ ಸಮಾನತೆ ಮರೀಚಿಕೆಯಾಗಿದೆ ಎಂದರು.



ಬಸವಣ್ಣನವರ ಐಕ್ಯಸ್ಥಳವನ್ನು ಸ್ವಚ್ಛವಾಗಿ ಇಡಲು ಆಗುತ್ತಿಲ್ಲ, ನಿರ್ವಹಣೆ ಮಾಡಲು ಆಗದಿದ್ದರೆ ನಾವೇ ಸ್ವಚ್ಛವಾಗಿಡಲು ಸಿದ್ಧರಾಗಿದ್ದೇವೆ. ಬಸವಣ್ಣನ ವ್ಯಕ್ತಿತ್ವ ರೂಪಗೊಳಿಸಿ, ಮುಕ್ತಿಗೆ ಕಾರಣವಾದ ಸುಕ್ಷೇತ್ರದ ಅಭಿವೃದ್ಧಿಗೆ ಎಲ್ಲರೂ ಧ್ವನಿ ಎತ್ತಬೇಕು ಎಂದರು. ಬೆಂಗಳೂರು ಬಸವ ಮಂಟಪದ ಪ್ರಭುಲಿಂಗ ಸ್ವಾಮೀಜಿ ಮಾತನಾಡಿ ಬಸವ ಭಕ್ತರಿಗೆ ಬಸವ ಜಯಂತಿ ಪ್ರಮುಖವಾದ ದಿನ. ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸುಂದರ ಬದುಕು ನಿರ್ಮಿಸಿಕೊಳ್ಳಬೇಕು, ಬದುಕಿಗೆ ಬೇಕಾದ ಜೀವನ ಮೌಲ್ಯಗಳು ವಚನದಲ್ಲಿ ಇವೆ ಎಂದರು.

ಸಮಾರಂಭದಲ್ಲಿ ಮಾತೆ ತುಂಗಮ್ಮ, ಶಿವಶಂಕರ ಬಿ, ವಿನೋದ ತಳವಾರ, ಅಂಬರೇಶ ಎಲಿಗಾರ ಮುಂತಾದವರು ಇದ್ದರು. ಬಸವ ಭಾರತಿ ವಿಜ್ಞಾನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ಉಪನ್ಯಾಸಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಬಸವ ಧರ್ಮ ಪೀಠದಿಂದ ಬಸವಣ್ಣ ಐಕ್ಯ ಸ್ಥಳದವರೆಗೆ ಬಸವ ಪುಥಳಿ ಮೆರವಣಿಗೆ ನಡೆಯಿತು. ಬಸವ ಧರ್ಮ ಪೀಠದ ಮಹಾದೇಶ್ವರ ಸ್ವಾಮೀಜಿ, ಬೆಂಗಳೂರು ಬಸವ ಮಂಟಪದ ಪ್ರಭುಲಿಂಗ ಸ್ವಾಮೀಜಿ ಐಕ್ಯಸ್ಥಳಕ್ಕೆ ಪುಷ್ಪ ಅರ್ಪಿಸಿ, ವಚನ ಪಠಣ, ಧ್ಯಾನ ಮಾಡಿದರು.

ದೀನ ದಲಿತರ ಬಾಳಿಗೆ ಬೆಳಕಾದ ಬಸವಣ್ಣನವರು: ಶ್ರೀಗಳು

ಬಾದಾಮಿ: ಸಮೀಪದ ಶಿವಯೋಗಮಂದಿರದ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆ ಮತ್ತು ಕುಮಾರೇಶ್ವರಸಂಸ್ಕೃತಪಾಠಶಾಲೆಸಂಯುಕ್ತಾಶ್ರಯದಲ್ಲಿ ಭಕ್ತಿ ಭಂಡಾರಿ, ವಿಶ್ವಗುರು, ಕರ್ನಾಟದ ಮಾರ್ಟಿನ್ ಲೂಥರ್ ಕಿಂಗ್, ಕರ್ನಾಟಕ ಸಾಂಸ್ಕೃತಿಕ, ನಾಯಕ ಬಸವೇಶ್ವರರ ಜಯಂತಿ ಆಚರಿಸಲಾಯಿತು.

ಸಾನ್ನಿಧ್ಯ ವಹಿಸಿದ್ದ ಶಿವಯೋಗಮಂದಿರ ಸಂಸ್ಥೆಯ ಉಸ್ತುವಾರಿ ಶರಣಬಸವ ಸ್ವಾಮಿಗಳು ಮಾತನಾಡಿ, ಪ್ರಪಂಚದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಮೊಟ್ಟ ಮೊದಲಿಗೆ ಜಾರಿಗೆ ತಂದವರು ಬಸವಣ್ಣವರು. ಬಸವಣ್ಣನವರು ಸಮಾಜದ ಅತ್ಯಂತ ಹಿಂದುಳಿದ ದೀನ ದಲಿತರ ಬಾಳಿಗೆ ಬೆಳಕಾದರು. ಬಿದ್ದವರನ್ನು ಮೇಲೆ ಎತ್ತಲು ಶ್ರಮಿಸಿದರು. ಅಂತರಜಾತಿ ಮದುವೆಗೆ ಕಾರಣರಾದರು. ಪ್ರಪಂಚದಲ್ಲಿ ವೈಜ್ಞಾನಿಕ ಧರ್ಮ ಸ್ಥಾಪಿಸಿ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದರು ಮಹಾ ಮಾನವತಾವಾದಿ ಎಂದು ಅಭಿಪ್ರಾಯಪಟ್ಟರು. ಧರ್ಮದರ್ಶಿ ಎಂ.ಬಿ.ಹಂಗರಗಿ ಮಾತನಾಡಿ, ಬಸವೇಶ್ವರ ವ್ಯಕ್ತಿತ್ವ, ಸಾಧನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.



ತಮಿಳುನಾಡು ಹೀಗೆ ಬೇರೆ ಬೇರೆ ನಾಡಿನಿಂದ ಕುಮಾರೇಶ್ವರ ಸಂಸ್ಕೃತ ಪಾಠಶಾಲೆಯ ಮುಖ್ಯಶಿಕ್ಷಕ ಬಿ.ಎಸ್.ಬಂಕಾಪುರ ಮಾತನಾಡಿ, ಆಂಧ್ರಪ್ರದೇಶ ಕಲ್ಯಾಣದ ಅನುಭವಮಂಟಪಕ್ಕೆ ಬಂದವರಿಗೆ ಕನ್ನಡ ಕಲಿಸಿ ಕನ್ನಡದಲ್ಲಿ ವಚನಗಳನ್ನು ಬರೆಯಲು ಪ್ರಾರಂಭಿಸಿ ಕನ್ನಡವನ್ನು ಬೆಳೆಸಿದವರು ವಿಶ್ವಗುರು ಬಸವಣ್ಣನವರು. ಬಸವಣ್ಣನವರನ್ನು ಕೇವಲ ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಗೌರವಿಸಲಾಗಿದೆ ಎಂದು ತಿಳಿಸಿದರು.

ಸಂಸ್ಕೃತ ಪಾಠಶಾಲೆಯ ಶಿಕ್ಷಕರಾದ ಸಮೀರ ಆಚಾರ್ಯ ಮಾತನಾಡಿ, ವಚನ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯಾಗಿದೆ ವಚನ ಎಂದರು. ಅನುಭಾವ ಗದ್ಯವಾಗಿದೆ. ವಚನಗಳು ಕನ್ನಡದ ಉಪನಿಷತ್‌ಗಳು ಎಂದು ಕರೆಯುವರು, ಜನ ಸಾಮಾನ್ಯರು ಅರ್ಥಮಾಡಿಕೊಂಡು ಜೀವನದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗಿದೆ ಎಂದು ತಿಳಿಸಿದರು. ಶಿವಯೋಗಮಂದಿರ ಸಂಸ್ಥೆಯ ಕೇಂದ್ರ ಬಿಂದುಗಳಾದ ಪೂಜ್ಯವಟುಸಾಧಕರು ವಿಶ್ವಗುರು ಬಸವೇಶ್ವರರ ಕುರಿತು ಅನಿಸಿಕೆಗಳನ್ನು ಹಂಚಿಕೊಂಡರು. ಕುಮಾರೇಶ್ವರ ಸಂಸ್ಕೃತ ಪಾಠಶಾಲೆಯ ಶಿಕ್ಷಕರಾದ ಎಚ್.ವೈ.ಮಣ್ಣಾಪ್ಪರ, ಪಿ.ಜಿ.ಶಿವಮಠ, ಡಿ.ಎಸ್.ಭಾವಿಕಟ್ಟಿ, ಕೆ.ಎಸ್.ಹಿರೇಮಠ ಉಪಸ್ಥಿತರಿದ್ದರು.

ಬಸವತತ್ವ ಪಾಲನೆಯಿಂದ ವಿಶ್ವಮಾನವರಾಗಲು ಸಾಧ್ಯ: ತಿಮ್ಮಾಪುರ

ಜಮಖಂಡಿ: ವಿಶ್ವಗುರು ಬಸವಣ್ಣನವರ ಮೂರ್ತಿಯನ್ನು ಗುಡಿಯಲ್ಲಿ ಇಡುವುದಲ್ಲ, ಬಸವತತ್ವ ಕೇವಲ ಪ್ರವಚನಕ್ಕೆ ಸೀಮಿತ ಆಗಬಾರದು. ಬದಲಾಗಿ ಬಸವತತ್ವ ಆಚರಣೆಗೆ ಬರಬೇಕು. ಬಸವತತ್ವ ಪಾಲನೆಯಿಂದ ವಿಶ್ವಮಾನವರಾಗಲು ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.



ಬಸವ ಜಯಂತಿ ನಿಮಿತ್ತ ನಗರದ ಓಲೆಮಠದ ಆಶ್ರಯದಲ್ಲಿ ಜರುಗಿದ ಆರು ದಿನಗಳ ಜಮಖಂಡಿ ಓಲೆಮಠದ ಜಾತ್ರಾಮಹೋತ್ಸವದ ಕೊನೆಯ ದಿನವಾದ ಸೋಮವಾರ ಸಂಜೆಯ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಬದುಕು, ರಾಜಕಾರಣ, ಆಹಾರ, ನೀರು ಎಲ್ಲವೂ ಕಲುಷಿತಗೊಂಡಿದೆ. ಮಾನವನಿಗೆ ದಿಕ್ಕು ತೋಚಲಾರದಂತಾಗಿದೆ. ಮನುಷ್ಯರನ್ನು ಮನುಷ್ಯರಂತೆ ಕಾಣದ ಸ್ಥಿತಿ ನಿರ್ಮಾಣ ಆಗಿದೆ. ಧರ್ಮ-ಧರ್ಮಗಳ ನಡುವೆ ಸಂಘರ್ಷ ನಡೆಯುತ್ತಿದೆ. ಒಂದೇ ಧರ್ಮದ ಒಳಗಡೆಯೂ ಸಂಘರ್ಷ ನಡೆಯುತ್ತಿದೆ. ಮನುಷ್ಯ ಯಾವ ದಿಕ್ಕಿಗೆ ಸಾಗುತ್ತಿದ್ದಾನೆ ಗೊತ್ತಿಲ್ಲ, ಇಂತಹ ಕಲುಷಿತ ವಾತಾವರಣವನ್ನು ತಿಳಿಸಿಗೊಳಿಸಲು ಮಠಮಾನ್ಯಗಳು ಬೆಳೆಯಬೇಕು ಎಂದರು.

ಉದ್ದಿಮೆದಾರ ಸಂಗಮೇಶ ನಿರಾಣಿ ಮಾತನಾಡಿ, ಓಲೆಮಠದ ಪೂಜ್ಯರು ಕೈಗೊಂಡಿರುವ ವ್ಯಸನಮುಕ್ತ ಗ್ರಾಮಗಳ ನಿರ್ಮಾಣದ ಜನಜಾಗೃತಿ ಅಭಿಯಾನ ಯಶಸ್ವಿಯಾಗಿದೆ. ನೆರೆಯ ತಾಲ್ಲೂಕಿನ ಗ್ರಾಮಗಳ ಗ್ರಾಮಸ್ಥರು ಕೂಡ ತಮ್ಮೂರಿಗೆ ಬಂದು ವ್ಯಸನಮುಕ್ತ ಮಾಡಲು ಮನವಿ ಮಾಡುತ್ತಿದ್ದಾರೆ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಸುಶೀಲಕುಮಾರ ಬೆಳಗಲಿ, ಅಂಜುಮನ್-ಎ-ಇಸ್ಲಾಂ ಕಮೀಟಿ ಅಧ್ಯಕ್ಷ ತೌಫೀಕ ಪಾರ್ಥನಳ್ಳಿ, ಪ್ರಾ.ಶಾ.ಶಿ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಬಾಗೇನವರ ಮಾತನಾಡಿದರು. ಮಹಾದೇವಪ್ಪ ಝುಲಪಿ ವಿರಚಿತ ವೈಜ್ಞಾನಿಕ ವೈಚಾರಿಕ ಪ್ರಜ್ಞೆ-2, ವಿಶ್ವಗುರು ಬಸವಣ್ಣನವರ ನೂರೊಂದು ವಚನ ದೀಪ್ತಿ ಮಾಲಿಕೆ-4 ಕೃತಿಗಳನ್ನು ಲೋಕರ್ಪಣೆ ಮಾಡಲಾಯಿತು.

ಓಲೆಮಠದ ಆನಂದ ದೇವರು ಶ್ರೀಗಳು ನೇತೃತ್ವ ವಹಿಸಿದ್ದರು. ಹುಲ್ಯಾಳದ ದುಂಡಯ್ಯ ಸ್ವಾಮಿಗಳು, ಆಲಗೂರಿನ ಲಕ್ಷ್ಮಣ ಮುತ್ಯಾ, ಅರ್ಜುಣಗಿಯ ಗುರುದೇವ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಎಲೆಮರೆಯ ಕಾಯಿಯಂತ ಸ್ಥಳೀಯ ಪ್ರತಿಭಾವಂತ ಕಲಾವಿದರನ್ನು ಸನ್ಮಾನಿಸಲಾಯಿತು.

ಮಲ್ಲಿಕಾರ್ಜುನ ಹೋಳಗಿ, ಬಾಹುಬಲಿ ಅಲಗೂರ, ಅಪ್ಪಾಸಾಹೇಬ ದೇವರವರ, ಕಾಸಪ್ಪ ಸನದಿ, ಪ್ರಭಾ ಪಾರಸಿ, ಭಾರತಿ ಜಾಧವ, ಗಿರಿಜಾ ದೊಡಮನಿ, ಮುತ್ತವ್ವ ಪೂಜಾರಿ, ಅಬೂಬಕರ ಕುಡಚಿ, ಸಿ.ಜಿ.ಕಡಕೋಳ, ಪಿ.ಬಿ.ಅಜ್ಜನವರ, ನರಸಿಂಹ ಕಲ್ಲೊಳ್ಳಿ, ಏಗಪ್ಪ ಸವದಿ, ಪ್ರಭು ಜನವಾಡ, ಎಚ್.ಎಂ.ಶೆಟ್ಟರ, ರಾಜು ಗಸ್ತಿ, ಎಂ.ಬಿ.ಇಂಡಿ, ಧನರಾಜ ಮೋರೆ, ಮಲ್ಲಿಕಾರ್ಜುನ ನಿಂಗನೂರ, ಶೃತಿ ನಿಗಡೆ, ಎಸ್.ಎಚ್.ಮಠಪತಿ ಇದ್ದರು.

ಕಾಯಕದಲ್ಲಿ ಅಡಗಿದ ನಿಜ ಜೀವನದ ಸಾರ: ಶ್ರೀಗಳು

ಹುನಗುಂದ: ಕಾಯಕದಲ್ಲಿಯೇ ನಿಜ ಜೀವನದ ಸಾರ ಅಡಗಿದೆ. 12ನೇ ಶತಮಾನದ ಬಸವಾದಿ ಶರಣರು ನಡೆಸಿದ ಕಾಯಕ ಜೀವನ ಮತ್ತು ನಡೆ ನುಡಿಗಳು ಇಂದಿಗೂ ಪ್ರಸ್ತುತ,ಅವರಂತೆ ಆದರ್ಶ ಜೀವನ ನಡೆಸಿ ಇತರರಿಗೆ ಮಾದರಿಯಾಗಿದ್ದ ಲಿಂ.ಪ್ರೊ.ಕೆ ತಾರಾನಾಥ ದಂಪತಿಗಳು ಸದಾ ಸ್ಮರಣೆಗೆ ಪಾತ್ರರು ಎಂದು ಇಳಕಲ್ಲ ಗುರು ಮಹಾಂತ ಶ್ರೀಗಳು ಹೇಳಿದರು.

ಪಟ್ಟಣದ ಪುರಸಭೆ ಮಂಗಲಮಂಟಪದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ವೇದಿಕೆ, ವಚನ ಸಾಹಿತ್ಯ ಪರಿಷತ್ತು, ಜಿಲ್ಲಾ ಕರ್ನಾಟಕ ಲೇಖಕಿಯ ಸಂಘ, ಸಹಯೋಗದಲ್ಲಿ ಲಿಂ.ಪ್ರೊ.ಕೆ, ತಾರಾನಾಥ, ಲಿಂ, ಉಮಾದೇವಿ ತಾರಾನಾಥ ಶರಣ ದಂಪತಿಗಳ 11ನೇ ಪುಣ್ಯಸ್ಮರಣೆ, ದತ್ತಿ ಉಪನ್ಯಾಸ, 39ನೇ ಮನೆ ಮನೆಗೆ ವಚನ ಸೌರಭ, ವಿಶ್ವ ಮಹಿಳಾ ದಿನಾಚರಣೆಯ ಮಹಿಳಾ ಕವಿಗೋಷ್ಠಿಯ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಡಾ.ಎಂ.ಬಿ.ಒಂಟಿ ಮಾತನಾಡಿ, ಲಿ.ಪ್ರೊ.ಕೆ ತಾರಾನಾಥರು ಪಂಚ ಭಾಷೆಯ ಪಾಂಡಿತ್ಯ ಹೊಂದಿದವರಾಗಿದ್ದರು. ಮತ್ತು ಶಿಷ್ಯರನ್ನು ಎತ್ತರಕ್ಕೆ ಬೆಳೆಸುವಲ್ಲಿ ಸದಾ ಮಾರ್ಗದರ್ಶನ ನೀಡುತ್ತಾ ಬಂದರು. ಪರೋಪಕಾರ ಗುಣ, ಸನ್ನಡತೆ, ಸಮಯ ಪಾಲನೆ ಶಿಸ್ತು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತುಕೊಟ್ಟಿದ್ದರು. ಸಾಹಿತ್ಯ ಕಲೆ ಸಂಗೀತದಲ್ಲಿಯೂ ಅವರಿಗೆ ಅಪಾರ ಒಲವಿತ್ತು,ಅವರ ಚುಟುಕಗಳನ್ನು ಮೆಚ್ಚಿ ದಿನಕರ ದೇಸಾಯಿ ಅವರು ಪ್ರಶಂಸಿದ್ದರು ಎಂದರು.



ನಿವೃತ್ತ ಪ್ರಾಚಾರ್ಯ ಎಸ್.ಕೆ.ಕುಲಕರ್ಣಿ, ಅಧ್ಯಕ್ಷತೆ ವಹಿಸಿದ್ದ ಎ.ಎಸ್.ಪಾವಟೆ ಮಾತನಾಡಿದರು. ಮಮತಾ ಮುದಗಲ್, ಜಯಶ್ರೀ ಆಲೂರ, ಸವಿತಾ ಶಿವಪ್ಪಯ್ಯನಮಠ, ಮಲ್ಲಮ್ಮ ತೇಲಿ, ಈರಮ್ಮ ಹಂಪಿಹೊಳಿ, ಶೀಲಾ ಗೌಡರ, ಶಿವಲೀಲಾ ಸೊಂಬಣ್ಣವರ, ಗೀತಾ ತಾರಿವಾಳ, ನಿಂಗಮ್ಮ ಭಾವಿಕಟ್ಟಿ, ಚೆನ್ನವ್ವ ಕಬಾಡೆ ಅವರು ಕವನ ವಾಚನ ಮಾಡಿದರು. ಮಹಾಂತೇಶ ಮುದಗಲ್ ಇವರು ತಾರಾನಾಥರ ಬದುಕು ಬರಹ ಕುರಿತ ಕವನ ವಾಚಿಸಿದರು.

ಸುತಗುಂಡಾರದ ಹನಮವ್ವ ಮುಲಂಗಿ ಹಾಗೂ ಸಂಗಡಿಗರು ಬೀಸುಕಲ್ಲಿನ ಪದಗಳನ್ನು ಹಾಡಿದರು. ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಅಧ್ಯಕ್ಷೆ ಲಲಿತಾ ಹೊಸಪ್ಯಾಟಿ, ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ.ಎಸ್.ಎನ್.ಹಾದಿಮನಿ ಸ್ವಾಗತಿಸಿದರು. ಗೀತಾ ತಾರಿವಾಳ ವಚನಗಾನ, ಸುಧೀಂದ್ರ ತಾಡಪತ್ರಿ ಪ್ರಾರ್ಥನೆ, ಪ್ರಭು ಮಾಲಗತ್ತಿ ನಿರೂಪಿಸಿದರು. ಅಂದಯ್ಯ ವಸ್ತ್ರದ ವಂದಿಸಿದರು.

ಕಿರುಸುದ್ದಿ



ಮುದ್ದೇಬಿಹಾಳ: ನಗರದ ವೀರಶೈವ ಲಿಂಗಾಯತ ಸಮಾಜದ ಬಸವ ಜಯಂತಿ ನಿಮಿತ್ತ ಮೆರವಣಿಗೆ ಕಾರ್ಯಕ್ರಮದಲ್ಲಿ ಅಶ್ವರೂಢ ಬಸವಣ್ಣನ ಚದ್ಮ ವೇಷದಾರಿಯಾಗಿ ಶ್ರೀಕಾಂತ ಹಿರೇಮಠ ಗಮನ ಸೆಳೆದರು. ಸಮಾಜದ ಮುಖಂಡರು ಹಾಗೂ ಮಹಿಳೆಯರು ಭಾಗವಹಿಸಿದ್ದರು.



ವಿಜಯಪುರದಲ್ಲಿ ಬಸವ ಜಯಂತಿ ನಿಮಿತ್ತ ಶರಣರ ವಚನ ಕಟ್ಟು, ವಚನ ಬಿತ್ತಿ ಪತ್ರಗಳ ಬೃಹತ್ ಮೆರವಣಿಗೆ ನಡೆಯಿತು. ಇಲ್ಲಿನ ಸಿದ್ಧೇಶ್ವರ ದೇವಸ್ಥಾನದಿಂದ ಕಂದಗಲ್ ಹನುಮಂತರಾಯ ರಂಗಮಂದಿರದ ವರೆಗೆ ಸಕಲ ವಾದ್ಯಮೇಳದೊಂದಿಗೆ ಮೆರವಣಿಗೆ ಸಾಗಿ ಬಂತು. ಜನಪ್ರತಿನಿಧಿಗಳು, ಗಣ್ಯರು, ಅಧಿಕಾರಿಗಳು ಇದ್ದರು

ಹೋರಾಟಗಾರ್ತಿ ಗೀತಾಗೆ ಪಿಎಚ್‌ಡಿ ಪ್ರದಾನ

ವಿಜಯಪುರ: ನಗರ ನಿವಾಸಿ, ವಿಜಯಪುರ ಸರ್ಕಾರಿ ವೈದ್ಯಕೀಯ ಕಾಲೇಜ್ ಹೋರಾಟಗಾರ್ತಿ ಗೀತಾ ಎಚ್. ಅವರಿಗೆ ಪಿಎಚ್‌ಡಿ ಪದವಿ ಲಭಿಸಿದೆ.



ಗೀತಾ ಎಚ್.ಅವರು ಮಹಿಳಾ ಅಧ್ಯಯನ ವಿಭಾಗದ ಪ್ರೊ. ಹೇಮಲತಾ ಎಚ್.ಎಮ್. ಅವರ ಮಾರ್ಗದರ್ಶನದಲ್ಲಿ ವಿಜಯಪುರ ಜಿಲ್ಲೆಯ ಆಶಾ ಕಾರ್ಯಕರ್ತೆಯರ ಕುರಿತು ಒಂದು ಅಧ್ಯಯನ ಎಂಬ ವಿಷಯದಲ್ಲಿ ಸಂಶೋಧನೆ ಮಂಡಿಸಿದ್ದ ಪ್ರಬಂಧಕ್ಕೆ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಪಿಎಚ್‌ಡಿ ನೀಡಿದೆ. ನಗರ ಹೊರ ವಲಯದ ತೊರವಿಯ ಮಹಿಳಾ ವಿವಿಯಲ್ಲಿ ಮಂಗಳವಾರ ಹಮ್ಮಿಕೊಂಡ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪಿಎಚ್‌ಡಿ ಪ್ರದಾನ ಮಾಡಿದರು. ಡಾಕ್ಟರೇಟ್ ಪದವಿ ಪಡೆದ ಗೀತಾ ಎಚ್. ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣನವರ ಅಭಿನಂದಿಸಿದ್ದಾರೆ.

ಜೋಡೆತ್ತುಗಳ ಮೆರವಣಿಗೆ



ದೇವರಹಿಪ್ಪರಗಿ: ಪಟ್ಟಣದಲ್ಲಿ ಬಸವ ಜಯಂತಿ ನಿಮಿತ್ತ ಜೋಡೆತ್ತುಗಳ ಭವ್ಯ ಮೆರವಣಿಗೆ ಏರ್ಪಡಿಸಲಾಗಿತ್ತು. ಹತ್ತಕ್ಕೂ ಹೆಚ್ಚು ಐದು ಜೋಡಿಗಳ ಮೆರವಣಿಗೆ ಕಣ್ಣಿಗೆ ಮುದ ನೀಡಿತು. ನಾನಾ ತರದ ಹೂಮಾಲೆ ಮತ್ತು ಅಲಂಕಾರಿ ವಸ್ತುಗಳಿಂದ ಸುಂದರಗೊಂಡಿದ್ದ ಎತ್ತುಗಳ ಮೆರವಣಿಗೆಯಲ್ಲಿ ಪಾಲ್ಗೊಂಡು ಪುನೀತಗೊಂಡವು. ಪಟ್ಟಣದ ರೈತಾಪಿ ವರ್ಗದ ಸದಸ್ಯರು ಹುರುಪಿನಿಂದ ಪಾಲ್ಗೊಂಡು ಬಸವ ಜಯಂತಿಗೆ ಕಳೆ ತಂದು ಕೊಟ್ಟರು.

ಪಟ್ಟಣದ ಬಸವೇಶ್ವರ ವೃತ್ತದಿಂದ ಕಲ್ಮೇಶ್ವರ ದೇವಸ್ಥಾನದವರೆಗೆ ಸುಮಾರು ಐದಕ್ಕೂ ಹೆಚ್ಚು ಜೋಡಿ ಎತ್ತುಗಳ ಮತ್ತು ಬಸವೇಶ್ವರ ಭಾವಚಿತ್ರದ ಮೆರವಣಿಗೆ ರಾಷ್ಟ್ರೀಯ ಹೆದ್ದಾರಿ ಮಾರ್ಗವಾಗಿ ಬಸ್ ನಿಲ್ದಾಣದ ಮುಂದೆ ಮೇನ್ ಬಜಾರ್ ರಸ್ತೆಯ ಮೂಲಕ ಅದ್ದೂರಿಯಾಗಿ ನಡೆಯಿತು. ರೈತ ಮುಖಂಡರಾದ ರಾಮು ದೇಸಾಯಿ, ಸಂಪತ್ ಜಮಾದಾರ, ಅಪ್ಪುಗೌಡ ಪಾಟೀಲ, ಕಾಸಪ್ಪ ಜಿರ್ಲಿ ಸೇರಿದಂತೆ ರೈತ ಸಂಘಟನೆಯ ಪದಾಧಿಕಾರಿಗಳು ಹಾಗೂ ಮುಖಂಡರುಉಪಸ್ಥಿತರಿದ್ದರು.

ನೀಲಮ್ಮ ನಾವದಗಿ ನಿಧನ

ಮುದ್ದೇಬಿಹಾಳ: ಪಟ್ಟಣದ ನಾವದಗಿ ಮನೆತನದ ಹಿರಿಯರಾದ ನೀಲಮ್ಮ ಬಸಣ್ಣ ನಾವದಗಿ ನಿಧನರಾದರು. ಮೃತರಿಗೆ ಪತಿ ಬಸಣ್ಣ ನಾವದಗಿ ಹಾಗೂ ಮೂವರು ಗಂಡು ಮಕ್ಕಳು ಇದ್ದಾರೆ.





ವಿಜಯಪುರ: ಇಲ್ಲಿನ ಚೇತನಾ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬಸವ ಜಯಂತಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಚೇತನಾ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ರಾಜಶ್ರೀ ಜುಗತಿ, ಕನ್ನಡ ವಿಭಾಗದ ಮುಖ್ಯಸ್ಥ, ಮುಖ್ಯೋಪಾಧ್ಯಾಯ, ಸಾಹಿತಿ ಪ್ರೊ, ಎ.ಎಚ್. ಕೊಳಮಲಿ, ಪ್ರಾಚಾರ್ಯ ಎಸ್.ಎಸ್.ಬ್ಯಾಕೋಡ, ವಿಶ್ವನಾಥ ದಾಬಡೆ, ಸಂಸ್ಥೆಯ ಉಪಾಧ್ಯಕ್ಷ ರೋಹಿತ ಜುಗತಿ, ನಿರ್ದೇಶಕ ಡಾ.ನಾಗರಾಜ ಹೇರಲಗಿ, ಸಹಾಯಕ ಆಡಳಿತಾಧಿಕಾರಿ ಪ್ರಮೋದ ಕುಲಕರ್ಣಿ ಇದ್ದರು.

ಅನುಭವ ಮಂಟಪ ಸಂವಿಧಾನಕ್ಕೆ ತಳಹದಿ

ಸಿಂದಗಿ: 12ನೇ ಶತಮಾನದಲ್ಲಿಯೇ ಅನುಭವ ಮಂಟಪವನ್ನು ಸ್ಥಾಪಿಸಿ ಸಾಮಾಜೋದ್ಧಾರ್ಮಿಕ ಸಮಾನತೆಗೆ ಶ್ರಮಿಸಿದ ಬಸವಣ್ಣನವರ ಅಂದಿನ ಅನುಭವ ಮಂಟಪದ ಪರಿಕಲ್ಪನೆಗಳೇ ಇಂದಿನ ಭಾರತದ ಸಂವಿಧಾನಕ್ಕೆ ತಳಹದಿಯಾಗಿವೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು. ನಗರದ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡ ಬಸವಣ್ಣನವರ 893ನೇ ಜಯಂತ್ಯುತ್ಸವದ ಭವ್ಯ ಮೆರವಣಿಗೆಗೆ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಯುಗಪುರುಷ ಬಸವಣ್ಣನವರು ಮನೆಯಿಂದಲೇ ವೈಚಾರಿಕ ಕ್ರಾಂತಿಯನ್ನು ಆರಂಭಿಸಿದರು. ಬಸವಣ್ಣನವರು ವಿಶ್ವದ ಶ್ರೇಷ್ಠ ದಾರ್ಶನಿಕರಲ್ಲಿ ಮುಂಚೂಣಿಯಲ್ಲಿದ್ದವರು. ಎಲ್ಲ ಧರ್ಮಕ್ಕಿಂತ ಕಾಯಕ ಧರ್ಮ ದೊಡ್ಡದು. ಅಹಿಂಸೆಯೇ ಮಾನವ ಧರ್ಮವನ್ನು ದೀರ್ಘಕಾಲ ಬಾಳಿಸಬಲ್ಲದು ಎಂಬುದನ್ನು ಜಗತ್ತಿಗೆ ಸಾರಿದ ಬಸವಣ್ಣ ವಿಶ್ವ ಸಾಂಸ್ಕೃತಿಕ ನಾಯಕರು. ಇವರನ್ನು ರಾಜ್ಯ ಸರ್ಕಾರ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ ಎಂದರು. ತಹಶೀಲ್ದಾರ್ ಕರೆಪ್ಪ ಬೆಳ್ಳಿ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕಾಧ್ಯಕ್ಷ ಅಶೋಕ ವಾರದ, ಬ್ಲಾಕ್ ಕಾಂಗ್ರೆಸ್ ತಾಲೂಕಾಧ್ಯಕ್ಷ ಸುರೇಶ ಪೂಜಾರ, ಆರ್.ಡಿ.ದೇಸಾಯಿ, ಜಗದೀಶ ಪಟ್ಟಣಶೆಟ್ಟಿ, ಚನ್ನು ವಾರದ, ಬಿ.ಜಿ.ನೆಲ್ಲಗಿ, ಅಶೋಕ ಅಲ್ಲಾಪೂರ, ಬಸವದಳದ ಅಧ್ಯಕ್ಷ ಮಲ್ಲಿಕಾರ್ಜುನ ಅರ್ಜುಣಗಿ, ಸೋಮನಗೌಡ ಬಿರಾದಾರ ಇದ್ದರು.



ಸಿಂದಗಿ: ನಗರದ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡ ಬಸವಣ್ಣನವರ 893ನೇ ಜಯಂತ್ಯುತ್ಸವದ ಭವ್ಯ ಮೆರವಣಿಗೆಗೆ ಶಾಸಕ ಅಶೋಕ ಮನಗೂಳಿ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು. ಮುತ್ತು ಮುಂಡೇವಾಡಗಿ, ಎಂ.ಎಂ.ಹಂಗರಗಿ, ಡಾ.ರವಿ ಗೋಲಾ, ಶಾಂತಪ್ಪ ರಾಣಾಗೋಳ, ಜಗದೀಶ ಕಲಬುರ್ಗಿ, ಸುನಂದಾ ಯಂಪೂರೆ, ಶೈನಾಬಿ ಮಸಳಿ, ಮುತ್ತು ಪಟ್ಟಣಶೆಟ್ಟಿ, ಶ್ರೀಮಂತ ಮಲ್ಲೇದ, ಶಿವರಾಜ ಭಾಸಗಿ, ಬಸು ಗುಗ್ಗರಿ, ವಿಶ್ವನಾಥ ಜೋಗುರ ಸೇರಿದಂತೆ ಬಸವಾಭಿಮಾನಿಗಳು ಇದ್ದರು.

ಘಟಿಕೋತ್ಸವದಲ್ಲಿ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿಕೆ

ದೂರ ಶಿಕ್ಷಣ ಪ್ರಾರಂಭಿಸಲು ಕ್ರಮ

ವಿಜಯಪುರ: ಇತ್ತಿಚೇಗೆ ಬೆಂಗಳೂರಿನಲ್ಲಿ ನಡೆದ ಕುಲಪತಿಗಳ ಸಮಾವೇಶದಲ್ಲಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಪುನರಾಂಭಿಸುವ ಬಗೆಗೆ ವಿಸ್ತøತ ಚರ್ಚೆಗಳನ್ನು ನಡೆಸಿದ್ದು, ಈ ಸಂಬಂಧ ಅಗತ್ಯ ಕ್ರಮ ಕೈಕೊಳ್ಳಲಾಗುತ್ತಿದೆ ಎಂದು ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ಹೇಳಿದರು.

ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 17ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು. ಉನ್ನತ ಶಿಕ್ಷಣದ ಅಭಿವೃದ್ಧಿಯಲ್ಲಿ ಮೂಲಸೌಕರ್ಯದ ಮಹತ್ವವನ್ನು ಅರಿತು, ನಮ್ಮ ವಿಶ್ವವಿದ್ಯಾಲಯವು ಕ್ಯಾಂಪಸ್‌ನಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡಿದೆ. 2025-26ನೇ ಶೈಣಿಕ ವರ್ಷದಲ್ಲಿ ದಶಮಾನೋತ್ಸವದ ಮೊದಲ ಮಹಡಿಯಲ್ಲಿ 3.73 ಕೋಟಿ ರೂ. ಅನುದಾನದಲ್ಲಿ ಸ್ನಾತಕ ಕೋರ್ಸುಗಳನ್ನು ನಡೆಸುವ ಸಲುವಾಗಿ ತರಗತಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವಾಗಲೇ ಗಳಿಕೆ ಎಂಬ ವಿನೂತನ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿನಿಯರಿಗೆ ಬಯೋಡೀಸೆಲ್ ಘಟಕ, ಕಾಗದ ಮರುಬಳಕೆ ಘಟಕ, ಅನ್ನ ಆಹಾರ ಸಂಸ್ಕರಣಾ ಕೇಂದ್ರ ಮತ್ತು ಗ್ರೀನ್‌ಹೌಸ್‌ಗಳಲ್ಲಿ ವಿವಿಧ ಕೌಶಲಗಳನ್ನು ಕಲಿಸುವ ವ್ಯವಸ್ಥೆ ರೂಪಿಸಲಾಗುತ್ತಿದ್ದು ಎಂದರು.



ವಿದೇಶಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ವಾರಕ್ಕೆ 20 ಗಂಟೆಗಳ ಕಾಲ ಪಾರ್ಟ್ ಟೈಂ ಕೆಲಸ ಮಾಡುವ ಪದ್ಧತಿ ವ್ಯಾಪಕವಾಗಿ ಬಳಕೆಯಲ್ಲಿದೆ. ಅದೇ ಮಾದರಿಯಲ್ಲಿ ಮಹಿಳಾ ವಿವಿಯಲ್ಲಿ ಓದುವ ವಿದ್ಯಾರ್ಥಿನಿಯರು ತಮ್ಮ ಬಿಡುವಿನ ವೇಳೆಯಲ್ಲಿ ಪಾರ್ಟ್ ಟೈಂ ಕೆಲಸ ಮಾಡುವ ಮೂಲಕ ವಿವಿಧ ಕೌಶಲಗಳನ್ನು ಕಲಿಯುವುದರ ಜತೆಗೆ ವಿವಿಧ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವಾಗಲೇ ಒಂದಷ್ಟು ದುಡ್ಡು ಸಂಪಾದಿಸುವ ಅವಕಾಶ ಸೃಷ್ಟಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಎಸ್‌ಎನ್‌ಡಿಟಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಉಜ್ವಲಾ ಚಕ್ರದೇವ್, ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ಪಾರ್ವತೆವ್ವ ಹೊಂಗಲ್, ಡಾ.ಸಂಗೀತಾ ಕಟ್ಟಿಮನಿ, ಆಶಾದೇವಿ ಜಗದೀಶ ಗುಡಗುಂಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್. ಲಕ್ಕಣ್ಣವರ, ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ವಿವಿಧ ನಿಕಾಯಗಳ ಡೀನರು ಇದ್ದರು.

ಮೀನಾಜಗೆ ಚಿನ್ನದ ಪದಕ

ಸಿಂದಗಿ: ಬಡತನ ಮತ್ತು ಕಷ್ಟಗಳ ನಡುವೆ ಬೆಳೆದರೂ ಶಿಕ್ಷಣದ ಮೇಲಿನ ಆಸಕ್ತಿ ಮತ್ತು ದೃಢ ಸಂಕಲ್ಪದಿಂದ ಸಾಧನೆ ಮಾಡಬಹುದು ಎಂಬುದಕ್ಕೆ ಸಿಂದಗಿಯ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿ ಸಮಾಜ ಕಾರ್ಯ (ಬಿ.ಎಸ್.ಡಬ್ಲ್ಯೂ) ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುವ ಮೀನಾಜ ಗೋಲಗೇರಿ ಉದಾಹರಣೆಯಾಗಿದ್ದಾರೆ. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಅವರು ಸಮಾಜ ಕಾರ್ಯ (ಬಿ.ಎಸ್.ಡಬ್ಲ್ಯೂ) ಪದವಿಯಲ್ಲಿ ಅಗ್ರಸ್ಥಾನ ಪಡೆದು ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಹಳ್ಳಿಯ ಸರಳ ಕುಟುಂಬದಿಂದ ಬಂದಿರುವ



ನನ್ನನ್ನು ಬಾಲ್ಯದಿಂದಇಂದಿನವರೆಗೆಕಲಿಸಿದಎಲ್ಲ ಗುರುಗಳಿಗೆ ಮೊದಲಿಗೆ ಧನ್ಯವಾದ ಹೇಳಬೇಕು. ನಂತರ ಕಷ್ಟದಲ್ಲಿಯೂ ನನ್ನ ಜೊತೆಯಾಗಿ ನಿಂತ ತಂದೆ-ತಾಯಿಗೆ ನಾನು ಸದಾ ಕೃತಜ್ಞಳಾಗಿದ್ದೇನೆ. ಅವರ ತ್ಯಾಗ ಮತ್ತು ಪ್ರೋತ್ಸಾಹವೇ ನನಗೆ ಈ ಸಾಧನೆ ಮಾಡಲು ಶಕ್ತಿ ನೀಡಿದೆ ಎಂದು ಮೀನಾಜ ಸಂತಸ ವ್ಯಕ್ತಪಡಿಸಿದ್ದಾರೆ.

ಧಾರ್ಮಿಕ ಕಾರ್ಯಕ್ರಮ ಪ್ರತಿಯೊಬ್ಬರ ಜೀವನಕ್ಕೆ ದಾರಿದೀಪ: ಬಾಬಾಸಾಹೇಬ

ಚಡಚಣ: ತಾಲೂಕಿನ ಲೋಣಿ (ಬಿಕೆ) ಗ್ರಾಮದ ಗ್ರಾಮ ದೇವತೆ ಭಾಗ್ಯವಂತಿ ಜಾತ್ರಾ ಮಹೋತ್ಸವ ಸಂಭ್ರಮದಿಂದ ಆಚರಿಸಲಾಯಿತು. ಅಕ್ಷಯ ತೃತೀಯ ದಂದು ಭಾಗ್ಯವಂತಿ ದೇವಿಯ ಜಾತ್ರೆಯನ್ನು ಗ್ರಾಮಸ್ಥರು ಸೇರಿಕೊಂಡು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರುಗಿತು.

ಕಾಂಗ್ರೆಸ್ ಮುಖಂಡ ಬಾಬಾಸಾಹೇಬ ವಿಜಯಧಾರೆ ಮಾತನಾಡಿ, ಇಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ ಎಂದು ಹೇಳಿದರು. ಭಾಗ್ಯವಂತಿ ದೇವಿಯ ಫೋಟೋ ಪೂಜೆ ನೆರವೇರಿಸಿ, ನಂತರ ಬರಗೂಡಿ ಭಾಗ್ಯವಂತಿಪಲ್ಲಕ್ಕಿ, ಲೋಣಿ ಬಿಕೆ ಲಾಯಗಂಗಾ ಪಲ್ಲಕ್ಕಿ, ರುದ್ರಮಹಾರಾಜರ ದಿಂಡಿ, ಉಡಿ ತುಂಬುವ ಕಾರ್ಯಕ್ರಮ ಜರುಗಿತು. ಸಿದ್ಧಾರೂಢ ಮಠ, ಆಳೂರ-ಪಡನೂರದ ಶಂಕರಾನಂದ ಸ್ವಾಮಿಗಳು ಆಶೀರ್ವಚನ ನೀಡಿ, ಧರ್ಮದ ಕಾರ್ಯಕ್ರಮಗಳು ಜೀವನದ ದಾರಿದೀಪವಾಗಿದ್ದು, ಸಾಂಪ್ರದಾಯಿಕ ಬೆಳವಣಿಗೆಗೆ ಕಾರಣವಾಗುತ್ತವೆ. ಹಬ್ಬ-ಜಾತ್ರೆಗಳು ಕೇವಲ ಆಚರಣೆಗೆ ಸೀಮಿತವಾಗದೆ, ಜೀವನದ ಮೌಲ್ಯ ಎತ್ತಿ ಹಿಡಿಯುತ್ತವೆ ಎಂದು ಹೇಳಿದರು.

ಪ್ರಕಾಶ ಜಿತ್ತಿ ಮಾತನಾಡಿ, ಜನರಲ್ಲಿ ಹಾಗೂ ಯುವಕರಲ್ಲಿ ಸಮಾನತೆ ಮತ್ತು ಸಾಂಪ್ರದಾಯಿಕ ಅರಿವು ಮೂಡಿಸುವ ಉದ್ದೇಶ ದೊಂದಿಗೆ ಪ್ರತಿ ವರ್ಷ ಗ್ರಾಮದ ಹಿರಿಯರು ಕಿರಿಯರು ಎನ್ನದೆ ಜಾತ್ರೆಯಲ್ಲಿ ಎಲ್ಲರು ಭಾಗವಹಿಸುವದರೊಂದಿಗೆ ಈ ಜಾತ್ರೆ ವಿಶೇಷವಾಗಿ ಸಾಮಾಜಿಕ ಜಾಗೃತಿ ಮೂಡಿಸುವದರಲ್ಲಿ ಮುಂಚುಣಿಯಲ್ಲಿದೆ ಎಂದರು.

ಅನ್ನಪೂರ್ಣೇಶ್ವರಿ ಶಿರಾಡೋಣ, ಕಾಶಿಬಾಯಿ ವಾಲಿಕಾರ, ಗೀತಾ ಜಿತ್ತಿ, ಮಂಜುಳಾ ಮಾನೆ, ರೇಣುಕಾ ಅವಜಿ ಇವರಿಂದ ಸಾವಿರಾರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ದೇವಸ್ಥಾನ ಪೂಜಾರಿ ಸುರೇಶ ಪೂಜಾರಿ, ರಮೇಶ ಜಿತ್ತಿ, ಶ್ರೀನಿವಾಸ ಕುಲಕರ್ಣಿ, ರಾಜಕುಮಾರ ಜಿತ್ತಿ, ಸೋಮು ಸ್ವಾಮಿ, ಗುರುಲಿಂಗಪ್ಪ ಉಮ್ಮರ್ಜಿ, ಮಲ್ಲಿಕಾರ್ಜುನ ಮೇತ್ರಿ, ಚಿದಾನಂದ ನಾವಿ, ಸುರೇಶಗೌಡ ಪಾಟೀಲ, ಸಿದ್ದು ಕರಜಗಿ ಉಪಸ್ಥಿತರಿದ್ದರು.



ಸಮುದಾಯ ಭವನ ಕಾಮಗಾರಿಗೆ ಭೂಮಿಪೂಜೆ

ಸಿಂದಗಿ: ಬಾಬಾಸಾಹೇಬರು ನೀಡಿರುವ ಸಂವಿಧಾನದಡಿಯಲ್ಲಿ ನಾವೆಲ್ಲರೂ ಕಾರ್ಯನಿರ್ವಹಿಸಬೇಕು. ಅಧಿಕಾರ ಯಾವಾಗಲೂ ಜನಪರವಾಗಿರಬೇಕು. ಅಧಿಕಾರ ಎನ್ನುವುದು ಸೇವೆ ಎಂಬ ಮನೋಭಾವದಿಂದ ಕೂಡಿರಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ತಾಲೂಕಿನ ಗಬಸಾವಳಗಿ ಗ್ರಾಮದಲ್ಲಿ ನಡೆದ 2025-26 ಸಾಲಿನ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸಿದ್ರಾಮೇಶ್ವರ ದೇವಸ್ಥಾನ ಹತ್ತಿರ ರೂ.25ಲಕ್ಷ ಮೊತ್ತದ ಸಮುದಾಯ ಭವನದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಶರಣರ, ಸಂತರ, ಸ್ವಾತಂತ್ರ್ಯ ಹೋರಾಟಗಾರರ ಹಾಗೂ ದಾರ್ಶನಿಕರ ಆಚಾರ, ವಿಚಾರ, ಸಂಪ್ರದಾಯ ಮತ್ತು ತತ್ವಾದರ್ಶಗಳನ್ನು ಮುಂದಿನ ಯುವ ಪೀಳಿಗೆಗೆ ವರ್ಗಾವಣೆಯಾಗಬೇಕಾದರೆ ಗ್ರಾಮೀಣ ಪ್ರದೇಶಗಳಲ್ಲಿ ಕಾಲಕ್ಕೆ ಅನುಗುಣವಾಗಿ ಪುರಾಣ-ಪ್ರವಚನ, ಉಪನ್ಯಾಸಗಳು ನಡೆಯಬೇಕು. ಗ್ರಾಮದ ಅಭಿವೃದ್ಧಿಗಾಗಿ ಸದಾ ಶ್ರಮಿಸುತ್ತೇನೆ ಎಂದರು.

ಸಿದ್ರಾಮೇಶ್ವರ ದೇವಸ್ಥಾನ ಜೀರ್ಣೋದ್ಧಾರಕ್ಕೆ ಗ್ರಾಮಸ್ಥರ ಈಗಾಗಲೇ ರೂ.70ಲಕ್ಷ ಹಣವನ್ನು ದೇಣಿಗೆಯ ಮೂಲಕ ಸಂಗ್ರಹಣೆ ಮಾಡಿ 14 ನಿವೇಶನಗಳನ್ನು ಖರೀದಿ ಮಾಡಿದ್ದಾರೆ. ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸಿದ್ರಾಮೇಶ್ವರ ದೇವಸ್ಥಾನ ಹತ್ತಿರ ರೂ.25ಲಕ್ಷ ಮೊತ್ತದ ಸಮುದಾಯ ಭವನದ ಕಾಮಗಾರಿಗೆ ಮೀಸಲಿಡಲಾಗಿದೆ ಎಂದರು.

ಶಾಸಕ ಅಶೋಕ ಮನಗೂಳಿ ಅವರಿಗೆ ಗ್ರಾಮಸ್ಥರು ಅದ್ದೂರಿ ಮೆರವಣಿಗೆ ಮೂಲಕ ಸ್ವಾಗತಿಸಿಕೊಂಡರು. ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡದಿರುವ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಜಿಪಂ ಮಾಜಿ ಸದಸ್ಯ ನರಸಿಂಗ ಪ್ರಸಾದ ತಿವಾರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ, ಕೆಡಿಪಿ ಸದಸ್ಯ ನಿಂಗಣ್ಣ ಬುಳ್ಳಾ, ಮುಖಂಡ ಸೋಮನಗೌಡ ಪಾಟೀಲ, ಭೀಮನಗೌಡ ಬಿರಾದಾರ, ಬಾಗಪ್ಪಗೌಡ ಪಾಟೀಲ, ಅಶೋಕಗೌಡ ಬಿರಾದಾರ, ಅಯ್ಯನಗೌಡ ಬಿರಾದಾರ, ಆಮೋಘ ಪೂಜಾರಿ, ಗೊಲ್ಲಾಳಪ್ಪಗೌಡ ಪಾಟೀಲ, ಸಾಯಿಪಟೇಲ ಯರಗಲ್ ಸೇರಿದಂತೆ ಕಾರ್ಯಕರ್ತರು ಇದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಿವೃತ್ತ ನೌಕರರ ಪ್ರತಿಭಟನೆ

ವಿಜಯಪುರ: ಹಣಕಾಸು ಮಸೂದೆ (ಮೌಲ್ಯಮಾಪನ ಕಾಯ್ದೆ) 2025 ಅನ್ನು ರದ್ದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜಿಲ್ಲಾ ನಿವೃತ್ತ ನೌಕರರ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಪ್ರತಿಭನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ಚಂದ್ರಶೇಖರ ಲೆಂಡಿ ಮಾತನಾಡಿ, ಎಲ್ಲ ರಾಜ್ಯಗಳಲ್ಲಿನ ತುಟ್ಟಿ ಭತ್ಯೆಯನ್ನು ಕೇಂದ್ರ ಸರ್ಕಾರಿ ಪಿಂಚಣಿದಾರರ ಮಟ್ಟಕ್ಕೆ ಹೆಚ್ಚಿಸಬೇಕು. ಪಿಂಚಣಿ ಕೌಂಟೇಶನ್ ಮೊತ್ತವನ್ನು 15 ವರ್ಷದಿಂದ 11 ವರ್ಷಗಳವರೆಗೆ ಇಳಿಸಬೇಕು. ನೌಕರರ ಹಿತಾಸಕ್ತಿಗಳಿಗೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳನ್ನು ಸಾಮಾನ್ಯೀಕರಿಸಬೇಕು. ರೈಲ್ವೆ ಪ್ರಯಾಣ, ವಿಮಾನ ಪ್ರಯಾಣ, ವೋಲ್ವೋ, ಎಸಿ ಬಸ್‌ಗಳು ಮತ್ತು ಖಾಸಗಿ ಸಹಕಾರಿ ಬಸ್ ದರಗಳ ಮೇಲಿನ ರಿಯಾಯಿತಿಗಳನ್ನು ಪುನಃಸ್ಥಾಪಿಸಬೇಕು ಎಂದರು.

ಮುಖಂಡ ಸುರೇಶ ಜೀಬಿ ಮಾತನಾಡಿ, ಎಲ್ಲ ರಾಜ್ಯಗಳು ದೇಶದ ಎಲ್ಲ ಪಿಂಚಣಿದಾರರಿಗೆ ವೈದ್ಯಕೀಯ ವಿಮೆಯನ್ನು ಒದಗಿಸುವ ಮೂಲಕ ಆರೋಗ್ಯ ರಕ್ಷಣೆಯನ್ನು ಒದಗಿಸಬೇಕು. ಅದಕ್ಕೆ ತಕ್ಕಂತೆ ಪಿಂಚಣಿ ವಯಸ್ಸನ್ನು ಹೆಚ್ಚಿಸಿ. 65 ವರ್ಷ ವಯಸ್ಸಿನ ನಂತರ ಶೇ.10, 70 ವರ್ಷಕ್ಕೆ ಶೇ. 20, 75 ವರ್ಷಕ್ಕೆ ಶೇ.30, 80 ವರ್ಷಕ್ಕೆ ಶೇ.50, 85 ವರ್ಷಕ್ಕೆ ಶೇ.70, 90 ವರ್ಷಕ್ಕೆ ಶೇ. 90 ಮತ್ತು 95 ವರ್ಷಗಳ ನಂತರ ಶೇ.100ರಷ್ಟು ನೀಡಬೇಕು. ನಾಲ್ಕು ಹೊಸ ಅಪಾಯಕಾರಿ ಕಾರ್ಮಿಕ ಸಂಹಿತೆ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.



ಎಂ.ಎಂ.ಪಾಟೀಲ ಮಾತನಾಡಿದರು. ಮುಖಂಡರಾದ ಎನ್.ಕೆ.ಮನಗೊಂಡ, ಆರ್.ಎಸ್.ಮೇಣಸಗಿ, ವಿ.ಎಂ.ಬೆಳ್ಳುಂಡಗಿ, ಜಿ.ಬಿ.ಅಂಗಡಿ, ಎಸ್.ಜಿ.ಮುರನಾಳ, ಪಿ.ಜಿ.ಕ್ಯಾತನ, ಜಿ.ಜಿ.ಯಜುರ್ವೇದ, ಎಸ್.ಎಸ್. ಮುದಬಾಳ, ಜಿ.ಎ.ಶಿಂಧೆ, ಎಸ್.ಎ.ಬಿರಾದಾರ, ಎಸ್.ಎಸ್.ಯರಗಲ್ಲ, ವಿ.ಎಂ.ಘೋಷಣ, ಎಂ.ಎಂ.ಬೇಪಾರಿ, ಎಸ್.ವೈ.ಅವಟಿ ಇದ್ದರು.

ಸ್ತ್ರೀಯರಿಗೆ ಸಮಾನ ಹಕ್ಕು ಕರುಣಿಸಿದ ಬಸವಣ್ಣನವರು: ಸೌಭಾಗ್ಯ

ಬಸವನಬಾಗೇವಾಡಿ: ಸ್ತ್ರೀಯರಿಗೆ ಸಮಾನ ಹಕ್ಕು ಕರುಣಿಸಿ, ಸರ್ವರೂ ಒಂದು ಎಂದು ಪ್ರತಿಪಾದಿಸಿದ್ದ ವಿಶ್ವಗುರು ಬಸವಣ್ಣನವರು, ಶರಣರು ಸರ್ವ ಕಾಲಕ್ಕೂ ಪ್ರಸ್ತುತರು ಎಂದು ದಂತ ವೈದ್ಯೆ ಡಾ.ಸೌಭಾಗ್ಯ ಗುಬ್ಬಾ ಹೇಳಿದರು.

ಸ್ಥಳೀಯ ಬಿಎಲ್‌ಡಿಇ ಬಸವೇಶ್ವರ ಕಲಾ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಂದಿ ಸಾಹಿತ್ಯ ವೇದಿಕೆ ಬಸವ ಜಯಂತಿ ನಿಮಿತ್ತ ಹಮ್ಮಿಕೊಂಡ ಬಸವ ಜಯಂತಿ ಆಚರಣೆ ಮತ್ತು ಬಸವಣ್ಣನವರು ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು ಇಂದಿನ ಪೀಳಿಗೆ ಶರಣರ ಕುರಿತು ಅರಿಯಬೇಕಾದ ಅವಶ್ಯಕತೆಯಿದೆ. ಬಸವಣ್ಣನವರ ಪ್ರೇರಣೆಯಿಂದ ಅಂದು ಹಲವು ಶರಣೆಯರು ವಚನಗಾರ್ತಿಯರಾದರು. ಇನ್ನೊಬ್ಬರನ್ನು ಹೀಯಾಳಿಸದೆ ಪ್ರೀತಿ-ವಿಶ್ವಾಸದಿಂದ ಇರುವುದೇ ಉತ್ತಮ ಎಂದರು.

ನಂದಿ ಸಾಹಿತ್ಯ ವೇದಿಕೆ ಅಧ್ಯಕ್ಷ ಮಹಾಂತೇಶ ಸಂಗಮ ಮಾತನಾಡಿ, ಎತ್ತುಗಳನ್ನೇ ಬಸವಣ್ಣನವರೆಂದು ತಿಳಿದು ಬಸವ ಜಯಂತಿ ಆಚರಿಸಲಾಗುತ್ತಿತ್ತು. ಯಾವಾಗ ಶರಣ ಹರ್ಡೇಕರ ಮಂಜಪ್ಪನವರು ಬಸವ ಜಯಂತಿ ಕಲ್ಪನೆಯೊಂದಿಗೆ 1913ರಲ್ಲಿ ಬಸವ ಜಯಂತಿಯನ್ನು ದೇಶದಲ್ಲಿಯೇ ಮೊದಲ ಬಾರಿ ಆಚರಿಸಿದರೋ ಅಂದಿನಿಂದ ಆಚರಣೆಗೊಳ್ಳುತ್ತಾ ಸಾಗಿದ ಬಸವ ಜಯಂತಿ ಇಂದು ವಿಶ್ವದೆಲ್ಲೆಡೆ ಆಚರಣೆಗೊಳ್ಳುತ್ತಿದೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ ಮಾತನಾಡಿ, ಶರಣರು ವಿದ್ಯಾರ್ಥಿಗಳ ಹಂತದಲ್ಲಿ ಇಂತಹ ಅಮೂಲ್ಯ ಮಾಹಿತಿಗಳನ್ನು ತಿಳಿಸುವುದು ಅಗತ್ಯವಾಗಿದೆ. ಕೇವಲ ಮೊಬೈಲ್ ಗೀಳಿನಲ್ಲಿ ಮುಳುಗಿ ಅಭ್ಯಾಸಕ್ಕೆ ಹಿನ್ನಡೆ ಮಾಡಿಕೊಳ್ಳದೇ ಓದಿನಲ್ಲಿ ಆಸಕ್ತಿ ತೋರಬೇಕು. ಇಂದು ವಿದ್ಯಾಲಯ ವಿದ್ಯಾರ್ಥಿನಿಯರೇ ಎಲ್ಲ ನಿರ್ವಹಣೆ ಮಾಡಿದ್ದಾರೆ ಎಂದರು.

ಪ್ರೊ.ಬಸವರಾಜ ಸಾಲವಾಡಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಠಾಕಾಬಾಯಿ ಲಮಾಣಿ ಪ್ರಾರ್ಥಿಸಿದರು. ಕಲ್ಮೇಶ ಶಿರಗೂರ, ಅಶೋಕ ಜುಗತಿ ವಚನ ಗಾಯನಗೈದರು. ಗೀತಾ ಕುಂಬಾರ ಮಾತನಾಡಿದರು. ಸಿ.ಪಿ.ಧಡೇಕರ ಇದ್ದರು. ಕಾವೇರಿ ಅಡಗಿಮನಿ, ಜ್ಯೋತಿ ಕುಂಬಾರ ನಿರೂಪಿಸಿದರು.

ಸಮಾನತೆ ಸಾರಿದ ಜಗಜ್ಯೋತಿ ಬಸವಣ್ಣ



ದೇವರಹಿಪ್ಪರಗಿ: ಬಸವಣ್ಣ ಮಹಾನ್ ಮಾನವತಾವಾದಿಯಾಗಿದ್ದರು. ಸಮಾಜದಲ್ಲಿನ ಪ್ರತಿಯೊಬ್ಬರು ಸಮಾನರು ಎಂದು ವಿಶ್ವಕ್ಕೆ ಸಾರುವ ಮೂಲಕ ಸಮಾನತೆಯ ಹರಿಕಾರರಾಗಿದ್ದರು ಎಂದು ತಹಶೀಲ್ದಾರ್ ನಿಂಗಪ್ಪ ಬಿರಾದಾರ ಹೇಳಿದರು.

ಪಟ್ಟಣದ ತಹಶೀಲ್ದಾರ್ ಸಭಾಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಬಸವೇಶ್ವರ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು,'ವರ್ಗ, ವರ್ಣ, ಲಿಂಗ ಸೇರಿ ದಂತೆ ಸರ್ವ ಸಮಾನತೆಗಳ ಪ್ರಜಾಪ್ರಭುತ್ವ ಪರಿಕಲ್ಪನೆಯ ಸಂಸತ್ತನ್ನು ವಿಶ್ವದಲ್ಲೇ ಮೊದಲ ಬಾರಿಗೆ ಕಾರ್ಯರೂಪಕ್ಕೆ ತಂದ ವರು ಬಸವಣ್ಣನವರು. ಅದುವೇ ಅನು ಭವ ಮಂಟಪ' ಅವರ ತತ್ವ ಆದರ್ಶಗಳನ್ನು ಪಾಲಿಸೋಣ ಎಂದು ಹೇಳಿದರು. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಎಸ್.ಎನ್. ಬಸವರೆಡ್ಡಿ ಬಸವಣ್ಣನವರ ಕುರಿತು ವಿಶೇಷ ಉಪನ್ಯಾಸ ನೀಡಿದರು. ನಿವೃತ್ತ ಶಿಕ್ಷಣ ಸಂಯೋಜಕ ಪಿ.ಎಸ್.ಮಿಂಚನಾಳ ಮಾತನಾಡಿದರು. ಕಂದಾಯ ಶಿರಸ್ತೇದಾರ ಸುರೇಶ ಮ್ಯಾಗೇರಿ,ವಚನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜೆ.ಆರ್.ಬಿರಾದಾರ, ಮುಖಂಡರಾದ ಗುರುರಾಜ ಕುಲಕರ್ಣಿ, ಸೋಮಶೇಖರ ಹಿರೇಮಠ, ಎಸ್.ಎನ್.ಹರಳಯ್ಯ,ನಾನಾಗೌಡ ಸಿದರೆಡ್ಡಿ,ಶಿವನಗೌಡ ಬಿರಾದಾರ, ಪಿ.ಸಿ.ತಳಕೇರಿ, ಅರ್ಜುನ ವಾಲೀಕಾರ,ಸೋಮು ದೇವೂರ, ಗೊಲ್ಲಾಳ ಬಿರಾದಾರ, ಶಿವಶರಣ ಪೂಜಾರಿ, ರಮಾನಂದ ಚಕ್ಕಡಿ, ಸಿದ್ದು ಅವಟಿ,ಸುರೇಶ ಭಜಂತ್ರಿ ಇದ್ದರು.

ಮಹಾಂತೇಶ ಬೋಳಶೆಟ್ಟಿ ಸ್ಮಾರಕ ಅನಾವರಣ

ಮುದ್ದೇಬಿಹಾಳ: ತಾಲೂಕಿನ ಆಲೂರು ಗ್ರಾಮದಲ್ಲಿ ಮದ್ರಾಸ್ ರೆಜಿಮೆಂಟಿನ ವೀರಯೋಧ ಮಹಾಂತೇಶ ಬಸಪ್ಪ ಬೋಳಶೆಟ್ಟಿ ಸ್ಮರಣಾರ್ಥ ಮೂರ್ತಿ ಉದ್ಘಾಟನೆ ಹಾಗೂ ಸ್ಮಾರಕ ನಿರ್ಮಾಣ ಕಾರ್ಯಕ್ರಮದ ವೇದಿಕೆಯಲ್ಲಿ ಮಾಜಿ ಸೈನಿಕರಿಗೆ ಸನ್ಮಾನಿಸಲಾಯಿತು.

ಕುಂಟೋಜಿ ಭಾವೈಕ್ಯತೆ ಮಠದ ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿ, ದೇಶವನ್ನು ಕಾಯುವ ವೀರಯೋಧರ ಪರಿಶ್ರಮ ರೈತರ ಅನ್ನ ದಾಸೋಹ ಹಾಗೂ ವಿಜ್ಞಾನಿಗಳ ಸಾಹಸ ಪ್ರವೃತ್ತಿ, ದೇಶವನ್ನು ಕಾಯುತ್ತದೆ. ಸ್ಮಾರಕ ನಿರ್ಮಾಣ ಯುವಕರಲ್ಲಿ ಕೆಚ್ಚೆದೆಯನ್ನು ತರುತ್ತದೆ ಮತ್ತು ದೇಶಕ್ಕಾಗಿ ಹೋರಾಟ ಮಾಡುವ ಮನೋಭಾವವನ್ನು ಹುಟ್ಟು ಹಾಕುತ್ತದೆ ಎಂದು ಹೇಳಿದರು.

ನಿವೃತ್ತ ಉಪನ್ಯಾಸಕ ಡಾ.ಬಿ.ಎ.ಗೂಳಿ ಮಾತನಾಡಿ, ಗ್ರಾಮೀಣ ಮಟ್ಟದ ಒಬ್ಬ ಯೋಧ, ದೇಶವನ್ನು ಕಾಯುವ ಕನಸನ್ನು ಕಂಡಿರುವುದು ಮತ್ತು ಸೇವೆಯಲ್ಲಿದ್ದಾಗ ಅಮರನಾಗುವುದು ಅತ್ಯುನ್ನತ ದೇಶ ಸೇವೆ. ಅವರ ತ್ಯಾಗ ಅಜರಾಮರ, ಸ್ಮಾರಕ ನಿರ್ಮಾಣ ಅವರ ನೆನಪನ್ನು ಸದಾ ಜೀವಂತವಾಗಿಡುತ್ತದೆ ಎಂದು ಹೇಳಿದರು. ಯೋಧರಾದ ಸಂಗಣ್ಣ ಕಟ್ಟಿ, ಎಸ್.ಆರ್.ತಮಗೊಂಡ ಪಿ.ಜಿ.ಬಿರಾದಾರ, ಚಂದ್ರಶೇಖರ ಪೂಜಾರ ಸೇರಿದಂತೆ ಪ್ರಮುಖರು ಬೋಳಶೆಟ್ಟಿ ಕುಟುಂಬದವರು ಉಪಸ್ಥಿತರಿದ್ದರು.



ಸಮಸಮಾಜದ ನಿರ್ಮಾತೃ ಬಸವಣ್ಣ



ಕೊಲ್ಹಾರ: ಪಟ್ಟಣದ ತಹಶೀಲ್ದಾರ್ ತಾಲೂಕು ಆಡಳಿತ ಹಾಗೂ ಶರಣ ಸಾಹಿತ್ಯ ಪರಿಷತ್ ವತಿಯಿಂದ ಬಸವಣ್ಣನವರ 893ನೇ ಜಯಂತೋತ್ಸವನ್ನು ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಡೆಯಿತು.

ಶಿರಸ್ತೇದಾರ್ ಕೃಷ್ಣಾ ಗುಡೂರ ಮಾತನಾಡಿ, ಸಮಾಜದಲ್ಲಿ ಜಾತಿ ವ್ಯವಸ್ಥೆ, ಮೂಢನಂಬಿಕೆ ಹೋಗಲಾಡಿಸಿ ಜನರಲ್ಲಿ ಸಮಾನತೆ ತರಲು ತಮ್ಮ ವಚನಗಳ ಮೂಲಕ ಜನರನ್ನು ಜಾಗೃತಗೊಳಿಸುವ ಕಾರ್ಯವನ್ನು ಬಸವಣ್ಣನವರು ಮಾಡಿದರು ಎಂದು ಹೇಳಿದರು.

ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್.ಬಾಲಗೊಂಡ ಮಾತನಾಡಿ, ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಮಾಡುವ ಕಾಯಕದಲ್ಲಿ ನಿಷ್ಠೆ ಶ್ರದ್ಧೆ ಭಕ್ತಿ ಇದ್ದರೆ ನಮಗೆ ಅದುವೇ ಕೈಲಾಸ ಎಂದು ತಿಳಿದು ಬಸವಣ್ಣನವರ ಹಾದಿಯಲ್ಲಿ ನಾವು ನೀವು ಸಾಗೋಣ ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಮಲ್ಲಪ್ಪ ಗಣಿ ರವರ ಸ್ವರಚಿತ ಕವನ ಭಜನಾ ರಾಗದಲ್ಲಿ ಹಾಡಿ ಇಡಿ ಕಾರ್ಯಕ್ರಮಕ್ಕೆ ಮೆರುಗು ತಂದು ಕೊಟ್ಟಿದ್ದು ವಿಶೇಷವಾಗಿತ್ತು. ಕಂದಾಯ ನಿರೀಕ್ಷಕ ಪಿ.ಎಸ್.ಹುಡೇದ, ಗ್ರಾಮ ಲೆಕ್ಕಾಧಿಕಾರಿ ಬಿ.ಎನ್.ಚಿಕ್ಕಿಮನಿ, ಆನಂದ ಇಂಡಿ, ಸಂಜು ಡೋಣೂರ, ಶಿಕ್ಷಕರಾದ ಕೃಷ್ಣಾ ರಜಪುತ, ಗರಸಂಗಿ, ಚೈತ್ರಾ ದಳವಾಯಿ ಇದ್ದರು.

ರೈತರಿಗೆ ಶೀಘ್ರ ವಿದ್ಯುತ್ ಸಂಪರ್ಕ ಕಲ್ಪಿಸಿ

ನಿಡಗುಂದಿ: ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಪಡೆದ ರೈತರಿಗೆ ಶೀಘ್ರ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಟಿಸಿ ಅಳವಡಿಕೆಗೆ ಹೆಚ್ಚುವರಿ ಹಣಕ್ಕೆ ಬೇಡಿಕೆ ಇಡಬಾರದು ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಪಟ್ಟಣದ ಹೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಾಲಾಜಿ ಸಿಂಗ ರವರಿಗೆ ಮನವಿ ಸಲ್ಲಿಸಿದರು.

ಗಂಗಾ ಯೋಜನೆಯಲ್ಲಿ ರೈತರಿಗೆ ಬೋರ್‌ವೆಲ್ ಮಂಜೂರಾಗಿದ್ದರೂ ವಿದ್ಯುತ್ ಸಂಪರ್ಕ ಕಲ್ಪಿಸಲು ಸಿಬ್ಬಂದಿ ಸತಾಯಿಸುವುದು ಸರಿಯಲ್ಲ, ಅರಳದಿನ್ನಿ ಗ್ರಾಮದ ರೈತರ ಟಿಸಿ ವರ್ಗಾವಣೆಗೆ ನಿಯಮಬಾಹಿರವಾಗಿ ಹೆಚ್ಚುವರಿ ಹಣ ಕೇಳುತ್ತಿದ್ದಾರೆ. ಸರಿಯಾದ ಸಮಯಕ್ಕೆ ವಿದ್ಯುತ್ ಪೂರೈಕೆಯಾಗುತ್ತಿಲ್ಲ, ಬಿಸಿಲಿಗೆ ಬೆಳೆಗಳು ನೀರು ಇಲ್ಲದೇ ಹಾಳಾಗುತ್ತಿವೆ ಎಂದರು.

ಮನವಿ ಸ್ವೀಕರಿಸಿದ ಹೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಾಲಾಜಿ ಸಿಂಗ ಮಾತನಾಡಿ, ಎರಡು ಮೂರು ದಿನಗಳಲ್ಲಿ ಸಮಸ್ಯೆಯನ್ನು ಪರಿಹರಿಸಲಾಗುವದು ಎಂದು ಬರವಸೆ ನೀಡಿದರು.

ಸಂಘದ ತಾಲೂಕಾಧ್ಯಕ್ಷ ಸೀತಪ್ಪ ಗಣಿ, ಶಶಿಕಾಂತ ದೇಸಾಯಿ, ರವಿಶಂಕರ ಕೋತಿನ, ಪೀರಸಾಬ ನದಾಫ್, ವೆಂಕಟೇಶ ವಡ್ಡರ, ಸಾಬಣ್ಣ ಅಂಗಡಿ, ಲಕ್ಷ್ಮಣಗೌಡ ಬಿರಾದಾರ, ರಾಮಣ್ಣ ಸೀತಿಮನಿ, ಶಿವಪ್ಪ ಪಾಟೀಲ, ಮಲ್ಲನಗೌಡ ಬಿರಾದಾರ, ಬಿ.ವೈ.ಯಂಡಿಗೇರಿ ಇತರರಿದ್ದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
09
ಕಲಬುರಗಿ ರಾಯಚೂರು ಕೊಪ್ಪಳ
ಗರಿಷ್ಠ 38° ಕನಿಷ್ಠ 26°
ಬುಧವಾರ
22 ಏಪ್ರಿಲ್ 2026
ಹುಬ್ಬಳ್ಳಿ

ಕಿರುಸುದ್ದಿ

ಕಲಬುರಗಿಯಲ್ಲಿ ಗಾಳಿ ಸಮೇತ ಧಾರಾಕಾರ ಮಳೆ



ಕಲಬುರಗಿ: ನಗರದಲ್ಲಿ ಮಂಗಳವಾರ ಸಂಜೆ ಏಕಾಏಕಿ ಸುರಿದ ಭಾರೀ ಮಳೆ ಜನಜೀವನವನ್ನು ಕೆಲಕಾಲ ಅಸ್ತವ್ಯಸ್ತಗೊಳಿಸಿತು. ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಸಂಜೆ ವೇಳೆಗೆ ಗಾಳಿ ಸಮೇತ ಧಾರಾಕಾರವಾಗಿ ಮಳೆ ಸುರಿದಿದೆ. ಮಳೆಯ ಪರಿಣಾಮವಾಗಿ ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೆ ಅಡಚಣೆ ಉಂಟಾಯಿತು. ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ಜನರು ಮಳೆಯಿಂದ ಸಂಕಷ್ಟ ಅನುಭವಿಸಿದರು. ಕೆಲವೆಡೆ ವಿದ್ಯುತ್ ವ್ಯತ್ಯಯವೂ ಉಂಟಾಗಿ ನಿವಾಸಿಗಳಿಗೆ ತೊಂದರೆ ಉಂಟಾಯಿತು. ಆದರೆ, ಕಳೆದ ಕೆಲವು ದಿನಗಳಿಂದ ಮುಂದುವರಿದಿದ್ದ ಉಷ್ಣತೆಯಿಂದ ಬಳಲುತ್ತಿದ್ದ ಜನರಿಗೆ ಮಳೆ ಸ್ವಲ್ಪ ತಂಪಿನ ಅನುಭವ ನೀಡಿತು. ರೈತರೂ ಈ ಮಳೆಯಿಂದ ಬೆಳೆಗಳಿಗೆ ಅನುಕೂಲವಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.ಹವಾಮಾನ ಇಲಾಖೆ ಮುಂದಿನ ಕೆಲವು ದಿನಗಳಲ್ಲೂ ಮೋಡ ಕವಿದ ವಾತಾವರಣ ಹಾಗೂ ಸಣ್ಣ ಪ್ರಮಾಣದ ಮಳೆಯ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊಟ್ಟೂರು ತಾಲೂಕಿನಲ್ಲಿ ಆಲಿಕಲ್ಲು ಮಳೆ



ಕೊಟ್ಟೂರು: ಪಟ್ಟಣ ಸೇರಿದಂತೆ ತಾಲೂಕಿನ ಬಹುತೇಕ ಕಡೆ ಮಂಗಳವಾರ ಸಂಜೆ ಆಲಿಕಲ್ಲು ಸಹಿತ ಮಳೆ ಸುರಿಯಿತು. ಬಿಸಿಲ ಉರಿಯಿಂದ ತತ್ತರಿಸಿರುವ ಜನರಿಗೆ ಮಳೆಯು ತುಸು ನೆಮ್ಮದಿ ಮೂಡಿಸಿದೆ. ಏ.17ರಿಂದ ಆರಂಭವಾಗಿರುವ ಅಶ್ವಿನಿ ನಕ್ಷತ್ರದ ಮಳೆ ಹಿಂದೆ ಸಾಧಾರಣವಾಗಿ ಸುರಿದಿತ್ತು. ಆದರೆ ಮಂಗಳವಾರ ಸಂಜೆ ಗುಡುಗು ಮಿಂಚು ಗಾಳಿ ಆರ್ಭಟದೊಂದಿಗೆ 15 ನಿಮಿಷಗಳ ಕಾಲ ಮಳೆ ಜೋರಾಗಿ ಸುರಿಯಿತು. ಈ ಸಂದರ್ಭದಲ್ಲಿ ಸಣ್ಣ ಹಾಗೂ ದೊಡ್ಡ ಪ್ರಮಾಣದ ಆಲಿಕಲ್ಲುಗಳು ಸುರಿದವು. ಆಲಿಕಲ್ಲು ಬೀಳುವ ಶಬ್ದ ಕೇಳಿದ ಮನೆಯೊಳಗಿನ ಮಕ್ಕಳು ಹೊರಗೆ ಬಂದು ಆಲಿಕಲ್ಲು ಹಿಡಿಯಲಾರಂಭಿದರು. ಹಳ್ಳಿಯೊಂದರ ಹೊಲದಲ್ಲಿ ಬಿದ್ದಿದ್ದ ಆಲಿಕಲ್ಲುಗಳು ಕೆಂಪು ಮಣ್ಣಿನಲ್ಲಿ ಮುತ್ತಿನಂತೆ ಕಾಣುತ್ತಿದ್ದವು. ತಾಲೂಕಿನಲ್ಲಿ ನಿತ್ಯವೂ ಇರುವ 37 ಡಿಗ್ರಿ ಸೆ. ತಾಪಮಾನದ ಬಿಸಿಲಿನಿಂದ ಜನರು ಹೈರಾಣಾಗಿದ್ದರು. ನಡು ಮಧ್ಯಾಹ್ನದಲ್ಲಿ ಹೊರಗೆ ಬರುವುದೇ ದುಸ್ತರ ಎಂಬಂತೆ ಬಿಸಿಲ ಝಳ ಸುರಿಯುತ್ತಿತ್ತು. ಆದರೆ ಬಿದ್ದ ಮಳೆ ಬಿಸಿಲ ತಾಪ ತಣಿಸಿ ತುಸು ತಂಪು ಎರೆದಿದೆ.

ದ್ಯಾಮಮ್ಮ ದೇವಿ ಮೂರ್ತಿ ಪ್ರತಿಷ್ಠಾಪನೆ

ಕುಷ್ಟಗಿ: ತಾಲೂಕಿನ ಹಿರೇಮನ್ನಾಪೂರು ಗ್ರಾಮದ ದ್ಯಾಮಮ್ಮದೇವಿ ನೂತನ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆ ಮೆರವಣಿಗೆ ಅದ್ದೂರಿಯಾಗಿ ಮಂಗಳವಾರ ಬರಮಾಡಿಕೊಳ್ಳಲಾಯಿತು. ಗ್ರಾಮದೇವತೆ ದೇವಸ್ಥಾನದಿಂದ ಪ್ರಮುಖ ಬೀದಿಗಳ ಮೂಲಕ ಕುಷ್ಟಗಿ–ತಾವರಗೇರಾ ರಸ್ತೆಯ ಸಂಚರಿಸಿ ದೇವಸ್ಥಾನವರಗೆ ತಲುಪಿತು. ನಂತರ ಮಹಿಳೆಯರಿಂದ ಉಡಿ ತುಂಬುವ ಕಾರ್ಯಕ್ರಮ ನೇರವೇರಿತು. ಮಧ್ಯಾಹ್ನ ಮಹಾಪ್ರಸಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು.



ಈ ವೇಳೆ ಮಾಜಿ ಜಿಪಂ ಮಾಜಿ ಸದಸ್ಯ ದೊಡ್ಡಯ್ಯ ಗದ್ದಡಕಿಮಠ, ಮುಖಂಡರಾದ ಕಳಕಪ್ಪ ಪುರದ ದೊಡ್ಡನಗೌಡ ಮಾಲಿ ಪಾಟೀಲ, ಮಲ್ಲಣ್ಣ ಸಾಹುಕಾರ, ಶಿವಪುತ್ರಪ್ಪ ಗುರಿಕಾರ ಸಂಗಪ್ಪ ಕತ್ತಿ ಮಲಕಾಜಪ್ಪ ತೋಟದ ನಿಂಗಪ್ಪ ಚಾಮಲಾಪುರ ಶರಣಪ್ಪ ಹುಣಸಗೇರಿ, ಪರಸಪ್ಪ ನರಸಾಪುರ, , ಬಸಣ್ಣ ಬಳೂಟಗಿ, ರಮೇಶ್ ಭೋವಿ ,ಪುಂಡಲೀಕಪ್ಪ ಬಡುಕುಂಟಿ ಶಾಂತಪ್ಪ ಸಾಹುಕಾರ ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.



ಮಾನ್ವಿ: ಪಟ್ಟಣದ ತೊಗಟವೀರ ಕ್ಷತ್ರಿಯ ಸಮಾಜದ ಚೌಡೇಶ್ವರಿ ದೇವಿ 39ನೇ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಚೌಡೇಶ್ವರಿ ದೇವಿಯ ದೇವಸ್ಥಾನದ ಆವರಣದಲ್ಲಿ ಚೌಡೇಶ್ವರಿ ದೇವಿಯ ದೇವಸ್ಥಾನದವರೆಗೆ ಜ್ಯೋತಿ ಉತ್ಸವದ ಮೆರವಣಿಗೆ ನಡೆಯಿತು. ಭಕ್ತರು ತಮ್ಮ ಮನೆಗಳ ಹತ್ತಿರ ಬರುವ ಚೌಡೇಶ್ವರಿ ದೇವಿಯಜ್ಯೋತಿಗೆ ಭಕ್ತಿಭಾವದಿಂದ ಪೂಜೆ ಸಲ್ಲಿಸಿದರು. ಸಾವಿರಾರು ಭಕ್ತರು ಜ್ಯೋತಿ ಉತ್ಸವದಲ್ಲಿ ಭಾಗವಹಿಸಿದರು.

ದಲಿತ ಮಹಿಳೆಗೆ ಅವಮಾನ:ಆರೋಪ

ಕುಷ್ಟಗಿ: ಎ 20 ಬಸವ ಜಯಂತಿ ಕಾರ್ಯಕ್ರಮ ಮೆರವಣಿಗೆ ಮಾಜಿ ಶಾಸಕ ಕೆ.ಶರಣಪ್ಪ ವಕೀಲರಿಂದ ದಲಿತ ಮಹಿಳೆಗೆ ಅವಮಾನಿಸಲಾಗಿದೆ ಎಂದು ಗ್ಯಾರಂಟಿ ಅನುಷ್ಠಾನ ಯೋಜನೆ ಜಿಲ್ಲಾ ಸಮಿತಿ ಸದಸ್ಯೆ ಶಾರದಾ ಕಟ್ಟಿಮನಿ ಆರೋಪಿಸಿದರು. ಪಟ್ಟಣದ ಹಳೆ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಸೋಮವಾರ ಮಾತನಾಡಿದರು. ಇಲ್ಲಿನ ಪ್ರಮುಖ ರಸ್ತೆಯ ಮೂಲಕ ಬೆಳಗ್ಗೆ ಬಸವೇಶ್ವರ ಮೆರವಣಿಗೆ ಕಾರ್ಯಕ್ರಮ ವೇಳೆ ವಚನ ಕಟ್ಟುವ ಪುಸ್ತಕ ಹೊತ್ತ ಮಹಿಳೆಯರು ಸಾಗಿಬರುವ ವೇಳೆ ಮಾಜಿ ಶಾಸಕರು ಏಕಾಏಕಿ ಪುರುಷರ ಹತ್ತಿರ ಏಕೆ? ಇದ್ದೀರಾ ಮಹಿಳೆಯರು ಹತ್ತಿರ ಹೋಗಿರಿ ಎಂದು ಏರುಧ್ವನಿಯಲ್ಲಿ ಅಪಮಾನಿಸಿದ್ದಾರೆ.ಬಸವ ತತ್ವದ ಹಾಗೂ ತಮ್ಮ ಭಾಷಣದಲ್ಲೂ ಮಹಿಳೆಯರ ಬಗ್ಗೆ ಮಾತನಾಡುವ ಮಾಜಿ ಶಾಸಕರು ಮಹಿಳೆಯರ ಬಗ್ಗೆ ಅವಮಾನಿಸಿದ್ದು, ನನಗೆ ತೀವ್ರ ನೋವುಂಟಾಗಿದೆ. ಮತಕ್ಷೇತ್ರದಲ್ಲಿ ಹಿರಿಯ ರಾಜಕಾರಣಿ ಮೇಲೆ ನನಗೆ ಸಾಕಷ್ಟು ಗೌರವ ಇತ್ತು. ತಾವು ಅನುಭವಿ ರಾಜಕಾರಣಿ ದಲಿತ ಮಹಿಳೆಯರೆಂದು ಅಗೌರವಿಸಲಾಗಿದೆ. ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸುವುದು ಬಾರದ ಈ ರೀತಿ ಮಹಿಳೆಯರಿಗೆ ಗೌರವ ಮೂಲಕ ಕ್ಷೇಮೆಯಾಚಿಸುವ ಮೂಲಕ ಮಹಿಳೆಯರಿಗೆ ಗೌರವ ಕೊಡವುದು ಕಲಿಯಬೇಕು ಎಂದು ಆಗ್ರಹಿಸಿದ್ದಾರೆ.





ಮುನಿರಾಬಾದ್ : ಸಮೀಪದ ಬೇವಿನಹಳ್ಳಿ ಗ್ರಾಮದಲ್ಲಿ ಜಗದ್ಗುರು ಹಾಗೂ ವಿಶ್ವಗುರು ಎಂದು ಪ್ರಖ್ಯಾತಿ ಪಡೆದ್ದ ಬಸವೇಶ್ವರ ಜಯಂತಿಯ ಆಚರಿಸಲಾಯಿತು. ಅಂದು ಸಂಜೆ ಭಜನೆ ಮಾಡುವ ಮುಖಾಂತರ ಬಸವೇಶ್ವರ ತತ್ವಗಳನ್ನು ಹಾಡುತ್ತ ಊರಿನ ಪ್ರಮುಖ ಬೀದಿಗಳಲ್ಲಿ ಬಸವೇಶ್ವರ ನಾಮಫಲಕದೊಂದಿಗೆ ಮೆರವಣಿಗೆ ನಡೆಯಿತು.

ತುರ್ತು ಸಭೆ। ಅಧಿಕಾರಿಗಳು, ಸಿಬ್ಬಂದಿಗೆ ಜಿಲ್ಲಾಧಿಕಾರಿ ಎಚ್ಚರಿಕೆ

ಅಧಿಕಾರಿಗಳಿಗೆ ಡಿಸಿಯಿಂದ ಶಿಸ್ತಿನ ಪಾಠ

ಕೊಪ್ಪಳ: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಶಿಸ್ತಿನಿಂದ, ಸಮಯ ಪ್ರಜ್ಞೆಯೊಂದಿಗೆ ಕಾರ್ಯನಿರ್ವಹಿಸಬೇಕು. ಅಶಿಸ್ತು ಮುಂದುವರೆಸಿದರೆ ಶಿಸ್ತು ಕ್ರಮ ಜರುಗಿಸುವುದಾಗಿ ಡಿಸಿ ಡಾ.ಸುರೇಶ ಬಿ.ಇಟ್ನಾಳ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ತುರ್ತು ಸಭೆಯಲ್ಲಿ ಮಾತನಾಡಿ,ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಕಚೇರಿಗೆ ಬರಬೇಕು ಎಂದು ಹೇಳುವ ಪರಿಸ್ಥಿತಿ ಬರಬಾರದು. ಕಚೇರಿಗೆ ಸರಿಯಾದ ಸಮಯಕ್ಕೆ ಹಾಜರಾಗಿ ಇನ್ನಿತರ ಸಿಬ್ಬಂದಿಗೆ ಉತ್ತಮ ಪರಿಪಾಠ ಹಾಕಬೇಕು ಎಂದು ಸೂಚಿಸಿದರು.

ನೀವು ಯಾವ ಸಮಯಕ್ಕೆ ಕಚೇರಿಗೆ ಬಂದಿದ್ದೀರಿ? ನೀವು ಬಂದಾಗ ಸಿಬ್ಬಂದಿ ಕಚೇರಿಯಲ್ಲಿದ್ರಾ? ಎಂದು ಇಲಾಖಾವಾರು ಅಧಿಕಾರಿಗಳ ಹಾಜರಾತಿ ಬಗ್ಗೆ ಜಿಲ್ಲಾಧಿಕಾರಿಗಳು ಇದೆ ವೇಳೆ ಪರಿಶೀಲಿಸಿ, ಅಧಿಕಾರಿಗಳಿಗೆ ಶಿಸ್ತಿನ ಪಾಠ ಮಾಡಿದರು.

ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಕಾರಣದಿಂದಾಗಿ ಕಲ್ಯಾಣ ಕರ್ನಾಟಕ ಒಳಗೊಂಡಂತೆ ಉತ್ತರ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕಚೇರಿ ಕೆಲಸದ ಸಮಯ ಬೆಳಿಗ್ಗೆ 8ರಿಂದ ಮಧ್ಯಹ್ನ 1.30ರವರೆಗೆ ಬದಲಾವಣೆ ಮಾಡಿ ಸರ್ಕಾರವು ಆದೇಶಿಸಿದೆ. ಜಿಲ್ಲೆಯ ಕೆಲ ಇಲಾಖೆಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗುತ್ತಿಲ್ಲ, ಕಚೇರಿಯಲ್ಲಿ ಕಾಣುವುದಿಲ್ಲ ಎಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದ್ದನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿದೆ. ಆದಕ್ಕಾಗಿಯೇ ಖುದ್ದು ಕೆಲ ಕಚೇರಿಗಳಿಗೆ ಆಕಸ್ಮಿಕ ಭೇಟಿ ನೀಡಿ ಪರಿಶೀಲನೆ ಮಾಡಿಸಿದ್ದೇವೆ. 10 ಗಂಟೆಯಾದರು ಕೆಲವು ಅಧಿಕಾರಿಗಳು, ಸಿಬ್ಬಂದಿ ಕಚೇರಿಯಲ್ಲಿರುವುದಿಲ್ಲ, ಇದು ನಾಚಿಕೆಗೇಡಿನ ಸಂಗತಿ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಧಿಕಾರಿಗಳ ತಂಡ ರಚಿಸಿ ಇನ್ಮುಂದೆ ವಾರಕ್ಕೊಮ್ಮೆ ಆಯಾ ಕಚೇರಿಗಳಿಗೆ ಆಕಸ್ಮಿಕ ಭೇಟಿ ಮಾಡಲಾಗುತ್ತದೆ. ಆ ವೇಳೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಯಲ್ಲಿ ಕಾಣಿಸದಿದ್ದರೆ ಆಯಾ ಅಧಿಕಾರಿಗಳು, ಸಿಬ್ಬಂದಿ ಮೇಲೆ ಶಿಸ್ತುಕ್ರಮಕ್ಕಾಗಿ ಮೇಲಧಿಕಾರಿಗಳಿಗೆ ವರದಿ ಮಾಡುವುದಾಗಿ ಎಚ್ಚರಿಸಿದರು. ವಿಳಂಬ ನೀತಿ ಮುಂದುವರೆಸಿದರೆ ಅಂತಹ ಅಧಿಕಾರಿಗಳಿಗೆ ಇನ್ಮುಂದೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗುವುದು ಎಂದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೇಮಂತಕುಮಾರ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತ ಮಹೇಶ ಮಾಲಗಿತ್ತಿ, ಜಿಪಂ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರು, ಜಂಟಿ ಕೃಷಿ ನಿರ್ದೇಶಕ ಜಿ.ಡಿ.ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಆಜ್ಜಪ್ಪ ಸೋಗಲದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಟಿ.ಲಿಂಗರಾಜು, ಪಶು ಇಲಾಖೆ ಉಪನಿರ್ದೇಶಕ ಡಾ.ಪಿ.ಎಂ.ಮಲ್ಲಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜಗದೀಶ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಚಲನವಲನ ವಹಿ ಪಾಲನೆಗೆ ಸೂಚನೆ

ಚಲನವಲನ ವಹಿ ಪಾಲನೆಗೆ ಸೂಚನೆ ಕಚೇರಿಯಲ್ಲಿ ಚಲನವಲನ ವಹಿ ಇದ್ದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಎಲ್ಲಿದ್ದಾರೆ ಎಂಬುದು ತಿಳಿಯುತ್ತದೆ. ಹಾಗಾಗಿ ಇನ್ಮುಂದೆ ಎಲ್ಲಾ ಇಲಾಖೆಯಲ್ಲಿ ಕಡ್ಡಾಯವಾಗಿ ಚಲನವಲನ ವಹಿ ನಿರ್ವಹಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ವೈದ್ಯರ ಮೇಲೆ ಸಾಕಷ್ಟು ದೂರು: ವೈದ್ಯಾಧಿಕಾರಿಗಳು, ವೈದ್ಯರ ಮೇಲೆ ಸಾಕಷ್ಟು ದೂರು ಬರುತ್ತಿವೆ. ಇದು ಇಲ್ಲಿಗೆ ನಿಲ್ಲಬೇಕು.ಯಾವುದೇ ದೂರನ್ನು ಹಗುರವಾಗಿ ಪರಿಗಣಿಸದೇ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಈ ಬಗ್ಗೆ ಸರಿಯಾಗಿ ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗೋ ಹತ್ಯೆ ಸಂಪೂರ್ಣವಾಗಿ ಕೊನೆಗೊಳ್ಳಲಿ

ಕುಕನೂರು: ಗೋ ಹತ್ಯೆಯನ್ನು ಖಂಡಿಸಿ ಮಾತನಾಡಿ, ಇಡಿ ಪ್ರಪಂಚಾದ್ಯಂತ ಗೋವಿಗೆ ಪ್ರಮುಖ ಸ್ಥಾನವಿದ್ದು,ಇಂತಹ ಗೋವು ಹತ್ಯೆ ಮಾಡುವ ಕಾರ್ಯಗಳು ನೆರವೇರಿತದೆ. ಇಂತಹ ಕಾರ್ಯಗಳಿಗೆ ರೈತ ಸಂಘಟನೆ ಗೋ ಹತ್ಯೆ ಸಂಪೂರ್ಣವಾಗಿ ಬಂದು ಮಾಡಲು ನಾವೆಲ್ಲರೂ ಬೆಂಬಲ ಕೊಡುತ್ತೇವೆ. ಗೋ ಹತ್ಯೆ ನಿಷೇಧ ವಿರುದ್ಧ ಕುಕನೂರಿನ ಜೈನ ಸಮುದಾಯ ಬೆಂಬಲ ಇಲ್ಲಿ ನಾವು ಸ್ಮರಿಸುತ್ತೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ತಾಲೂಕು ಅಧ್ಯಕ್ಷ ಮತ್ತು ತಾಲೂಕ ಗೋ ಸಂರಕ್ಷಣೆ ಸನ್ಮಾನ ಅಭಿಯಾನದ ಗೌರವಾಧ್ಯಕ್ಷ ದೇವಪ್ಪ ಶೋಭಾನ ಹೇಳಿದರು.

ಪಟ್ಟಣದಲ್ಲಿ ಬಸವ ಜಯಂತಿಯ ಪ್ರಯುಕ್ತ ಸಮಸ್ತ ಮನುಕುಲ ಜೀವಕೋಟಿಗಳಿಗೆ ಅನ್ನ ನೀಡುವ ಎತ್ತುಗಳ ಮೆರವಣಿಗೆಯಲ್ಲಿ ಮಾತನಾಡಿ, ಇನ್ನು ಮುಂದೆ ಗೋಮಾತೆಯ ಗೌರವದ ಅಭಿಯಾನದ ವತಿಯಿಂದ ಗೋ ಹತ್ಯೆಯಂತಹ ನೀಚ ಕೃತ್ಯ ನಡೆಸುವವರ ವಿರುದ್ಧ ಕಾನೂನು ಕಠಿಣ ಕ್ರಮಗಳನ್ನು ತರಲು ರಾಷ್ಟ್ರಾದ್ಯಂತ ಅಭಿಯಾನ ನಡೆಯುತ್ತಿದೆ. ಏ.27 ರಂದು ಬೆಳಗ್ಗೆ 9 ಗಂಟೆಗೆ ಪಟ್ಟಣದ ತಶೀಲ್ದಾರ್‌ಗೆ ಮನವಿ ಕೊಡಲಾಗುವುದು. ಆದ್ದರಿಂದ ಪಟ್ಟಣದ ಸಂಘಟನೆಪರಗಳು ಮತ್ತು ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿನಂತಿಯನ್ನು ತಹಶೀಲ್ದಾರ್ ಅವರಿಗೆ ನೀಡುವುದಕ್ಕಾಗಿ ಭಾಗವಹಿಸಬೇಕಾಗಿ ಹೇಳಿದರು.

ಗೋ ರಕ್ಷಣೆಯ ಸನ್ಮಾನ ಅಭಿಯಾನದ ಮೂಲ ಉದ್ದೇಶ ಹಾಗೂ ಪದಾಧಿಕಾರಿಗಳ ಕಾರ್ಯಗಳ ಬಗ್ಗೆ ಗೋ ರಕ್ಷಣೆ ಅಭಿಯಾನದ ಕಾರ್ಯದರ್ಶಿ ಶರಣಯ್ಯ ಹುಣಸೆಮರದ ಮಾತನಾಡಿದರು. ಗೋ ಸನ್ಮಾನ ಅಭಿಯಾನ ಸಮಿತಿಯ ವತಿಯಿಂದ ರೈತರಿಗೂ ಹಾಗೂ ಇತರರಿಗೆ ಮಜ್ಜಿಗೆ ಮತ್ತು ಉಪಹಾರ ವ್ಯವಸ್ಥೆ ನೆರವೇರಿಸಲಾಯಿತು.

ಕುಕುನೂರು ತಾಲೂಕ ಸಂರಕ್ಷಣೆ ಸನ್ಮಾನ ಅಭಿಯಾನದ ಅಧ್ಯಕ್ಷ ಉಮೇಶ್ ಬೆದವಟ್ಟಿ, ಪೂಜಾ ಜೈನ್, ಯುವರಾಜ ಜಾಧವ್, ಶರಣಪ್ಪ ಯತ್ನಟ್ಟಿ, ಬಸವರಾಜಪ್ಪ ಸಬರದ, ಮಲ್ಲಪ್ಪ ಚಳ್ಳಮರದ, ವಿಶಾಲ ಜೈನ್, ಬಾಳಪ್ಪ ಭಜಂತ್ರಿ, ಶಿವಪ್ಪ ಭಂಗಿ, ಬಸವರಾಜ ಲಾಲಗೊಂಡರ, ಬಸಪ್ಪ ಈಬೇರಿ, ಶಿವಪ್ಪ ಸಬರದ, ಕಳಕಪ್ಪ ಅಳವಂಡಿ, ಶರಣಪ್ಪ ಚಂಡೂರು, ರೇವಣಪ್ಪ, ಶ್ರೀಕಾಂತ್ ಬಳಿಗಿ, ಹಾಗೂ ರೈತಬಾಂಧವರು ಇತರರು ಇದ್ದರು.



ಸಮಾಜದ ಏಳಿಗೆಗಾಗಿ ಶ್ರಮಿಸೋಣ

ರಾಯಚೂರು: 12ನೇ ಶತಮಾನದಲ್ಲಿ ಗುರುವರ್ಗ, ಬಸವಾದಿ ಶಿವ ಶರಣರು ಸಮಾನತೆಗಾಗಿ ಹೋರಾಟ ಮಾಡಿದರು. ಸಮಾನತೆ ತತ್ವ ಪ್ರತಿಪಾದಿಸಿದ ಕೀರ್ತಿ ಬಸವಣ್ಣ ಅವರದ್ದು, ಅವರ ಆದರ್ಶ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ರಾಯಚೂರು ನಗರದ ಕ್ಷೇತ್ರದ ಶಾಸಕ ಡಾ.ಶಿವರಾಜ ಪಾಟೀಲ ಹೇಳಿದರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಬಸವ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ಸಮಾಜದವರು ಒಗ್ಗಟಾಗಿ ಸಮಾಜದ ಏಳಿಗೆ ಶ್ರಮಿಸಬೇಕು. ಸಮಸ್ಯೆಗಳು ಇದ್ದಲ್ಲಿ ಯಾವುದೇ ಸರ್ಕಾರ ಇರಲಿ. ಹೋರಾಟ ಮಾಡಿ, ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಏ.22ರಂದು ರಾಯಚೂರಿನಲ್ಲಿ ಸಮಾಜದ ಕಲ್ಯಾಣ ಮಂಟಪ ನಿರ್ಮಾಣಕ್ಕಾಗಿ 10ಕೋಟಿ ರೂ. ವೆಚ್ಚದ ಕಲ್ಯಾಣ ಮಂಟಪದ ಭೂಮಿ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕೆಂದರು. ಜಿಲ್ಲಾಧಿಕಾರಿ ನಿತೀಶ.ಕೆ ಮಾತನಾಡಿ, ಬಸವಣ್ಣನವರು ಮೂಢನಂಬಿಕೆ ಬಲವಾಗಿ ವಿರೋಧಿಸಿದರು. ಆದಕ್ಕಾಗಿ ಅವರು ಸಮಾಜದಿಂದ ಬಹಿಷ್ಕಾರಕ್ಕೆ ಒಳಗಾದರು. ಸಮಾಜದಲ್ಲಿ ಶೋಷಿತರಿಗೆ ನ್ಯಾಯ ಒದಗಿಸಲು ಬಹಳಷ್ಟು ಶ್ರಮಿಸಿದ್ದಾರೆ ಎಂದರು.

ಮೈಸೂರಿನ ಶರಣ ಸಾಹಿತಿ ಶಿವಬುದಿ ಹಲ್ಲರೆ ಉಪನ್ಯಾಷ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ಜಿಲ್ಲಾ ವೀರಶೈವ ಲಿಂಗಾಯತ ಸಮಾಜ ಅಧ್ಯಕ್ಷ ಶರಣ ಭೂಪಾಲ ನಾಡಗೌಡ, ಹರವಿ ನಾಗನಗೌಡ, ಚಂದ್ರಶೇಖರ ಮಿರ್ಜಾಪೂರ, ಶರಣಪ್ಪ ಸೇರಿದಂತೆ ಇತರರಿದ್ದರು.

ಇದಕ್ಕೂ ಪೂರ್ವದಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರರ ಪುತ್ಥಳಿಗೆ ಸೋಮವಾರಪೇಟೆ ಹಿರೇಮಠದ ಪರಮ ಅಭಿನವ ರಾಚೋಟಿ ವೀರ ಶಿವಾಚಾರ್ಯ ಸ್ವಾಮೀಜಿ, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಸೇರಿದಂತೆ ವಿವಿಧ ಗಣ್ಯರಿಂದ ಮಾಲಾರ್ಪಣೆ ಮಾಡಿದರು.



ಮಹಿಳಾ ವಿರೋಧಿ ಧೋರಣೆ ಖಂಡನೀಯ

ಕಲಬುರಗಿ: ನಾರಿ ಶಕ್ತಿ ವಂದನ್ ಕಾಯ್ದೆಯ ಸಂಪೂರ್ಣ ಶ್ರೇಯಸ್ಸ ಬೇಕಿದ್ದರೆ ವಿರೋಧ ಪಕ್ಷಗಳೇ ತೆಗೆದುಕೊಳ್ಳಲಿ ಎಂದು ಪ್ರಧಾನಿ ಮೋದಿ ಅವರು ಔದಾರ್ಯ ತೋರಿದ್ದರು.ಆದರೂ, ಕಾಂಗ್ರೆಸ್ ಮಹಿಳೆಯರಿಗೆ ಸಿಗಬೇಕಾದ ಗೌರವ ನೀಡದೆ. ಬಿಲ್ ತಿರಸ್ಕರಿಸುವ ಮೂಲಕ ತನ್ನ ಮಹಿಳಾ ವಿರೋಧಿ ಧೋರಣೆ ಪ್ರದರ್ಶಿಸಿದೆ ಎಂದು ಶಾಸಕ ಬಸವರಾಜ ಮತ್ತಿಮಡು ಖಂಡಿಸಿದರು.

ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳಾ ಮೀಸಲಾತಿ ಬಿಲ್ ಜಾರಿಗೆ ಬಂದರೆ ತಮ್ಮ ರಾಜಕೀಯ ಭವಿಷ್ಯಕ್ಕೆ ಧಕ್ಕೆಯಾಗಬಹುದು ಎಂಬ ಭಯ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆಗೆ ಕಾಡುತ್ತಿದೆ. ಮಹಿಳೆಯರು ಕೇವಲ ವೋಟ್ ಹಾಕಿ ಸುಮ್ಮನಿರಬೇಕು. ಇದೇ ಕಾರಣಕ್ಕೆ ಅವರು ಈ ಐತಿಹಾಸಿಕ ಬಿಲ್‌ನ್ನು ವಿರೋಧಿಸುತ್ತಿದ್ದಾರೆ ಎಂದರು.

ಮೋದಿ ಸರ್ಕಾರ ಮಹಿಳೆಯರ ಘನತೆ ಹೆಚ್ಚಿಸಲು ಶ್ರಮಿಸುತ್ತಿದ್ದರೆ, ಕಾಂಗ್ರೆಸ್ ಅಧಿಕಾರದ ಆಸೆಗೆ ಬಿದ್ದು ಮಹಿಳಾ ಮೀಸಲಾತಿಯನ್ನು ತಿರಸ್ಕರಿಸಿದೆ. ಕಾಂಗ್ರೆಸ್‌ನ ಈ ನಡೆಯನ್ನು ದೇಶದ ನಾರಿ ಶಕ್ತಿ ಗಮನಿಸುತ್ತಿದೆ. ಮುಂಬರುವ ದಿನಗಳಲ್ಲಿ ಮಹಿಳೆಯರೇ ಈ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.



ರಾಜ್ಯ ಬಿಜೆಪಿ ವಕ್ತಾರೆ ಡಾ. ಸುಧಾ ಹಾಲ್ಕಾಯಿ ಮಾತನಾಡಿ,ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬುವ ಉದ್ದೇಶದ 'ನಾರೀಶಕ್ತಿ ವಂದನಾ' ಮಸೂದೆಗೆ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಅಡ್ಡಿಪಡಿಸುತ್ತಿವೆ. ಇದು ಕೇವಲ ಬಿಜೆಪಿ ಪ್ರಯತ್ನವಲ್ಲ, ಇಡೀ ದೇಶದ ಮಹಿಳೆಯರಿಗೆ ಮಾಡುತ್ತಿರುವ ಅವಮಾನ ಎಂದರು. ಮಹಿಳಾ ಮೋರ್ಚಾದ ಅಧ್ಯಕ್ಷೆ ಗೌರಿ ಚಿಚಕೋಟಿ, ಕಾರ್ಯದರ್ಶಿ ಭಗೀರತಿ ಗುನ್ನಾಪೂರ, ಸುಶೀಲಾ ಭಾಯಿ, ಜಗನ್ನಾಥ್ ಮಾಲಿಪಾಟೀಲ್ ಇದ್ದರು.

ವಿಜೃಂಭಣೆಯಿಂದ ಬಸವೇಶ್ವರರ ಜಯಂತಿ ಆಚರಣೆ

ಹುನುಮಸಾಗರ: ಬಸವಣ್ಣನವರ ಜೀವನ ಹಾಗೂ ತತ್ವಗಳು ಇಂದಿನ ಯುವಕರಿಗೆ ಮಾರ್ಗದರ್ಶಕವಾಗಿವೆ ಎಂದು ಹೇಳಿದರು.

ಪಟ್ಟಣದ ಅನ್ನದಾನೇಶ್ವರ ವಿದ್ಯಾ ಸಂಸ್ಥೆಯಲ್ಲಿ ಮತ್ತು ಪ.ಪಂಚಾಯತಿಯಲ್ಲಿ ಬಸವ ಜಯಂತಿ ಆಚರಣೆಯಲ್ಲಿ ಸಂಸ್ಥೆಯ ಅಧ್ಯಕ್ಷ ಸಂಗಯ್ಯ ವಸ್ತ್ರದರವರು ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಕಾಯಕವೇ ಕೈಲಾಸ ಮತ್ತು ದಾಸೋಹವೇ ಧರ್ಮ ಎಂಬ ಬಸವಣ್ಣನವರ ಸಂದೇಶ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಮಹಾಂತಯ್ಯ ಕೋಮಾರಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಜಾತಿ, ಲಿಂಗ ಬೇಧವಿಲ್ಲದೆ ಎಲ್ಲ ಶರಣರು, ಕವಿಗಳು ಮತ್ತು ತತ್ವಜ್ಞಾನಿಗಳು ಒಗ್ಗೂಡಿ ವಚನಗಳ ಮೂಲಕ ಸಾಮಾಜಿಕ ಸಮಾನತೆ ಹಾಗೂ ಕಾಯಕ ತತ್ವವನ್ನು ನೀಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ' ಎಂದರು.



ಅನ್ನದಾನೇಶ್ವರ ವಿದ್ಯಾ ಸಂಸ್ಥೆ ಉಪಾಧ್ಯಕ್ಷ ಶೈಲಪ್ಪ ಮೋಟಗಿ, ಕಾರ್ಯದರ್ಶಿ ಮಲ್ಲಯ್ಯ ಕೋಮಾರಿ, ನಿರ್ದೇಶಕ ಕರಿಸಿದ್ದಪ್ಪ ಕುಷ್ಟಗಿ, ವೀರಪ್ಪ ಮೋಟಗಿ, ಬಸವರಾಜ ಚಿನಿವಾಲರ, ವೀರೇಶ ಕುರ್ನಾಳ , ಬಸವರಾಜ ಶಿವಸಿಂಪಿ ಚಂದಯ್ಯ, ಮಾಬುಸಾಬ್, ಪಪಂ ಸಿಬ್ಬಂದಿ ಮತ್ತು ಪಟ್ಟಣದ ಪ್ರಮುಖ ಮುಖಂಡರು, ಮುಖ್ಯೋಪಾಧ್ಯಾಯ ಹಾಗೂ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಹಿಳೆಯರಿಗೆ ಕ್ಷಮೆ ಕೇಳಿ ರಾಜೀನಾಮೆ ನೀಡಲಿ

ಕೊಪ್ಪಳ: ಮಹಿಳೆಯರ ಬಗ್ಗೆ ಕಿಂಚಿತ್ತಾದರೂ ಕಳಕಳಿಯಿದ್ದರೆ ರಾಜಶೇಖರ ಹಿಟ್ನಾಳ ಸೇರಿದಂತೆ ರಾಜ್ಯದ ಒಂಬತ್ತೂ ಸಂಸದರು ಈ ಕೂಡಲೇ ರಾಜೀನಾಮೆ ನೀಡಿ ಮಹಿಳೆಯರಿಗೆ ಕ್ಷಮೆ ಕೇಳಬೇಕು ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ ಆಗ್ರಹಿಸಿದರು.

ಲೋಕಸಭೆಯಲ್ಲಿ ನಾರೀಶಕ್ತಿ (ವಂದನ್) ಮಸೂದೆ ಸೋಲಿನ ಹಿನ್ನೆಲೆಯಲ್ಲಿ ಇಂಡಿಯಾ ಒಕ್ಕೂಟದ ವಿರುದ್ಧ ಜೆಡಿಎಸ್ ಮಹಿಳಾ ಘಟಕ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿ,ಕಾಂಗ್ರೆಸ್ ಸಂಸದರಿಗೆ ಮಹಿಳೆಯರು ಮತ ಹಾಕಿಲ್ಲವೇ? ಮಹಿಳಾ ಮತದಾರರು ಸಂಸದರಿಗೆ ಏನು ಅನ್ಯಾಯ ಮಾಡಿದ್ದರು? ಮಹಿಳೆಯರ ಗೌರವಕ್ಕಿಂತಲೂ ಹೈಕಮಾಂಡ್ ಗುಲಾಮಗಿರಿತನ ಸಂಸದರಿಗೆ ಹೆಚ್ಚಾಯಿತೆ ಎಂಬ ಪ್ರಶ್ನೆಗಳ ಸುರಿಮಳೆ ಗರೆದರು.

ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಹೆಸರಿನಲ್ಲಿ ಅಸಭ್ಯ ಕ್ರಿಯೆಗೆ ಪ್ರೋತ್ಸಾಹಿಸಿ ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳನ್ನು ದಾರಿ ತಪ್ಪಿಸುವಲ್ಲಿ ಇರುವ ಆಸಕ್ತಿ ಕೊಪ್ಪಳದ ಸಂಸದರಿಗೆ ಹೆಣ್ಣು ಮಕ್ಕಳಿಗೆ ನ್ಯಾಯ ಕೊಡಿಸಬೇಕು ಎಂಬ ವಿಷಯದಲ್ಲಿ ಏಕಿಲ್ಲ? ಯಾವ ಕಾರಣಕ್ಕಾಗಿ ಕೊಪ್ಪಳದ ಮಹಿಳೆಯರಿಗೆ ಮೋಸ ಮಾಡಿದಿರಿ? ಮಾಡಿದ ಅನ್ಯಾಯಕ್ಕೆ ಕ್ಷಮೆ ಕೇಳಿ, ರಾಜೀನಾಮೆ ಸಲ್ಲಿಸಿ, ಸಾಮಾನ್ಯ ಕುಟುಂಬದ ಮಹಿಳೆ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ ಪಶ್ಚಾತಾಪ ಮಾಡಿಕೊಳ್ಳಿ ಎಂದು ಒತ್ತಾಯಿಸಿದರು.

ಜಿಲ್ಲಾ ಉಪಾಧ್ಯಕ್ಷ ಮೂರ್ತಪ್ಪ ಗಿಣಿಗೇರಿ ಮಾತನಾಡಿ, ಎನ್‌ಡಿಎ ಸರ್ಕಾರ ಮತ್ತೊಮ್ಮೆ ಈ ಮಸೂದೆ ಮಂಡಿಸಲಿದೆ. ಈ ಮಸೂದೆ ಅವಿರೋಧವಾಗಿ ಅಂಗೀಕಾರಗೊಂಡು ಶಾಸನವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ವಿರೋಧ ಪಕ್ಷಗಳ ಪ್ರತಿಯೊಬ್ಬ ಸಂಸದರ ಮೇಲಿದೆ ಎಂದರು.



ಕಾಂಗ್ರೆಸ್‌ನಿಂದ ಮಹಿಳೆಯರಿಗೆ ಅಪಮಾನ

ಕಾಂಗ್ರೆಸ್ ನಿಂದ ಭಾರತದ ಮಹಿಳಾ ಶಕ್ತಿಗೆ ಅಪಮಾನವಾಗಿದೆ. ಕಾಂಗ್ರೆಸ್ ಸಂಸದರಿಗೆ ಮಹಿಳೆಯರ ಶಾಪ ತಟ್ಟುತ್ತದೆ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕು ಎಂಬುದು ನಮ್ಮ ಚಿಂತನೆ. ಆದರೆ ಕಾಂಗ್ರೆಸ್ ಅದನ್ನು ವಿರೋಧಿಸುತ್ತಿದೆ. ನಮ್ಮ ಪಕ್ಷದ ರಾಷ್ಟ್ರಾಧ್ಯಕ್ಷ ಹೆಚ್.ಡಿ.ದೇವೇಗೌಡ ಪ್ರಧಾನಿಯಾಗಿದಾಗ ಈ ಮಸೂದೆ ಮಂಡಿಸಿದ್ದರು. ಅಂದು ಇದೇ ಕಾಂಗ್ರೆಸ್ ಪಕ್ಷ ಮಸೂದೆ ಸೋಲಿಸಿತ್ತು. ಕಾಂಗ್ರೆಸ್ ಪಕ್ಷದ ಈ ನೀತಿಗೆ ಮುಂದಿನ ದಿನಗಳಲ್ಲಿ ನಾವು ತಕ್ಕ ಪಾಠ ಕಲಿಸುತ್ತೇವೆ ಎಂದು ನಗರ ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲ ಮೇದಾರ ಹೇಳಿದರು.

> ಎನ್‌ಡಿಎ ಸರ್ಕಾರ ಮತ್ತೊಮ್ಮೆ ಈ ಮಸೂದೆ ಶೀಘ್ರದಲ್ಲಿ ಮಂಡಿಸಲಿದೆ. ಆ ವೇಳೆ ಕಾಂಗ್ರೆಸ್ ಆ ಮಸೂದೆಗೆ ಬೆಂಬಲ ಸೂಚಿಸಿ ಅನ್ಯಾಯ ಸರಿಪಡಿಸಬೇಕು.
>
> ■ ಜಯಶ್ರೀ ಮೇದಾರ್, ನಗರ ಘಟಕ ಮಹಿಳಾ ವಿದ್ಯಾರ್ಥಿ ವಿಭಾಗದ ಅಧ್ಯಕ್ಷೆ.

ಜಿಲ್ಲಾ ವಕ್ತಾರ ಮಲ್ಲನಗೌಡ ಕೋಣನಗೌಡ್ರು ಮಾತನಾಡಿ, ರಾಜಕೀಯ ಕ್ಷೇತ್ರದಲ್ಲಿ 33% ಮೀಸಲಾತಿ ಮಹಿಳೆಯರಿಗೆ ಸಿಗಬೇಕೆಂಬುದು ದಶಕಗಳ ಹಳೆಯ ಬೇಡಿಕೆ. ಕೆಲವು ಪಾಶ್ಚಾತ್ಯ ದೇಶಗಳು 1970ರ ದಶಕದ ತನಕ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಿಲ್ಲ, ಅಂತಹ ಹಕ್ಕನ್ನು ಭಾರತ ದೇಶ 1950ರಿಂದಲೇ ನೀಡಿದ್ದು ಐತಿಹಾಸಿಕ ಸತ್ಯ. ವಿಶ್ವದ ಅನೇಕ ರಾಷ್ಟ್ರಗಳು ರಾಜಕೀಯದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿವೆ. ಆದರೆ ರಾಜಕೀಯ ಸಮಾನತೆ ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಕನಸಾಗಿಯೇ ಉಳಿದಿದೆ ಎಂದರು.

ಸನಾತನ ಧರ್ಮದ ರಕ್ಷಣೆಗೆ ಶಂಕರರ ಕೊಡುಗೆ ಅನನ್ಯ: ಮಹಾರಾಜ್

ಜೇವರ್ಗಿ: ಸನಾತನ ಹಿಂದೂ ಧರ್ಮದ ಪುನರುತ್ಥಾನಕ್ಕಾಗಿ ಹಗಲಿರಳು ಶ್ರಮಿಸಿದ ಶಂಕರಾಚಾರ್ಯರ ತತ್ವಗಳು ಸಾರ್ವಕಾಲಿಕ ಸತ್ಯ ಎಂದು ತ್ರಿವಿಕ್ರಮಾನಂದ ಸರಸ್ವತಿ ಸ್ವಾಮಿಗಳ ಮಠದ ಪಾಂಡುರಂಗ ಮಹಾರಾಜ್ ಗಂವ್ಹಾರ ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು. ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸುವ ಮೂಲಕ ಭಾರತೀಯ ಸಂಸ್ಕೃತಿ ಒಂದುಗೂಡಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಅವರ ಅದ್ವೈತ ಸಿದ್ಧಾಂತವು ಮನುಕುಲದ ಏಕತೆ ಸಾರುತ್ತದೆ. ಇಂದಿನ ಯುವ ಪೀಳಿಗೆಗೆ ಇಂತಹ ಮಹಾನ್ ದಾರ್ಶನಿಕರ ಜೀವನ ಚರಿತ್ರೆ ಪ್ರೇರಣೆಯಾಗಲಿ' ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿ ಮಲ್ಲಣ್ಣ ಯಲಗೋಡ ಮಾತನಾಡಿ, ಶಂಕರಾಚಾರ್ಯರು ಹಾಕಿಕೊಟ್ಟ ದಾರಿ ನಡೆಯುವುದು ನಮಗೆಲ್ಲ ಹೆಮ್ಮೆ ವಿಷಯ. ತಾಲೂಕು ಆಡಳಿತವು ಶಿಸ್ತುಬದ್ಧವಾಗಿ ಈ ಜಯಂತಿ ಆಚರಿಸುವ ಮೂಲಕ ಅವರ ವಿಚಾರಧಾರೆಗಳನ್ನು ಜನಮಾನಸಕ್ಕೆ ತಲುಪಿಸುವ ಪ್ರಯತ್ನ ಮಾಡುತ್ತಿದೆ'' ಎಂದರು.



ಕಾರ್ಯಕ್ರಮದಲ್ಲಿ ವಿಪ್ರ ಸಮಾಜದ ತಾಲೂಕ ಅಧ್ಯಕ್ಷ ರಮೇಶ ಎನ್. ವಕೀಲ್, ಪಿ.ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಹಳ್ಳೆಪ್ಪಚಾರ್ಯ ಜೋಶಿ, ಉಮೇಶ್ ಭಟ್ ಜೋಶಿ ನೆಲೋಗಿ,ರಾಘವೇಂದ್ರ ಕುಲಕರ್ಣಿ ನರಿಬೋಳ, ದತ್ತಾತ್ರೇಯರಾವ ಕುಲಕರ್ಣಿ ಕೊಳಕೂರು, ರಮಕಾಂತ ಭಟ್ ಜೋಶಿ ನರಿಬೋಳ, ಶ್ರೀಪಾದರಾವ ಕುಲಕರ್ಣಿ ಯರಗಲ್, ಶ್ಯಾಮರಾವ ಕುಲಕರ್ಣಿ ವಿನೋದ್ ಕುಲಕರ್ಣಿ ಸಾತ್ಖೇಡ, ಕಿಶನರಾವ ವಕೀಲ, ಪ್ರಕಾಶ ಆಲಬಾಳ್, ಪುನೀತ್ ಕುಲಕರ್ಣಿ, ರವೀಂದ್ರ ವಕೀಲ, ಸುಧೀಂದ್ರ ವಕೀಲ, ಲಕ್ಷ್ಮೀಕಾಂತ ಕುಲಕರ್ಣಿ ಹೋತಿನಮಡು, ಅಪ್ಪಾರಾವ ಪಾಟೀಲ್, ಗುರುರಾಜ ಪೊದ್ದರ್, ಪಾಂಡುರಂಗ ಕುಲಕರ್ಣಿ, ಪ್ರವೀಣ ಅಲ್ಲಾಳ ಶ್ರೀನಿವಾಸ ಮಳ್ಳಿ, ನಟರಾಜ್ ಕುಲಕರ್ಣಿ, ಮನೋಜ ಕುಲಕರ್ಣಿ ಸಂಜು ಕುಮಾರ್ ಜೋಶಿ, ನಾರಾಯಣ ನೀಲೂರ, ಶಂಕರ್ ಯಲ್ಗೋಡ, ದತ್ತಾತ್ರೆಯ ನ್ಯಾವನೂರ ವಿಠ್ಠಲ್ ಅವರಾದ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಕಿರುಸುದ್ದಿ

ಬಸವಣ್ಣ ಸಮಾನತೆಗೆ ಹೋರಾಡಿದ್ದ ಮಹಾಚೇತನ



◆**ಯಾದಗಿರಿ:** ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ ವಿಶ್ವಗುರು ಬಸವಣ್ಣನವರು ಎಲ್ಲ ಸಮಾಜದ ಏಳಿಗೆ ಮೂಲಕ ಸಮಾನತೆ ತರಲು ಹೋರಾಡಿದರು ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ ತುನ್ನೂರ ಹೇಳಿದರು.

ಇಲ್ಲಿನ ವೀರಶೈವ ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಬಸವೇಶ್ವರರ ಜಯಂತಿಯಲ್ಲಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಬಹುದೊಡ್ಡ ಕ್ರಾಂತಿ ಮಾಡಿದ್ದರು. ಸಾಮಾಜಿಕ, ಅಸಮಾನತೆ ಹೋಗಲಾಡಿಸಿ ಮನುಷ್ಯರೆಲ್ಲರೂ ಸಮಾನರು ಎಂದು ಸಾರಿದ್ದರು ಎಂದರು.

ಜಗಜ್ಯೋತಿ ಬಸವಣ್ಣನವರು ಪ್ರಾಮಾಣಿಕತೆಯ ಸಾಕಾರ ಮೂರ್ತಿಯಾಗಿದ್ದಾರೆ.ಜಾತಿ, ವರ್ಣಭೇದ, ವರ್ಗ ಭೇದ ಸಂದರ್ಭದ ಪರಿಸ್ಥಿತಿಗಳಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ಸಮಾನತೆ ತರಲು ಶ್ರಮಿಸಿದರು. ಎಲ್ಲ ಜಾತಿಗಳ, ಧರ್ಮೀಯರನ್ನು ಒಗ್ಗೂಡಿಸಿದದರು ಎಂದರು.

ಜಿಲ್ಲಾಧಿಕಾರಿ ಹರ್ಷಲ ಭೋಯರ ಮಾತನಾಡಿ, ಬಸವಣ್ಣನವರ ಅಂದಿನ ಕ್ರಾಂತಿ, ವಚನಗಳ ವಿಶ್ಲೇಷಣೆ ಇಂದಿಗೂ ಪ್ರಸ್ತುತವಾಗಿವೆ ಎಂದರು.

ಸರ್ಕಾರಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಸುಭಾಷಚಂದ್ರ ಕೌಲಗಿ ವಿಶೇಷ ಉಪನ್ಯಾಸ ನೀಡಿ, ಬಸವಣ್ಣ ನವರು ವ್ಯಕ್ತಿಯಲ್ಲ, ಶಕ್ತಿ. ಜಗತ್ತೇ ಬೆರಗಾಗುವಂತಹ ಕೆಲಸಗಳನ್ನು 12ನೇ ಶತಮಾನದಲ್ಲಿ ಮಾಡಿದ್ದಾರೆ ಎಂದರು.

ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ, ಹೆಚ್ಚುವರಿ ಎಸ್‌ಪಿ ಧರಣೇಶ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಚನ್ನಪ್ಪಗೌಡ ಮೊಸಂಬಿ ಇದ್ದರು. ಶರಣು ವಠಾರ ಪ್ರಾರ್ಥಿಸಿದರು. ಪ್ರಿಯಾಂಕಾ ಪಾಟೀಲ್ ನಿರೂಪಿಸಿದರು. ಉತ್ತರಾದೇವಿ ಮಠಪತಿ ವಂದಿಸಿದರು.

ಆರಂಭದಲ್ಲಿ ಬಸವಣ್ಣನವರ ಭಾವಚಿತ್ರದ ಮೆರವಣಿಗೆ ನಡೆಯಿತು. ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ, ಮಹೇಶರಡ್ಡಿ ಮುದ್ನಾಳ್, ಭೀಮನಗೌಡ ಕ್ಯಾತನಾಳ್, ಅನ್ನಪೂರ್ಣ ಸಿ.ಪಾಟೀಲ, ಶಶಿಕಲಾ ಬಿ.ಕ್ಯಾತನಾಳ, ಅಖಿಲ ಭಾರತ ವೀರಶೈವ ಮಹಾಸಭಾ ಯುವ ಘಟಕದ ಜಿಲ್ಲಾಧ್ಯಕ್ಷ ಸುರೇಶ ಜಾಕಾ, ತಾಲೂಕು ಅಧ್ಯಕ್ಷ ರಾಜಶೇಖರ ಪಾಟೀಲ, ಕಸಾಪ ಜಿಲ್ಲಾಧ್ಯಕ್ಷ ಸಿದ್ದಪ್ಪ ಹೊಟ್ಟಿ, ವಿಲಾಸ ಪಾಟೀಲ್, ವೆಂಕಟರೆಡ್ಡಿ ಅಬ್ಬೆತುಮಕೂರು ಸೇರಿದಂತೆ ಇತರರಿದ್ದರು.

ಅರ್ಜಿ ಆಹ್ವಾನ

◆**ವಿಜಯನಗರ:** ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶಾಶ್ವತವಾಗಿ ಸಂಯೋಜನೆಗೊಂಡಿರುವ ಸಿದ್ದಾರ್ಥನಗರದ 'ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನಲ್ಲಿ' (ಕಾವಾ), ಪ್ರಸಕ್ತ ಸಾಲಿನ ಪ್ರಥಮ ವರ್ಷದ ಬ್ಯಾಚುಲರ್ ಆಫ್ ವಿಶ್ಯುವಲ್ ಆರ್ಟ್ಸ್ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಬ್ಯಾಚುಲರ್ ಆಫ್ ವಿಶ್ಯುವಲ್ ಆರ್ಟ್ಸ್ ಪದವಿ ಪ್ರವೇಶಾತಿಗಾಗಿ ದ್ವಿತೀಯ ಪಿಯುಸಿ ಅಥವಾ ಸಮಾನಾಂತರ ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ವೆಬ್‌ಸೈಟ್https://uucms.kamataka.gov.in ಅಥವಾ https://www.cavamysore.kamataka.gov.in ನಲ್ಲಿ ಸಲ್ಲಿಸಬಹುದು.

ಈ ಪದವಿಯಲ್ಲಿ 3ನೇ ಸೆಮಿಸ್ಟರ್‌ನಿಂದ ವಿದ್ಯಾರ್ಥಿಗಳು ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ) ಅನ್ವಯಕಲೆ, ಕಲಾ ಇತಿಹಾಸ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಶೇಷ ಅಧ್ಯಯನ ಕೈಗೊಳ್ಳಲು ಅವಕಾಶವಿದೆ. ಮೇ 30 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬಸವೇಶ್ವರ ಜಯಂತಿ ಆಚರಣೆ

◆**ಗಾದಿಗನೂರು:** ಗ್ರಾಮದಲ್ಲಿ ಬಸವೇಶ್ವರ ಜಯಂತಿ ಕಾರ್ಯಕ್ರಮ ಬಹಳ ಅದ್ದೂರಿಯಾಗಿ ನೆರವೇರಿತು. ಊರಿನ ಭಕ್ತಾದಿಗಳು ಸೇರಿಕೊಂಡು ಬಸವೇಶ್ವರ ಮೂರ್ತಿಗೆ ಅಭಿಷೇಕ ಪೂಜೆ ಕಾರ್ಯಕ್ರಮ ನೆರವೇರಿಸಿದರು. ಸಂಜೆ ಊರಿನ ಎಲ್ಲ ರೈತ ಬಾಂಧವರು ಸೇರಿಕೊಂಡು ಎತ್ತುಗಳಿಗೆ ಸಿಂಗಾರ ಮಾಡಿ ಊರಿನಲ್ಲಿ ಮೆರವಣಿಗೆ ಬಹಳ ಅದ್ದೂರಿಯಾಗಿ ಜರಗಿತು.





ಕರೂರ: ಸಮೀಪದ ಹಾಗಲೂರು ಹೊಸಳ್ಳಿ ಗ್ರಾಮದಲ್ಲಿ ಸೋಮವಾರ ಬಸವೇಶ್ವರ ಜಯಂತಿಯನ್ನು ಊರಿನ ಗ್ರಾಮಸ್ಥರು ಡೊಳ್ಳು ಕುಣಿತ ಮೂಲಕ ಬಹಳ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು.

ಶಂಕರಾಚಾರ್ಯರ ಜಯಂತ್ಯುತ್ಸವ ಆಚರಣೆ

◆**ಬಳ್ಳಾರಿ:** ಶಂಕರಾಚಾರ್ಯರ ಜಯಂತ್ಯುತ್ಸವನ್ನು ಜಿಲ್ಲಾಡಳಿತದ ವತಿಯಿಂದ ಮಂಗಳವಾರ ನಗರದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ನಗರದ ಸಂಗನಕಲ್ ರಸ್ತೆಯ ಶ್ರೀಶೃಂಗೇರಿ ಶಾರದಾ ಮಠದಲ್ಲಿ ಶಂಕರಾಚಾರ್ಯರ ಜಯಂತ್ಯುತ್ಸವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಶ್ರೀಮಠದಲ್ಲಿ ವಿವಿಧ ಪೂಜೆಗಳು ವಿಜೃಂಭಣೆಯಿಂದ ನೆರವೇರಿದವು. ಇದಕ್ಕೂ ಜಯಂತ್ಯುತ್ಸವ ನಿಮಿತ್ತ ಶ್ರೀಶಂಕರಾಚಾರ್ಯರ ಭಾವಚಿತ್ರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಆದಿ ಜಗದ್ಗುರು ಶ್ರೀಶಂಕರಾಚಾರ್ಯರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕು. ಅವರ ಆಧ್ಯಾತ್ಮಿಕ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಶ್ರೀಶಂಕರಾಚಾರ್ಯರು ದೇಶದಲ್ಲಿನ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ವಿಶ್ವದ ಗಮನಸೆಳೆದಿದ್ದರು. ಉತ್ತರ ಭಾರತದ ಜನರು ಕೂಡ ಇವರನ್ನು ಗುರುಗಳನ್ನಾಗಿ ಸ್ವೀಕರಿಸಿದ್ದರು. ಸಮಾಜದ ಮೌಢ್ಯಗಳನ್ನು ತೊಡೆದುಹಾಕಿ ತತ್ವಜ್ಞಾನದತ್ತ ಜನರಿಗೆ ಮಾರ್ಗದರ್ಶನ ನೀಡಿದ್ದಾರೆ ಎಂದರು. ಶ್ರೀಶಂಕರ ಮಠದ ಮುಖ್ಯಸ್ಥರಾದ ಬಿ. ಕೆ. ಬಿ.ಎನ್.ಮೂರ್ತಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ವಿವಿಧ ಗಣ್ಯರು, ಶ್ರೀಮಠದ ಪ್ರಧಾನ ಅರ್ಚಕರು, ಬ್ರಾಹ್ಮಣ ಸಮುದಾಯದ ಮುಖಂಡರು, ಇತರರಿದ್ದರು.



ಬಳ್ಳಾರಿ: ಶಂಕರಾಚಾರ್ಯರ ಜಯಂತ್ಯುತ್ಸವನ್ನು ಜಿಲ್ಲಾಡಳಿತದ ವತಿಯಿಂದ ಮಂಗಳವಾರ ನಗರದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ನಗರದ ಸಂಗನಕಲ್ ರಸ್ತೆಯ ಶ್ರೀಶೃಂಗೇರಿ ಶಾರದಾ ಮಠದಲ್ಲಿ ಶಂಕರಾಚಾರ್ಯರ ಜಯಂತ್ಯುತ್ಸವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.ಇದಕ್ಕೂ ಜಯಂತ್ಯುತ್ಸವ ನಿಮಿತ್ತ ಶ್ರೀಶಂಕರಾಚಾರ್ಯರ ಭಾವಚಿತ್ರ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ | ಡಿಸಿ ಕಟ್ಟುನಿಟ್ಟಿನ ಸೂಚನೆ

ನೀರು ಪೂರೈಕೆ ಸಮರ್ಪಕವಾಗಿರಲಿ

◆**ಬಳ್ಳಾರಿ:** ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿರುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತುಂಗಭದ್ರಾ ನದಿ ಹಾಗೂ ಕಾಲುವೆ ತೀರದಲ್ಲಿಯೇ ಇದ್ದರೂ, ಕಂಪ್ಲಿ ಭಾಗದ ಸಣಾಪುರ ಸೇರಿದಂತೆ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ. ಪಂಪಿಂಗ್ ಸಮಸ್ಯೆ, ಪೈಪ್ ಲೈನ್ ಸೇರಿದಂತೆ ಇತರೆ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳ ನಡುವೆ ಸಮನ್ವಯದ ಕೊರತೆ ಇರುವುದು ಎದ್ದು ಕಾಣುತ್ತಿದೆ. ಇಂಜಿನಿಯರಿಂಗ್ ವಿಭಾಗದಲ್ಲಿ ಸಾಕಷ್ಟು ಸಿಬ್ಬಂದಿ ಮತ್ತು ಹಣದ ಲಭ್ಯತೆ ಇದ್ದರೂ ಕೆಲಸಗಳು ನಡೆಯುತ್ತಿಲ್ಲ, ಅಗತ್ಯವಿದ್ದರೆ ಹೆಚ್ಚುವರಿ ಪಂಪ್‌ಗಳನ್ನು ಅಳವಡಿಸಿ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದರು.

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುವ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಎಂದು ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ. ನೀರಿನ ಅಭಾವ ತಲೆದೋರುವ ಸಂಭವವಿರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.



ಜಿಲ್ಲೆಯಲ್ಲಿ ಆರ್‌ಒ ಘಟಕಗಳ ನಿರ್ವಹಣೆಗೆ ಕ್ರಮವಹಿಸಬೇಕು. ಕುಡಿಯುವ ನೀರು ಎಲ್ಲೂ ಕಲುಷಿತಗೊಳ್ಳದಂತೆ ಎಚ್ಚರವಹಿಸಬೇಕು. ನಗರ ಮತ್ತು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಸಮಸ್ಯೆಯಾದಲ್ಲಿ ನೀರಿನ ಟ್ಯಾಂಕರ್ ಇರಿಸಿಕೊಳ್ಳಬೇಕು. ಮುಖ್ಯವಾಗಿ ಟ್ಯಾಂಕರ್ ಗಳ ಸ್ಥಿತಿ ಪರಿಶೀಲಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಯಾವುದೇ ರೀತಿಯ ಮೇವಿನ ಸಮಸ್ಯೆ ಇಲ್ಲ, ಆದರೂ ಸಹ ಉಲ್ಬಣಗೊಳ್ಳದಂತೆ ಅಗತ್ಯ ಮೇವಿನ ದಾಸ್ತಾನು ಇಟ್ಟುಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಅಲೆಗಳ ಪ್ರಖರತೆ ಹೆಚ್ಚಾಗುತ್ತಿದ್ದು, ಈ ಕುರಿತು ಸಾರ್ವಜನಿಕರಿಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜಾಗೃತಿ ಕಾರ್ಯಕ್ರಮಗಳಮೂಲಕಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಅರಿವು ಮೂಡಿಸಬೇಕು ಎಂದು ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಿದರು.

ಮುಂಗಾರು ಪೂರ್ವ ಮಳೆ ಆರಂಭಗೊಳ್ಳಲಿದ್ದು, ಗುಡುಗು-ಸಿಡಿಲು ಸಹಿತ ಮಳೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಸಿಡಿಲು ಆಪ್ ಅಭಿವೃದ್ಧಿ ಪಡಿಸಲಾಗಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದರು. ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ರಾಜಕಾಲುವೆಗಳನ್ನು ಸ್ವಚ್ಛಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಅಬ್ದುಲ್ ರೆಹಮಾನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಭಾರತೀಯ ಲಲಿತ ಕಲೆ ಉಳಿಸಿ, ಬೆಳೆಸಿ

◆**ಬಳ್ಳಾರಿ:** ಭಾರತೀಯ ಲಲಿತಕಲೆ ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಸಂಡೂರು ಸರಕಾರಿ ಪದವಿ ಕಾಲೇಜಿನ ಅಧ್ಯಾಪಕ ಡಾ.ಅಪ್ಪಕಾಯ ಮಹೇಶ ಶರ್ಮಾ ಹೇಳಿದರು.

ನಗರದ ರಾಘವೇಂದ್ರ ಮಠದ ಸಭಾಮಂಟಪದಲ್ಲಿ ತುಂಗಾ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ವೈಶಾಕ ಮಾಸ ಸಾಂಸ್ಕೃತಿಕ ಸಂಭ್ರಮ 2026 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಧಾರ್ಮಿಕ ಕಾರ್ಯಕ್ರಮದ ಜತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಪ್ರೋತ್ಸಾಹ ನೀಡಬೇಕು ಎಂದರು.

ಬಿಪಿಎಸ್ಸಿ ಶಾಲೆಯ ಪ್ರಾಚಾರ್ಯ ಅನಿಲ್ ಕುಮಾರ್ ಮಾತನಾಡಿ, ತುಂಗ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಇಂತಹ ಅಪರೂಪದ ಕಲಾ ಪ್ರದರ್ಶನಗಳು ನಡಿಸಿತ್ತಿರುವುದು ಅಭಿನಂದನೀಯ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವೈದ್ಯ ಡಾ.ಶ್ರೀಧರಮೂರ್ತಿ, ಡಾ.ಎಸ್.ಕೆ.ಅಜಯ್, ಡಾ. ಬಿ.ಕೆ.ಶ್ರೀಕಾಂತ್, ಡಾ.ಎಸ್.ಕೆ. ಪ್ರಣೀತ ಅಜಯ್ ಅವರಿಗೆ ತುಂಗಾ ವೈದ್ಯ ರತ್ನ ಪ್ರಶಸ್ತಿ, ಡಾ.ಶ್ರೀನಾಥ್, ಹನುಮಂತ ಆಚಾರ್ ಅವರಿಗೆ ತುಂಗಾ ಸಮಾಜ ಸೇವಾ ರತ್ನ, ಡಾ. ಮಹೇಶ್ ಶರ್ಮ, ಅನಿಲ್ ಕುಮಾರ್ ಅವರಿಗೆ ತುಂಗಾ ಶಿಕ್ಷಣ ರತ್ನ, ಪ್ರಸನ್ನ ಆಚಾರ್ ಅವರಿಗೆ ತುಂಗಾ ಕಲಾ ಪೋಷಕ ರತ್ನ, ಶ್ರಿಜಾ ಅವರಿಗೆ ತುಂಗಾ ರಂಗ ಕಲಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶ್ರೀಜಾ ತಂಡದ ಶ್ರೀನಿವಾಸ ಕಲ್ಯಾಣ ಭಕ್ತಿ ಪ್ರಧಾನ ನಾಟಕ ಪ್ರದರ್ಶನಗೊಂಡಿತು.ಕಾರ್ಯಕ್ರಮದಲ್ಲಿ ಕಿಷ್ಕಿಂಧ ವಿಶ್ವವಿದ್ಯಾಲಯದ ಕುಲಸಚಿವ ಡಾ.ರಾಜು ಜಡರ್, ಕಣೆಕಲ್ ಶ್ರೀಧರ್, ವಿಠ್ಠಲ ದೇಸಾಯಿ, ವಿಜಯ ವಿಠ್ಠಲ, ರಾಮರಾವ್ ಕುಲಕರ್ಣಿ, ಸಿಮೆಂಟ್ ಗಿರಿ, ಅಶೋಕ್ ಕುಲಕರ್ಣಿ, ವೀರೇಶ, ಅಮೃತ, ದೀಕ್ಷಾ, ಸಿಂಧು, ಪ್ರೀತಿ, ರಾಧಾಕೃಷ್ಣ, ತನ್ಮಯಿ, ವಿದ್ಯಾ, ಪರಿಮಳ, ಬಾಂದವಿ , ಶೈನು, ಸೋನು ಸೇರಿದಂತೆ ಇತರರಿದ್ದರು. ಟಿ.ನಾಗಭೂಷಣ್ ನಿರೂಪಿಸಿದರು. ಸಂಸ್ಥೆಯ ಕಾರ್ಯದರ್ಶಿ ವಿ. ರಾಮಚಂದ್ರ ವಂದಿಸಿದರು.



ದ್ವಿತೀಯ ಪಿಯುಸಿ ಸಾಧಕರಿಗೆ ಸನ್ಮಾನ

◆**ಹೂವಿನಹಡಗಲಿ:** ತಾಲೂಕಿನ ಮಾಗಳ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನ 2025-26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಗಳಿಸಿದ ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಮನೆಗೆ ತೆರಳಿ ಸನ್ಮಾನಿಸಿ ವಿನೂತನ ಪ್ರಯೋಗಕ್ಕೆ ನಾಂದಿ ಹಾಡಿದರು.

ಸತತ ಎರಡು ವರ್ಷಗಳ ಕಾಲ ತಮ್ಮ ಮಕ್ಕಳ ವಿಶೇಷವಾಗಿ ಹೆಣ್ಣು ಮಕ್ಕಳ ಸಾಧನೆಗೆ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹ ನೀಡಿರುವ ಪಾಲಕರ ಜೊತೆ ಮಕ್ಕಳಿಗೆ ಸನ್ಮಾನಿಸಿದರು. ಜೊತೆಗೆ ಅವರಿಗೆ ನೈತಿಕ ಸ್ಥೈರ್ಯ ತುಂಬಿದಂತೆ ಆಗುತ್ತದೆ ಎಂದು ಕಾಲೇಜಿನ ಪ್ರಾಚಾರ್ಯರು ಬಿ. ಈಶರಪ್ಪ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಪಾಲಕರಿಗೆ ತಮ್ಮ ಹೆಣ್ಣುಮಕ್ಕಳನ್ನು ಉನ್ನತ ವಿದ್ಯಾಭ್ಯಾಸಕ್ಕೆ ಕಳಿಸಬೇಕು ಎಂದು ಉಪನ್ಯಾಸಕರಾದ ತಾರಾಸಿಂಗ್ ಗ್ರಾಮೀಣ ಪ್ರತಿಭೆಯಾದ ಕುಮಾರಿ ಎಂ. ವನಜಾ ಇವರು ಮಾಗಳಗ್ರಾಮಕ್ಕೆ ಹಾಗೂ ಕಾಲೇಜಿಗೆ 600ಕ್ಕೆ 552 ಅಂಕ ಗಳಿಸಿ ಹೆಮ್ಮೆ ತಂದಿರುವುದು ಸಂತಸದ ಸಂಗತಿಯಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾತಾಡಿದ ನಿವೃತ್ತ ಶಿಕ್ಷಕ ಎಂ. ಶಾಂತರಾಜ್ ಶಿಕ್ಷರು ಪದವಿ ಕಾಲೇಜ್ ಇದೇ ಗ್ರಾಮದಲ್ಲಿ ಇದ್ದಿದ್ದರೆ ಮಕ್ಕಳಿಗೆ ಇನ್ನು ಅನುಕೂಲವಾಗುತ್ತಿತ್ತು ಎಂದರು. ನಮ್ಮ ಕಾಲೇಜಿನ ಡಿಸ್ಟಿಂಕ್ಷನ್ ಪಡೆದಿರುವ ವಿದ್ಯಾರ್ಥಿಯರ ಮನೆಗೆ ತೆರಳಿ ಅಭಿನಂದನ ಪತ್ರ ನೀಡಿ ಸನ್ಮಾನಿಸಿದ್ದೇವೆ ಎಂದು ಸಂತಸ ಹಂಚಿಕೊಂಡರು. ನಮ್ಮ ಮಕ್ಕಳ ಫಲಿತಾಂಶ ನಮಗೆ ಖುಷಿ ಕೊಟ್ಟಿತ್ತು. ಈಗಖಿದ್ದು ಪ್ರಾಚಾರ್ಯರಾದ ಬಿ. ಈಶ್ವರಪ್ಪ ಹಾಗೂ ಉಪನ್ಯಾಸಕರುಗಳಾದ ತಾರಾ ಸಿಂಗ್, ಅಜೀರುದ್ದಿನ್,ಭೋಜರಾಜ್, ನಿರಂಜನ್, ಮಲ್ಲೇಶಪ್ಪ ಹಾಗೂ ಕಾಲೇಜಿನ ಎಸ್.ಡಿ. ಎಂ. ಸಿ ಅಧ್ಯಕ್ಷರಾದ ವೈ.ಸುಭಾನ್ ಸಾಬ್ ಹಾಗೂ ವಿ. ಎಸ್. ಎಸ್. ಎನ್. ಅಧ್ಯಕ್ಷರಾದ ಪೂಜಾರ್ ಕೊಟ್ರೆಪ್ಪ, ದಾದಾಪುರ್ ರಮೇಶ್, ಶೀತಲ್ ಬಸ್ತಿ, ಎಸ್. ಎಂ ಬಸವರಾಜ್, ರಾಹುಲ್ ಉಪಸ್ಥಿತರಿದ್ದರು. ಊರಿನ ಮುಖ್ಯಸ್ಥರು ನಮ್ಮ ಮನೆಗೆ ಬಂದು ಮಕ್ಕಳನ್ನು ಸನ್ಮಾನಿಸಿರುವುದು ನಮಗೆ ಹೆಮ್ಮೆ ತಂದಿದೆ. ಸರಕಾರಿ ಕಾಲೇಜಿನ ಮಕ್ಕಳ ಅಡ್ಮಿಶನ್ ಮಾಡಿಸಿದ್ದು ತೃಪ್ತಿ ತಂದು ಕೊಟ್ಟಿದೆ ಎಂದು ಪಾಲಕರಾದ ಅಂಬುಜಾಕ್ಷಿ ಮಲ್ಲಪಜ್ಜನವರು ಮೆಚ್ಚುಗೆ ವ್ಯಕ್ತಪಡಿಸಿದರು.



ಶಂಕರರ ಸಿದ್ಧಾಂತವೇ ಆಧ್ಯಾತ್ಮದ ಆತ್ಮ : ಕೂಡಲಗಿ ಮಹಾರಾಜರು

◆**ಹುಣಸಗಿ:** ಸನಾತನ ಭಾರತದ ಅಭೇದ್ಯ ಆಧ್ಯಾತ್ಮಿಕ ಸಿದ್ಧಾಂತವಾಗಿರುವ ಅದ್ವೈತ ತತ್ವವನ್ನು ಮತ್ತು ನಮ್ಮ ಪರಂಪರೆಯ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿ ಹೇಳಿದ ಆದಿ ಗುರು ಶಂಕರಾಚಾರ್ಯರು ವಿಶ್ವದ ಸರ್ವ ಶ್ರೇಷ್ಠ ದಾರ್ಶನಿಕರು ಎಂದು ಕೂಡಲಗಿಯ ಶಾಂತಾನಂದ ಸರಸ್ವತಿ ಮಠದ ಮೃತ್ಯುಂಜಯ ಬಾಬಾ ಮಹಾರಾಜ ಹೇಳಿದರು.

ಅವರು ಮಂಗಳವಾರ ಹುಣಸಗಿಯ ತಹಸೀಲ್ದಾರರ ಕಚೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ ಆದಿ ಶಂಕರಾಚಾರ್ಯರ ಜಯಂತ್ಯುತ್ಸವ ಕಾರ್ಯಕ್ರಮದ ಮುಖ್ಯ ಉಪನ್ಯಾಸ ನೀಡಿದರು.

ಆತ್ಮ ಮತ್ತು ಪರಮಾತ್ಮ ಇವೆರಡೂ ಬೇರೆ ಬೇರೆ ಅಲ್ಲ, ಎರಡೂ ಒಂದೆ ಆಗಿವೆ. 'ಅಹಂ ಬ್ರಹ್ಮಾಸ್ಮಿ', ಬ್ರಹ್ಮ ಸತ್ಯ ಜಗನ್ಮಿಥ್ಯ, ಸರ್ವ ಬ್ರಹ್ಮಮಯಂ ಜಗತ್' ಎಂದು ಸಾರಿದ ಶಂಕರಾಚಾರ್ಯರು ಆಗಿನ ಕಾಲದಲ್ಲಿಯೆ ಅಖಂಡ ಭಾರತವನ್ನೆಲ್ಲ ಕಾಲ್ನಡಿಗೆಯಲ್ಲಿ ಸಂಚರಿಸಿ, ದೇಶದ ನಾಲ್ಕೂ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ, ಎಲ್ಲ ಕಡೆಗೂ ಮತ್ತು ಎಲ್ಲರಲ್ಲಿಯೂ ಆಧ್ಯಾತ್ಮದ ಪ್ರಭೆಯನ್ನು ಬೆಳಗಿಸಿದರೆಂದು ಅವರ ಬದುಕಿನ ಸಮಗ್ರ ವೃತ್ತಾಂತವನ್ನು ವಿವರವಾಗಿ ತಿಳಿಸಿದರು.



ಹಿರಿಯ ಪತ್ರಕರ್ತರು ಹಾಗೂ ಹುಣಸಗಿ ತಾಲೂಕು ಕಸಾಪ ಅಧ್ಯಕ್ಷ ವೆಂಕಟಗಿರಿ ದೇಶಪಾಂಡೆ ಮತ್ತು ಬಿ.ಕೆ ಕುಲಕರ್ಣಿ ಶಂಕರಾಚಾರ್ಯರ ಕುರಿತಂತೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಚಂದ್ರಕಾಂತ ದೇಶಪಾಂಡೆ, ವೆಂಕಟೇಶ ಜೋಷಿ ಅರಳಿಗಿಡದ್, ಪ್ರಾಣೇಶ ಕುಲಕರ್ಣಿ, ಪ್ರಾಣೇಶ ದೇಶಪಾಂಡೆ, ಗಿರೀಶ ಪಾಟೀಲ್, ನರಸಿಂಹರಾವ್ ಜಾಗೀರದಾರ್, ರಮೇಶ ಕುಲಕರ್ಣಿ ಸೇರಿದಂತೆ ಇತರರು ಭಾಘವಹಿಸಿದ್ದರು. ಕಂದಾಯ ಇಲಾಖೆಯ ವೆಂಕಟೇಶ ಸ್ವಾಗತಿಸಿ, ನಿರೂಪಿಸಿದರು. ಅರವಿಂದ ವಂದಿಸಿದರು.

ಶಂಕರಾಚಾರ್ಯರ ಜಯಂತಿ ಆಚರಣೆ

◆**ಹಗರಿಬೊಮ್ಮನಹಳ್ಳಿ:** ಅದ್ವೈತ ಸಿದ್ಧಾಂತದ ಪ್ರತಿಪಾದಕ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು. ಮಂಗಳವಾರದಂದು ತಾಲೂಕ ಆಡಳಿತ ಸೌಧದಲ್ಲಿ ಶಂಕರ ಚಾರ್ಯರ ಜಯಂತಿಯ ಅಂಗವಾಗಿ ಶಂಕರ ಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನವನ್ನು ಅರ್ಪಿಸುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ತಾಲೂಕು ಬ್ರಾಹ್ಮಣ ಸಮಾಜದ ಕಾರ್ಯದರ್ಶಿ ಗಿರೀಶ್.ಎಸ್ ಮಾತನಾಡಿ, ಸನಾತನ ಹಿಂದೂ ಧರ್ಮ ನಶಿಸುವ ಸಮಯದಲ್ಲಿ ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯರು ಅವತರಿಸಿ ಸನಾತನ ಧರ್ಮದ ಪುನರುತ್ಥಾನ ಮಾಡಿದ ಮಹಾನ್ ಪುರುಷರು. ಅದ್ವೈತ ಸಿದ್ಧಾಂತದ ಪ್ರತಿಪಾದಕರಾಗಿದ್ದರು. ಸನಾತನ ಧರ್ಮದ ಉಳಿವಿಗಾಗಿ ಧರ್ಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. ದೇಶದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿಯ ದಿನವನ್ನು ತತ್ವಜ್ಞಾನಿಗಳ ದಿನ ಎಂದು ಆಚರಿಸಲಾಗುತ್ತದೆ ಶಂಕರ ಚಾರ್ಯರ ತತ್ವ ಸಿದ್ಧಾಂತ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದರು. ತಾಲೂಕು ಬ್ರಾಹ್ಮಣ ಸಮಾಜದ ವೆಂಕಟೇಶ ಪುರೋಹಿತ್ ಹಾಗೂ ಸಂಘದ ಇತರ ಪದಾಧಿಕಾರಿಗಳು, ಸದಸ್ಯರು ಸಮಾಜದ ಮುಖಂಡರಾದ ಗಣೇಶ ರಾವ್, ಸುರೇಶ್ ಜೋಶಿ, ಅರವಿಂದ ರಾವ್,ಜಿ.ರಾಘವೇಂದ್ರರಾವ್,ಜಿ.ಲಿಂಗು, ಜಗನ್ನಾಥ ಭಟ್ ಹಾಗೂ ಭೀಮೇಶ ಕೃಷ್ಣ ಮಹಿಳಾ ಸಮಾಜದ ಸುಮಿತ್ರಾ, ಸವಿತಾ ಜೋಶಿ, ವನಜಾ ರಾವ್ , ಸೀತಾ ಗಿರೀಶ್, ಸುನೀತಾ, ಭಾರತಿ ಭಟ್,ಜಲಜಾಕ್ಷಿ, ಕಂದಾಯ ಇಲಾಖೆಯ ಸಿಬ್ಬಂದಿ ನಾಗರಾಜ ಬ್ರಾಹ್ಮಣ ಸಮಾಜದ ಇನ್ನಿತರರಿದ್ದರು.



ವೇದಾವತಿ ನದಿಗೆ ನೀರು ಹರಿಸಲು ಮನವಿ



◆**ಸಿರುಗುಪ್ಪ:** ತಾಲೂಕಿನಲ್ಲಿ ಹರಿಯುವ ವೇದಾವತಿ (ಹಗರಿ) ನದಿಗೆ ನೀರು ಬಿಡುವಂತೆ ಒತ್ತಾಯಿಸಿ ಬಿಜೆಪಿ ಪಕ್ಷದ ವತಿಯಿಂದ ಮಾಜಿ ಶಾಸಕ ಎಂ.ಎಸ್. ಸೋಮಲಿಗಪ್ಪ ನೇತೃತ್ವದಲ್ಲಿ ಮಂಗಳವಾರ ತಹಸೀಲ್ದಾರ್ ಗೌಸೀಯಾ ಬೇಗಂ ಅವರಿಗೆ ಮನವಿ ಸಲ್ಲಿಸಲಾಯಿತು.

ನಂತರ ಮಾತನಾಡಿದ ಅವರು, ವೇದಾವತಿ (ಹಗರಿ) ನದಿಯು ಸಂಪೂರ್ಣವಾಗಿ ಬತ್ತಿ ಹೋಗಿದ್ದು, ಜನ, ಜಾನುವಾರುಗಳಿಗೆ ಕುಡಿಯಲು ನೀರಿಲ್ಲದಂತೆ ಪರಿತಪಿಸುವಂತಾಗಿದೆ. ಈ ಕೂಡಲೇ ನದಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು. ಒಂದು ದಿನದ ಸಾಂಕೇತಿಕ ಧರಣಿ ನಡೆಸುತ್ತಿದ್ದು, ತಾಲೂಕು ಮತ್ತು ಜಿಲ್ಲಾಡಳಿತವು ಕೂಡಲೇ ಕ್ರಮ ವಹಿಸಬೇಕು, ನಿರ್ಲಕ್ಷ್ಯ ವಹಿಸಿದರೆ ಬರುವ ದಿನಗಳಲ್ಲಿ ಪ್ರತಿಭಟನೆಯ ಸ್ವರೂಪ ಬದಲಾಗಲಿದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಎಸ್.ಸಿದ್ದಪ್ಪ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ವೀರನಗೌಡ, ಖಾಜಸಾಬ್, ಎಂ.ಆರ್.ಗೌಡ, ನಗರಸಭೆಯ ಸದಸ್ಯ ಮೇಕೆಲ್ ವೀರೇಶ್, ವಿಕ್ರಂಜೈನ್, ಮಹಾದೇವಪ್ಪ, ನಟರಾಜ, ಮೋಹನ್ ರೆಡ್ಡಿ, ಶಿವಪ್ಪ, ಶೇಖಪ್ಪ, ಕೃಷ್ಣಹೇಮನ್ ಗೌಡ, ಶೇಕ್ಷಾವಲಿ, ದುರ್ಗಪ್ಪ, ಪಕ್ಷದ ಮುಖಂಡರು ಕಾರ್ಯಕರ್ತರು, ರೈತರು ಭಾಗವಹಿಸಿದ್ದರು.

ಬಸವಣ್ಣನವರ ಪ್ರತಿಮೆ ಶೀಘ್ರ ಅನಾವರಣ

◆**ಬಳ್ಳಾರಿ:** ನಗರದ ಜನತೆಯ ಬಹುದಿನಗಳ ಬೇಡಿಕೆಯಾಗಿದ್ದ ಅಶ್ವರೂಢ ಬಸವಣ್ಣನ ಪ್ರತಿಮೆಯನ್ನು ಅತ್ಯಂತ ಶೀಘ್ರದಲ್ಲಿಯೇ ಬಳ್ಳಾರಿಯಲ್ಲಿ ಅನಾವರಣಗೊಳಿಸಲಾಗುವುದು ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಭರವಸೆ ನೀಡಿದರು.

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಆಶ್ರಯದಲ್ಲಿ ಸೋಮವಾರ ಆಯೋಜಿಸಿದ್ದಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜಯಂತ್ಯುತ್ಸವಕ್ಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ತಾಂತ್ರಿಕ ಕಾರಣಗಳಿಂದ ಪ್ರತಿಮೆ ಉದ್ಘಾಟನೆ ವಿಳಂಬವಾಗಿದ್ದು, ಮುಂದಿನ ಬಸವ ಜಯಂತಿಯವರೆಗೆ ಕಾಯದೇ, ಕೇವಲ 6 ತಿಂಗಳೊಳಗೆ ಶಾಸಕರ ಸ್ವಂತ ಖರ್ಚಿನಲ್ಲಿ ಭವ್ಯ ಅಶ್ವರೂಢ ಬಸವಣ್ಣನ ಪ್ರತಿಮೆಯನ್ನು ನಿರ್ಮಿಸಿ ಲೋಕಾರ್ಪಣೆ ಮಾಡಲಾಗುವುದು ಎಂದರು.

ಪ್ರತಿಮೆ ಸ್ಥಾಪನೆಗೆ ಬೇಕಾದ ಜಮೀನಿನ ಕುರಿತು ಈಗಾಗಲೇ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಕ್ಯಾಬಿನೆಟ್ ಮಟ್ಟದಲ್ಲಿ ಆಗಬೇಕಾದ ಅನುಮತಿ ಹಾಗೂ ಕಾನೂನು ಪ್ರಕ್ರಿಯೆಗಳನ್ನು ಶೀಘ್ರವಾಗಿ ಮುಗಿಸಿ ಕಾರ್ಯರೂಪಕ್ಕೆ ತರಲಾಗುವುದು ಎಂದರು. ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಜಿಪಂ ಸಿಇಒ ಮಹಮ್ಮದ್ ಹಾರಿಸ್ ಸುಮೇರ್ ಮಾತನಾಡಿದರು.



ಎಸ್ಪಿ ಡಾ.ಸುಮನ್ ಡಿ.ಪನ್ನೇಕರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಕುರುಗೋಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ತಿಪ್ಪೇರುದ್ರ ಸಂಡೂರು ಮಾತನಾಡಿದರು. ಈ ವೇಳೆ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ವ್ಯಕ್ತಿಗಳನ್ನು ಗಣ್ಯರು ಸನ್ಮಾನಿಸಿ ಗೌರವಿಸಿದರು. ಇದಕ್ಕೂ ಮುನ್ನ ಸಂವಿಧಾನ ಪೀಠಿಕೆ ಬೋಧಿಸಲಾಯಿತು.

ಬಳ್ಳಾರಿಯ ರೇಖಾ.ಎಸ್.ವಿ ತಂಡ ಭಕ್ತಿ ಸಂಗೀತ ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆ ಸದಸ್ಯರು, ಸಮಾಜದ ಮುಖಂಡರು ಇತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಜಯಂತಿ ನಿಮಿತ್ತ ನಗರದಲ್ಲಿ ಭವ್ಯ ಮೆರವಣಿಗೆ ನಡೆಯಿತು. ಮುನಿಸಿಪಲ್ ಕಾಲೇಜು ಮೈದಾನದಿಂದ ಆರಂಭವಾದ ಮೆರವಣಿಗೆಯು ನಾನಾ ವೃತ್ತಗಳ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ತಲುಪಿತು.

ಶಂಕರಾಚಾರ್ಯರ ಕೊಡುಗೆ ಅನನ್ಯ

◆**ವಿಜಯನಗರ:** ಜಗತ್ತಿಗೆ ಅದ್ವೈತ ಸಿದ್ಧಾಂತ ಪರಿಚಯಿಸಿದ ಜಗದ್ಗುರು ಆದಿ ಶಂಕರಾಚಾರ್ಯರು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಮಹಾನ್ ಚೇತನರು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಬಣ್ಣಿಸಿದರು.

ಹೊಸಪೇಟೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆದಿ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಇಂದಿನ ಯುವ ಪೀಳಿಗೆಯು ಭೌತಿಕ ಸುಖಕ್ಕೆ ಮಾರುಹೋಗದೇ, ಶಂಕರಾಚಾರ್ಯರು ತೋರಿಸಿಕೊಟ್ಟ ಜ್ಞಾನ ಮತ್ತು ವಿವೇಕದ ಹಾದಿಯಲ್ಲಿ ಸಾಗಬೇಕು. ಸಂಸ್ಕಾರಯುತ ಮತ್ತು ಸದೃಢ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಇಂತಹ ಮಹಾನ್ ಪುರುಷರ ಜಯಂತಿಗಳು ಕೇವಲ ಆಚರಣೆಗಷ್ಟೇ ಸೀಮಿತವಾಗದೆ, ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು. ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣನವರ, ಸಮಾಜದ ಮುಖಂಡರು ಉಪಸ್ಥಿತರಿದ್ದರು.

